# ಭರಣ

ಭರಣ ಅಭಿನಂದನಾ ಸಮಿತಿ
148, 32ನೇ 'ಎ' ಮುಖ್ಯರಸ್ತೆ, ಜೆ.ಪಿ. ನಗರ 1ನೇ ಹಂತ,
ಬೆಂಗಳೂರು - 560 078. ದೂರವಾಣಿ 6343900

BHARANA
Commemmoratory Volume on T.S. Nagabharana, Film Makmer - Director and Theatre Personality

1st Impression : January, 2004

© M.A. Anand

Pages : 214 + x

Price : Rs. 100

Published by:
Nagabharana Abhinandana Samithi
148, 32nd 'A' Main, J.P. Nagar I Stage
Bangalore - 560 078. Ph : 6343900

Distributors:
Alilu Seva Samste
Printing & Publication Division
133, 1st Floor, K.R. Road,
Obalappa Garden, Bangalore - 82.

Editorial Committee:
Bhaskar Rao
B.V. Murthy
Prathibha Nandakumar
Shashidhar Barighat

Pirnted at:
Alilu Seva Samste
Printing & Publication Division
133, 1st Floor, K.R. Road,
Obalappa Garden, Bangalore - 82.

Typesetting:
Page Designers
8, EAT Street
Gandhibazar, Bangalore.

# ಅರಿಕೆ

ಆತ್ಮೀಯ ಗೆಳೆಯ ನಾಗಾಭರಣರಿಗೆ 50 ವರ್ಷ ತುಂಬಿದ ಸಂದರ್ಭದಲ್ಲಿ ಅವರ ಗೆಳೆಯರೆಲ್ಲರೂ ಸೇರಿ ಅಭಿಮಾನದಿಂದ ಅವರನ್ನು ಸನ್ಮಾನಿಸಿ ಚಲನಚಿತ್ರೋತ್ಸವ, ನಾಟಕೋತ್ಸವ ಹಾಗೂ ಅಭಿನಂದನಾ ಸಮಾರಂಭವನ್ನು ಏರ್ಪಡಿಸಿದೆವು.

ಪುಟ್ಟಣ್ಣ ಕಣಗಾಲ್ ಚಿತ್ರಮಂದಿರದಲ್ಲಿ ಏರ್ಪಡಿಸಿದ ಚಲನಚಿತ್ರೋತ್ಸವ 2004ರ ಜನವರಿ 9ರಿಂದ 15ರವರೆಗೆ ನಾಗಾಭರಣ ನಿರ್ದೇಶಿಸಿದ 14 ಚಲನಚಿತ್ರಗಳನ್ನು ಪ್ರದರ್ಶಿಸಲಾಯಿತು.

2004ರ ಜನವರಿ 20ರಿಂದ 23ರವರೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಭರಣ ನಟಿಸಿ ನಿರ್ದೇಶಿಸಿದ ಮೂರು ನಾಟಕಗಳ ನಾಟಕೋತ್ಸವ ನಡೆಯಿತು.

2004ರ ಜನವರಿ 23ರಂದು ಅಭಿನಂದನಾ ಸಮಾರಂಭದಲ್ಲಿ ಸಮರ್ಪಿಸಲೆಂದು "ಭರಣ" ಪುಸ್ತಕವನ್ನು ಸಿದ್ಧಪಡಿಸಿದೆವು.

ಭರಣರ ಆತ್ಮೀಯ ಗೆಳೆಯರೂ, ಸಹೋದ್ಯೋಗಿಗಳೂ ಅಭಿಮಾನದಿಂದ ಬರೆದುಕೊಟ್ಟ ಲೇಖನಗಳ ಈ ಕೃತಿ ನಿಮ್ಮ ಕೈಯಲ್ಲಿದೆ. ಬರೆಯಲು ಇಚ್ಛಿಸಿದ ಅನೇಕರು ಸಮಯಾಭಾವದಿಂದ ಲೇಖನಗಳನ್ನು ಕಳುಹಿಸಲಾಗಿರುವುದಿಲ್ಲ. ಸಮಯಕ್ಕೆ ಸರಿಯಾಗಿ ಲೇಖನಗಳನ್ನು ಒದಗಿಸಿದ ಎಲ್ಲಾ ಗೆಳೆಯರಿಗೂ ನಮ್ಮ ಧನ್ಯವಾದಗಳು.

ವಿವಿಧ ಪತ್ರಿಕೆಗಳಲ್ಲಿ ನಾಗಾಭರಣರ ಬಗ್ಗೆ ಪ್ರಕಟವಾದ ಲೇಖನಗಳನ್ನು ಇಲ್ಲಿ ಮರುಮುದ್ರಣ ಮಾಡಿಕೊಳ್ಳಲು ಅನುಮತಿಸಿದ ಗೆಳೆಯರಿಗೆ ವಂದನೆಗಳು. ಸಮಯಾಭಾವದಿಂದ ಕೆಲವರನ್ನು ಸಂಪರ್ಕಿಸಲು ಸಾಧ್ಯವಾಗಲಿಲ್ಲ. ಅವರ ಕ್ಷಮೆ ಇರಲಿ.

ಕೃತಿಯ ಪ್ರಕಟಣೆಗೆ ಧನ ಸಹಾಯ ನೀಡಿದ ಶ್ರೀ ಎಂ.ಎ. ಆನಂದ್ ಅವರಿಗೆ, ಅತ್ಯಂತ ಕಡಿಮೆ ಸಮಯದಲ್ಲಿ ಮುದ್ರಣ ಕಾರ್ಯವನ್ನು ಒಪ್ಪಿಕೊಂಡು ಅಚ್ಚುಕಟ್ಟಾಗಿ ನಿರ್ವಹಿಸಿದ ಅಳಿಲು ಸೇವಾ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಟಿ.ಎಸ್. ವಿಶ್ವನಾಥ್ ಅವರಿಗೆ, ಹಳೆಯ ಛಾಯಾಚಿತ್ರಗಳನ್ನು ಹುಡುಕಿ ತೆಗೆದುಕೊಡುವಲ್ಲಿ ಸಹಕರಿಸಿದ ಭರಣ ಕುಟುಂಬದ ಸದಸ್ಯರಿಗೆ ಹಾಗೂ ಕಛೇರಿ ಸಿಬ್ಬಂದಿ ವರ್ಗದವರಿಗೆ, ಸುಂದರವಾಗಿ ಡಿ.ಟಿ.ಪಿ. ಮಾಡಿಕೊಟ್ಟ ಮಧು ಅವರಿಗೆ ಹೃತ್ಪೂರ್ವಕ ಧನ್ಯವಾದಗಳು.

ಭರಣ-50 ಉತ್ಸವವನ್ನು ಹಮ್ಮಿಕೊಂಡು "ಭರಣ" ಅಭಿನಂದನಾ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಲು ಸಂಪಾದಕ ಮಂಡಳಿಗೆ ನೀಡಿದ ಅವಕಾಶಕ್ಕೆ ಭರಣ ಅಭಿನಂದನಾ ಸಮಿತಿಯ ಎಲ್ಲಾ ಸದಸ್ಯರಿಗೆ, ಬೆನ್ನೆಲುಬಾಗಿ ನಿಂತು ಕ್ಷಣಕ್ಷಣಕ್ಕೂ ಉತ್ತೇಜಿಸಿದ ಉತ್ಸಾಹಿ ಸಂಚಾಲಕರಾದ ಶ್ರೀನಿವಾಸ ಜಿ. ಕಪ್ಪಣ್ಣ ಹಾಗೂ ಸೂಕ್ತ ಮಾರ್ಗದರ್ಶನವಿತ್ತ ಅಧ್ಯಕ್ಷರಾದ ಡಿ.ಕೆ. ಚೌಟ ಅವರಿಗೆ ನಾವು ಆಭಾರಿಯಾಗಿದ್ದೇವೆ.

ಈ ಕೃತಿ ನಾಗಾಭರಣ ಅವರ ವ್ಯಕ್ತಿತ್ವದ ಒಂದು ಇಣುಕು ನೋಟ ಮಾತ್ರ. ಓದುಗರು ಇದನ್ನು ಪ್ರೀತಿಯಿಂದ ಸ್ವೀಕರಿಸುವರೆಂದು ನಮ್ಮ ನಂಬಿಕೆ.

ಸಂಪಾದಕ ಮಂಡಳಿ

# ಹಾರೈಕೆ

"ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು" ಎನ್ನುವ ಹಾಗೆ ನಾಗಾಭರಣರು ಎಳೆ ವಯಸ್ಸಿನಿಂದಲೇ ತಮ್ಮ ಪ್ರತಿಭೆಯನ್ನು ಸಾಣೆಗೆ ಒಡ್ಡಿದ್ದಾರೆ. ಪುಟವಿಟ್ಟ ಚಿನ್ನವಾಗಿದ್ದಾರೆ.

50ರ ಸಾರ್ಥಕ ಬದುಕಿನ ಈ ಶುಭ ಸಂದರ್ಭದಲ್ಲಿ ಇವರ ಕನ್ನಡ ಕಾಯಕ ನಿರಂತರವಾಗಿರಲಿ. ತಾಯಿ ಭುವನೇಶ್ವರಿಯು ಇವರಿಗೆ ಸಕಲ ಸನ್ಮಂಗಳವನ್ನು ಉಂಟು ಮಾಡಲಿ ಎಂದು ಪ್ರಾರ್ಥಿಸುತ್ತೇನೆ.

ಪದ್ಮಭೂಷಣ ಡಾ|| ರಾಜ್‌ಕುಮಾರ್

* * * * *

ಗಾಂಭೀರ್ಯದ ಮೇರು ಪರ್ವತ, ಸಾಧನೆಯ ಸಾಕಾರ ಮೂರ್ತಿ, ಸದಾ ಚಿಂತಕ, ತಾಳ್ಮೆಯ ಪ್ರತಿರೂಪ, ಹೊಗಳಿಕೆಗೆ ಉಬ್ಬದ, ತೆಗಳಿಕೆಗೆ ಕುಗ್ಗದ ಜಾಯಮಾನ. ಸರಳ, ಸಜ್ಜನಿಕೆಯ, ಸದಾ ಏನಾದರೂ ಕಲಿಯುತ್ತಲೇ ಇರಬೇಕು ಎನ್ನುವ ಹಂಬಲದವ, ಶಿಸ್ತಿನ ಸಿಪಾಯಿ, ಮಿತಭಾಷಿ, ಖಂಡಿತವಾದಿ, ಹಸನ್ಮುಖಿ, ಕಸವನ್ನೇ ರಸವಾಗಿಸಬಲ್ಲ ರಸಋಷಿ, ಮಹಾ ಸ್ವಾಭಿಮಾನಿ, ಸ್ನೇಹ ಪ್ರಿಯ, ನೋಟದಿಂದಲೇ ವ್ಯಕ್ತಿತ್ವ ತಿಳಿಯಬಲ್ಲ ಚತುರತೆ, ಸಂಘಟನೆಕಾರ, ಸುಮಾರು ಮೂರುವರೆ ಡಜನ್‌ನಷ್ಟು ಪ್ರಶಸ್ತಿ, ಪುರಸ್ಕಾರಗಳಿಗೆ ಭಾಜನನಾದರೂ ಏನನ್ನು ತೋರುಗೊಡದ ತುಂಬಿದ ಕೊಡ. ನಟನಾ ಚತುರ, ನಿರ್ದೇಶಕ, ನಿರ್ಮಾಪಕ, ನಿರೂಪಕ ಹಾಗೂ ನನ್ನ ಪ್ರೀತಿಯ ಮಾಮು. ಐವತ್ತು ತುಂಬುತ್ತಿರುವ ಈ ಸಂದರ್ಭದಲ್ಲಿ ಅವರಿಗೆ ನನ್ನ ಆಲಿಂಗನದ ಹೃತ್ಪೂರ್ವಕ ನಮನಗಳು.

ಕೆ. ಜಯರಾಮ್

* * * * *

ಮಿತ್ರ ನಾಗಾಭರಣರು ರಂಗಭೂಮಿ ಮತ್ತು ಚಲನಚಿತ್ರ ನಿರ್ದೇಶಕರಾಗಿ ತಮ್ಮ ಬಹುಮುಖ ಪ್ರತಿಭೆಯಿಂದ ಪ್ರಖ್ಯಾತರಾಗಿದ್ದಾರೆ, ಅನೇಕ ಪ್ರಶಸ್ತಿಗಳನ್ನು ಗಳಿಸಿಕೊಂಡಿದ್ದಾರೆ. ಜನಪ್ರೀತಿಯನ್ನು ಉಳಿಸಿಕೊಂಡಿದ್ದಾರೆ. ಪ್ರತಿಭಾನ್ವಿತರ ಗರಡಿಯಲ್ಲಿ ಪಳಗಿದ್ದಾರೆ. ತಮ್ಮದೇ ಸ್ವಂತಿಕೆಯನ್ನು ಮೆರೆದಿದ್ದಾರೆ.

ಪ್ರಾಯ ಪ್ರಾಯ ಪ್ರಾಯ ಚಿತ್ರದಿಂದ ನನಗೆ ಭರಣರ ಒಡನಾಟ. ಆಕಸ್ಮಿಕ, ಜನುಮದ ಜೋಡಿ, ಸಾಗರ ದೀಪ, ಚಿಗುರಿದ ಕನಸು ಮುಂತಾಗಿ ಅನೇಕ ಚಿತ್ರಗಳ ಚಿತ್ರಕಥೆ, ದೃಶ್ಯ ಕಲ್ಪನೆ, ಸಂಭಾಷಣೆ, ಗೀತೆ ಎಂದು ಸಾಕಷ್ಟು ಚರ್ಚಿಸಿದ್ದೇವೆ. ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಭರಣ ಮುಕ್ತ ಮನಸ್ಸಿನಿಂದ ಉತ್ತಮವಾದದ್ದನ್ನು ಗ್ರಹಿಸಿ ಹೆಕ್ಕಿ ತೆಗೆಯುವುದರಲ್ಲಿ ಗಟ್ಟಿಗರು, ಹಲವಾರು ಸಲ ಚಿತ್ರಕಥೆಯನ್ನು ತಿದ್ದಿ ತೀಡಿ ನೇಪು ಮಾಡಿಕೊಳ್ಳುತ್ತಾರೆ. ಹೊರಾಂಗಣ ಚಿತ್ರೀಕರಣ ನಡೆಯುವ ಸಮಯದಲ್ಲೂ ಎಷ್ಟೋ ಬಾರಿ ನನ್ನನ್ನು ದೂರವಾಣಿ ಮೂಲಕ ಸಂಪರ್ಕಿಸಿ ಚರ್ಚಿಸಿದ್ದಾರೆ.

ಹೀಗೆ ಭರಣರು ತಮ್ಮ ಅಚ್ಚುಕಟ್ಟುತನದಿಂದ, ಸರಳ ಸಜ್ಜನಿಕೆಯಿಂದ ಎಲ್ಲರಿಗೂ ಪ್ರಿಯರಾಗಿದ್ದಾರೆ, ಅರ್ಧ ಶತಕದ ಈ ಸಂದರ್ಭದಲ್ಲಿ ನಾಗಾಭರಣರು ಶತಕ ಬಾರಿಸಲಿ, ಒಳ್ಳೊಳ್ಳೆಯ ಚಿತ್ರಗಳನ್ನು ಪೇರಿಸಲಿ, ಯುವಕರಿಗೆ ಆದರ್ಶವಾಗಿ ಕನ್ನಡ ಚಿತ್ರರಂಗ, ರಂಗಭೂಮಿಯನ್ನು ಸಮೃದ್ಧವಾಗಿಸಲಿ ಎಂದು ಹೃದಯಪೂರಕವಾಗಿ ಹಾರೈಸುತ್ತೇನೆ.

ಎಸ್.ಪಿ. ವರದರಾಜ್

## ಭರಣ-50 ಅಭಿನಂದನಾ ಸಮಿತಿ

| | |
|---|---|
| ಡಿ.ಕೆ. ಚೌಟ | ಅಧ್ಯಕ್ಷರು |
| ಶ್ರೀನಿವಾಸ ಜಿ. ಕಪ್ಪಣ್ಣ | ಸಂಚಾಲಕರು |
| ಸುಂದರ್ ರಾಜ್ | ಚಲನಚಿತ್ರೋತ್ಸವ ಸಂಚಾಲಕರು |
| ರೇವಣ್ಣ ಕೆ | ನಾಟಕೋತ್ಸವ ಸಂಚಾಲಕರು |
| ಬಿದರಹಳ್ಳಿ ವಾಸುದೇವ ಮೂರ್ತಿ | ಸಂಚಾಲಕರು ಅಭಿನಂದನಾ ಗ್ರಂಥ |
| ಚಂದ್ರಕುಮಾರ್ ಸಿಂಗ್ | ಸದಸ್ಯರು |
| ಬೆನಕ ಕಿಟ್ಟಿ | ಸದಸ್ಯರು |
| ದತ್ತಣ್ಣ | ಸದಸ್ಯರು |
| ಎಚ್.ಎಸ್. ನೀಲಕಂಠ | ಸದಸ್ಯರು |
| ಎಂ.ಕೆ. ಭಾಸ್ಕರ ರಾವ್ | ಸದಸ್ಯರು |
| ಎಂ.ಎ. ಆನಂದ್ | ಸದಸ್ಯರು |
| ಶಶಿಧರ ಬಾರಿಘಾಟ್ | ಸದಸ್ಯರು |
| ಪ್ರತಿಭಾ ನಂದಕುಮಾರ್ | ಸದಸ್ಯರು |
| ಏಣಗಿ ನಟರಾಜ್ | ಸದಸ್ಯರು |

# ಪರಿವಿಡಿ


ವಿನಯವೇ ಆಭರಣ 1

ಬದುಕೇ ಸ್ನೇಹ, ಸ್ನೇಹವೇ ಬದುಕು 9

ನಾಗಾಭರಣ - ಐವತ್ತು... ಒಂದು ಹೊರಳು ನೋಟ 14

ಭರಣರ ಬ್ರೀಫ್‌ಕೇಸು, ಕನ್ನಡಕ, ಇತ್ಯಾದಿ 20

ಮಿತ್ರಾಭರಣ 22

ವಿನಯ, ಭರಣನ ಆಭರಣ 25

ಹೊಸತನದ ಹರಿಕಾರ ಟಿ.ಎಸ್. ನಾಗಾಭರಣ 27

ನಿರಂತರ ಶ್ರಮಜೀವಿ, ಪ್ರತಿಭಾ ಸಂಪನ್ನ ನಮ್ಮ ನಾಗಾಭರಣ 32

ಗೆಳೆಯನಿಗೆ ಅಭಿನಂದನೆ 47

The winner takes it all... 50

ಭರಣ - ನಾ ಕಂಡಂತೆ 56

ಕನ್ನಡದಾಭರಣ - ನಾಗಾಭರಣ 59

ರಂಗಸಂಸ್ಕೃತಿಯಾಭರಣ 67

ಆ-ಭರಣ 69

ಭರಣ ಮತ್ತು ಛಾಯಾಗ್ರಹಣ 72

ನಾಗಾಭರಣರ ಚಿತ್ರಗಳಲ್ಲಿ ಸಂಗೀತ 83

ಭರಣ ಎಂಬ ದರ್ಪಣದಲ್ಲಿನ ದಾಳಿಂಬೆ ಹಾಗೂ 'ನೀಲಾ'ದೊಂದಿಗಿನ ನಾದಲೀಲಾನುಭವಗಳು 94

ತಲಕಾಡಿನಿಂದ ಸೆಲ್ಯೂಲಾಯ್ಡ್‌ವರೆಗೆ ನಡೆದ ಹಾದಿಯತ್ತ ಒಂದು ಹಿನ್ನೋಟ - ನಾಗಾಭರಣ 111

ಭರಣ - ನನಗಾಭರಣ 137

ನನಸಾದ ನಾಗಣ್ಣನ ಕನಸು 151

ಸಂಭ್ರಮದ ಐವತ್ತು, ನೂರನ್ನೂ ದಾಟಲಿ ಈ ಜೋಡಿಗೆ 154

ಭರಣ-ಸದಭಿರುಚಿಯ ಹೂರಣ 156

ನಿರ್ದೇಶಕನ ಜಾಣ್ಮೆ ನಟನೆಯ ಹಿರಿಮೆ 158

ನಾವು ಒಂದೇ ದೋಣಿಯ ಪಯಣಿಗರು 161

ಭರಣರ ಮೆಗಾ ಧಾರವಾಹಿ: ಪ್ರಯೋಗಶೀಲತೆಯ ವಿಭಿನ್ನ ಮಾದರಿ 163

ಭರಣ 166

ಗುರುವಂದನೆ ನಿಮಗಭಿನಂದನೆ 171

ನಂ ಡೈರೆಕ್ಟ್ರು 174

ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ 178

ಗುರು ವಂದನೆ 182

ಸದಭಿರುಚಿಯ ಕಲಾವಾರಿಧಿ : ಶ್ರೀ ನಾಗಾಭರಣ 195

ಒಂದು ವೃತ್ತಾಂತ 196

His is a three-dimensional approach 197

Looking BACK, looking ahead 200

'I needed another take off' 203

ಮೈಲಿಗಲ್ಲುಗಳು 208


# ವಿನಯವೇ ಆಭರಣ

ಡಾ. ವಿಜಯಾ

"ನಾಗಾಭರಣರಿಗೆ 50'. ಹುಬ್ಬೇರಿಸುವಂತಾಗುತ್ತಿದೆ. ಅಷ್ಟು ಬೇಗ 50 ದಾಟಿತೆ! ಇನ್ನೂ ನಿನ್ನೆ-ಮೊನ್ನೆಯ ಹಾಗಿದೆ ಭರಣ ರಂಗಭೂಮಿಯಲ್ಲಿ, ಅದೂ ನೇಪಥ್ಯದಲ್ಲಿ ದುಡಿಯುತ್ತಿದ್ದುದು. ಹೊತ್ತು-ಗೊತ್ತಿಲ್ಲದ ದುಡಿಮೆ. ಸದಾ ಕೈಯಲ್ಲೊಂದು ಸುತ್ತಿಗೆ ಹಿಡಿದು ಮೊಳಕಾಲಿನವರೆಗಿನ ಚಡ್ಡಿ ಧರಿಸಿ ಸರಪರನೆ ಓಡಾಡುತ್ತಿದ್ದ ಹುಡುಗ.

ಬಿ.ವಿ. ಕಾರಂತರ ಬಲಗೈ ಬಂಟ. ಕಾರಂತರಿಗೆ ಆ ದಿನಗಳಲ್ಲಿ...ಭರಣ-ಟಿ.ಎಸ್. ರಂಗಾ ಇದ್ದುಬಿಟ್ಟರೆ ನೇಪಥ್ಯದ ಬಗ್ಗೆ ನಿಶ್ಚಿಂತೆ. ಈ ಇಬ್ಬರೂ ತೀರಾ ತೀರಾ ಹಿನ್ನೆಲೆಗೆ ಇದ್ದವರು... ಹೀಗೆ ಎತ್ತರೆತ್ತರಕ್ಕೆ ಜಿಗಿದು ನಿಲ್ಲುತ್ತಾರೆಂಬ ಕಲ್ಪನೆಯೂ ಇರಲಿಲ್ಲ. ಎವೆ ಮುಚ್ಚುವುದರಲ್ಲಿ ಬಹುದೂರ ಸಾಗಿ ಬಂದರು. ಹೆಜ್ಜೆ ಇಟ್ಟಕಡೆ ಯಶಸ್ಸು-ಕೀರ್ತಿ ಅವರನ್ನು ಒಲಿದಿತ್ತು. ಈಗ ನಾಗಾಭರಣರಿಗೆ 50 ವರ್ಷ! ವಯಸ್ಸು ಒಂದು ನೆಪ. ಅದೆಲ್ಲದರ ಆಚೆಗೆ ಆ ತರುಣ ಸಾಧಿಸಿರುವುದು ಮಹತ್ತನ್ನು. ಅದನ್ನೆಲ್ಲ ನೆನೆಯುವುದು, ಶಹಬ್ಬಾಶ್ ಎಂದು ಹುರಿದುಂಬಿಸುವುದು, ಸಂತೋಷ ಪಡುವುದು ಈ ಸಡಗರದ ಹಿಂದಿನ ಮುಖ್ಯವಾದ ಉದ್ದೇಶ ಎಂದರೆ ಸರಿಯಾದೀತು.

ಗೌರಿಸುಂದರ್ ಅವರ 'ಪಂಚಮ' ತಂಡಕ್ಕೆ ಕಾರಂತರು 'ಜಂಬೂಸವಾರಿ' ನಿರ್ದೇಶಿಸಿದರು. ಗಾಂಧಿಬಜಾರಿನ ಭವಾನಿ ಕಲ್ಯಾಣ ಮಂದಿರದಲ್ಲಿ ರಿಹರ್ಸಲ್. ನಿತ್ಯ ಭರಣ ಹಾಜರ್. ನೂರಾರು ಮಕ್ಕಳನ್ನು ಸುಧಾರಿಸುತ್ತ, ಕಾರಂತರ 'ಬ್ಲಾಕಿಂಗ್' ಗುರುತು ಹಾಕಿಕೊಳ್ಳುತ್ತಾ, ಅವರು ಹೇಳಿದ ಪದಾರ್ಥಗಳಿಗೆ ಮರ-ಮುಟ್ಟು ಹೊಂದಿಸುತ್ತ ಓಡಾಡುತ್ತಿದ್ದ ಭರಣ, ಕಾರಂತರು ಇಂದು ಹೇಳಿದ್ದನ್ನು ನಾಳೆ ಬದಲಾಯಿಸಿ ನಿನ್ನೆಯ ಶ್ರಮವೆಲ್ಲ ಹೊಳೆಯಲ್ಲಿ ಹುಣಿಸೆ ತೊಳೆದ ಹಾಗಾದಾಗಲೂ ಮುಖ ಕಿವಿಚದೆ ಅದೇ ನಗೆ ಚೆಲ್ಲುತ್ತ ಮತ್ತೊಂದು ಲೈನ್ ಡ್ರಾಯಿಂಗ್ ಮಾಡಿಕೊಂಡು ಸಿದ್ಧವಾಗುತ್ತಿದ್ದುದರ ಚಿತ್ರ ಕಣ್ಣಿಗೆ ಕಟ್ಟಿದಂತಿದೆ. ಇಂಥ ಅದೆಷ್ಟು ರಂಗಪ್ರಯೋಗಗಳ ಹಿಂದೆ ಭರಣ ಇದ್ದರೆಂದು ಲೆಕ್ಕವಿಡಲಿ!

ಕಾರಂತರು 'ಕೃಷ್ಣ ಲೀಲೆ' ನಾಟಕ ಆಡಿಸಿದರು. ಹವ್ಯಾಸಿ ರಂಗದ ಮೇಲೆ ಪೌರಾಣಿಕ ನಾಟಕ ಒಂದು ಸುದ್ದಿ. ಅಷ್ಟೇ ಅಲ್ಲ, ಮುಖ್ಯ ಪಾತ್ರಗಳಲ್ಲಿ ರಂಗ-ಭರಣ ಎಂಬುದು ಬರೀ ಸುದ್ದಿಯಲ್ಲ, ಒಂದು ವಿಚಿತ್ರ ವ್ಯಂಗ್ಯ - ನಗೆಯ ಸಂಗತಿಯೂ ಆಗಿತ್ತು! ಕಾರಂತರು ಇದಕ್ಕೆಲ್ಲ ಸೊಪ್ಪು ಹಾಕಿದವರಲ್ಲ. ಯಾರು ಏನೇ ಗೇಲಿ ಮಾಡಿದರೂ ಕಿವಿಗೆ ಹಾಕಿಕೊಳ್ಳದ ಇವರೂ ಟಿಪಿಕಲ್ ಶಿಷ್ಯರೇ. ನಾಟಕದ ಪ್ರಯೋಗವಾಗಿ ಹೋಯಿತು. ಅಂಥ ಯಶಸ್ವೀ ಅಲ್ಲ - ಆದರೆ 'ಮಕರಂದ'ನಾಗಿ ನಾಗಾಭರಣ ಮಿಂಚಿದ್ದರು. (ಮುಂದೆ ಅದನ್ನೆ ಹೋಲುವ ಅನೇಕ ಪಾತ್ರಗಳೂ ಅವರಿಗೆ ಬಂದವು)

ಮುಂದೆ ಭರಣರಿಗೆ ನೇಪಥ್ಯದ ಜೊತೆಗೆ ಅಭಿನಯವೂ ಸೇರಿದ್ದು ಒಂದು ಅಧಿಕ ಹೊಣೆಗಾರಿಕೆಯೇ ಸರಿ. ಆದರೆ ಆತ ಯಾವುದಕ್ಕೂ ಗೊಣಗಲಿಲ್ಲ. 'ಸೈ' ಎಂಬ ಗೋಣುಹಾಕಿ ಹೇಳಿದ್ದನ್ನು ಮಾಡಲು ಕಲಿತಿದ್ದ; ಸಹನೆಯ ಮೂರ್ತಿಯಾಗಿದ್ದ....ಹೀಗೆ ರಂಗಭೂಮಿಗೊಬ್ಬ ಶ್ರೇಷ್ಠ ನಟನೂ ದಕ್ಕಿಬಿಟ್ಟಿದ್ದ.

ಮುಂದೆ ಭರಣ ನಟನಾಗಿ ತನ್ನ ಪ್ರತಿಭೆಯನ್ನು ಅದ್ವಿತೀಯ ಎಂಬಂತೆ ಮೆರೆಸಿದ್ದು ಗೊತ್ತಿರುವ ಸಂಗತಿ. ಭರಣ ಹಾಡಿದ್ದು, ಕುಣಿದದ್ದು, ನಾಟಕ ನಿರ್ದೇಶಿಸಿದ್ದು ಎಲ್ಲವೂ ಚೆನ್ನವೇ. ಆದರೆ ಎಲ್ಲವನ್ನೂ ಮೀರಿಸಿದ್ದು 'ನೀಗಿಕೊಂಡ ಸಂಸ'ದ ಸಂಸನ ಪಾತ್ರ. ಇವತ್ತಿಗೂ ತುಂಡು ಲುಂಗಿಯುಟ್ಟು ಪ್ರಣತೆಗಳ ಬೆಳಕಿನಲ್ಲಿ ಏರಿಳಿಯುತ್ತ, ಶತಪಥ ಹಾಕುತ್ತ ತನ್ನೊಳಗೇ ಮಾತನಾಡಿಕೊಳ್ಳುತ್ತಿದ್ದ ಆ 'ಸಂಸ'ನನ್ನು ಮರೆಯಲು ಸಾಧ್ಯವಾಗಿಯೇ ಇಲ್ಲ.

ಕಾರಂತ-ಕಾರ್ನಾಡರೊಟ್ಟಿಗೆ ಚಿತ್ರಗಳಿಗೂ ಕೆಲಸ ಮಾಡಿದರು ಭರಣ. ಇಲ್ಲಿ ಜೊತೆಗಿದ್ದವರು ಸುಂದರರಾಜ್. ಚಿತ್ರಗಳ ಪೂರ್ವ ಸಿದ್ಧತೆ, ಚಿತ್ರೀಕರಣದಲ್ಲಿ ಕೆಲಸ ಇವೆಲ್ಲ ಅಂತಿರಲಿ ಚಿತ್ರಗಳ ಡಬ್ಬಿಂಗ್, ಮಿಕ್ಸಿಂಗ್ ಸಮಯದಲ್ಲಿ ಈ ಹುಡುಗರು ಪಟ್ಟ ಪಾಡನ್ನು ಎಷ್ಟೆಂದು ವರ್ಣಿಸಲಿ? ಅನೇಕ ಹಿನ್ನೆಲೆ ಶಬ್ದಗಳನ್ನು ಈ ಹುಡುಗರೇ ಸಿದ್ಧ ಮಾಡುತ್ತಿದ್ದರು. ರಸ್ತೆಯಲ್ಲಿದ್ದ ಮರಗಳ ಕೊಂಬೆ ಕತ್ತರಿಸಿ ತಂದು, ಕಡೆಗೆ ಕೆಲಸಕ್ಕೆ ಬಾರದ ಟೈರ್-ಟ್ಯೂಬ್‌ಗಳು, ಬೆಂಕಿಪೆಟ್ಟಿಗೆ ಏನೆಲ್ಲ ಬಳಸಿ ಪ್ರಕೃತಿಯ ಸದ್ದನ್ನು ಕೊಡುತ್ತಿದ್ದರು. ಕಡೆಗೆ ಅವರ ಕೈ-ಬಾಯಿ, ಮೂಗುಗಳೂ ಸದ್ದು ಮಾಡಿವೆ. ಏನು ಮಾಡಿದರೂ 'ಅಪೇಕ್ಷಿಸು' ಶಬ್ದ ಹುಟ್ಟದೆ ಪರದಾಡಿದ್ದೂ ಉಂಟು.... ಇವೆಲ್ಲವನ್ನು ಹತ್ತಿರದಿಂದ ನೋಡಿತ್ತಿದ್ದ ನನಗೆ ಈ ಹುಡುಗರೇಕೆ ಇಷ್ಟು ಕಷ್ಟಪಡುತ್ತಾರೆ. ವಾಣಿಜ್ಯ ಸಿನಿಮಾದ ಜನರಿಗೆ ಇಂಥ ಸಮಸ್ಯೆಗಳಿಲ್ಲವಲ್ಲ ಅನ್ನಿಸಿದ್ದುಂಟು.

ಎಲ್ಲ ಧ್ವನಿಗಳನ್ನೂ ಸಂಗ್ರಹಿಸಿ ಇಟ್ಟಿರುವ ಪರಿಣತರೇ ಇದ್ದರು. ಆದರೆ ಈ ಕಡಿಮೆ ಬಜೆಟ್ಟಿನ ಚಿತ್ರದ ಜನರಿಗೆ ಅದಷ್ಟಾದರೂ ಉಳಿತಾಯ ಆಗುವುದಾದರೆ ಆಗಲಿ ಅನ್ನಿಸುತ್ತಿತ್ತೇನೊ, ಪರಿಣಾಮವಾಗಿ ಈ ಹುಡುಗರಿಗೆ ಹೀಗೆ ಫಜೀತಿಯಾಗುತ್ತಿತ್ತು. ಇಷ್ಟಾದರೂ ದಣಿದ ಹುಡುಗರಿಗೆ ಸಿಗುತ್ತಿದ್ದುದು ಒಣಕಲು ಚಿತ್ರಾನ್ನ. ಆದರೆ ಈ ಹುಡುಗರಿಗೆ ಚಿತ್ರದ ಟೈಟಲ್ ಕಾರ್ಡ್‌ನಲ್ಲಿ ಹೆಸರು ಕಾಣಿಸಿದಾಗ ಸ್ವರ್ಗಕ್ಕೆ ಮೂರೇ ಗೇಣು! ಇನ್ನು 'ಒಂದಾನೊಂದು ಕಾಲದಲ್ಲಿ'ಯಂಥ ಚಿತ್ರದಲ್ಲಿ ತಲೆಗೊಂದು ಪಗಡಿ ಸುತ್ತಿಕೊಂಡು ಕ್ಯಾಮರಾ ಮುಂದೆಯೂ ನಿಂತಾಗ ಏನಾಗಿರಬೇಡ ಈ ಭರಣನಿಗೆ ಗಿರೀಶ ಕಾರ್ನಾಡರ ಪೆಟ್ ಹಾಗೂ ಸಹ ನಿರ್ದೇಶಕ ಕಾನಕಾನಹಳ್ಳಿ ಗೋಪಿ ಇವರೆಲ್ಲರಿಗಿಂತ ಒಂದು ಅಂತಸ್ತು ಮೇಲೆ. ಗತ್ತು-ಗೈರತ್ತು ತೋರಿದ್ದೂ ಉಂಟು. 'ನೋಡ್ಕಂತೀನಲೇ' ಅಂದುಕೊಳ್ಳುತ್ತಿದ್ದ ಹುಡುಗರು, ತಲೆಕೊಡವಿಕೊಂಡು ರೀಲಿನ ಡಬ್ಬಗಳನ್ನು ಎಲ್ಲಿಂದೆಲ್ಲಿಗೆ ಬೇಕಾದರೂ ಹೊತ್ತೊಯ್ದುಬಿಡುತ್ತಿದ್ದರು.

ಹೊಸಅಲೆ ಚಿತ್ರಗಳ ಭರಾಟೆಯ ಆ ದಿನಗಳಲ್ಲಿ ಈ ಹುಡುಗರು ಡಬ್ಬಿಂಗ್ ಆರ್ಟಿಸ್ಟ್, ಕಾಸ್ಟ್ಯೂಮ್, ಪ್ರೊಡಕ್ಷನ್ ಡಿಸೈನರ್, ಛಪ್ರಾಸಿ, ಮಾಲಿ, ಫ್ಯಾನ್ ಎಲ್ಲವೂ ಆಗಿಬಿಡುತ್ತಿದ್ದರು. ಎಲ್ಲಿಂದೆಲ್ಲಿಗಾದರೂ ಸೈ ನಡೆದೋ, ಸೈಕಲ್ ತುಳಿದೋ ಉಂಡದ್ದು -ಇಲ್ಲದ್ದು ಕೂಡ ಮರೆತು



ತಿರುಗಾಡಿದರು. ಮನೆಗಳಿಗೆ ಹೋದರೆ ಹೋದರು ಇಲ್ಲವಾದರೆ ಇಲ್ಲ. ಮನೆಯವರ ಮಟ್ಟಿಗೆ ಅಂಡಲೆಯುವ ಪೋಕರಿಗಳೆನಿಸಿ, ಅವರು ಇವರ ಆಶೆಯನ್ನೇ ಬಿಟ್ಟುಕೊಟ್ಟಿದ್ದೂ ಉಂಟು... ಆದರೆ ಈ ಎಲ್ಲ ಸಾಹಸ ಮಾಡುವ ಮನಸ್ಸುಗಳ ಆಳದಲ್ಲಿ ಭವಿಷ್ಯದ ಬಗ್ಗೆ ಅದೆಂಥ ಭವಿಷ್ಯದ ಬಗ್ಗೆ ಅದೆಂಥ ಸುಂದರವಾದ ಕಲ್ಪನೆಯಿತ್ತೋ....

ಕಡೆಗೊಂದು ದಿನ ತನಗೆ ಆಡಲು-ಹಾಡಲು ಕಲಿಸಿದ್ದ ಮೇಷ್ಟು ಎಂ. ಎಸ್. ನಾಗರಾಜ್‌ರನ್ನೂ ರೇಣುಕಾಚಾರ್ಯ ಕಾಲೇಜನ್ನೂ ಹಿಂದೆ ಹಾಕಿ ನಾಗಾಭರಣ ನಡೆದದ್ದು ಚಿತ್ರ ನಿರ್ದೇಶನಕ್ಕೆ. ಅವರಿಗೊಂದು ಒಳ್ಳೆಯ ಕತೆ ಸಿಕ್ಕಿತು. ಒಂದು ಎಳೆ ಹಿಡಿದು ಯಾರ್‍ಯಾರೋ ರಕ್ತಮಾಂಸ ತುಂಬಿದರು. ಏನೇನೂ ಆಗಬೇಕೆಂಬ ಮಹತ್ವಾಕಾಂಕ್ಷೆ ಇದ್ದ ತರುಣರೆಲ್ಲ ಒಂದಾಗಿದ್ದ ಸಮಯ. ಕೋಡಳ್ಳಿ ಶಿವರಾಮರಂಥವರು ನಿರ್ಮಾಣದ ಅಖಾಡಕ್ಕಿಳಿದರೆ, ಚಿತ್ರಕಥೆ-ಸಂಭಷಣೆ ಎಲ್ಲಕ್ಕೂ ಥಕಥೈ ಮಾಡಿದವು ಈ ಹುಡುಗರು. ಇದ್ದುದರಲ್ಲಿ ಇಂಟಲೆಕ್ಚ್ಯುಯಲ್ ಅಂದುಕೊಳ್ಳುತ್ತಿದ್ದ ಟಿ.ಎಸ್. ರಂಗಾ ಚಿತ್ರಕಥೆ ಮಾಡಿದರು. ರಂಗಾ ಸೊಗಸಾಗಿ ಕತೆ ಹೇಳಬಲ್ಲ ಜಾಣ...ಚಿತ್ರಕತೆಯನ್ನು ಹಾಗೇ ಸಿದ್ಧ ಮಾಡಿದರು. ಒಂದಿಷ್ಟು ಅಥವಾ ಜಾಸ್ತಿ ನೆರವು ಕೊಟ್ಟವರು ರಾಘವೇಂದ್ರ ಖಾಸನೀಸ. ಹುಡುಗರಿಗೆ ಕಸುವಿತ್ತು ಕಸುಬುಗಾರಿಕೆ ಇರಲಿಲ್ಲ. ಆಗ ಬಂದವರು ಗಿರೀಶ್ ಕಾಸರವಳ್ಳಿ. ಇನ್ನೂ ಸಿನಿಮಾ ಕಲಿಯುತ್ತಿದ್ದ ಅವರಿಗೆ ಇದೊಂಥರಾ 'ಹೌಸ್ ಸರ್ಜನ್ ಶಿಪ್' ಇದ್ದ ಹಾಗೆ... ನಾಗಾಭರಣರಿಗೆ ಸಹ ನಿರ್ದೇಶಕರು ಗಿರೀಶ್ ಕಾಸರವಳ್ಳಿ! ಎಸ್. ರಾಮಚಂದ್ರ ಎಲ್ಲವನ್ನು ಸುಧಾರಿಸಿಕೊಂಡು ಛಾಯಗ್ರಹಣದಲ್ಲೇ ಒಂದು ಪವಾಡ ಮಾಡಿಬಿಟ್ಟಿದ್ದರು. ಅಂತೂ 'ಗ್ರಹಣ' ಸಿನಿಮಾ ಸಿದ್ಧವಾಗೇ ಬಿಟ್ಟಿತು. ಒಂದು ಹಂತದಲ್ಲಿ ಯಾರೋ ಒಗ್ಗಟ್ಟಿಗೊಂದು ಪುಳ್ಳೆ ಇಟ್ಟರು ಅಂತ ಕಾಣುತ್ತದೆ. ಖಾಸನೀಸರು ಬಾಯಿಬಿಟ್ಟರು. ನಾನು ಉದಯವಾಣಿಯಲ್ಲಿ ದೊಡ್ಡದಾಗಿ ಪ್ರಕಟಿಸಿಯೂ ಬಿಟ್ಟೆ. ದೊಡ್ಡ ಗದ್ದಲ..."ಹಾಗಲ್ಲ ಹೀಗೆ...ಹೀಗಲ್ಲ ಹಾಗೆ" "ಅವರ ಪಾಲಿನ ಕೆಲಸ ಅಷ್ಟು. ಇವರು ಮಾಡಿದ ಕೆಲಸ ಇಷ್ಟು..." ಹೇಳಿಕೆಗಳು... ಸಮ ಸಮಜಾಯಿಷಿಗಳು ಇವೆಲ್ಲದರ ಮಧ್ಯೆ 'ನಿರ್ದೇಶನ ಮಾಡಿದ್ದು ನಾನೇ' ಅಂತ ದೊಡ್ಡ ಬಾಂಬ್ ಇಟ್ಟರು ಕೋಡಳ್ಳಿ.

ಇಂಥ ಏರುಪೇರುಗಳ ಮಧ್ಯೆಯೂ ಅಚಲವಾಗಿದ್ದದ್ದು ನಾಗಾಭರಣ ಮಾತ್ರ. ಅದೇ ನಗು... ಅದೇ ಏಕಾಗ್ರತೆ. ಏನು ಬಂದರೂ ಸದ್ದಿಲ್ಲದೆ ಸ್ವೀಕರಿಸು, ಬಾಯಿಬಿಟ್ಟು ಬಣ್ಣಗೇಡಾಗಬಾರದು ಎಂತ ಯಾರು ಉಪದೇಶ ಮಾಡಿದ್ದರಪ್ಪಾ ಈ ಹುಡುಗನಿಗೆ!

ಒಟ್ಟಾರೆ 'ಗ್ರಹಣ' ಹಲವರಿಗೆ ಪ್ರಯೋಗಾಲಯವಾಗಿತ್ತು...ಅವರವರ ಆಸ್ಥೆಗೆ ಬೇಕಾದ್ದನ್ನು ಕಲಿತು ಹೊರಬಿದ್ದಿತ್ತೊಂದು ಉತ್ಸಾಹೀ ತಂಡ.

ಮುಂದೆ ನಾಗಾಭರಣರ ಜಾಡು ಬದಲಾಯಿತು... ಕೆಲಸ ಕೆಲಸ... ಉಚ್ಚ-ನೀಚಗಳಿಲ್ಲದ ಕೆಲಸ. ಎಲ್ಲರ ಜೊತೆ ಬೆಸೆದುಕೊಳ್ಳುತ್ತಿದ್ದ ಮನಸ್ಸು... 'ಆಕ್ಸಿಡೆಂಟ್' ಚಿತ್ರದ ಅಭಿನಯವಂತೂ 'ನ ಭೂತೋ....' ಆಗಿಬಿಟ್ಟಿತು.

ಪ್ರತಿಭೆಯಿತ್ತು, ವಿನಯವಿತ್ತು. ಎಲ್ಲಿಗೆ ಹೇಗೆ ಬೇಕೊ ಹಾಗೆ ಚೌಕದಲ್ಲಿ ವೃತ್ತವೋ, ವೃತ್ತದಲ್ಲಿ ಚೌಕವೋ ಎಲ್ಲವೂ ಆಗಬಲ್ಲೆ ಎಂಬುದನ್ನು ಹಾಗೆ ಇದ್ದು ತೋರಿಸಿದರು ನಾಗಾಭರಣ.

ಇದರಿಂದಾಗಿ ಆತನಿಗೆ ಅವಕಾಶಗಳು ವಿಪುಲವಾಗಿ ದೊರೆತವು. ಹೊಂದಿಕೊಳ್ಳುವ ಗುಣ 'ಅತಿ'ಯಾದಾಗ ಒಪ್ಪಂದಗಳಿಗೆ ಬಂದರೇನೊ. ಅಭಿರುಚಿಗೆ ಒಗ್ಗಲಾರದ ಕೆಲಸಗಳನ್ನೂ ಮಾಡಿದ್ದುಂಟು. ಅಂಥ ಕಡೆಯೂ ಅಲ್ಲೊಂದು ಇಲ್ಲೊಂದು ಸ್ಪಾರ್ಕ್ ಇರುತ್ತಿತ್ತು...ನಾಗಾಭರಣ ಟಚ್ ಇದ್ದಂತೆ.

ವಾಣಿಜ್ಯ-ಹೊಸ ಧಾಟಿಗಳ ಎರಡೂ ದೋಣಿಯಲ್ಲಿ ಕಾಲಿಟ್ಟು ಸಮಸಮವಾಗಿ ನಡೆಸಿದರು ಭರಣ. ಅವರನ್ನು ಕೆಲವರು ಬ್ರಿಡ್ಜ್ ಸಿನಿಮಾ ನಿರ್ದೇಶಕ ಎಂದರು. ನಾಗಾಭರಣ ತಾನು ಏನು ಎಂದು ಎಂದೂ ಹೇಳಿಕೊಂಡಿಲ್ಲ...ಕಾಯಕ ತಲ್ಲೀನ. ಎಲ್ಲಿ ಏನೇ ಮಾಡಿದಾಗಲೂ ರಂಗಭೂಮಿಯ ಗೆಳೆಯರನ್ನು ತೊಡಗಿಸಿಕೊಂಡರು. ರಂಗ ನಟರು ಸಿನಿಮಾಗಳಲ್ಲೂ ಸೈ ಎನ್ನಿಸಿಕೊಳ್ಳುವಷ್ಟು ಶಕ್ತರೂ ಆಗಿರುತ್ತರಾದ್ದರಿಂದ ಭರಣರ ಕೆಲಸವೂ ಹಗುರಾಗುತ್ತಿತ್ತು.

ಬೆಂಗಳೂರಿಗರ, ಅದರಲ್ಲೂ ಹವ್ಯಾಸಿ ರಂಗದವರ ಎಂದಿನ ಕಟಕಿಯಂತೂ ಇದ್ದೇ ಇತ್ತು "ಭರಣ ಕಾಸು ಕೊಡಿಸೋಲ್ಲ. ಅವಕಾಶ ಕೊಟ್ಟಿದ್ದೇ ಹೆಚ್ಚು, ಅಂತಾರೆ" ಎಂಬ ಆಕ್ಷೇಪ. ಭರಣನಿಗೇ ಕಾಸು ಸಿಕ್ಕುತ್ತಿದ್ದುದು ಅಪರೂಪ. ರಂಗಭೂಮಿ ಜನರನ್ನ ಹಾಕಿಕೊಂಡು ಗುಣವುಳ್ಳದಷ್ಟು ಕೊಡುವ ಹಾಗೂ ಬಜೆಟ್ನಲ್ಲಿ ಕೊಂಚ ಮಿತ ಸಾಧಿಸುವಲ್ಲಿ ಪ್ಲಸ್ ಪಾಯಿಂಟ್ ಆಗುತ್ತಿದ್ದ ಭರಣರಿಗೆ ಮತ್ತೊಂದಕ್ಕೆ ಲಗ್ಗೆ ಹಾಕಲು ಅದೇ ನಿಚ್ಚಣಿಕೆ ಎಂಬುದು ಈ ಗೊಣಗುವವರಿಗೆ ತಿಳಿಯುವುದಾದರೂ ಹೇಗೆ? ಒಂದು ವಿಚಿತ್ರ ರೀತಿಯಲ್ಲಿ ಭಾರಿ ರಥ ಎಳೆಯುತ್ತಲೇ ತಾನೂ ಮುಂದೆ ಸಾಗಿದ್ದರು ಭರಣ. ಮುಗ್ಗರಿಕೆಗಳ ಹಂತ ದಾಟಿ ಯಶಸ್ಸಿನ ಹಾದಿಗೆ ಬರುವಷ್ಟರಲ್ಲಿ ಅವರು ಪಟ್ಟ ಬವಣೆಗಳು ಒಂದೆರಡಲ್ಲ. ಒಲಿದು ಕೈಹಿಡಿದ ನಾಗಿಣಿಯೂ ಸುಲಭವಾಗಿ ದಕ್ಕಿದ ಹೆಣ್ಣಲ್ಲ. ಹೋರಾಟ, ದ್ವಂದ್ವಗಳೇ ಬದುಕು-ಉಸಿರು ಆಗುತ್ತಿದ್ದಾಗಲೂ ಎಲ್ಲವನ್ನು ನುಂಗುತ್ತ ಅದೇ ನಗುವನ್ನು ಉಳಿಸಿಕೊಂಡರು ಭರಣ.

ತನ್ನ ಎಲ್ಲ ಸೃಜನಶೀಲ ಕೆಲಸಗಳ ಜೊತೆಗೂ ತಿಳಿವಳಿಕೆಯುಳ್ಳ ಗೆಳೆಯರನ್ನು ಜೊತೆಗಿಟ್ಟುಕೊಂಡರು. ಎಲ್ಲರ ಸಲಹೆ ಸೂಚನೆಗಳನ್ನು ತಾಳ್ಮೆಯಿಂದ ಕೇಳಿಸಿಕೊಂಡರು. ಎಲ್ಲ ಒಳ್ಳೆಯದನ್ನು ಕೋದು ಮಾಲೆ ಮಾಡುವ ಕಲೆ ಕರಗತವಾಯಿತು. ಹಾಗೆ ಅರಳಿದ ಕುಸುಮಗಳೇ ಅವರನ್ನು ಕೀರ್ತಿ ಶಿಖರದಲ್ಲಿ ತಂದು ನಿಲ್ಲಿಸಿದವು.

ಪ್ರತಿಯೊಂದು ಸಂಗತಿಯನ್ನು ಸೂಕ್ಷ್ಮವಾಗಿ ಗಮನಿಸುವ, ತನ್ನ ಕ್ಷೇತ್ರದಲ್ಲಿ ಅಲ್ಲಿ-ಇಲ್ಲಿ ಕಂಡ ಹೊಸತನ್ನು ಹೊಸೆದು ಹುರಿಮಾಡುವ ದಿಕ್ಕಿನಲ್ಲಿ ಸದಾ ಗಮನ ಹರಿಸಿದರು. ಅಂಥ ಎಲ್ಲ ಸಾಹಸ-ಹೊಸತನಕ್ಕೆ ದಿ|| ಬಸವರಾಜು, ಸಿ. ಅಶ್ವಥ್‌ರಿಂದ ಹಿಡಿದು ರುಕ್ಕೋಜಿ, ಕೆ. ರಾಮಯ್ಯ, ಪ್ರತಿಭಾ ನಂದಕುಮಾರ್ ವರೆಗೆ ಎಲ್ಲರ ನೆರವನ್ನೂ ಪಡೆದರು. ಭರಣ ಇದ್ದ ಕಡೆ, ಅವರ ಎಲ್ಲ ಕೆಲಸಗಳ ಹಿಂದೆ ಪ್ರಯೋಗಪ್ರಿಯ ಪ್ರತಿಭೆಯ ಹಿರಿ-ಕಿರಿಯರ ದಂಡೇ ಇರುತ್ತದೆ. ಅದೇ ಭರಣರ ಯಶಸ್ಸಿನ ಗುಟ್ಟು ಕೂಡಾ. ಶರೀಫ, ಮೈಸೂರು ಮಲ್ಲಿಗೆ, ನಾಗಮಂಡಲ ಎಲ್ಲವೂ ಇಂಥ ಪ್ರತಿಭೆಗಳ ಸಂಗಮದ ಫಲ.



ಈ ಎಲ್ಲ ಚಿತ್ರಗಳ ಬಗೆಗೂ ನನ್ನ ವಿಮರ್ಶಕ ಬುದ್ಧಿ ಅನೇಕ ತಕರಾರುಗಳನ್ನು ಎತ್ತುತ್ತದೆ. ಅದು ಬೇರೆಯೇ ಚರ್ಚೆಯ ಸಂಗತಿ. ಆದರೆ ಇವೆಲ್ಲ ಆತನನ್ನು ಎತ್ತರಕ್ಕೆ ಕೊಂಡೊಯ್ದ ರುಚಿಯುಳ್ಳ ಕೃತಿಗಳು ಎನ್ನುವುದಂತೂ ಸತ್ಯ.

'ಆಸ್ಫೋಟ' ಚಿತ್ರಕ್ಕೆ ಪ್ರಶಸ್ತಿ ಬಂದಾಗ ನಾನು ಪ್ರಶಸ್ತಿ ಸಮಿತಿಯಲ್ಲಿದ್ದೆ. ನಾಗಾಭರಣ ಕಲಾವಿದರನ್ನು ದುಡಿಸಿಕೊಂಡ ರೀತಿ ಪ್ರಿಯವೆನ್ನಿಸಿತ್ತು. ದತ್ತಣ್ಣನನ್ನು ತೆರೆಗೆ ತಂದು 'ಇಲ್ಲಿ ನೋಡಿ ನಿಜವಾದ ಕಲಾವಿದನಿದ್ದಾನೆ' ಎಂತ ತೋರಿದ್ದರು ಭರಣ. ಅದೇ ಚಿತ್ರದಿಂದ ಕಲಾವಿದೆ ತ್ರಿವೇಣಿ ಗಮನ ಸೆಳೆದಿದ್ದರು... ಭರಣನ 'ಚಿನ್ನಾರಿ ಮುತ್ತ' ಇದ್ದಾಗಲೂ ನಾನು ಕೇಂದ್ರದ ಪ್ರಶಸ್ತಿ ಸಮಿತಿಯಲ್ಲಿದ್ದೆ. ಹೀಗೆ ಏನೇನೋ ಕಾರಣಕ್ಕೆ ಭರಣರ ಚಿತ್ರಗಳ ಜೊತೆಗೆ ಹತ್ತಿರದ ಸಂಬಂಧಗಳು ಒದಗಿಬಂದಿವೆ. ಅದಕ್ಕಾಗಿ ಸಂತೋಷವೂ ಇದೆ.

ಇನ್ನೂ ಚೆನ್ನಾಗಿ ನೆನಪಿರುವ ಒಂದು ಸಂಗತಿಯೆಂದರೆ : ನಾನು ತುಂಬ ಗೌರವಿಸುತ್ತಿದ್ದ ಶಕ್ತಿಪ್ರಸಾದ್ ಒಮ್ಮೆ ಕೂಡಲೇ ಬಾ ಎಂದು ಕರೆಸಿದರು. ಹೋದೆ. "ನೋಡಿ, ನನ್ನ ಮಗನನ್ನು ಇವತ್ತು ಅಖಾಡಕ್ಕೆ ಇಳಿಸ್ತಿದೀನಿ. ನಮ್ಮಗಳಿಗಾದ ತೊಂದರೆಗಳು, ಪ್ರತಿಭಾ ಪ್ರಕಾಶಕ್ಕೂ ಅವಕಾಶವಿಲ್ಲದಂಥ ಸಂಕಟಗಳು ಈ ಮಗನ ಕಾಲಕ್ಕೆ ಎದುರಾಗದಿರಲಿ ಅಂತ ಹರಸಿ ಬಿಡಿ. ಮೊದಲು ನಿಮಗೆ ತಿಳಿಸ್ತಿದೀನಿ" ಎಂದು ಮಗನನ್ನು ಕರೆದು ಪರಿಚಯಿಸಿದ್ದರು.

ನಾಗಾಭರಣ ನಿರ್ದೇಶನದಲ್ಲಿ ಅರ್ಜುನ್‌ಸರ್ಜಾ ತೆರೆಗೆ ಬಂದ ಸಂದರ್ಭ ಅದು. ಮುಂದೆ ಸರ್ಜಾ ಬೆಳೆದ ಬಗೆಯನ್ನು ಹೇಳಬೇಕಿಲ್ಲವಲ್ಲ!

ಭರಣ ಮಾಡಿದ ಚಿತ್ರಗಳೆಲ್ಲ ಅತ್ಯುತ್ತಮವಾಗಿತ್ತೋ ಇಲ್ಲವೋ... ಏರಿಳಿತಗಳು ಸಹಜ. ಆದರೆ ಇವತ್ತಿನ 'ತಾರೆ'ಗಳನೇಕವಕ್ಕೆ ಭರಣರ ಚಿತ್ರಗಳು ಚಿಮ್ಮುಹಲಗೆಯಾಗಿವೆ. ಅಭಿನಯವನ್ನು ಕಲಿಸಬಲ್ಲ ಚತುರ ಭರಣ. ಚಿತ್ರ ಗೆದ್ದಿತು-ಸೋತಿತು ಅನ್ನುವುದು ಬೇರೆಯೇ ಸಂಗತಿ. ಆದರೆ ಆ ಚಿತ್ರಗಳಿಂದ ಅಭಿನಯದ ಗರಡಿಗಿಳಿದು ಗೆದ್ದು ಬಂದ ಮಲ್ಲರು ಹಲವರು ಎಂಬುದು ಮುಖ್ಯ.

ಭರಣ ಕತೆ ಆರಿಸುವಾಗ ಹಲವು ಬಾರಿ ನನ್ನನ್ನು ಸಂಪರ್ಕಿಸಿದ್ದಾರೆ. ಸಾಹಿತಿಗಳನ್ನು ಪರಿಚಯಿಸಿ ಕಾದಂಬರಿಗಳ ಹಕ್ಕನ್ನು ಕೊಡಿಸುವ ಮಧ್ಯವರ್ತಿಯಾಗಿಯೂ ಅವರ ಜೊತೆಗೆ ಹಲವು ಬಾರಿ ನಾನೂ ಇದ್ದುದುಂಟು.

ಜಿ.ವಿ. ಅಯ್ಯರ್ 'ಆದಿ ಶಂಕರ' ಚಿತ್ರಕತೆ ಸಿದ್ಧ ಮಾಡಿದರು. ಸುಮತೀಂದ್ರ ನಾಡಿಗರ ಮನೆ (ಆಗ ಬ್ಯೂಗಲ್ ರಾಕಿನ ಬಳಿ ಇತ್ತು)ಯಲ್ಲಿ ಒಂದು ಸಂಜೆ ಅದರ ವಾಚನ. ನಾವು ನಾಲ್ಕೈದು ಜನ ಮಾತ್ರ ಇದ್ದೆವು. ಅಯ್ಯರ್ ಅವರ ಕಾನ್ಸೆಪ್ಟ್ ತುಂಬ ಇಷ್ಟವಾಯಿತು. ಮೆಚ್ಚಿ ಮಾತಾಡಿದೆವು.

ಆ ದಿನ ದೊಡ್ಡ ಜಿಜ್ಞಾಸೆ ಎದ್ದುದು ಪಾತ್ರಧಾರಿಗಳ ಆಯ್ಕೆಯ ವಿಚಾರದಲ್ಲಿ. ಶ್ರೀನಿವಾಸ ಪ್ರಭು-ನಾಗಾಭರಣ ಜೋಡಿಯೇ ಇರಬೇಕೆಂಬ ನನ್ನ ವಾದವೇ ಗೆದ್ದಿತ್ತು. ಚಿತ್ರೀಕರಣದ ದಿನ ನಾಗಾಭರಣ 'ಮೃತ್ಯು'ವಿನ ಪಾತ್ರಧರಿಸಿ ನಿಂತಾಗ ನಾನೆಷ್ಟು ಹಿಗ್ಗಿ ಹೋದೆನೋ...

ಅಯ್ಯರ್ ಕಡೆ ಗೆಲುವಿನ ನೋಟ ಹರಿಸಿದ್ದೆ. ಅವರು ಹುಸಿನಕ್ಕು ತಲೆಯಾಡಿಸಿದ್ದರು. ಆ ಪಾತ್ರ ನಿರ್ವಹಿಸುವುದು ತುಂಬ ಕಷ್ಟವಿತ್ತು. ಭರಣ ನಿಭಾಯಿಸಿದರು...ನಿಜಕ್ಕೂ ಅವರು ಆ ಪಾತ್ರದ ಮೂಲಕ ಮನಸ್ಸಿನಲ್ಲಿ ಉಳಿದು ಹೋದರು.

ಇವತ್ತಿಗೂ ಅಯ್ಯರ್ ಅವರ ಚಿತ್ರಗಳಲ್ಲಿ 'ಆದಿಶಂಕರ'ವೇ ಮಾಸ್ಟರ್‌ಪೀಸ್! ಅದಕ್ಕೆ ಭರಣ-ಪ್ರಭು ಇಬ್ಬರ ಕೊಡುಗೆಯೂ ಇದೆ!!

'ಪ್ರಾಯ ಪ್ರಾಯ ಪ್ರಾಯ' ಚಿತ್ರ ನಿರ್ದೇಶಿಸಿದರು ಭರಣ. ಆಗಿನ್ನೂ ಅವರು ಇವತ್ತಿನ ಹಾಗೆ ಅಧಿಕಾರಯುತವಾಗಿ ಮಾತನಾಡುವಂಥ ಸ್ಥಾನದಲ್ಲಿರಲಿಲ್ಲ. ಆ ಚಿತ್ರದ ಸಂದರ್ಭದಲ್ಲಿ ಹಾಸ್ಟೆಲ್‌ಗಾಗಿ ಹುಡುಗಿಯರು ಇತ್ಯಾದಿಗಾಗಿ ಕೆಲವು ಗಾಳಿ ಸುದ್ದಿಗಳೆದ್ದವು. ಏನೇನೊ ಬರಹಗಳು ಬಂದವು. ನಾಗಾಭರಣ ಒಳಗೊಳಗೇ ಬೆಂದು ಹೋದರು. ನಾನು ಚಿತ್ರೀಕರಣಕ್ಕೆ ಹೋದಾಗ ಖಾಸಗಿಯಾಗಿ ಮಾತನಾಡುತ್ತ ತಾನು ನಿರ್ದೇಶಿಸುತ್ತಿರುವ ಚಿತ್ರದ ಸಂದರ್ಭದಲ್ಲಿ ಇಂಥ ಸುದ್ದಿಗಳಾದುದರ ನೋವನ್ನು ತೋಡಿಕೊಂಡರು. ಕಣ್ಣು ಹನಿಗೂಡಿತ್ತು. "ಯಾರೋ ಏನೊ ಮಾಡಿದ ತಪ್ಪಿಗೆ ನೀವು ಹೊಣೆಯಲ್ಲವಲ್ಲ ಯಾಕೆ ಯೋಚಿಸ್ತೀರಿ. ಕೆಲಸ ಚೆನ್ನಾಗಿ ಮಾಡುವ ಕಡೆ ಗಮನ ಕೊಡಿ" ಅಂದಿದ್ದೆ. ಒಂದು ನಿಮಿಷ ನನ್ನ ಕೈ ಗಟ್ಟಿಯಾಗಿ ಹಿಡಿದು ಹಾಗೇ ನಿಂತುಬಿಟ್ಟರು. ಈಗ ಇಂಥವು ಎದುರಾದರೆ ಕ್ಯಾರೇ ಅನ್ನದೆ ತಿರುಗಿ ಕೇಳಬಲ್ಲರು ಭರಣ-ಅವತ್ತಿನ ಭರಣನಿಗೆ ಭವಿಷ್ಯದ ಚಿಂತೆ ಇತ್ತು.

'ಪ್ರಾಯ ಪ್ರಾಯ ಪ್ರಾಯ' ಕಳಪೆಯಾಗಿರಲಿಲ್ಲ. ಆದರೂ ನಿರೀಕ್ಷಿತ ಯಶಸ್ಸು ಸಿಗಲಿಲ್ಲ. ಆದರೆ ತನ್ನ ಗೆಳೆಯ ಸುಂದರರಾಜ್ ಎಂಥ ಕಲಾವಿದ ಅಂತ ತೋರಿಸಿದ್ದರು ಭರಣ. "ರಾಗಿರೊಟ್ಟಿ..." ಹಾಡು, ಚಿತ್ರೀಕರಣ ನೋಡಿದ ಯಾರೂ ಮರೆಯಲಾರರು.

ಶ್ರೀಮತಿ ಪಾರ್ವತಮ್ಮ ನನ್ನ ಆತ್ಮೀಯ ಗೆಳತಿಯಾಗಿದ್ದ ದಿನಗಳವು. ತುಂಬ ಖಾಸಗಿಯಾಗಿ ಮಾತಾಡಿಕೊಳ್ಳುತ್ತಿದ್ದೆವು. ಆಗ ಅವರು ತ.ರಾ.ಸು. ಅವರ 'ಆಕಸ್ಮಿಕ' ಮೊದಲಾದ ಸರಣಿ ಕಾದಂಬರಿಗಳನ್ನು ತೆರೆಗೆ ತರುವ ಸಂಗತಿ ಹೇಳಿದರು. ರಾಜ್‌ಕುಮಾರ್ ಅವರಿಗೆ ಇನ್ಸ್‌ಪೆಕ್ಟರ್ ಪಾತ್ರ ಅಂದಾಗ ಹೌಹಾರಿದ್ದೆ. ಅದು ಅವರಿಗೆ ಹೊಂದುತ್ತಾ... ಅವರ ಇಮೇಜ್‌ಗೆ ಆಗುತ್ತಾ ಅಂತೆಲ್ಲ ಯೋಚಿಸಿದೆ. ಪಾರ್ವತಮ್ಮ ನಕ್ಕರು. "ಒಂದು ಮ್ಯಾಜಿಕ್ ಮಾಡಿದೀವಿ. ಕತೇಗೆ ಹೊಸ ತಿರುವು ಕೊಟ್ಟುಬಿಟ್ಟಿದೀವಿ. ಅವರ ಇಮೇಜ್‌ಗೆ ಧಕ್ಕೆ ಆಗೋದಿಲ್ಲ" ಎಂತ ಹೇಳಿದ್ದರು ಕುತೂಹಲ-ಆತಂಕಗಳಲ್ಲೇ ಚಿತ್ರಕ್ಕಾಗಿ ಕಾದೆ. ಹೌದು ಚಿತ್ರ ಕಾದಂಬರಿಗಿಂತ ತುಂಬ ಭಿನ್ನವಾಗಿತ್ತು. ಭರಣ ತುಂಬ ಚೆನ್ನಾಗಿ ನಿರ್ದೇಶಿಸಿಯೂ ಇದ್ದರು. ಚಿತ್ರದಲ್ಲಿ ಪ್ರಕೃತಿಯಂತೂ ತುಂಬ ಚೆನ್ನಾಗಿ ಮೂಡಿತ್ತು. ಒಂದೇ ಕ್ಷಣ ಕಂಡು ಕರಗಿಬಿಡುವ ಆಗುಂಬೆಯ ಸೂರ್ಯಾಸ್ತವಂತೂ ಇವತ್ತಿಗೂ ನನ್ನ ಕಣ್ಣ ಮುಂದಾಡುತ್ತಿದೆ. ಬಹಳ ಜನ ಇದನ್ನು ಗಮನಿಸಿಯೂ ಇಲ್ಲ. ಫಳಿಚ್ಚನೆ ಸುಳಿದು ಮರೆಯಾಗುವ, ರೋಮಾಂಚನವಾಗುವಂಥ ಕ್ಷಣವದು. 'ಆಕಸ್ಮಿಕ' ಚಿತ್ರ ಎಂದ ಕೂಡಲೇ ಆ ಸೂರ್ಯ, ರಾಜಕುಮಾರ್ ಹಾಡಿದ ರಂಗಗೀತೆ ಕಣ್ಣು-ಕಿವಿಗೆ ಹಬ್ಬ ತರುತ್ತವೆ. ಭರಣ ಎಲ್ಲೇ ಕೆಲಸ ಮಾಡಲಿ ಇಂಥದೊಂದು ಸೆಳೆಮಿಂಚು ಇರುತ್ತದೆ. ಅದೇ ಆತನ ವಿಶೇಷ.



ಜ್ಞಾನಪೀಠ ಪ್ರಶಸ್ತಿ ಪಡೆದ ಲೇಖಕರ ಕೃತಿಯನ್ನು ಆಯ್ದು 'ಜನುಮದ ಜೋಡಿ' ಚಿತ್ರಿಸಿದರು. ಕೃತಿಯ ಆಶಯ, ಅಲ್ಲಿಂದ ಹೊಮ್ಮುವ ಬೇರೆಬೇರೆ ಧ್ವನಿಗಳನ್ನು ಹಿಡಿಯಲಾಗಿರಲಾರದು. ಆದರೆ ಸಂವಹನ ಸಾಧ್ಯವಾಗುವ ಹಾಗೆ ಕತೆಯನ್ನು ಜೋಡಿಸಿದ ರೀತಿ ತುಂಬ ಹಿಡಿಸಿತು. ನಮ್ಮ ನೆಲದ ಜಾಯಮಾನಕ್ಕೆ ಒಗ್ಗಿಸುವಾಗಲೂ ಮಾಡಿರುವ ಬದಲಾವಣೆಗಳು ಸೊಗಸಾಗಿ ಹೊಂದುಕೊಂಡಿವೆ ಅನ್ನಿಸಿತು. ಚಿತ್ರದಲ್ಲಿಯ ಹಾಡುಗಳಂತೂ ಕುಣಿಸಿದವು. ಕೊನೆಯ ದೃಶ್ಯದಲ್ಲಿ ಗರ್ಭಿಣಿಯನ್ನು ಪಂಚಾಯಿತಿಕಟ್ಟೆಯಲ್ಲಿ ಪ್ರಶ್ನಿಸಿದ ರೀತಿ, ಆಕೆ ಕೊಡುವ ಉತ್ತರಗಳು-ಚಿತ್ರದಲ್ಲಿ ಪ್ರತಿಸ್ಪರ್ಧಿಯಂತೆ ಬದಲಾಗಿದ್ದ ಬಾಲ್ಯದ ಗೆಲತಿ ಇಂಥ ಕಷ್ಟದ ಸಮಯದಲ್ಲಿ ದುಃಖದಲ್ಲಿರುವ ಗೆಳತಿಗೆ ಬೆಂಬಲವಾಗಿ ನಿಲ್ಲುವುದು, ಇಡೀ ಸ್ತ್ರೀಸಮೂಹ ಆಕೆಯ ಪರವಾದಿಸುವುದು ಇವೆಲ್ಲ ಭರಣರ ಬಗ್ಗೆ ಗೌರವ ಮೂಡಿಸಿದ್ದವು. ಹೆಣ್ಣು ಎಷ್ಟೇ ಕಠಿಣಳಾಗಿದ್ದರೂ ಸಂಕಟದ ಹೊತ್ತಿನಲ್ಲಿ ಇನ್ನೊಬ್ಬ ಹೆಣ್ಣಿನ ನೆರವಿಗೆ ಧಾವಿಸುತ್ತಾಳೆ ಎಂದು ಹೇಳುವ ರೀತಿ ಮನಸ್ಸಿಗೆ ತಂಪು ತಂದಿತ್ತು. ಇವೆಲ್ಲದರ ಹಿಂದೆ ಬರಗೂರು ರಾಮಚಂದ್ರಪ್ಪನವರ ಆಲೋಚನೆಗಳು ಇರಬಹುದು - ಆದರೆ ಅವನ್ನು ಸ್ವೀಕರಿಸಿ, ಸಮರ್ಥವಾಗಿ ತೆರೆಯ ಮೇಲೆ ತಂದ ಭರಣ ಕೂಡಾ ಅಷ್ಟೇ ಅಭಿನಂದನೆಗೆ ಪಾತ್ರರು. ಇಲ್ಲಿ ಮೊಳಕೆಯೊಡೆದ ಆಲೋಚನೆಗಳು ಮುಂದೆ ವಿಮೋಚನೆಯಂಥ ಚಿತ್ರ ತೆರೆಗೆ ತರುವ ಸಾಹಸಕ್ಕೆ ಕಾರಣವಾದವೇನೋ!

"ವಿಮೋಚನೆ" ಚಿತ್ರಕ್ಕೆ ನನ್ನ ಕೈಯಲ್ಲಿ ಕ್ಲ್ಯಾಪ್ ಮಾಡಿಸಿದ್ದರು. ತುಂಬ ಪ್ರೀತಿಯಿಂದ ಚಿತ್ರ ನಿರ್ಮಿಸಿದರು. ವಾಣಿಜ್ಯ ಪ್ರಧಾನ ಚಿತ್ರ ನೋಡಿ ಅಭ್ಯಾಸವಿರುವ ಪ್ರೇಕ್ಷಕನಿಗೆ ಇನ್ನೂ ಇಂಥ ಚಿತ್ರ ಸ್ವೀಕರಿಸುವ ಸಿದ್ಧತೆ ಇಲ್ಲ. ಇನ್ನೊಂದು ವರ್ಗಕ್ಕೆ ಇಲ್ಲಿಯ ವಿಷಯ ಗ್ಲಾಮರೈಸ್ ಆಯಿತು ಅನ್ನಿಸಿತ್ತು. ಹೀಗಾಗಿ ಚಿತ್ರ ಎರಡೂ ಕಡೆ ಸಲ್ಲಲಿಲ್ಲ. ಆದರೆ ಭರಣ ಅನೇಕ ಪ್ರಗತಿಪರ ಆಲೋಚನೆಗಳನ್ನು ಚಿತ್ರದ ಮೂಲಕ ಹೇಳಲು ಪ್ರಯತ್ತಿಸಿದ್ದರು. ಆ ಮಟ್ಟಿಗೆ ಅವರದು ಪ್ರಮಾಣಿಕ ಪ್ರಯತ್ನವೇ ಆಗಿತ್ತು. ಶ್ರದ್ಧೆಯಿಂದ ಉತ್ತಮ ಸಂಗೀತ ಕೂಡಿಸಿದ್ದರು, ಅಭಿನಯ ತೆಗೆಯುವಲ್ಲಿ ಅವರ ಶ್ರಮ ಕಾಣುತ್ತಿತ್ತು. 'ವಿಮೋಚನೆ'ಯಿಂದ ನಷ್ಟವಾಗಿದ್ದರೂ ಅವರ ಪ್ರಯತ್ನ, ಪ್ರಾಮಾಣಿಕ ಭಾವನೆಗಳಿಗೆ ಎಂದೂ ಗೌರವ ಸಲ್ಲಬೇಕಾದ್ದೇ.

'ನಾಗಮಂಡಲ' ಚಿತ್ರಿಸಿದರು. ಸ್ತ್ರೀಪರ ಚಿಂತನೆಯ ಕತೆ ಎಂಬುದನ್ನು ಗ್ರಹಿಸಲಾರದಾದರು. ಅವರ ಜೊತೆಗಿದ್ದವರಲ್ಲಿ ಕೆಲವರು ಪುರುಷ ಪ್ರಧಾನ ಮೌಲ್ಯಗಳಿಗೇ ಮಣೆ ಹಾಕುವ ಜನರಾಗಿದ್ದರು. ಅಂಥ ಕಥೆಗಳ ಆಳದಲ್ಲಿ ಇರುವ ಹೊಳಹನ್ನು ಗ್ರಹಿಸಲಿಲ್ಲ. ದೃಶ್ಯ ಸಾಧ್ಯತೆಗೆ ಆದ್ಯತೆಯಾಯಿತು. ಚಿತ್ರದ ಯಶಸ್ಸಿಗೆ ಕಾರಣಗಳು ಏನೇನೋ ಇರಬಹುದು. ಆದರೆ 'ಹೂರಣ'ವೇ ಹಾರಿ ಹೋಗಿತ್ತು. ಇಂಥ ಅನೇಕ ತಪ್ಪುಗಳಾಗಿವೆ ಭರಣರಿಂದ. ತೀರಾ ಮೇಲ್ಸ್ತರದಲ್ಲಿ ಅರ್ಥೈಸಿಕೊಳ್ಳುವುದರಿಂದಾಗುವ ಅಪಾಯಗಳಿವು. ಆದರೂ ಚಿತ್ರಿಸಿರುವ ರೀತಿ, ಸ್ಥಳ, ಅಭಿನಯ ವಿಧಾನ ಇತ್ಯಾದಿಗಳು ತುಂಬ ಚೆನ್ನ. ಹೀಗೆ ಅವರ ಎಲ್ಲ ಚಿತ್ರಗಳ ಬಗ್ಗೆ ಕಿರುತೆರೆಯ ಕಾರ್ಯದ ಬಗ್ಗೆ, ನಾಟಕ, ಸಾಕ್ಷ್ಯಚಿತ್ರ ಏನೆಲ್ಲದರ ಬಗ್ಗೆ ಹೇಳಲು ಬೇಕಾಷ್ಟು ಸಂಗತಿಗಳಿವೆ.

ಏನು ಮಾಡಿದರೂ ಅನನ್ಯ ಎನ್ನಿಸುವಂಥ ಶ್ರದ್ಧೆ ಇರುತ್ತದೆ ಆತನಲ್ಲಿ. ಇದು ದೋಷವೆಂದರೆ ಒಪ್ಪಿಕೊಳ್ಳುವ ದೊಡ್ಡತನವೂ ಇದೆ.

ಭರಣ ಕಿರುತೆರೆಗೂ ಲಗ್ಗೆ ಇಟ್ಟರು. ಅಲ್ಲಿಯೂ ಅವರಿಗೆ ಯಶಸ್ಸು ಸಿಕ್ಕಿದೆ. ಅವರಿಗಾಗಿ ಹಲವು ಬಾರಿ ಕತೆ ಕಾದಂಬರಿಕಾರರನ್ನು ಒಪ್ಪಿಸಲು ಹೆಣಗಿದ್ದೇನೆ. ಎಚ್.ವಿ. ಸಾವಿತ್ರಮ್ಮನವರ ಕತೆಗಳನ್ನು ಕಿರುತೆರೆಗೆ ತರುವ ಪ್ರಯತ್ನದಲ್ಲಿ ನಾನಿದ್ದೆ. ಪ್ರಕಾಶಕರು ಅನುಮತಿ ನೀಡಿದ್ದರೆ ಅದೊಂದು ಅಪರೂಪದ ಕೊಡುಗೆ ಆಗಬಹುದಿತ್ತು; ಲಭ್ಯವಿಲ್ಲ. ನಿರಂಜನರ 'ಬನಶಂಕರಿ' ಮಾಡುತ್ತೇನೆಂದಾಗ ಹಿಗ್ಗಿಹೋದೆ. ತೇಜಸ್ವಿನಿ ನಿರಂಜನರ ಬಳಿ ಕರೆದೊಯ್ದೆ. ತಕರಾರಿಲ್ಲದೆ ಆಕೆ ಅನುಮತಿಸಿದರು. ಸಂಪ್ರದಾಯವಾದಿಗಳು ತಕರಾರೆತ್ತಿ ಧಾರಾವಾಹಿಯನ್ನೇ ನಿಲ್ಲಿಸಿದರಂತೆ. ಸತ್ಯ ಯಾವಾಗಲೂ ಕಹಿಯಲ್ಲವೆ? ನಿರಂಜನರೂ ಆ ಕಾದಂಬರಿ ಬರೆದಾಗ ಕಷ್ಟಕ್ಕೆ ಸಿಕ್ಕಿದ್ದರು. ಇವತ್ತಿಗೂ ಅದೇ ಮೌಢ್ಯ ಮುಂದುವರಿದಿದೆ!

ನಾಗಾಭರಣ ಎಂದರೆ ಉತ್ಸಾಹದ ಚಿಲುಮೆ. ಏಕಕಾಲಕ್ಕೆ ಹತ್ತು ಕೆಲಸವಾದರೂ ಸೈ ಹೆಗಲಿಗೇರಿಸಿಕೊಂಡು ದುಡಿಯುತ್ತಾರೆ. ಜೊತೆಗೇ ಬಿಡುವು ಮಾಡಿಕೊಂಡು ಓಡಿ ಬಂದು ರಂಗಗೀತೆ, ನಿರ್ದೇಶನ ಅಂತ ಪರದಾಡುತ್ತಾರೆ. ಎಷ್ಟೋ ಬಾರಿ ಎಲ್ಲಿಯದಪ್ಪ ಈ ಹುಡುಗನಿಗೆ ಈ ಬತ್ತದ ಉತ್ಸಾಹ ಅನ್ನಿಸಿದೆ. ಆದರೆ ಅದೆಲ್ಲ ನೋಡುತ್ತಿರುವಾಗ ಸಂತೋಷವಾಗುತ್ತದೆ.

ಐವತ್ತು ದೊಡ್ಡದಲ್ಲ... ಇನ್ನೂ ಕಾಲ... ದೀರ್ಘವಾಗಿ ಮೈ ಚಾಚಿಕೊಂಡು ಕಾದಿದೆ... ನಡೆದು ಬಾ ಹುಡುಗಾ ಎನ್ನುತ್ತಾ ಸವಾಲು ಹಾಕುತ್ತಿದೆ. ಒಂದೊಂದು ಹೆಜ್ಜೆಯೂ ಮೈಲಿಗಲ್ಲಾಗಲಿ. ಒಳ್ಳೆಯದೆಲ್ಲ ಆತನ ಉಡಿಗೆ ಬೀಳಲಿ, ಅದೇ ಸುಖವಾದ ನಗೆಯ ಆ-ಭರಣ ಆತನನ್ನು ರಕ್ಷಿಸಲಿ!

❑ ❖ ❑ ❖ ❑



# ಬದುಕೇ ಸ್ನೇಹ, ಸ್ನೇಹವೇ ಬದುಕು

ಸುಂದರ್ ರಾಜ್

"ಋಣಾನುಬಂಧ ರೂಪೇಣ ಪಶು ಪತ್ನಿ ಸುತಾಲಯ!" ಈ ಉಕ್ತಿಯಲ್ಲಿ ಸುತ ಅನ್ನುವ ಪದ ಸಖನನ್ನೂ ಒಳಗೊಂಡಿದೆ ಎಂದು ಒಮದು ಪಕ್ಷದ ಅಂಬೋಣವಿದೆ. ಒಂದುವೇಳೆ ಹಾಗಲ್ಲದಿದ್ದರೆ, ಯೋಗಾಯೋಗದಿಂದ ತಂತಾನೇ ಉದ್ಭವವಾಗಿ, ಗಾಢವಾಗಿ ಬೆಳೆದು, ಏನೇ ಕುಂದು ಕೊರತೆಗಳಿದ್ದರೂ ಎಲ್ಲವನ್ನೂ ಮೀರಿ ಸಮುದ್ರದಷ್ಟು ಆಳ, ಆಕಾಶದಷ್ಟು ಎತ್ತರ ಭೂಮಂಡಲದಷ್ಟು ವಿಶಾಲವಾಗಿ ಮೂರು ದಶಕಗಳಿಗೂ ಮಿಕ್ಕಿ ಮುಕ್ಕಾಗದೆ ಸತತವಾಗಿ ನಡೆದು ಬಂದಿರುವ ನನ್ನ ಭರಣನ ಸ್ನೇಹಕ್ಕೆ ಮೇಲಿನ ಹೇಳಿಕೆ ಸ್ವಲ್ಪ ಹತ್ತಿರವಾಗಿದೆ ಅಷ್ಟೆ. ನಮ್ಮ ಸ್ನೇಹದ ಬಗ್ಗೆ ಇಡಿಯಾಗಿ, ಪೂರ್ತಿಯಾಗಿ ಹೇಳಬೇಕಾದರೆ ಮೇಲಿನ ಉಕ್ತಿಯನ್ನು "ಋಣಾನುಬಂಧ ರೂಪೇಣ ಪಶು ಪತ್ನಿ ಸುತಾಲಯ ಚ ಸಖ!" ಎಮದು ಸ್ವಲ್ಪ ವಿಸ್ತರಿಸಿ ಪುನರುಕ್ತಿಸಬೇಕೆಂದು ನನಗನಿಸುತ್ತದೆ.

ನಾಗಾಭರಣನಿಗೆ ನಾಲ್ಕು ಜನ ಸಹೋದರರು. ಆದರೆ, ಅವರ ತಾಯಿ ನನ್ನನ್ನು ಅವರೊಡನೆ ಆರನೆಯವನನ್ನಾಗಿ ಪರಿಗಣಿಸಿದ್ದಾರೆ. ಮಹಾಭಾರತದಲ್ಲಿ ಕರ್ಣ ಕುಂತಿಪುತ್ರನಾಗಿಯೂ, ಪ್ರತಿಪಕ್ಷದಲ್ಲಿ ಬೆಳೆದು ಪಾಂಡವರ ಬದ್ಧವೈರಿಯಾಗಿದ್ದ. ನಾನು ಭರಣ-ಪಂಚಸಹೋದರರಲ್ಲಿ ಒಬ್ಬನಾಗಲಿಲ್ಲ, ಪಕ್ಷ-ಪ್ರತಿಪಕ್ಷಗಳ ಜಂಜಡದಲ್ಲಿ ಬೀಳಲಿಲ್ಲ. ಆದರೂ ಯವ್ವನದಲ್ಲಿ, ಆಗ ತಾನೇ ನಮ್ಮ ವೃತ್ತಿ ಜೀವನದ ಹೊಸ್ತಿಲಲ್ಲಿ ನಿಂತಿದ್ದ ಹೊತ್ತಿನಲ್ಲಿ ಭರಣನ ಸ್ನೇಹವನ್ನು ಸಂಪಾದಿಸಿ ಇಂದಿಗೂ ಹಚ್ಚ ಹಸಿರಾಗಿ ಮುಂದುವರೆಸಿಕೊಂಡೇ ಬಂದಿದ್ದೇನೆ. ಬಹುಶಃ ಪ್ರಪಂಚದಾದ್ಯಂತ ವ್ಯವಹಾರವನ್ನು ಬದಿಗಿರಿಸಿ, ಪರಸ್ಪರ ಶುದ್ಧ ಸಖ್ಯವನ್ನು ಬಯಸುವ ಯಾವುದೇ ಇಬ್ಬರು ಸ್ನೇಹಿತರ ನಡುವೆ ಇಂತಹುದೇ ಸ್ನೇಹ ಮುಂದುವರಿದಿದರೆ ಅದು ನಮ್ಮ ಸ್ನೇಹಸದೃಶವಾದದ್ದೆಂದು ಹೇಳಬಹುದು.

ಭರಣನೊಡನೆ ಮೊದಲ ಸ್ನೇಹ. ಕೋಡಳ್ಳಿ ಶಿವರಾಮ ಗ್ರಹಣ ಚಿತ್ರವನ್ನು ಮಾಡಲು ನನ್ನನ್ನು ಸಂಪರ್ಕಿಸಿದಾಗ ನಾನು ಭರಣನೇ ಅದನ್ನು ಮಾಡಬೇಕು, ನಿರ್ದೇಶಿಸಬೇಕೆಂದು ಒಪ್ಪಿಸಿ, ಭರಣರನ್ನು ಪ್ರೇರೆಪಿಸಿದವರಲ್ಲಿ ನಾನೇ ಮೊದಲಿಗ. ಅವನ ಮೊದಲ ಚಿತ್ರದಲ್ಲಿ ಕೆಲಸ ಮಾಡಿದ್ದೇನೆ. ನಾನು ನಟಿಸಿದ ಮೊದಲ ನಾಟಕದಲ್ಲಿ ಭರಣನೂ ನಟಿಸಿದ್ದಾನೆ. ಅವನ ಮೊದಲ ಕಿರುತೆರೆ ಪ್ರಯೋಗದ ಮೊದಲ ಶಾಟ್ನಲ್ಲಿ ನಾನು ಅಭಿನಯಿಸಿದ್ದೇನೆ. ಗೆಳೆಯರೆಲ್ಲ ಸೇರಿ ಆತ್ಮೀಯನೊಬ್ಬನಿಗೆ ಅಭಿನಂದನೆ ಸಲ್ಲಿಸುವ ಪರಿಕಲ್ಪನೆಯೇ ಹೊಸತು, ಮೊದಲನೆಯದು. ಇದರಲ್ಲಿ ನಾನು ಪಾಲ್ಗೊಂಡಿದ್ದೇನೆ. ಅದರಲ್ಲೂ ಚಲನಚಿತ್ರೋತ್ಸವ, ನಾಟಕೋತ್ಸವ, ಪುಸ್ತಕ ಬಿಡುಗಡೆ, ಅಭಿನಂದನಾ ಸಮಾರಂಭ ಇವುಗಳಲ್ಲಿ ಚಲನ ಚಿತ್ರೋತ್ಸವ ಮೊದಲನೆಯದು. ಹೀಗೆಯೇ ಭರಣ ಮತ್ತು ನನ್ನ ನಡುವೆ ಪ್ರಥಮಗಳ ಪಟ್ಟಿಯೇ ತಯಾರಾಗುತ್ತದೆ.

1972ರಲ್ಲಿ ನಾನು, ನಾಗಾಭರಣ, ಟಿ.ಎನ್.ರಂಗಾ ರವೀಂದ್ರ ಕಲಾಕ್ಷೇತ್ರದಲ್ಲಿ ನಾಟಕ ಮುಗಿದ ನಂತರ ನಮ್ಮ ಕನಸುಗಳ ಮೆಲುಕು ಹಾಕುತ್ತಾ ಕಾಲ್ನಡಿಗೆಯಲ್ಲೇ ಮನೆಗೆ ಮರಳುತ್ತಿದ್ದೆವು. ನಮಗೆ ಬದುಕು ಎಂದರೇನು ಎಂದು ಅರಿವಿಗೆ ಬರುವ ಮೊದಲ ಹಂತಗಳು. ನಮ್ಮ ಹಿನ್ನೆಲೆ ಏನೇ ಇದ್ದರೂ ನಮ್ಮ ಮುಂದೇನು ಎನ್ನುವ ಪ್ರಶ್ನೆ ಸದಾ ನಮ್ಮೊಳಗಿರುತ್ತಿತ್ತು. ಇವತ್ತಿನ ಸೌಲಭ್ಯಗಳು, ಆಧುನಿಕ ಜೀವನದ ಸೌಲಭ್ಯಗಳೆಲ್ಲಾ ಆಗಿರಲಿಲ್ಲ. ಆದರೆ ನಮ್ಮ ನಡುವೆ ಪ್ರೀತಿ ಇತ್ತು, ಸಂತೋಷ ಇತ್ತು, ನೆಮ್ಮದಿ ಇತ್ತು. ಈಗ ಸಮಾಜದಲ್ಲಿ ನಮಗೆ ನಮ್ಮದೇ ಆದ ವೃತ್ತಿ ಇದೆ, ನಾವೇನು ಮಾಡಬಲ್ಲೆವು, ಏನು ಮಾಡಬೇಕು ಎಂಬ ಅರಿವಿದೆ. ನಮ್ಮ ಆತ್ಮೀಯತೆಯ ಸ್ಟೇಟಸ್ಕೋ ಸ್ವಲ್ಪವೂ ಬದಲಾಗಿಲ್ಲ, ಮೊದಲಿನಂತೆಯೇ ಹಸಿರಾಗೇ ಇದ್ದು ನಿರಂತರವಾಗಿ ಪಕ್ವವಾಗುತ್ತಲೇ ಮುಂದುವರೆಯುತ್ತಿದೆ. ಭರಣನಿಗೆ ರಾಜ್ಯ ಪ್ರಶಸ್ತಿಗಳು, ರಾಷ್ಟ್ರ ಪ್ರಶಸ್ತಿಗಳು, ಅಂತರ್ರಾಷ್ಟ್ರೀಯ ಮನ್ನಣೆಗಳು ದೊರಕಿವೆ. ಆದರೂ ಅವನು ಇಂದಿಗೂ ನಮ್ಮ ಭರಣನೇ. ಅದೇ ನಮ್ಮ ಸ್ನೇಹದ ಪ್ಲಸ್ ಪಾಯಿಂಟ್. ಟಿ.ಎಸ್.ರಂಗಾ ವ್ಯವಸ್ಥೆಗೆ ಎತ್ತಿದ ಕೈ. ನಾಗಾಭರಣ ಉತ್ತಮ ಬ್ಯಾಕ್‌ಸ್ಟೇಜ್ ಕೆಲಸಗಾರ. ಪ್ರತೀ ವಿಷಯವನ್ನೂ ಬಹಳ ಕೂಲಂಕುಶವಾಗಿ ಪರಿಶೀಲಿಸಿ ಅದರ ಸ್ಥಿತಿಗತಿಗಳನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ. ಅದೇ ಅವನ ತಾಕತ್ತು. ಅವನು ಬರಬರುತ್ತಾ ರಂಗಪರಿಶ್ರಮಿ ಆದ. ಅವನು ಕೆಲಸದಲ್ಲಿ ಬಹಳ ಅಚ್ಚುಕಟ್ಟು, ಶಿಸ್ತಿನ ಸಿಪಾಯಿ, ವ್ಯವಹಾರದಲ್ಲಿ ಎಷ್ಟು ಕಟ್ಟುನಿಟ್ಟೋ ಅಷ್ಟೇ ನಿಷ್ಠೂರಿಯೂ ಹೌದು. ಅವನ ನಿಷ್ಠೂರತನ ಕೆಲವರಲ್ಲಿ ಅಸಮಾಧಾನ ಉಂಟುಮಾಡಬಹುದು. ಆದರೆ ಅತ್ಯಂತ ಚಾಣಾಕ್ಷತನದಿಂದ ಎಂತಹುದೇ ಸಂದರ್ಭ ಒದಗಿದರೂ ನಿಭಾಯಿಸಿಬಿಡುವ ಕಲೆಯನ್ನು ಅವನು ಸಿದ್ಧಿಸಿಕೊಂಡಿದ್ದಾನೆ. ಒಟ್ಟಿನಲ್ಲಿ, ಅವನು ನಮ್ಮ ಗುರಗಳಾದ ಬಿ.ವಿ.ಕಾರಂತರ ಅವಿರತ ಪರಿಶ್ರಮ ಮತ್ತು ಗಿರೀಶ್ ಕಾರ್ನಾಡರ ವ್ಯವಸ್ಥಿತ ಕಾರ್ಯವಿಧಾನ ಎರಡನ್ನೂ ಅರೆದು ಕುಡಿದಿದ್ದಾನೆ, ಹಾಗೂ ಅವನ ಚಟುವಟಿಕೆಗಳಲ್ಲೆಲ್ಲಾ ಅವು ಹಾಸು ಹೊಕ್ಕಾಗಿರುತ್ತವೆ.

ನಾಗಾಭರಣ ಕಲಾಕಾರರಿಂದ ಹಿಡಿದು ಉದ್ಯಮದ ಎಲ್ಲರೊಡನೆ ವ್ಯವಹರಿಸುವ ರೀತಿ ಅತ್ಯಂತ ಶ್ಲಾಘನೀಯ. ಅದು ಎಲ್ಲರಿಗೂ ಸಿದ್ಧಿಸುವುದಿಲ್ಲ. ಅವನು ಮನಸ್ಸಿನಲ್ಲಿ ಒಬ್ಬ ವ್ಯಕ್ತಿಯ ಬಗ್ಗೆ ಏನೇ ಭಾವನೆ ಇದ್ದರೂ ಕೆಲಸ ಮಾಡಿಸುವಾಗ ಆ ಭಾವನೆಗಳನ್ನು ಬದಿಗೆ ತಳ್ಳಿ ಕೆಲಸಕ್ಕೆ ಮಾತ್ರ ಪ್ರಾಮುಖ್ಯತೆ ಕೊಡುತ್ತಾನೆ. ಇದು ಎಲ್ಲರಿಗೂ ಆಗುವ ಅವನ ವ್ಯಕ್ತಿತ್ವದ ಇನ್ನೊಂದು ಅನುಭವ.

ನಾಗಾಭರಣ ಮೊದಮೊದಲು ತಾನೊಬ್ಬ ನಟನಾಗಬೇಕೆಂದು ಹಂಬಲಿಸುತ್ತಿದ್ದ. ನಾವು ದೆಹಲಿಯಲ್ಲಿ ಜೋಕುಮಾರಸ್ವಾಮಿ ನಾಟಕ ಆಡುವಾಗ ಐದು ದಿನಗಳ ಅವ್ಯವಸ್ಥಿತ ರೈಲುಗಾಡಿ ಪ್ರವಾಸ. ನಾಟಕದಲ್ಲಿ ಅವನೊಬ್ಬ ಬಂದೂಕು ಹೊರುವವ. ನಾನು ಬಸಣ್ಣ. ಕೃಷ್ಣರಾಜು ಗುರಿಯ. ಅಲ್ಲಿ ಎಲ್ಲರೂ ಒಂದೇ. ಚಿಕ್ಕ ಪಾತ್ರ, ದೊಡ್ಡ ಪಾತ್ರ ಎಂಬ ಭೇದಭಾವಗಳಿಲ್ಲ. ಎಲ್ಲರೂ ಎಲ್ಲರಿಗೂ ಶ್ರಮಿಸುವ ಸಹಬಾಳ್ವೆ ಇರುವುದೇ ನಾಟಕರಂಗ. ಚಿತ್ರರಂಗದಲ್ಲಿ ಹಾಗಲ್ಲ.

ಅಲ್ಲಿ ನಾಟಕಕ್ಕಿಂತ ಭಿನ್ನವಾದ ಪರಿಸರ, ವ್ಯವಹಾರ ಇತ್ಯಾದಿ ಇತ್ಯಾದಿ ಇರುತ್ತವೆ. ಆದರೆ, ನಾಗಾಭರನ ಅವಕ್ಕೆಲ್ಲಾ ಪಾತ್ರನಾದರೂ, ತನ್ನ ಮೂಲ ಪಾತ್ರವಾದ ವಿನಯ,



ಮೃದುತನ ಮತ್ತು ಸಹಬಾಳ್ವೆಯಿಂದ ಭಿನ್ನನಾಗಿಲ್ಲ. ಇವತ್ತೂ ಕೂಡ ಎಲ್ಲರೊಂದಿಗೂ ಒಬ್ಬನಾಗಿ ಸಾಮಾನ್ಯನಂತೆ ವರ್ತಿಸುತ್ತಾನೆ. ಇದು ಅವನ ವ್ಯಕ್ತಿತ್ವದ ಗುಣ. ದಿನಗಳುರುಳಿದಂತೆ ಭರಣನ ಕ್ರಿಯಾಶೀಲತೆ, ಸೃಜನಶೀಲತೆ ಮತ್ತು ಅಂತಃಶಕ್ತಿ ಅವನನ್ನು ಬ್ಯಾಕ್ ಸ್ಟೇಜಿನಿಂದ ಸ್ಟೇಜಿಗೆ ತರುವುದಕ್ಕಿಂತ ಇಡೀ ಸ್ಟೇಜನ್ನೇ ನಿರ್ವಹಿಸುವ, ಸ್ಟೇಜಿನ ಮೇಲಾಗುವುದನ್ನು ನಿರ್ದೇಶಿಸುವ ಒಬ್ಬ ವ್ಯಕ್ತಿಯನ್ನಾಗಿ ಗುರುತಿಸುತ್ತಾ ಇವತ್ತು ಒಬ್ಬ ಮಹಾನ್ ನಿರ್ದೇಶಕನನ್ನಾಗಿ ಪರಿವರ್ತಿಸಿಬಿಟ್ಟಿವೆ. ಒಬ್ಬ ವ್ಯಕ್ತಿಯಾಗಿಯೂ ಮೇಲೇರಿರುವ ಭರಣ ಅಷ್ಟೇ ಸಾಲದೆ ಇವತ್ತು ಒಂದು ಇನ್‌ಸ್ಟಿಟ್ಯೂಷನ್ ಕೂಡ ಆಗಿದ್ದಾನೆ.

ಒಬ್ಬ ನಿರ್ದೇಶಕನಿಗೆ ನಟ ಮತ್ತು ನಟನಿಗೆ ನಿರ್ದೇಶಕ ಇಬ್ಬರೂ ಪೂರಕವಾಗಿರುತ್ತಾರೆ. ನಾನು ನಟನಾಗೇ ಬೆಳೆದೆ. ಅವನು ನಿರ್ದೇಶಕನಾಗೇ ಬೆಳೆದ. ನಮ್ಮದೊಂದು ದೊಡ್ಡ ರೈಲು. ಕೆಲವೆಡೆ ಅವನು ಇಂಜಿನ್, ನಾನು ಬೋಗಿ. ಇನ್ನು ಕೆಲವೆಡೆ ನಾನು ಇಂಜಿನ್ ಮತ್ತು ಅವನು ಬೋಗಿ. ಅನೇಕ ಪ್ರವಾಸಿಗರು ಬಂದು ಹೋಗಿದ್ದಾರೆ, ಬಂದು ಹೋಗುತ್ತಲೂ ಇದ್ದಾರೆ. ರಂಗಭೂಮಿ ಮತ್ತು ಚಲನಚಿತ್ರ ಎರಡೂ ಕಡೆ ನಾವು ಎಷ್ಟೇ ದುಡಿದರೂ ಏನೇ ಪ್ರಶಸ್ತಿ, ಪುರಸ್ಕಾರಗಳನ್ನು ಗಳಿಸಿದ್ದರೂ, ನಾವು ನಾವಾಗೇ ಉಳಿದಿದ್ದೇವೆ.

ಭರಣನ 30 ಚಿತ್ರಗಳ ಪೈಕಿ 13ರಲ್ಲಿ ನಾನು ನಟಿಸಿದ್ದೇನೆ. ಅವು ಬಂಗಾರದ ಜಿಂಕೆಯಲ್ಲಿ ಪೀಟರ್ ಆಗಿ, ಬ್ಯಾಂಕರ್ ಮಾರ್ಗಯ್ಯದಲ್ಲಿ ಲೋಕೇಶನ ಮಗನಾಗಿ, ಅನ್ವೇಷಣೆಯಲ್ಲಿ ನಿರುದ್ಯೋಗಿ ಯುವಕನಾಗಿ, ಪ್ರಾಯ ಪ್ರಾಯ ಪ್ರಾಯದಲ್ಲಿ ಖಳನಾಯಕನಾಗಿ-ಕಾಲೇಜ್ ವಿದ್ಯಾರ್ಥಿಯಾಗಿ, ಒಂಟಿ ಧ್ವನಿಯಲ್ಲಿ ದ್ವಿತೀಯ ನಾಯಕ ಆಗಿ, ಮೈಸೂರ ಮಲ್ಲಿಗೆಯಲ್ಲಿ ತಹಸೀಲ್ದಾರ್ ಆಗಿ, ಆಕಸ್ಮಿಕದಲ್ಲಿ ಡಾ:ರಾಜರವರ ಸ್ನೇಹಿತನಾಗಿ, ಚಿನ್ನಾರಿ ಮುತ್ತದಲ್ಲಿ ರಾಜಕಾರಿಣಿಯಾಗಿ, ನಾವಿದ್ದೇವೆ ಎಚ್ಚರಿಕೆಯಲ್ಲಿ ಖಳನ ಪಾತ್ರದಲ್ಲಿ, ವಿಮೋಚನೆಯಲ್ಲಿ ಪೋಲೀಸ್ ಅಧಿಕಾರಿಯಾಗಿ ಹಾಗೂ ನೇತ್ರಪಲ್ಲವಿಯಲ್ಲಿ ಅಭಿನಯಿಸಿರುತ್ತೇನೆ. ಬೇರೊಂದು ಚಿತ್ರದಲ್ಲಿ ನಟಿಸುತ್ತಿದ್ದುದರಿಂದ, ಗ್ರಹಣ ಚಿತ್ರದಲ್ಲಿ ನಟಿಸಲಾಗಲಿಲ್ಲ. ಆದರೆ, ಹೀರೋಗೆ ನನ್ನ ಕಂಠದಾನ ನೀಡಿರುತ್ತೇನೆ. ಇನ್ನು ಭರಣನ ಧಾರಾವಾಹಿಗಳಾದ ನಮ್ಮ ನಮ್ಮಲ್ಲಿ, ಜೋಕು ಜೋಕೆ ಮತ್ತು ಹೃದಯ ಹಿಡಿ ಹೃದಯಗಳಲ್ಲಿ ನಟಿಸಿರುತ್ತೇನೆ. ಅವನ ಅನೇಕ ಕಾರ್ಪೋರೇಟ್ ಚಿತ್ರಗಳಲ್ಲಿ ನಟಿಸಿರುತ್ತೇನೆ.

ನಾನು ಎಷ್ಟೇ ಚಿತ್ರಗಳಲ್ಲಿ ನಟಿಸಿದ್ದರೂ, ಪ್ರತೀ ಚಿತ್ರದಲ್ಲೂ ನಟಿಸುವಾಗ ನನಗೆ ಬೇರಾವ ನಿರ್ದೇಶಕರ ಬಳಿಯೂ ಇರದ ಒಂದು ವಿಶಿಷ್ಟ ಸ್ವಾತಂತ್ರ್ಯವಿದೆ. ನಾನು ಅವನ ಚಿತ್ರಗಳ ಪಾತ್ರಗಳನ್ನು ಅಭಿನಯಿಸುವಾಗ ನನ್ನ ರೆಕ್ಕೆಗಳನ್ನು ಬಿಚ್ಚಿ ನಿರಾಯಾಸವಾಗಿ ಆಗಸದಲ್ಲಿ ಹಾರಾಡುವ ಬಾನಾಡಿ. ಒಂಟಿ ಧ್ವನಿ ಚಿತ್ರ ನಾಗಾಭರಣನಿಗೆ ಒಂದು ಕಮರ್ಷಿಯಲ್ ಬ್ರೇಕ್. ಆ ಚಿತ್ರಕ್ಕೆ ಒಂದೂವರೆ ತಿಂಗಳು ಕೆಲಸ ಮಾಡಿದ ನಂತರ ನನಗೆ ಮುಂದೆ ತೊಡಗಿಕೊಳ್ಳಲಾಗಲಿಲ್ಲ. ಹಾಗೆಯೇ ಐದಾರು ಚಿತ್ರಗಳಲ್ಲಿ ನನ್ನನ್ನು ಹಾಕಿಕೊಳ್ಳಲಾಗದ ಅವನ ಇಬ್ಬಂದಿ ಪರಿಸ್ಥಿತಿಯನ್ನು ನಾನೂ ಮನಗಂಡಿದ್ದೇನೆ. ಇಬ್ಬರೂ ಆ ಬಗ್ಗೆ ಪರಸ್ಪರ ಚರ್ಚಿಸಿಲ್ಲ, ಇಂಗಿತದಿಂದಲೇ ಅರಿತು ನಡೆದಿದ್ದೇವೆ. ನಾನು ಚಿತ್ರಗಳ ಪಾತ್ರಗಳನ್ನು ಕಳೆದುಕೊಂಡೆನೆಂಬ

ಬೇಸರವಿಲ್ಲದಿಲ್ಲ. ಆದರೂ ಅವನ ಸ್ನೇಹವನ್ನು ಕಳೆದುಕೊಂಡಿಲ್ಲ ಎಂಬ ಹೆಮ್ಮೆ ಮತ್ತು ಸಂತೋಷ ಸದಾ ನನಗಿದೆ.

ಭರಣನಿಗೆ ಅನೇಕ ಹಾಬಿಗಳಿವೆ. ಅವುಗಳಲ್ಲಿ, ಬುಕ್ ಕಲೆಕ್ಷನ್ ಮತ್ತು ಫೋಟೋ ಕಲೆಕ್ಷನ್. ಈ ವಿಷಯದಲ್ಲಿ ಭರಣ ಬಹಳ ಅಚ್ಚುಕಟ್ಟು ಮತ್ತು ಬಹಳ ಪೊಸೆಸಿವ್. ಅವನು ನನಗೆ ತಿಳಿದಾಗಿನಿಂದ ಮತ್ತು ಅದಕ್ಕೂ ಮೊದಲೂ ಕಲೆಕ್ಟ್ ಮಾಡಿರುವ ಪುಸ್ತಕ ಇವತ್ತಿಗೂ ಅವನೊಡನೆ ಇವೆ. ಅವನು ಬಹಳ ಕಾಲದಿಂದ ಕಲೆಕ್ಟ್ ಮಾಡಿರುವ ಅವನ ಫೋಟೋಗಳು ಇಂದಿಗೂ ಅವನ ಬಳಿ ಇವೆ. ಮೊದಲಿನಿಂದಲೂ ಅವನು ಬಹಳ ಮೆಥಾಟಿಕಲ್. ನಾವೆಲ್ಲಾ ಸುಮ್ಮನೆ ಹರಟುತ್ತಾ ಇರುತ್ತೇವೆ. ಏನೇನೋ ವಿಷಯಗಳನ್ನು ಕೇಳುತ್ತಿರುತ್ತೇವೆ. ಆದರೆ, ಅವನು ಅವುಗಳನ್ನೆಲ್ಲಾ ಒಂದೆಡೆ ನೀಟಾಗಿ ರಿಕಾರ್ಡ್ ಮಾಡಿಟ್ಟುಕೊಂಡಿರುತ್ತಾನೆ. ಯಾವುದೇ ಚರ್ಚೆಯಿರಲಿ, ಹೊರಬಂದಾಗ ಅವನು ಒಂದು ನೋಟ್ ಬುಕ್ಕಿನಲ್ಲೋ, ಒಂದು ಡೈರಿಯಲ್ಲೋ ಇಲ್ಲ ಒಂದು ಹಾಳೆಯಲ್ಲಿ ಪಾಯಿಂಟ್ ಟು ಪಾಯಿಂಟ್ ಬರೆದಿಟ್ಟುಕೊಂಡಿರುತ್ತಾನೆ.

ಅವನು ಯಾವತ್ತೂ ಕನ್‌ಫ್ಯೂಸ್ಡ್ ಆಗಿರುವುದಿಲ್ಲ. ಎಲ್ಲವೂ ನಿರ್ದಿಷ್ಟವಾಗಿ, ನಿಖರವಾಗಿ ಅವನ ಮನಸ್ಸಿನಲ್ಲಿ ಮೂಡಿರುತ್ತವೆ. ಹೀಗಾಗಿ ಅವನ ಯಾವುದೇ ಕೆಲಸದಲ್ಲೂ ಒಂದು ರೀತಿಯ ಅಚ್ಚುಕಟ್ಟು ಒಂದು ನಿಯತಿಯನ್ನು ಗುರುತಿಸಬಹುದು. ಅವನ ಸಿಂಗಾರೆವ್ವ ಮತ್ತು ಅರಮನೆ ಚಿತ್ರ ನೋಡಿದಾಗ ಅವನ ಅಚ್ಚುಕಟ್ಟುತನದ ಅರಿವಾಗುತ್ತದೆ. ಹಾಗೂ ಸಿನಿಮಾ ಮಾಡುವಲ್ಲಿ ಬೌದ್ಧಿಕವಾಗಿ ಅವನು ಎಷ್ಟು ಎತ್ತರಕ್ಕೆ ಬೆಳೆದಿದ್ದಾನೆ ಎಂದು ಖಚಿತವಾಗುತ್ತದೆಯಷ್ಟೇ ಅಲ್ಲ, ಅಚ್ಚರಿಯೂ ಹುಟ್ಟುತ್ತದೆ. ಪುಟ್ಟಣ್ಣ ಕಣಗಾಲ್‌ರ ಶೈಲಿ ಒಂದಾದರೆ, ಭರಣನ ಶೈಲಿಯೇ ಬೇರೆ. ಅವನ ಚಿತ್ರಗಳಲ್ಲಿ ದುಂದುಗಾರಿಕೆ, ವಿಜೃಂಭಣೆ ಕಡಿಮೆ. ಕಡಿಮೆ ವೆಚ್ಚದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಚಿತ್ರಿಸುವುದು ಅವನು ರೂಢಿಸಿಕೊಂಡಿರುವ ತನ್ನದೇ ಆದ ಶೈಲಿ.

ಸಿನಿಮಾ ವಸ್ತು ಮತ್ತು ಅದರ ಸಾಧ್ಯತೆ ಎರಡೂ ಎಷ್ಟೋ ಬಾರಿ ಹೊಂದಲಾರವು. ಆದರೂ ಭರಣ ತನ್ನ ಪ್ರಯತ್ನದಲ್ಲಿ ಅವೆರಡನ್ನೂ ಮೇಳೈಸಿ ಅವೆರಡರ ಹೊಂದಾಣಿಕೆಯನ್ನು ಸಾಧಿಸಿ ತೋರಿಸುತ್ತಾನೆ. ಹೊಸ ಹೊಸ ಪ್ರತಿಭೆಗಳನ್ನು ಗುರುತಿಸುವುದು ಭರಣನ ಇನ್ನೊಂದು ವೈಯಕ್ತಿಕ ಪ್ರತಿಭೆ. ಆದರೂ, ಇಮೇಜ್ ಇರುವ ಕಲಾವಿದರನ್ನು ಹಾಕಿಕೊಂಡು ಯಶಸ್ವೀ ಚಿತ್ರಗಳನ್ನು ತಯಾರಿಸುವುದರಲ್ಲೂ ನಿಸ್ಸೀಮನಾಗಿದ್ದಾನೆ.

ಸಿನಿಮಾಕ್ಕೆ ಅವನ ಕಮಿಟ್‌ಮೆಂಟ್ ಒಂದು ಮಾದರಿ. ಅವನು ಎಲ್ಲೂ ಕಾಂಪ್ರೋಮೈಸ್ ಆಗುವುದೇ ಇಲ್ಲ. ಅವನ ಕೇವಲ ಕೆಲವೇ ಕಹಿ ಅನುಭವಗಳನ್ನು ಹೊರತು ಪಡಿಸಿ ಭರಣ, ನಿರ್ಮಾಪಕರ, ಕಲಾವಿದರ ಮನಸ್ಸು ನೋಯದಂತೆ ವರ್ತಿಸುತ್ತಾನೆ, ಪ್ರೇಕ್ಷಕ ಮಹಾಶಯನ ಪ್ರಶಂಸೆಗೆ ಪಾತ್ತನಾಗುತ್ತಾನೆ.

ನಿರ್ದೇಶನ, ಬೆಳಕು, ರಂಗಸಜ್ಜಿಕೆ, ಸಂಯೋಜನೆ, ಪ್ರಸಾಧನದಷ್ಟೇ ನಟನೆಯಲ್ಲೂ ಭರಣನಿಗೆ ಇನ್ನಿಲ್ಲದ ಆಸಕ್ತಿ. ಇಲ್ಲಿಯವರೆಗೂ ನೀಗಿಕೊಂಡು ಸಂಸದಲ್ಲಿ ತನ್ನದೇ ಆದ ಪಾತ್ರವನ್ನು



ನಿರ್ವಹಿಸುತ್ತಾ ಬಂದಿರುವ ಭರಣ, ಕತ್ತಲೆ ಬೆಳಕುವಿನಲ್ಲಿ ಪೋಲೀಸ್, ಜೋಕುಮಾರ ಸ್ವಾಮಿಯಲ್ಲಿ ಗುರಿಯ, ತಬರನ ಕತೆಯಲ್ಲಿ ತಬರ, ಸತ್ತವರ ನೆರಳುವಿನಲ್ಲಿ ಅಳಪುಡಿ ಶೀನ್ಯಾ ಈ ಪಾತ್ರಗಳಲ್ಲಿ ಇಂದಿಗೂ ಅಭಿನಯಿಸುತ್ತಲೇ ಇದ್ದಾನೆ. ಅವನು ಪಾತ್ರಗಳಲ್ಲಿ ಲೀನನಾದಾಗ ಪ್ರೇಕ್ಷಕರಿಂದ ಚಪ್ಪಾಳೆ. ಅವನು ಅಳಪುಡಿ ಶೀನ್ಯಾ ಆಗಿರುವಾಗ "ಉರಿ..ಉರಿ.." ಎಂದು ಒದ್ದಾಡುವ ಸಮಯದಲ್ಲಿ ಪ್ರೇಕ್ಷಕನನ್ನೇ ಅವನ ಪಾತ್ರದಲ್ಲಿ ತಲ್ಲೀನನಾಗಿಸಿಬಿಡುತ್ತಾನೆ. ನಾಟಕಕ್ಕೆ ಬೇಕಾದ ಪರಿಶ್ರಮ, ಸಾಮರ್ಥ್ಯ, ಪ್ರತಿಭೆ ಅವನಲ್ಲಿ ತುಂಬಿ ತುಳುಕುತ್ತಿವೆ. ಅವನ ಬಾಡಿಲ್ಯಾಂಗ್ವೇಜ್, ಅವನ ಚಲನೆಯ ಗತಿ, ಕುಣಿತ ಅಹಳ ಸ್ವಾಭಾವಿಕ ಹಾಗೂ ಆಕರ್ಷಣೀಯ. ಅವನಂತಹ ಅನೇಕ ಪ್ರತಿಭೆಗಳನ್ನು ಇನ್ನೂ ಹೆಚ್ಚು ಗುರುತಿಸಲಿ, ಅವುಗಳನ್ನು ಬೆಳಕಿಗೆ ತರಲಿ ಎಂಬುದೇ ನನ್ನ ಆಸೆ. ಹಾಗಾಗುವುದರಿಂದ ನಮ್ಮ ಅಭಿನಯ ಕಲೆ ಮುಂದಿನ ಜನಾಂಗಕ್ಕೆ ಹರಿಯುತ್ತದೆ, ನಿರಂತರವಾಗಿ ಹರಿಯುತ್ತಲೇ ಇರುತ್ತದೆ ಎಂಬುದು ನನ್ನ ಆತ್ಮ ವಿಶ್ವಾಸ.

ಅವನ ಒಳ್ಳೆಯ ತಂದೆ-ತಾಯಿ, ಒಳ್ಳೆಯ ಹೆಂಡತಿ, ಒಳ್ಳೆಯ ಮಕ್ಕಳು, ಒಳ್ಳೆಯ ಸ್ನೇಹಿತರನ್ನು ಪಡೆದಿರುವ ಅದೃಷ್ಟಶಾಲಿ. ಅವನಿಗೆ ಎಲ್ಲ ವಿಷಯದಲ್ಲೂ ಸದಾ ಒಳ್ಳೆಯದನ್ನೇ ಬಯಸುವ ಹಿತೈಷಿಯಾಗಿ, ಸ್ನೇಹಿತನಾಗೇ ಮುಂದುವರಿಯಬೇಕೆಂಬುದೇ ನನ್ನ ಸ್ವಾರ್ಥ! ಹುಣಿಸೆ ಹಣ್ಣು ಹಣ್ಣಾದಷ್ಟೂ ರುಚಿ ಹೆಚ್ಚಲ್ಲವೆ? ಈ ಹೆಚ್ಚಿನ ರುಚಿ ಒಂದು ವಿಶಿಷ್ಟ ಅನುಭವ. ರಸಾಸ್ವಾದಕ್ಕೆ ರಸಜ್ಞಾನ, ರಸಾನುಭವದ ನಿಖರ ಪರಿಕಲ್ಪನೆ ಇರಬೇಕಲ್ಲವೆ? ಹೆಚ್ಚೇನು.. ಅವನ ಎಲ್ಲಾ ಚಟುವಟಿಕೆಯಲ್ಲೂ ನಾನು ಭಾಗವಹಿಸಬೇಕೆಂದು ಅವನ ಮನಸ್ಸು ತುಡಿಯುತ್ತದೆ ಹಾಗೆಯೇ ನನ್ನ ಮನಸ್ಸೂ ಮಿಡಿಯುತ್ತದೆ.

❑ ❖ ❑ ❖ ❑

# ನಾಗಾಭರಣ - ಐವತ್ತು... ಒಂದು ಹೊರಳು ನೋಟ

ಡಾ|| ಎಚ್.ಎಸ್.ವೆಂಕಟೇಶ ಮೂರ್ತಿ

ನನ್ನ ಪ್ರಿಯ ಮಿತ್ರ ನಾಗಾಭರಣರಿಗೆ ಐವತ್ತಾಗುತ್ತಿರುವ ಸಂದರ್ಭ. ಅವರ ಮತ್ತು ನನ್ನ ಗೆಳೆತನವನ್ನು ಈ ಸಂದರ್ಭದಲ್ಲಿ ಪ್ರೀತಿಯಿಂದ ನೆನೆಯಬೇಕಾಗಿದೆ. 1993ರಲ್ಲಿ ನಾಗಾಭರಣ ನನ್ನ ಸಂಪರ್ಕಕ್ಕೆ ಬಂದದ್ದು. ಕಳೆದ ಹತ್ತು ವರ್ಷಗಳಲ್ಲಿ ಅನೇಕ ಏರಿಳಿತಗಳಾಗಿವೆ. ಆದರೂ ನಮ್ಮಿಬ್ಬರ ಸ್ನೇಹ ಈವತ್ತೂ ಹಸಿರಾಗಿ ಉಳಿದಿದೆ. ಅನೇಕ ಮರೆಯಲಾರದ ದಿನಗಳನ್ನು ನಾವು ಒಟ್ಟಿಗೇ ಕಳೆದಿದ್ದೇವೆ. ಅವುಗಳಲ್ಲಿ ಹೆಚ್ಚಿನವು ಸಿಹಿಯಾದ ನೆನಪುಗಳು. ಜೊತೆಗೆ ಕೆಲವು ಕಹಿ ನೆನಪುಗಳೂ ಇವೆ. ಆದರೆ ಕಹಿ ನಮ್ಮ ಸ್ನೇಹವನ್ನು ಕೆಡಿಸಿಲ್ಲ. ಅದು ಭರಣರ ದೊಡ್ಡ ಗುಣ ಎಂದು ನಾನೂ, ನನ್ನ ದೊಡ್ಡ ಗುಣ ಎಂದು ಭರಣರೂ ಹೇಳುತ್ತಾ ಬಂದಿದ್ದೇವೆ.

1993ರ ಒಂದು ಸಂಜೆ ನಾಗಾಭರಣ ಇದ್ದಕ್ಕಿದ್ದಂತೆ ನನ್ನ ಬದುಕಿನಲ್ಲಿ ಪ್ರವೇಶಿಸಿದರು. ಆವೇಳೆಗೆ ಕನ್ನಡ ಚಿತ್ರ ರಂಗದಲ್ಲಿ ಭರಣ ಅನೇಕ ಒಳ್ಳೆಯ ಚಿತ್ರಗಳನ್ನು ಮಾಡಿ, ಹಲವಾರು ರಾಜ್ಯ ಮಟ್ಟದ, ರಾಷ್ಟ್ರ ಮಟ್ಟದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದು ಖ್ಯಾತನಾಮರಾಗಿದ್ದರು. ಅವರ ಶಿಶುನಾಳ ಷರೀಫ ಚಿತ್ರವನ್ನು ನಾನು ತುಂಬ ಮೆಚ್ಚಿಕೊಂಡಿದ್ದೆ. ಮೈಸೂರ ಮಲ್ಲಿಗೆ ಚಿತ್ರ ರಸಿಕರ ಮನಸ್ಸನ್ನು ಸೂರೆ ಮಾಡಿತ್ತು. (ವೈಯಕ್ತಿಕವಾಗಿ ನಾನು ಹೆಚ್ಚು ಮೆಚ್ಚಿದ್ದು ಷರೀಫ ಚಿತ್ರವನ್ನು). ನಮ್ಮ ಮನೆಗೆ ನಾಗಾಭರಣ ಬಂದಾಗ ಜೊತೆಗೆ ಸಿ.ಅಶ್ವತ್ಥರೂ ಇದ್ದರು. ಆವೇಳೆಗೆ ಅಶ್ವತ್ಥ್ ನನ್ನ ಕೆಲವು ಹಾಡುಗಳನ್ನು ಧ್ವನಿಸುರುಳಿಯಲ್ಲಿ ತಂದು ನನಗೆ ಹತ್ತಿರದ ಗೆಳೆಯರಾಗಿದ್ದರು. 'ಕೆಂಗುಲಾಬಿ' ಬಂದಿತ್ತು. ಅದಕ್ಕಿಂತ ಮುಖ್ಯವಾಗಿ ನನ್ನ 'ಹಕ್ಕಿಸಾಲು' ಎಂಬ ಮಕ್ಕಳ ಕವಿತಾ ಸಂಗ್ರಹದ ಕೆಲವು ಪದ್ಯಗಳನ್ನು 'ಬಣ್ಣದ ಹಕ್ಕಿ' ಎಂಬ ಹೆಸರಿನಲ್ಲಿ ಧ್ವನಿಸುರುಳಿಯಾಗಿ ಪ್ರಚುರ ಪಡಿಸಿದ್ದರು. ಪ್ರಾಯಶಃ ಅವರೇ ನಾಗಾಭರಣರನ್ನು ನನ್ನ ಬಳಿ ಕರೆತಂದಿರಬೇಕು. ಉಭಯ ಕುಶಲೋಪರಿಯಾದಮೇಲೆ ಅಶ್ವತ್ಥ್ ನಾನು ನಾಗಾಭರಣರಿಗಾಗಿ ಒಂದು ಮಕ್ಕಳ ಕಥೆಯನ್ನು ಬರೆದುಕೊಡಬೇಕು ಎಂದು ಪ್ರಸ್ತಾವ ಹಾಕಿದರು. ನಾಗಾಭರಣ ತಾವು ಒಂದು ಮಕ್ಕಳ ಚಿತ್ರ ಮಾಡಲು ಉದ್ದೇಶಿಸಿರುವುದಾಗಿಯೂ, ಅದಕ್ಕೆ ನಾನೇ ಕಥೆ ಬರೆಯಬೇಕೆಂದೂ, ನಾನಲ್ಲದೆ ಬೇರೆ ಯಾರೂ ಆ ಕಾರ್ಯಕ್ಕೆ ಸಮರ್ಥರಲ್ಲವೆಂದೂ ಅಭಿಮಾನ ಪೂರ್ವಕವಾಗಿ ಒತ್ತಾಯ ಹಾಕಿದರು! ಸಾಮಾನ್ಯವಾಗಿ ಚಿತ್ರ ರಂಗದಲ್ಲಿ ಒಬ್ಬರು ಇನ್ನೊಬ್ಬರನ್ನು ಹೀಗೆ ಉಬ್ಬಿಸುವುದು ಪರಿಪಾಠ ಎಂಬುದು ನನಗಿನ್ನೂ ಗೊತ್ತಿರಲಿಲ್ಲ! ಅಲ್ಲಿ ಯಾರೂ ಯಾರಿಗೂ ಅನಿವಾರ್ಯವಾಗಿರುವುದಿಲ್ಲ. ಅಗತ್ಯ ಬಿದ್ದಾಗ ವಿಶೇಷವಾಗಿ ಇಂಥ ಅಭಿಮಾನದ ಹೊಳೆ ಉಕ್ಕೇರಿ ಹರಿಯುವುದೂ ಉಂಟು. ಭರಣರ ಒಳ್ಳೆಯ ಮಾತಿಗಿಂತ ಅವರ ಸರಳತೆ, ಮುಗ್ಧತೆ, ಸ್ವಲ್ಪ ಗಿರಿಗಟ್ಟಲೆ ಹೊಡೆಯುವ ಅವರ ಅಭಿಮಾನ ಉಕ್ಕುವ ದೊಡ್ಡ ಕಣ್ಣುಗಳು ನನ್ನನ್ನು



ಆಕರ್ಷಿಸಿದವು. ಅವರ ಹೊಗಳಿಕೆ ಕೂಡ ನನ್ನ ಅಹಂಕಾರಕ್ಕೆ ಹಿತವಾಗಿರಬಹುದು ಎಂಬುದನ್ನು ಪೂರ್ತಿಯಾಗಿ ಅಲ್ಲಗಳೆಯಲಾರೆ!

ನನ್ನಲ್ಲಿ ಒಂದು ಹುಂಬತನವುಂಟು. ಅದು ಹಳ್ಳಿ ನನಗೆ ಕೊಟ್ಟಿರುವ ಬಳುವಳಿ. ನನಗೆ ಇದು ಸಾಧ್ಯವೋ ಅಸಾಧ್ಯವೋ ಎಂದು ಮೀನಾಮೇಷ ಎಣಿಸದೆ ಒಂದು ಕೈ ನೋಡೋಣ ಎಂದು ಮುನ್ನುಗ್ಗುವ ಸ್ವಭಾವ. ಈ ಸ್ವಭಾವ ಬಹಳ ಸಾರಿ ನನ್ನ ಯಶಸ್ಸಿಗೆ ಕಾರಣವಾಗಿರುವಂತೆ ಕೆಲವು ಸಲ ನನ್ನ ಬದುಕಿನ ಕೆಲವು ಬಿಕ್ಕಟ್ಟುಗಳಿಗೂ ಕಾರಣವಾಗಿದೆ. ನಾಗಾಭರಣರಿಗೆ ಮಕ್ಕಳ ಕಥೆ ಬರೆದುಕೊಡಲು ಎಷ್ಟು ಸುಲಭವಾಗಿ ಒಪ್ಪಿಕೊಂಡುಬಿಟ್ಟೆನಲ್ಲ ಎಂದು ನಾನೇ ಅನೇಕ ಸಾರಿ ಅಚ್ಚರಿಪಟ್ಟಿದ್ದೇನೆ. ಒಪ್ಪುವುದೇನೋ ಒಪ್ಪಿಬಿಟ್ಟೆ. ಆಮೇಲೆ ಪೀಕಲಾಟ ಶುರು. ಬರೆಯಲಿಕ್ಕೆ ಏನಾದರೂ ಹೊಳೆಯಬೇಕಲ್ಲ. ಆದರೆ ಭರಣ ಆಗಲೀ ಅಶ್ವತ್ಥ ಆಗಲಿ ಸುಲಭವಾಗಿ ಸೋಲೊಪ್ಪಿಕೊಳ್ಳುವ ಕುಳಗಳಲ್ಲ. ಇಬ್ಬರಿಂದಲೂ ದಿನವೂ ದೂರವಾಣಿ ಕರೆಗಳು ಶುರುವಾಯಿತು. ಅವರ ಸಮಾಧಾನಕ್ಕಾಗಿ ಶುರುಮಾಡಿದ್ದೇನೆ ಎಂದೆ. ಮುಗಿಯುತ್ತಾ ಇದೆ ಎಂದೆ. ಮುಂದಿನವಾರ ಕೊಟ್ಟೇ ಬಿಡುತ್ತೇನೆ ಎಂದೆ. ಈ ವರಸೆಗಳನ್ನೆಲ್ಲಾ ಅವರೂ ಬಲ್ಲವರೇ! ನಿತ್ಯವೂ ಬಲೆಜಗ್ಗುತ್ತಾ ತಾಳ್ಮೆಯಿಂದ ಕಾಯುತ್ತಾ ಇದ್ದರು. ಇಷ್ಟರ ಮಧ್ಯೆ ಭರಣ ನನಗೆ ಅನೇಕ ಬೇರೆ ಬೇರೆ ಭಾಷೆಯ ಮಕ್ಕಳ ಚಿತ್ರಗಳನ್ನು ತೋರಿಸಿದರು. ನಾನು ಲೈಬ್ರರಿಯಿಂದ ಅನೇಕ ಮಕ್ಕಳ ಕಥೆ ಕಾದಂಬರಿ ತಂದು ಓದಲಿಕ್ಕೆ ಶುರುಮಾಡಿದ್ದೆ. ಇವುಗಳ ಪ್ರಭಾವದಿಂದ ಥಟ್ಟನೆ ಏನಾದರೂ ಹೊಳೆಯಬಹುದು ಎಂಬ ಆಶೆ. ಹೀಗೆ ದಿನಕಳೆಯುತ್ತಿರುವಾಗ, ನಾಗಾಭರಣ-ಅಶ್ವತ್ಥರಿಗೆ ನಿಧಾನವಾಗಿ ನನ್ನ ಬಗ್ಗೆ ಭರವಸೆ ಕಡಿಮೆಯಾಗುತ್ತಿರುವಾಗ, ಒಂದು ರಾತ್ರಿ ಇದ್ದಕ್ಕಿದ್ದಂತೆ ಮುತ್ತ ನನ್ನ ಕಣ್ಣ ಮುಂದೆ ಪ್ರತ್ಯಕ್ಷನಾದ. ತೀರ ಹೊರಗಿನವನೇನಲ್ಲ. ನನ್ನ ಹಳ್ಳಿಯ ಪಕ್ಕದಲ್ಲಿದ್ದ ಮಾದಾಪುರದ ಮಾದವ್ವನ ಮೊಮ್ಮಗ! ಎಲಾ ಮುತ್ತಾ...! ಎಲ್ಲಿ ಅವಿತುಕೊಂಡಿದ್ದೆಯೋ ಇಷ್ಟು ದಿನ? ಎಂದು ಉದ್ಗರಿಸುತ್ತಾ ರಾತ್ರಿ ಹನ್ನೊಂದರ ಸಮಯದಲ್ಲಿ ಬರೆಯಲಿಕ್ಕೆ ಶುರು ಹಚ್ಚಿಯೇ ಬಿಟ್ಟೆ! ಬರೀ ಕಥೆಯಲ್ಲ. ಅಗತ್ಯ ಅನ್ನಿಸಿದ ಕಡೆ ಹಾಡುಗಳನ್ನೂ ಬರೆದೆ. ಚಿನ್ನಾರಿಮುತ್ತದ ಬಹುಪಾಲು ಹಾಡುಗಳು ಹೀಗೆ ಕಥೆಯ ಜೊತೆಯಲ್ಲೇ ಹೆಣೆದುಕೊಂಡು ಬಂದಂಥವು. ಆ ಹಾಡುಗಳ ಯಶಸ್ಸಿಗೆ ಇದೂ ಒಂದು ಕಾರಣ ಇರಬೇಕು ಎಂದು ಈವತ್ತೂ ನಾನು ದೃಢವಾಗಿ ನಂಬುತ್ತೇನೆ. ಒಂದುವಾರದಲ್ಲಿ ಚಿನ್ನಾರಿಮುತ್ತ ಕಾದಂಬರಿ ಮುಗಿಸಿ ನಾಗಾಭರಣರಿಗೆ ಫೋನು ಹಚ್ಚಿದೆ.

"ಭರಣಾ..! ಹೇಗಿದ್ದೀರಿ?"

"ಚೆನ್ನಾಗಿದ್ದೀನಿ ಸರ್...ನಮ್ಮ ಕಥೆ ಎಲ್ಲಿಗೆ ಬಂತು ಸರ್ ..ಯಾವಾಗ ರೀಡಿಂಗ್ ಇಟ್ಟುಕೊಳ್ಳೋಣ...?"

"ಈವತ್ತೇ ಯಾಕೆ ಆಗಬಾರದು...?"

"ಈವತ್ತಾ...?! ಬರೆದೇ ಬಿಟ್ರಾ...!? ನಿಜವಾಗ್ಲೂ ಬರೆದೇಬಿಟ್ರಾ...??"

"ಬನ್ನಿ...ಹಸ್ತಪ್ರತಿಯನ್ನೇ ನೋಡಬಹುದು....!"

"ಗ್ರೇಟ್...ಗ್ರೇಟ್...!!"-ಇದು ಭರಣರ ಉದ್ಗಾರ.

ಕಥೆ ಮೊದಲು ಅಶ್ವಥ್ ಓದಿದರು. ಆಮೇಲೆ ನಾಗಾಭರಣ ಓದಿದರು. ಆಮೇಲೆ ದತ್ತಣ್ಣ ಎಲ್ಲರೂ ಕತೆಯನ್ನ ಇಷ್ಟಪಟ್ಟರು. "ಆ ಮೂವತ್ತನೇ ಪುಟ ಇದೇನೋಡಿ...! ಅಲ್ಲೇ ಇರೊದು ಮಜ..." ಅಂತ ನನಗೆ ಅಪರಿಚಿತವಾದ ಸಿನಿಮಾ ಪರಿಭಾಷೆಯಲ್ಲಿ ಮಾತಾಡುತ್ತಾ ಹಿಗ್ಗುತ್ತಿದ್ದರು. ಆ ಮೂವತ್ತನೇ ಪುಟದಲ್ಲಿ ಚಪ್ಪಲಿ ಕಳ್ಳ ಮುತ್ತನಲ್ಲಿ ಸಾವಂತ್ ಒಬ್ಬ ಪ್ರತಿಭಾಶಾಲಿ ಓಟಗಾರನನ್ನು ಪತ್ತೆಹಚ್ಚುತ್ತಾನೆ! ಕಾದಂಬರಿ ನನ್ನ ಗೆಳೆಯರಿಗೆ ತುಂಬಾ ಖುಷಿಕೊಟ್ಟಿದ್ದು ಈ ತಿರುವಿನಲ್ಲಿ. ಮುಂದೆ ನಾನೇ ಕಥೆಗೆ ಸಂಭಾಷಣೆ ಬರೆದಿದ್ದು, ಕೆಲವು ಹೊಸ ಹಾಡುಗಳನ್ನು ಬರೆದಿದ್ದು ಈಗ ಇತಿಹಾಸದ ಮಾತು. ಮೈಸೂರು ಬಳಿ ಹಳ್ಳಿಯೊಂದರಲ್ಲಿ ಚಿತ್ರದ ಚಿತ್ರೀಕರಣವಾಗುತ್ತಿತ್ತು. ಎರಡು ದಿನ ನಾನೂ ಅಲ್ಲಿಗೆ ಹೋಗಿ ಬಂದೆ. ನಾಗಾಭರಣ, ಅಶ್ವತ್ಥ ಅಲ್ಲೇ ತಳ ಊರಿದ್ದರು. ಚೂಟಿ ಹುಡುಗರಾದ ವಿಜಯರಾಘವೇಂದ್ರ, ತೇಜಸ್ವಿ, ವಿಕ್ರಮ್ ಸೂರಿ ಚೆನ್ನಾಗಿ ಅಭಿನಯಿಸುತ್ತಿದ್ದರು. ರೆಕ್ಕೆ ಇದ್ದರೆ ಸಾಕೆ? ಹಾಡಿನ ಚಿತ್ರೀಕರಣ ಆಗುತ್ತಿತ್ತು. ಭರಣರ ಕಾರಿನಲ್ಲಿ ಸದಾ ಅದೇ ಹಾಡೇ ಮೊರೆಯುತ್ತಾ ಇತ್ತು. ಒಂದು ಹಾಡಿನ ಚಿತ್ರೀಕರಣದ ಮೊದಲು ನೂರಾರು ಬಾರಿ ಭರಣ ಆ ಹಾಡು ಕೇಳುತ್ತಾರೆ...! ಅದೇ ಗುಂಗಿನಲ್ಲಿ ಮುಳುಗಿ ಹೋಗಿರುತ್ತಾರೆ. ಅದಕ್ಕೇ ಇರಬೇಕು - ಹಾಡಿನ ಚಿತ್ರೀಕರಣದಲ್ಲಿ ಪುಟ್ಟಣ್ಣ ಕಣಗಾಲರನ್ನು ನೆನಪಿಸುವ ಇನ್ನೊಬ್ಬ ನಿರ್ದೇಶಕ ನಾಗಾಭರಣ. ಸಾಹಿತ್ಯವನ್ನು ಅವರ ಹಾಗೆ ಎಂಜಾಯ್ ಮಾಡುವ ಜನ ಕಮ್ಮಿ. ಜೊತೆಗೆ ಅಶ್ವತ್ಥೂ ಇದ್ದರೆ ಮುಗಿದೇ ಹೋಯಿತು. ನಮ್ಮೊಂದಿಗೆ ಚರ್ಚೆ ಮಾಡಿ ಪುಟಗಟ್ಟಲೆ ನೋಟ್ಸ್ ಮಾಡಿಕೊಂಡು ಭರಣ ಚಿತ್ರೀಕರಣಕ್ಕೆ ಸಿದ್ಧರಾಗುತ್ತಾರೆ. 'ಚಿನ್ನಾರಿಮುತ್ತ'ದ ಒಂದೊಂದು ಹಾಡೂ ಅಪೂರ್ವ. ಅಶ್ವತ್ಥ್ ಅದೇನೋ ಮ್ಯಾಜಿಕ್ ಮಾಡಿದ ಹಾಗಿದೆ. ಮಿನರ್ವಾ ಕಾಮತ್ನಲ್ಲಿ ಅವರು ಹಾಡುಗಳಿಗೆ ರಾಗ ಸಂಯೋಜನೆ ಮಾಡುತ್ತಿದ್ದ ದಿನಗಳು ನೆನಪಾಗುತ್ತಿವೆ. ಬಿಸಿ ಬಿಸಿ ವಡೆ ಸಾಂಬಾರು ಸವಿಯುತ್ತಾ ನಾನು, ಅಶ್ವತ್ಥ್ ಹಾಡುಗಳಿಗೆ ಸಂಗೀತ ಹಾಕುತ್ತಿರುವುದನ್ನು ನೋಡುತ್ತಿದ್ದೇನೆ. ಜೊತೆಯಲ್ಲಿ ನಾಗಾಭರಣ. ಬಾಲಿ. ಎನ್.ಎಸ್.ಪ್ರಸಾದ್. ಹಾಡುಗಳು ಒಂದಕ್ಕಿಂತ ಒಂದು ಚೆನ್ನಾಗಿ ಬರುತ್ತಾ ಇವೆ ಅಂತ ಎಲ್ಲರೂ ಮಾತಾಡಿಕೊಳ್ಳುತ್ತಾ ಇದ್ದೆವು. ಮೂರನೇ ದಿನ ಸಂಜೇವೇಳೆಗೆ ಕೆಲಸ ಮುಗಿಯಿತು. ಮನೆಗೆ ಹೋಗಿಬನ್ನಿ. ರಾತ್ರಿ ಆರಾಮಾಗಿ ಹರಟೆ ಹೊಡೆಯೋಣ ಅಂದರು ಅಶ್ವತ್ಥ್. ಮನೆಗೆ ಬಂದು ಹೆಂಡತಿಗೆ ಅಶ್ವತ್ಥ್ ಸಂಯೋಜನೆಗಳನ್ನು ನನ್ನ ಕಂಠಶ್ರೀಯಲ್ಲಿ ಹಾಡಿ ತೋರಿಸಿ, ಬಯ್ಯಿಸಿಕೊಂಡು ಕಾಮತ್ತಿಗೆ ಬಂದರೆ ಅಶ್ವತ್ಥ್ ತಲೆಯ ಮೇಲೆ ಕೈಹೊತ್ತು ಕುಳಿತ್ತಿದ್ದರು. 'ಏನು ಅಶ್ವತ್ಥ್...! ಏನಾಯಿತು?' ಅಂದೆ. 'ಇನ್ನೇನಾಗಬೇಕು... ಇನ್ನೊಂದು ಹೊಸಾಹಾಡು ಬೇಕು ಅಂತಿದ್ದಾನೆ ಭರಣ...ನಾಳೆ ರೆಕಾರ್ಡಿಂಗ್ ಇಟ್ಟುಕೊಂಡಿದೀನಿ...ನೀವು ಹಾಡು ಬರೆಯೋದು ಯಾವಾಗ...? ಅದನ್ನು ನಾನು ಕಂಪೋಜ್ ಮಾಡೋದು ಯಾವಾಗ...? ಎಲ್ಲಾ ಚಂಬು...ಅಷ್ಟೇ...!' ಎಂದು ಒಂದೇ ಉಸಿರಿನಲ್ಲಿ ಕೂಗಿ ಧೊಪ್ಪೆಂದು ಹಾಸಿಗೆಯ ಮೇಲೆ ಬಿದ್ದುಕೊಂಡರು. ಸಂದರ್ಭ ಏನು... ಹೇಳಿ...ಬರೆಯೋಕಾಗುತ್ತಾ ನೋಡೋಣ...ಎಂದೆ. ಅಜ್ಜಿಗೆ ಸ್ಟ್ರೋಕ್ ಆಗಿರುತ್ತೆ. ಆಗ ಹುಡುಗರೆಲ್ಲಾ ಸೇರಿ ಆಕೆಯನ್ನು ಸಮಾಧಾನ ಪಡಿಸುವ ಹಾಡು ಭರಣರಿಗೆ ಬೇಕಾಗಿತ್ತು! ನಾನು ಒಂದು ಮೂಲೇ ಸೇರಿ ನನ್ನ ಅಜ್ಜಿಯನ್ನು ನೆನಪು ಮಾಡಿಕೊಂಡೆ. ಅವಳಿಗೂ ಸ್ಟ್ರೋಕ್



ಆಗಿ ಮಲಗಿದ್ದಳು... ಆಗ ನಾನು ಅವಳನ್ನು ಹೇಗೆ ಸಮಾಧಾನ ಪಡಿಸಿದ್ದೆ ಎಂದು ನೆನಪಿಸಿಕೊಂಡೆ ಕೈ ಕಾಲು ಕಳೆದುಕೊಂಡು ನಿಶ್ಚೇಷ್ಟಿತಳಾಗಿ ಮಲಗಿದ್ದ ಅಜ್ಜಿಯ ಚಿತ್ರ ಮತ್ತೆ ಕಣ್ಣ ಮುಂದೆ ಬಂದು ಕಣ್ಣು ಮಂಜಾಯಿತು. ಹಾಗೇ ಕೆಲವು ಸಾಲು ಹಾಳೆಯ ಮೇಲೆ ಮೂಡ ತೊಡಗಿದವು. ನನ್ನ ಜೀವಿತದಲ್ಲಿ ಐದೇ ನಿಮಿಷದಲ್ಲಿ ನಾನು ಬರೆದು ಮುಗಿಸಿದ ಹಾಡು ಅದೊಂದೇ...!!

"ನೋಡಿ...ಹಾಡು ರೆಡಿ.." ಎಂದು ಅಶ್ವತ್ಥರ ಮುಂದೆ ಕುಂಬಳ ಕಾಯಿ ಗಾತ್ರದಲ್ಲಿ ಬರೆದ ಹಾಡು ಹಿಡಿದೆ. ಕಂಪೋಜ್ ಮಾಡುವಾಗ ಕುಂಬಳ ಕಾಯಿ ಅಕ್ಷರ ಅವರಿಗೆ ತುಂಬ ಇಷ್ಟ ಅಂತ ನನಗೆ ಗೊತ್ತು. ಆ ಅಕ್ಷರ ನೋಡಿಯೇ ಖುಷಿಯಾಗಿ ಹೋಯಿತು ಅವರಿಗೆ. ಏನೋ ಗುನು ಗುನು ಶುರು ಹಚ್ಚಿದರು. ಏನಾದರೂ ಹೊಸಾ ರಿದಂ ಕೊಡ್ರೀ ಎಂದು ಬಾಲಿಗೆ ಹೇಳಿದರು. ಅವರು ತಾವು ಬಲ್ಲ ವರಸೆಗಳನ್ನೆಲ್ಲಾ ಬಿಚ್ಚಿಡ ತೊಡಗಿದರು. ಅಷ್ಟರಲ್ಲಿ ನಾಗಾಭರಣರ ಸವಾರಿ ಚಿತ್ತಯಿಸಿತು. ಅಶ್ವತ್ಥ್ ಹಾಡನ್ನು ಅವರ ಕಡೆ ಒಗಾಯಿಸಿದರು. ಭರಣ ಅದನ್ನು ಅಂತರಾಳದಲ್ಲೇ ಕ್ಯಾಚ್ ಹಿಡಿದು ತಮ್ಮ ದುಂಡು ಕಣ್ಣು ಹಿಗ್ಗಿಸಿ ಹಿಗ್ಗಿಸಿ ಓದಿ..."ಆಹಾ...ಅದ್ಭುತ..ಅದ್ಭುತ...!!" ಎಂದು ಉದ್ಗರಿಸಿದ್ದಾಯಿತು. ಇವೆಲ್ಲಾ ಸಿನಿಮಾ ಜಗತ್ತಿನ ವಿಮರ್ಶಾಪರಿಭಾಷೆಯ ನಿತ್ಯ ವರಸೆಗಳು ಎಂಬುದನ್ನು ತಮಗೆ ವಿವರಿಸಬೇಕಾದ ಅಗತ್ಯವಿಲ್ಲ. ಅಶ್ವತ್ಥ್ ಹಾಡತೊಡಗಿದರು. ಹತ್ತೇ ನಿಮಿಷದಲ್ಲಿ ಹಾಡು ರೆಡಿಯಾಗಿ ಹೋಯಿತು.

ನಾವು ಇರುವಾಗ ನಿನಗೇನು ಚಿಂತೆ?

ನಗ್ತ ನಗ್ತಾ ಇರು ರಾಣಿಯಂತೆ..

ಚಿನ್ನಾರಿ ಮುತ್ತದ ಯಶಸ್ಸಿನ ಸಿಂಹ ಪಾಲು ಅದರ ಹಾಡುಗಳು, ಅವುಗಳ ರಾಗ ಸಂಯೋಜನೆ, ಅವುಗಳ ಚಿತ್ರೀಕರಣಕ್ಕೆ ಸಲ್ಲಬೇಕು. ಹುಡುಗರೆಲ್ಲಾ ದಾದಾನ ಮನೆಯಲ್ಲಿ ಮಾಡುವ ಪ್ರಾರ್ಥನೆಯೊಂದನ್ನು ಬಿಟ್ಟರೆ ಉಳಿದೆಲ್ಲ ಹಾಡುಗಳ ಚಿತ್ರೀಕರಣ ನನಗೆ ಇಷ್ಟವಾಗಿತ್ತು. ಎಷ್ಟೊಂದ್ ಜನ ಇಲ್ಲಿ ಯಾರು ನಿನ್ನೋರು? ರೆಕ್ಕೆ ಇದ್ದರೆ ಸಾಕು ಈ ಎರಡು ಹಾಡುಗಳಂತೂ "ಅದ್ಭುತ"...!

ಚಿನ್ನಾರಿ ಮುತ್ತ ಮುಗಿದಾಗ ಅದರ ಪ್ರಿವ್ಯೂಗೆ ಹಿರಿಯ ಲೇಖಕರನ್ನು ಕರೆಯಬೇಕು ಅಂದುಕೊಂಡೆವು. ನಾನೇ ಹೋಗಿ ಅನಂತಮೂರ್ತಿ, ಶಿವರುದ್ರಪ್ಪ, ಕೆ. ನರಸಿಂಹಮೂರ್ತಿ, ಎಲ್.ಎಸ್.ಶೇಷಗಿರಿರಾವ್ ಮೊದಲಾದ ಹಿರಿಯರನ್ನು ವಸಂತ್ ಕಲರ್ ಲ್ಯಾಬಿಗೆ ಕರೆದುಕೊಂಡು ಬಂದೆ..ಚಿತ್ರದ ಇಂಟರ್ವಲ್ ಸಮಯದಲ್ಲಿ..."ಭೇಷ್...! ಎಷ್ಟು ಚೆನ್ನಾಗಿವೆ ಹಾಡುಗಳು...! ಭೇಷ್...." ಅಂತ ಹಿರಿಯರು ನನ್ನ ಬೆನ್ನು ತಟ್ಟಿದ್ದು ನಾನು ಯಾವತ್ತೂ ಮರೆಯಲಾರೆ...!

1993 ನಿಜಕ್ಕೂ 'ಚಿನ್ನಾರಿಮುತ್ತ'ದ ವರ್ಷ. ಚಿತ್ರ ಸಪ್ನಾದಲ್ಲಿ 250 ದಿನ ಓಡಿತು. ಕರ್ನಾಟಕದ ಯಾವ ಮೂಲೆಗೆ ಹೋದರೂ ಚಿನ್ನಾರಿಮುತ್ತದ ಹಾಡುಗಳು ಬಸ್ಸಿನಲ್ಲೂ ಅವೇ. ಕಾರಿನಲ್ಲೂ ಅವೇ. ದಾಭಾಗಳಲ್ಲೂ ಅವೆ. ಈ ಪ್ರಮಾಣದಲ್ಲಿ ಜನರನ್ನು ಮರುಳು ಮಾಡಿದ ಹಾಡುಗಳನ್ನು ನಾನಂತು ಮುಂದೆ ಬರೆಯಲಿಲ್ಲ...!

ಚಿನ್ನಾರಿಮುತ್ತದ ನಂತರ ನಾಗಾಭರಣ ನಾನು ಅಶ್ವತ್ಥ್ ಮತ್ತೆ ಕೂಡಿ ಕೆಲಸ ಮಾಡಿದ್ದು 'ಗೀತ ಮಾಧುರಿ'ಯ ಸಂದರ್ಭದಲ್ಲಿ. ಆ ದಿನಗಳಲ್ಲಿ ಅದೆಷ್ಟು ಬಾರಿ ನಾವು ಭರಣರ ಬಿಸಿಲುಮಚ್ಚಿನಲ್ಲಿ ಸೇರಿದ್ದೇವೆಯೋ...! ಕವಿತೆಗಳ ಆಯ್ಕೆ - ಆಮೇಲೆ ಅವುಗಳ ವಿಶ್ಲೇಷಣೆ-ಆಮೇಲೆ ರಾಗ ಸಂಯೋಜನೆ-ಆಮೇಲೆ ಅವನ್ನು ಹೇಗೆ ಚಿತ್ರೀಕರಿಸಬೇಕು ಎಂಬ ಬಗ್ಗೆ ತಳಮಟ್ಟದ ಚರ್ಚೆ...ಓಹೋ...! ಅದೊಂದು ಉತ್ಸವದ ಆಚರಣೆ.. ಈ ಉತ್ಸವಕ್ಕೆ ರುಚಿ ರುಚಿಯಾದ ತಿಂಡಿ "ತೀರ್ಥ"ಗಳ ಸೌರಣೆ ಬೇರೆ. ಬಹಳ ಹಿತವಾದ ದಿನಗಳು ಅವು.

ಈ ನಿಕಟ ಸ್ನೇಹ 'ನಾಗಮಂಡಲ' ಚಿತ್ರದ ಸಂದರ್ಭದಲ್ಲಿ ಮತ್ತೆ ನಮ್ಮನ್ನು (ನಾಗಾಭರಣ-ಅಶ್ವತ್ಥ್-ನಾನು) ಕೂಡಿಸಿತು. 'ನಾಗಮಂಡಲ'ದ ಹಾಡುಗಳ ಸಂಯೋಜನೆಗಾಗಿ ಕಾವೇರಿತೀರದ ಎಸ್ಟೇಟ್ ಒಂದರಲ್ಲಿ ಮೊಕ್ಕಾಂ ಹಾಕಿದ್ದೆವು. ಒಂದು ಬೆಳಿಗ್ಗೆ ನಾವೆಲ್ಲಾ ನದೀ ಸ್ನಾನಕ್ಕೆ ಹೋಗಿದ್ದೆವು. ನೀರಲ್ಲಿ ಆಡುತ್ತಾ ಆಡುತ್ತಾ ನದಿಯ ಸೆಳವಿನ ಬಳಿ ಬಂದುಬಿಟ್ಟಿದ್ದೇವೆ. ಕಾಲು ಊರುವುದು ನನಗೆ ಸಾಧ್ಯವಾಗುತ್ತಿಲ್ಲ. ಪ್ರವಾಹ ನನ್ನನ್ನು ಎತ್ತಿ ಬಿಸಾಕುತ್ತಿದೆ ಅನ್ನಿಸಿ ಒಂದುಕ್ಷಣ ಎದೆ ಝಲ್ಲೆಂದು ಹೋಯಿತು. ಗಟ್ಟಿಯಾಗಿ ದತ್ತಣ್ಣನ ಕೈ ಹಿಡಿದುಕೊಂಡೆ. ಹೇಗೋ ಸಾವರಿಸಿಕೊಂಡು ದಂಡೆ ಸೇರಿದೆ. ಈ ಅನುಭವವನ್ನು ಯಾರಿಗೂ ಹೇಳಲಿಲ್ಲ. ರಾತ್ರಿ ಕನಸಿನಲ್ಲೂ ಪ್ರವಾಹ ನನ್ನನ್ನು ಸೆಳೆದುಕೊಂಡುಹೋದ ಅನುಭವದ ಪುನರಾವರ್ತನೆ.

ಮಾರನೆಯದಿನ ನಿರ್ಮಾಪಕ ಹರಿಖೋಡೆಯವರು ಬಂದು ಹಾಡುಗಳನ್ನು ಕೇಳಿದರು. ವಸತಿಭವನದ ಮುಂದೆ ಅಂಗಳದಲ್ಲಿ ಹುಲ್ಲುಹಾಸಿನಮೇಲೆ ಕೂತು ಅಶ್ವತ್ಥ್ ತಾವು ಹೊಸದಾಗಿ ಮಾಡಿದ ಸಂಯೋನೆಗಳನ್ನು ಹಾಡಿ ತೋರಿಸಿದರು... ಖೋಡೆಯವರೂ ತಂಬಾ ಸಂತೋಷಪಟ್ಟರು...ಮುಂದಿನವಾರ ರೆಕಾರ್ಡಿಂಗ್.

ಆ ಒಂದು ವಾರದಲ್ಲಿ ಕಾವೇರಿಯಲ್ಲಿ ಅದೆಷ್ಟು ನೀರು ಹರಿಯಿತೋ....ಭರಣ ಒಮ್ಮೆ ನನ್ನನ್ನು ದತ್ತಣ್ಣ ಅವರ ಮನೆಯಲ್ಲಿ ಭೇಟಿಯಾಗಿ... "ನಾಗಮಂಡಲದಲ್ಲಿ ಉತ್ತರಕನ್ನಡದ ಭಾಷೆಯಲ್ಲಿ ಬರೆದ ಹಾಡುಗಳ ಬಳಕೆಯಾದರೆ ಚೆನ್ನಾಗಿರುತ್ತೆ ಅಂತ ಅಶ್ವತ್ಥ್ ಅಭಿಪ್ರಾಯ ..ನೀವು ಒಪ್ಪಿಗೆ ಕೊಟ್ಟರೆ ಹಾಡುಗಳನ್ನು ಆ ಭಾಷೆಗೆ ಬದಲಾಯಿಸಬಹುದು..ಅಥವಾ.." ಎಂದು ಅರ್ಥಪೂರ್ಣವಾಗಿ ನಿಲ್ಲಿಸಿದರು. ನಾನು ಅವರಿಗೆ ಶುಭಾಶಯ ಹೇಳಿ ನಾಗಮಂಡಲದಿಂದ ಹೊರಗೆ ಬಂದೆ.

ಎಷ್ಟೇ ಆಗಲಿ ಸಿನಿಮಾ ಅನ್ನುವುದು ಒಂದು ಟೀಂ ವರ್ಕ್. ಈ ಮಾತು ಭರಣ ಮತ್ತೆ ಮತ್ತೆ ಹೇಳುತ್ತಾ ಇರುತ್ತಾರೆ. ನಾನು ಮಾಡಿದ್ದೇ ಸರಿ ಎಂದು ಅಲ್ಲಿ ಯಾರೂ ಹೇಳುವಂತಿಲ್ಲ. ಕೋಟ್ಯಾಂತರ ರೂಪಾಯಿ ಬಂಡಾಳ. ಹಾಗಾಗಿ ಅಲ್ಲಿ ಕಾಂಪ್ರಮೈಜ್ ಅನಿವಾರ್ಯ. ಆದರೆ ಕಾಂಪ್ರಮೈಜ್ ಮಾಡಿಕೊಳ್ಳದೆ ಕ್ರಿಯಾಶೀಲರಾಗಲು ಅವಕಾಶ ಕೊಡುವಂಥ ಒಂದು ಮಾಧ್ಯಮ ಎಂದರೆ ನಾಟಕ ಮಾಧ್ಯಮ. ನಾಗಮಂಡಲದ ಅನುಭವ ನನ್ನನ್ನು ನಾಟಕದ ಕಡೆ ತಿರುಗುವಂತೆ ಮಾಡಿತು. ಹಳ್ಳಿಯ ಭಾಷೆಯ ಕಸುವನ್ನು ತರಲಿಕ್ಕೂ ನಾನು ಅಲ್ಲಿ ಸಾಕಷ್ಟು ಪ್ರಯತ್ನ ಮಾಡಿದ್ದೇನೆ. ಚಿತ್ರಪಟ, ಮಂಥರಗಳ ಭಾಷಾಪ್ರಯೋಗ ನನ್ನ ಮಟ್ಟಿಗೆ ನಾನು ವಿನಯದಿಂದ



ಒಪ್ಪಿಕೊಂಡ ಒಂದು ಸವಾಲು. ಚಂಪಾ ಅಂಥವರು ಆ ಭಾಷೆಯನ್ನು ಕುರಿತು ಆಡಿರುವ ಮುಕ್ತವಾದ ಒಳ್ಳೆಯ ಮಾತು ನನಗೆ ತುಂಬ ಸಮಾಧಾನ ಕೊಟ್ಟಿದೆ. ನನ್ನ ನಾಟಕಗಳನ್ನು ಕಾರಂತ, ಪ್ರೇಮಾಕಾರಂತ, ಬಿ.ಜಯಶ್ರೀ, ಸುರೇಂದ್ರನಾಥ್, ಕವತ್ತಾರ್ ಮೊದಲಾದ ಪ್ರತಿಭಾವಂತರು ರಂಗದ ಮೇಲೆ ತಂದಿದ್ದಾರೆ. ಹೋದ ತಿಂಗಳು ಗೆಳೆಯ ನಾಗಾಭರಣ ಕೂಡ ನಮ್ಮಲ್ಲಿಗೆ ಬಂದು ಅವರಿಗಾಗಿ ನಾನು ಒಂದು ಹೊಸ ನಾಟಕ ಬರೆದುಕೊಡಬೇಕೆಂದು ಕೇಳಿದ್ದಾರೆ. ಯಾಥಾಪ್ರಕಾರ ನಾನು ಅಸ್ತು ಅಂದಿದ್ದೇನೆ. ಸವಾಲುಗಳನ್ನು ಒಪ್ಪಿಕೊಳ್ಳುವುದು ನನ್ನ ಸ್ವಭಾವದಲ್ಲೇ ಸಹಜವಾಗಿ ಬಂದ ಹುಟ್ಟುಗುಣ. ಈಗ ನಾಗಾಭರಣರಿಗಾಗಿ ಒಂದು ಏಕವ್ಯಕ್ತಿ ನಾಟಕ ಬರೆಯಬೇಕಾಗಿದೆ. ಅವರು ಒಳ್ಳೆಯ ನಿರ್ದೇಶಕರು; ಅಷ್ಟೇ ಒಳ್ಳೇ ಅಭಿನಯ ಚತುರ. ಅವರಿಗೆ ಸವಾಲಾಗುವಂಥ ನಾಟಕ ಬರೆಯಲು ನಾನು ಆಸೆಪಡುತ್ತೇನೆ. 'ನಾಟಕ ಬರೆದಿರಾ... ಯಾವಾಗ ಕೊಡುತ್ತೀರಿ ಗುರೂ..?' ಎಂದು ಭರಣ ಫೋನ್ ಮಾಡುತ್ತಾರೆ. ಪ್ರಾರಂಭಿಸಿದ್ದೇನೆ... ಇನ್ನೇನು ಮುಗಿಯುತ್ತದೆ... ಎನ್ನುತ್ತೇನೆ ನಾನು. ನಾಟಕದ ಮೊದಲ ಸಾಲು ಇನ್ನೂ ನನ್ನ ಕಿವಿಯಲ್ಲಿ ಅನುರಣಿಸಬೇಕಾಗಿದೆ. ಅಂಥ ಮಹೂರ್ತ ಬೇಗ ಒದಗಿ ಬರುತ್ತದೆ ಎಂದೂ ನನಗೆ ಗೊತ್ತು...!

❑ ❖ ❑ ❖ ❑

# ಭರಣರ ಬ್ರೀಫ್‌ಕೇಸು, ಕನ್ನಡಕ, ಇತ್ಯಾದಿ

- ಜಯಂತ ಕಾಯ್ಕಿಣಿ

ಮುಂಬಯಿ. 1978 ಅಥವಾ 1979. ಬೆನಕ ತಂಡದ ನಾಟಕೋತ್ಸವ. ನಾಟಕದ ನಂತರ ತಂಡದವರನ್ನು ಅಭಿನಂದಿಸಲು ಗಣ್ಯರ ನೂಕು ನುಗ್ಗಲು. ಎಲ್ಲರೂ ಖಾಲಿಯಾದ ಮೇಲೆ ಅದಾಗಲೇ 'ಹೊರನಾಡ ಕನ್ನಡಿಗ'ನಾಗಿದ್ದ ನಾನು ಮೆಲ್ಲಗೆ ಅಳುಕುತ್ತ, ವಾಯರುಗಳನ್ನು ಮೆಟ್ಟುತ್ತ, ಗ್ರೀನ್ ರೂಮಿನ ವಿಚಿತ್ರ ಘಾಟಿನ ನೇಪಥ್ಯದಲ್ಲಿ ತೆವಳಿದೆ. ಟಿ.ಎಸ್.ರಂಗಾರನ್ನು ಮಾತನಾಡಿಸಿದೆ. ಅವರ ಮಾತಿಗಿಂತ ಅವರ ಧ್ವನಿಯೇ ನೆನಪಿನಲ್ಲುಳಿದಿದೆ. ಆಗ ಅವರು, ಕತ್ತಲೆಯಲ್ಲಿ ಏನೇನೋ ಮಾಡುತ್ತ ಓಡಾಡಿಕೊಂಡಿದ್ದ ವ್ಯಕ್ತಿಯೊಬ್ಬರನ್ನು ಎಳೆದು ಇವರು ಟಿ.ಎಸ್.ನಾಗಾಭರಣ ಎಂದು ಪರಿಚಯಿಸಿದರು. ವ್ಯಕ್ತಿ ಕೈಕುಲುಕಿ 'ಹಲೋ' ಎಂದು 'ನಾಳಿನ ಪ್ರಾಪರ್ಟೀಸ್ ತರ್‍ರೋ' ಎಂದು ಕೂಗುತ್ತ ಮರೆಯಾಗಿಬಿಟ್ಟಿತು. ನಾಗಾಭರಣರ ಆ ನೇಪಥ್ಯದ ಕ್ರಿಯಾನಿರತ ನಿಲುವೇ ಅವರ ಪ್ರತಿಮೆಯಾಗಿ ನನ್ನಲ್ಲಿ ಉಳಿದುಬಂದಿದೆ. ಅಚ್ಚರಿ ಎಂದರೆ ತಮ್ಮ 25 ವರುಷಗಳ ಕಲಾಯಾತ್ರೆಯಲ್ಲಿ ಯಾರೂ ಸಾಧಿಸಿರದಂಥ ಗುಣಾತ್ಮಕ ಮತ್ತು ಸಂಖ್ಯಾತ್ಮಕ ಯಶಸ್ಸಿನ (ಮೂವತ್ತು ಚಲನಚಿತ್ರ, ಎಂಟು ರಾಷ್ಟ್ರಪ್ರಶಸ್ತಿ, ಏಳು ರಾಜ್ಯ ಪ್ರಶಸ್ತಿ... ಇತ್ಯಾದಿ - ಇತ್ಯಾದಿ) ಈ ಮಹತ್ವದ ಬಿಂದುವಿನಲ್ಲೂ ನನಗೆ ಅವರ ವ್ಯಕ್ತಿತ್ವದ ಎಲ್ಲ ಆವೃತ್ತಿಗಳೂ ಆ ನೇಪಥ್ಯದ ಕ್ರಿಯಾನಿರತ ಪ್ರತಿಮೆಯ ವಿಸ್ತೃತ, ವಿಕಸಿತ ರೂಪಗಳಾಗೇ ಕಾಣುತ್ತಿವೆ.

ಹೆತ್ತ ತಂದೆ ತಾಯಿಗಳನ್ನು ಅಪಾಯಿಂಟ್‌ಮೆಂಟ್ ಕೊಟ್ಟು ಮಾತನಾಡಿಸುವ ಈ ಶರವೇಗದ ಸರದಾರರ ಕಾಲದಲ್ಲಿ, ರಂಗಭೂಮಿ ಎಂಬ ಹೆತ್ತ ತಾಯಿಯ ಅಂತಃಕರಣದ ಹಂಗನ್ನು ಎಂದಿಗೂ ಕಳೆದುಕೊಳ್ಳದ, ಹಿರಿಕಿರಿಯರೆನ್ನದೆ ಎಲ್ಲರ ಸಮಯಕ್ಕೆ, ರಂಗಭೂಮಿಯ ಕರೆಗೆ, ಎಂದಿಗೂ ಧಾವಿಸುವ, ಸಹಜ ಸರಳ ವಿನಯವಂತ. ಕೆಲಸ ಇದ್ದರೆ, ಏನಾದರೂ 'ಗಿಟ್ಟೋ' ಹಾಗಿದ್ದಾಗ ಮಾತ್ರ ಹಿರಿಯರನ್ನು ಅರೆ ನಮಸ್ಕಾರದಿಂದ (ಅರ್ಥವೇ ಬಗ್ಗಿ - ಪಂಜಾಬಿ ಇಸ್ಟೈಲ್!) ಓಲೈಸುವ 'ಆಧುನಿಕ ಪ್ರಾಫೆಶನಲ್ಸ್' ಗಳ ಕಾಲದಲ್ಲೂ, ಹಳೆ ಕವಿಗಳನ್ನು, ಲೇಖಕರನ್ನು, ಕಲಾವಿದರನ್ನು, ಮೇಷ್ಟ್ರನ್ನು - ಮರೆಯದೆ ಅವರಿಗಾಗಿ ಸದಾ ಗೌರವ ತೋರುವ, ತನ್ನ ಸಾಂಸ್ಕೃತಿಕ ಮೌಲ್ಯಗಳನ್ನು, ಒಳಿತು ಕೆಡುಕಿನ ಖಚಿತ ಪರಿಕಲ್ಪನೆಯನ್ನು, ಸಾಮಾಜಿಕ ನೈತಿಕತೆಯನ್ನು ಎಂದಿಗೂ ಕಳೆದುಕೊಳ್ಳದ, ಜಾಗೃತ ಕಲೆಗಾರ. ಭರಣರ ಮನೆಯಲ್ಲಿ ಯಾವಾಗಲೂ ಒಂದೆರಡು ಉತ್ತರ ಕರ್ನಾಟಕದ ಅಥವಾ ಕರಾವಳಿಯ ಅಥವಾ ಮಲೆನಾಡಿನ ಯುವಕರು ತಂಗಿದ್ದನ್ನು ನೋಡುತ್ತೀರಿ. ಏಕೆಂದರೆ ಹವ್ಯಾಸಿ ರಂಗಭೂಮಿಯಲ್ಲಿ ಅಂಬೆಗಾಲೂರಿ, ಬೆರಗಿನ ಕಣ್ಣುಗಳಿಂದ, ಭಯದ ಹೆಜ್ಜೆಗಳಿಂದ ಈ ಬೆಂಗಳೂರೆಂಬ 'ಫ್ರಿಜ್ಜಿನಲ್ಲಿಟ್ಟ ಮೊಸರನ್ನ'ದಂಥ ಅನಾತ್ಮೀಯ ನಗರಕ್ಕೆ ಬರುವ ಎಳೆಯರಿಗೊಂದು ಏನಾದರೂ ಅವಕಾಶ 'ಸಿಕ್ಕೀತೆನ್ನುನ ಅಭಯ' ಇದೆ ಇಲ್ಲಿ. ಭರಣ ಮಾತು ಮಾತಿಗೆ ಬಳಸುವ



'ಯಾಕ್ರೀ ಸರಽಽ' ಅವರ ಮತ್ತು ರಾಜಧಾನಿಯ 'ಆಚೆ'ಗಿನ ಭೂಮಿಯ ನಂಟನ್ನು ಸ್ಪಷ್ಟವಾಗಿ ಹೇಳುತ್ತದೆ.

ಭರಣರ ಬ್ರೀಫ್‌ಕೇಸು ತೆರೆದಿದ್ದಾಗ ಒಮ್ಮೆ ನೋಡಬೇಕು ನೀವು - ಕದ್ದು! ಅವರ ಶಿಸ್ತಿನ, ಪರಿಶ್ರಮದ ಪುಟ್ಟ ರೂಪಕ ಅದು! ಅವರ ಎಷ್ಟು ಪ್ರಾಜೆಕ್ಟ್‌ಗಳು ಇವೆಯೋ ಪ್ರತಿಯೊಂದಕ್ಕೂ ಒಂದೊಂದು ಪ್ರತ್ಯೇಕ ಟಿಪ್ಪಣಿ ಪುಸ್ತಕ. ಸಿನಿಮಾಗೆ ಒಂದು ಬಣ್ಣದ ಪೆನ್ನು. ಸೀರಿಯಲ್‌ಗೆ ಒಂದು. ಎಂದೋ ನಡೆಯಲಿರುವ ನಾಟಕೋತ್ಸವಕ್ಕೆ ಒಂದು. ಗದಗೋ, ಧಾರವಾಡವೋ, ಉಡುಪಿಯೋ, ದೆಹಲಿಯೋ, ಮುಂಬಯಿಯೋ - ಎಲ್ಲೆಲ್ಲಿ ಕೊಡಲಿರುವ 'ಸತ್ತವರ ನೆರಳು' ಅಥವಾ 'ಕತ್ತಲೆ ಬೆಳಕು' - ನಾಟಕದ ಶೋಗಾಗಿ ಒಂದು. ಆಯಾ ವಿಷಯಕ್ಕೆ ಸಂಬಂಧಿತ ವ್ಯಕ್ತಿಗಳ ಕರೆಸಂಖ್ಯೆಗಳ ಯಾದಿ ಪ್ರತ್ಯೇಕ. ಎಲ್ಲ ನೀಟು. ಸಾಫ್ ಸಪಾಟು. ಅವರು ಆಗಾಗ ತಮ್ಮ ವಿಶಾಲ ಎದೆಯ ಮೇಲೆ ಸರೀ ಕೇಂದ್ರಕ್ಕೆ ತಂದು ಅಡ್‌ಜಸ್ಟು ಮಾಡಿ ಇಡುವ ತೂಗುವ 'ಓದುವ ಕನ್ನಡಕ'ದಂತೆ. ಆಗಾಗ ತಮ್ಮ ನೆಲೆಯನ್ನು, ಕ್ರಮಿಸಿದ ದಾರಿಯನ್ನು ಕ್ರಮಿಸಲಿರುವ ದಾರಿಯನ್ನು - ಎಚ್ಚರದಿಂದ 'ಫೋಕಸ್' ಮಾಡುತ್ತಿರುವಂತಿಹ ಪ್ರಭೆ ಕನ್ನಡಕವನ್ನು ನಿಶ್ಚಲವಾಗಿ ಇಡುವ ಭರಣರ ಎಡೆಬಿಡದ ಆಟ.

ಅವರಷ್ಟು ವೈವಿಧ್ಯಮಯವಾದ - ವಸ್ತು, ಆಕೃತಿ, ಶೈಲಿ, ದರ್ಶನ ಎಲ್ಲಾ ದೃಷ್ಟಿಯಿಂದ ವೈವಿಧ್ಯಮಯವಾದ - ಚಿತ್ರಗಳನ್ನು ಮಾಡಿದವರು ಬಹಳ ಕಡಿಮೆ. ಇಷ್ಟೆಲ್ಲಾ ಆದರೂ "ಏನೋ, ಹುಡುಗಾ, ಒಂದಿಷ್ಟು ಚೆನ್ನಾಗಿ ಕೆಲಸ ಮಾಡ್ತಿದಾನೆ.." ಎಂಬ ಲಘುವಾದ ಮನ್ನಣೆಯನ್ನಷ್ಟೆ ವೃತ್ತಿಬಾಂಧವರಿಂದ ಮತ್ತು ಸಮಾಜದಿಂದ ಪಡೆದವರು. ಮನುಷ್ಯ ವರ್ತನೆಯ ಸಕಲ ಸೂಕ್ಷ್ಮಗ್ರಗಳನ್ನು ಬಲ್ಲವರು. ಏಳಿನಿಂದ ಬೀಗದವರು, ಬೀಳಿನಿಂದ ಬಾಗದವರು. ಅವರು ಹಾಕಿಕೊಳ್ಳುವ ಕುರ್ತಾ ಮತ್ತು ಶೂಗಳ ಬಣ್ಣವೊಂದನ್ನು ಬಿಟ್ಟರೆ, ಎಲ್ಲೂ ಅಬ್ಬರದಿಂದ ರೋಗಮದದಿಂದ ತಮ್ಮನ್ನು ಬೂಸ್ಟ್ ಮಾಡಿಕೊಂಡವರಲ್ಲ.

ಭರಣರ ಜತೆ ಕೆಲಸ ಮಾಡದ ಯಾವ ವ್ಯಕ್ತಿಯೂ ಇಂದಿನ ಜೀವಿ, ಚಿತ್ರರಂಗದಲ್ಲಿಲ್ಲ ಎಂದರೆ ಉತ್ಪ್ರೇಕ್ಷೆಯಲ್ಲ. ಹಳೆಯದನ್ನೂ, ಒಳ್ಳೆಯದನ್ನೂ ಚಿಟಿಕೆ ಬಾರಿಸುವುದರಲ್ಲಿ ಎಲ್ಲರೂ ಮರೆಯುತ್ತಿರುವಾಗ, ಹಳೆತು ಮತ್ತು ಹೊಸತರ ನಡುವೆ ಭರಣ ಒಂದು ಕೊಂಡಿ. ಪರಂಪರೆ ಮತ್ತು ಪ್ರಯೋಗಗಳ ನಡುವೆ, ರಂಗಭೂಮಿ ಮತ್ತು ಚಿತ್ರರಂಗದ ನಡುವೆ, 'ಆಚೆಯ' ಹವ್ಯಾಸಿ ಯುವ ಕಲಾವಿದರು ಮತ್ತು ಬೆಂಗಳೂರಿನ ನಡುವೆ, ಜನಪ್ರಿಯತೆ ಮತ್ತು ಗುಣಮಟ್ಟದ ನಡುವೆ, ಕಲಾತ್ಮಕ ಮತ್ತು ವಾಣಿಜ್ಯ ವ್ಯಾಕರಣಗಳ ನಡುವೆ - ಭರಣ ಒಂದು ಸತ್ವಶಾಲಿ ಕೊಂಡಿ. ಇದು ಬುದ್ಧಿ ಮತ್ತು ಭಾವಗಳನ್ನೂ ಬೆಸೆಯುವಂಥದ್ದು!

ಐವತ್ತು ತುಂಬುತ್ತಿರುವ ಈ ಕುಟುಂಬವತ್ಸಲ, ಸ್ನೇಹಿತ ಸದಾ ಕೆಲಸದಲ್ಲಿರಲಿ. ಕೊರಳಿಗೆ ತೂಗುವ ಅವರ ಓದಿನ ಕನ್ನಡಕ ಸದಾ ಅಲ್ಲಾಡುತ್ತಿರಲಿ. ಅವರ ಬ್ರೀಫ್‌ಕೇಸಿನೊಳಗಿನ ಟಿಪ್ಪಣಿ ಪುಸ್ತಕಗಳಲ್ಲಿ ಸದಾ ತಾಜಾ ಅಕ್ಷರಗಳಿರಲಿ ಮತ್ತು ಶ್ರುತಾಲಯದ ಅಭಯದಲ್ಲಿ ಯುವ ಕಲರವ ಸದಾ ಹೊಮ್ಮುತ್ತಿರಲಿ.

# ಮಿತ್ರಾಭರಣ

ಗೋಪಾಲ ವಾಜಪೇಯಿ

1974-75ರ ಸಮಯ. ಆ ಚುಂಬಕ ಗಾಳಿ ಉತ್ತರ ಕರ್ನಾಟಕದ ಸಂಸ್ಕೃತಿ ಕ್ಷೇತ್ರದ ಮೇಲೆ ಹೆಚ್ಚು ಪ್ರಭಾವ ಬೀರಿತ್ತು. 'ಕಾರಂತ' ಕಾಂತದ ಪ್ರಭಾವಕ್ಕೆ ಉತ್ತರ ಕರ್ನಾಟಕದ ಹವ್ಯಾಸಿ ಹುಡುಗರು ಅವಾಕ್ಕಾಗಿದ್ದರು. ಕಾರಂತರ ಹಯವದನ, ಜೋಕುಮಾರ ಸ್ವಾಮಿ, ಸತ್ತವರ ನೆರಳು ಮುಂತಾದವು ಹೊಸ ದಾರಿ ತೆರೆದಿಟ್ಟಿದ್ದವು. ಭಿನ್ನ ಚಿಂತನೆ, ಶೋಧನೆಗಳಿಗೆ ಅವಕಾಶ ಮಾಡಿಕೊಟ್ಟಿದ್ದವು. ಆ ಕಲಾವಿದರು ಆಡುತ್ತಿದ್ದ ಉತ್ತರ ಕರ್ನಾಟಕದ ಭಾಷೆಯೊಂದನ್ನು ಬಿಟ್ಟು, ಆ ಪ್ರಯೋಗಗಳ ಉಳಿದೆಲ್ಲ ಅಂಶಗಳೂ ಹುಬ್ಬಳ್ಳಿ-ಧಾರವಾಡದ ನಮಗೆ ಇಷ್ಟವಾಗಿದ್ದವು. ಅವರ 'ಭಾಷೆ'ಯ ವಿಷಯವಾಗಿಯೇ ಹುಬ್ಬಳ್ಳಿಯಲ್ಲಿ ಒಂದಿಬ್ಬರು 'ಬೆನಕ'ರನ್ನು ಸಾಕಷ್ಟು ಹೊತ್ತು ಹೈರಾಣ ಮಾಡಿದ್ದೆ. ಅಂದಿನ ಆ 'ಹಾಕ್ಯಾಟ' (ವಾಗ್ಯುದ್ಧ) ದಿಂದ ಆದ ಲಾಭವೆಂದರೆ ಆ 'ಬೆನಕ'ರೊಂದಿಗಿನ (ಸುಂದರ ರಾಜ್, ನಾಗಾಭರಣ) ನನ್ನ ಗೆಳೆತನ. 'ಉಪದ್ರವ ವಾಹಿನಿಗಳು' ಕನ್ನಡಕ್ಕೆ ಬರುವವರೆಗೂ, ನಾಟಕ ಪ್ರಯೋಗಗಳು ನಡೆಯುವವರೆಗೂ ಈ ಇಬ್ಬರೂ ಆಗೀಗ ಅಲ್ಲಲ್ಲಿ ಸಿಗುತ್ತಿದ್ದರು. ನಂತರ, ಸಿನಿಮಾ ನಟನೆಯಲ್ಲಿ ಸುಂದ್ರ, ನಿರ್ದೇಶನದಲ್ಲಿ ಭರಣ ಮುಳುಗಿಹೋದರು. ಭೇಟಿ ಅಪರೂಪವಾಯಿತೇ ಹೊರತು ಗೆಳೆತನ ಮಾಸಲಿಲ್ಲ.

1988ರ ಪ್ರಾರಂಭ. ಬೆಂಗಳೂರಿಗೆ ವರ್ಗವಾಗಿತ್ತು. ಸಂಜೆಗೆ ಕಲಾಕ್ಷೇತ್ರದ ಕಟ್ಟೆಯ ಆಶ್ರಯ. ಸೂತ್ರಧಾರ ರಾಮಯ್ಯ-ಲೈಟಿಂಗ್ ತಜ್ಞ ವಿ. ರಾಮಮೂರ್ತಿಗಳ 'ಪನ್'ಚಾಮೃತದ ಸವಿ. ಹೊತ್ತು ಹೇಗೆ ಹೋಗುತ್ತಿತ್ತೋ ಗೊತ್ತಾಗುತ್ತಿರಲೇ ಇಲ್ಲ. ಅಂದೊಮ್ಮೆ ಮಧ್ಯಾಹ್ನ ನನಗೊಂದು ಫೋನು. "ಸಂಜೆ ತಪ್ಪದೇ 'ಶ್ರುತಾಲಯ'ಕ್ಕೆ ಬಾ.." ಇಷ್ಟನ್ನೇ ಹೇಳಿದ ಭರಣ ಫೋನಿಟ್ಟುಬಿಟ್ಟ.

ಎನ್ನಾರ್ ಕಾಲನಿಯಲ್ಲಿದ್ದ 'ಶ್ರುತಾಲಯ' ಹುಡುಕಿಕೊಂಡು ಹೋದೆ. ಅಲ್ಲಿ ಒಂದು ಸಣ್ಣ ಸಮ್ಮೇಳನದ 'ಭಾರೀ ಚರ್ಚೆ' ನಡೆದಿತ್ತು. ಭರಣ ಕೈಸನ್ನೆಯಲ್ಲೇ ನನ್ನನ್ನು 'ಒತ್ತಿ' ಕೂಡಿಸಿಬಿಟ್ಟ. 'ಸಂತ ಶಿಶುನಾಳ ಶರೀಫ' ಚಿತ್ರ ಕಥೆಯ ಅಂದಿನ ಚರ್ಚೆ ಮುಗಿದಾಗ ರಾತ್ರಿ 9:30. 'ಚರ್ಚೆ'ಯ ಮೂಲಕ ಚಿತ್ರದ ಕಥೆಯನ್ನು ಕಟ್ಟುತ್ತ ಹೋಗುವ ಆ ಪರಿ ನನಗಂತೂ ಹೊಸ ಅನುಭವ. ಚರ್ಚೆಗಳಲ್ಲಿ ಪಾಲ್ಗೊಳ್ಳುತ್ತ, ಭರಣನ ತಂಡದಲ್ಲಿ ಒಬ್ಬನಾಗಿಬಿಟ್ಟೆ. ಸಿನಿಮಾ ಕಥೆ-ಚಿತ್ರಕಥೆ-ಮಾತು ಬರೆಯುವ ಕ್ರಮ ಗೊತ್ತಾಗತೊಡಗಿತು. 'ಮೈಸೂರ ಮಲ್ಲಿಗೆ' ಚಿತ್ರದ ಮೊದಲ ಹಂತದ ಚರ್ಚೆಯಲ್ಲೂ ಪಾಲ್ಗೊಂಡೆ. ಆದರೆ ಮುಂದುವರಿಯಲು ನೌಕರಿ 'ಅಡ್ಡ' ಬಂತು.



1996ರಲ್ಲಿ ಮತ್ತೊಮ್ಮೆ ಬೆಂಗಳೂರಿಗೆ ವರ್ಗವಾದಾಗ, ಕಲಾಕ್ಷೇತ್ರದ ಕಟ್ಟೆ ಭಣಗುಡುತ್ತಿತ್ತು. ಸಾಂಕೇತಿಕವೆಂಬಂತೆ, ಆ ರಸ್ತೆಯೂ 'ಒನ್ ವೇ'ಯಾಗಿತ್ತು. ಭರಣನ ಕಡೆಯಿಂದ ಮತ್ತೆ ಫೋನು. 'ಶ್ರುತಾಲಯ' ಹುಡುಕಿಕೊಂಡು ಸೀತಾ ಸರ್ಕಲ್‌ಗೆ ಹೋದೆ. ಭರಣ ನಿರ್ದೇಶನದ 'ನಾಗಮಂಡಲ'ದ ಕಥೆಯನ್ನು ಸಿ. ಅಶ್ವಥ್ ಮತ್ತಿತರರು ಕಟ್ಟುತ್ತಿದ್ದರು. ನನಗೆ ಮಾತು-ಗೀತೆ ಬರೆಯುವ ಮತ್ತೊಂದು ಅವಕಾಶ.

2002 ಜೂನ್. ಆಕಸ್ಮಿಕವಾಗಿ ಬೆಂಗಳೂರಿಗೆ ಹೋಗಿದ್ದೆ. ಸುದ್ದಿ ಗೊತ್ತಾದ ಭರಣ ನಾನಿರುವ ಜಾಗಗಳಿಗೆಲ್ಲ "ಕೂಡಲೇ 'ಶ್ರುತಾಲಯ'ಕ್ಕೆ ಬಾ" ಎಂದು ಸಂದೇಶ ಬಿಟ್ಟಿದ್ದ. ಹೋದೆ. 'ಸಿಂಗಾರೆವ್ವ' ಕೆಲಸ ಒಪ್ಪಿಸಿದ.

ಈ ತನಕ ನಾಗಾಭರಣ ನಿರ್ದೇಶಿಸಿದ ಮೂರು ಚಲನಚಿತ್ರಗಳಿಗೆ (ಸಂತ ಶಿಶುನಾಳ ಶರೀಫ, ನಾಗಮಂಡಲ, ಸಿಂಗಾರೆವ್ವ) ಗೀತ ರಚನಕಾರ - ಸಂಭಾಷಣಕಾರನಾಗಿ, ಒಂದು ಕಿರುತೆರೆ ಧಾರಾವಾಹಿಗೆ (ಕಣ್ಣುಗಳು) ಕಥೆಗಾರ - ಗೀತ ರಚನಕಾರ - ಸಂಭಾಷಣಕಾರನಾಗಿ, ಮತ್ತು ಒಂದು ಸಾಕ್ಷ್ಯಚಿತ್ರಕ್ಕೆ ಗೀತ ರಚನಕಾರನಾಗಿ (ಕೆಎಂಎಫ್‌ನ ಕ್ಷೀರ ಸಂಪದ) ದುಡಿದಿದ್ದೇನೆ.

**ಈ ಹಿನ್ನೆಲೆಯಲ್ಲಿ ಭರಣ ನನಗೆ ಕಂಡದ್ದು ಹೀಗೆ:**

ನಿರಂತರ ಅಧ್ಯಯನಶೀಲ. ಅದ್ಭುತ ಕನಸುಗಾರ. ಅಪೂರ್ವ ಚಿತ್ರಕಥಾ ಸಾಮರ್ಥ್ಯವುಳ್ಳಾತ. ಚರ್ಚೆಯೇ ಇರಲಿ, ಚಿತ್ರಕಥೆಯ ಸಂದರ್ಭವೇ ಇರಲಿ, ಏಕಾಗ್ರತೆಯಲ್ಲಿ ಏಕಲವ್ಯ. ಕಿವಿಗೆ ಬಿದ್ದದ್ದನ್ನೆಲ್ಲ ಮಿದುಳಿನ ಮೂಸೆಯಲ್ಲಿಟ್ಟು, ಅಸದೃಶ ದೃಶ್ಯವೊಂದನ್ನು ಕಡೆದಿಡುವ ಶಿಲ್ಪಿ. ನಾಟಕ ಇಲ್ಲವೇ ಚಿತ್ರ ನಿರ್ಮಾಣದ ಪ್ರತಿ ಹಂತದಲ್ಲೂ ಒಬ್ಬ ಶಿಸ್ತಿನ ಸಿಪಾಯಿ. ಪ್ರತಿ ಹಂತದ ಕೆಲಸದಲ್ಲೂ ರಂಗಭೂಮಿಯ ಒಬ್ಬ ನಿಷ್ಠಾವಂತ ಕುಶಲಕರ್ಮಿ. ನಾಡಿನ ವಿವಿಧೆಡೆಯ ಪ್ರತಿಭಾವಂತರ ಸಖ್ಯ ಗಳಿಸಿದ ಸಂಘಜೀವಿ. ಸಂದರ್ಭಾನುಸಾರ ಈ 'ಸಖಸಂಕುಲ'ದೊಂದಿಗೆ ದುಡಿಯುವ ಪ್ರಾಮಾಣಿಕ ಶ್ರಮಜೀವಿ. ಕೆಲವಂ ಬಲ್ಲವರಿಂದ ಕೆಲವಂ ಕಲ್ತು... ಎಂಬ ಮಾತಿಗೆ ಭರಣ ಶ್ರೇಷ್ಠ ಉದಾಹರಣೆ. ಆತ ಹಲವರ ಗರಡಿಯಲ್ಲಿ ಪಳಗಿದ ಪಟ್ಟುಗಾರ. ಅಯ್ಯರ್‌ರ ಛಲ, ಕಾರ್ನಾಡರ ಶಿಸ್ತು, ಕಾರಂತರ ಕುಸುರಿ ಕೆಲಸಗಳ ಮೂರ್ತ ರೂಪ ಭರಣ. ಕಥೆಗೆ ಕೂತುಕೊಂಡಾಗ ಭರಣ ಮಾಡುವ ಏರ್ಪಾಡುಗಳೆಲ್ಲ ಕರಾರುವಾಕ್ಕು. ಕೂತವರು ಯಾವುದಕ್ಕೂ ಮೇಲೆ ಎದ್ದಿರಬಾರದು, ಬಯಸಿದ್ದೆಲ್ಲ ಕೈಗೆಟಕುವಂಥ ವ್ಯವಸ್ಥೆ. ಭರಣನ ಸಮಯ ಪ್ರಜ್ಞೆ, ಪ್ರಸಂಗಾವಧಾನಗಳು ಅಚ್ಚರಿ ಮೂಡಿಸುವಂಥವು. ಕಲಾತ್ಮಕ ಅಂಶವುಳ್ಳ ಚಿತ್ರವಾದರೆ ಆತ ವಹಿಸುವ ಲಕ್ಷ್ಯವೇ ಬೇರೆ. ಅಲ್ಲಿ ಸದಭಿರುಚಿಗೆ ಪ್ರಾಧಾನ್ಯ. ಆಗೆಲ್ಲ ಸಿ. ಅಶ್ವಥ್‌ರದೇ ಸಂಗೀತವಾಗಬೇಕು. ಅಶ್ವಥ್ ಕಂಪೋಸಿಂಗಿನ ಧಾಟಿಯೇ ಬೇರೆ. ಅದಕ್ಕೆ ತಕ್ಕ ವಾತಾವರಣ ಸೃಷ್ಟಿಸಿಬಿಡುತ್ತಾನೆ ಭರಣ. ಕಮರ್ಷಿಯಲ್ ಮಾದರಿಯ ಚಿತ್ರಗಳಾದರೆ ಅಲ್ಲಿ ಭರಣನ ಮಸಾಲೆಗಳೇ ಬೇರೆ.

ಕೆಲವರಿಗೆ ಕಲೆ ಸಿದ್ಧಿಸಿರುತ್ತದೆ, ಕೆಲವರಿಗೆ ವ್ಯವಹಾರ ಸಾಧಿಸಿರುತ್ತದೆ. ಭರಣನಿಗೆ 'ಕಲಾ ವ್ಯವಹಾರ', 'ವ್ಯವಹಾರ ಕಲೆ' ಎರಡೂ ಕರಗತ. ನಾಗಾಭರಣ ಅಲ್ಲಿ ಸಂದಂತೆ ಇಲ್ಲಿಯೂ ಸಲ್ಲುತ್ತಾನೆ. ಅದಕ್ಕೇ ಆತ ವ್ಯಾವಹಾರಿಕನಾಗಿ ಸದಾ ಗೆಲ್ಲುತ್ತಾನೆ.

ಭರಣ ಪ್ರಯೋಗಶೀಲ. ಪ್ರಯೋಗ ಎಂದ ಮೇಲೆ ಸೋಲು-ಗೆಲುವು ಇರುವಂಥದೇ. ಸುಖ-ದುಃಖಗಳನ್ನು ಸಮಾನವಾಗಿ ನೋಡಬೇಕಂತೆ. ಭರಣನದು ಅಂಥ ಮನಸ್ಸತ್ವ. ಭರಣ ಮಾಡಿದ ಚಿತ್ರಗಳೆಲ್ಲವೂ ಗೆದ್ದಿವೆ ಎಂದಲ್ಲ. ಬಿದ್ದರೂ ಅದಕ್ಕೇನು ಕಾರಣ ಎಂಬುದನ್ನಾತ ಯೋಚಿಸದೇ ಇಲ್ಲ. ಗ್ರಹಣದಿಂದ ಚಿಗುರಿದ ಕನಸಿನವರೆಗಿನ ತನ್ನ ಚಿತ್ರಯಾನದಲ್ಲಿ ಭರಣ ಹಲವು ಅಪೂರ್ವಗಳನ್ನು ಅಚ್ಚರಿಗಳನ್ನು ನೀಡಿದ್ದಂತೂ ನಿರ್ವಿವಾದ.

ಈಗ ಭರಣನಿಗೆ ಐವತ್ತು ತುಂಬಿತು. ಆತನೊಂದಿಗೆ ನನ್ನ ಗೆಳೆತನಕ್ಕೆ ಈಗ ಮೂವತ್ತು ತುಂಬಿತು. ಈ ಗೆಳೆಯನ ಮುಂದಿನ ಪ್ರತಿ ಹೆಜ್ಜೆಯೂ ಒಂದೊಂದು ಮೈಲಿಗಲ್ಲಾಗಲಿ. ಚಿತ್ರಾಭರಣ ಮಿತ್ರಾಭರಣ ಶತಾಯುಷಿಯಾಗಲಿ. ಶುಭಾಶಯಗಳು.

❑ ❖ ❑ ❖ ❑



# ವಿನಯ, ಭರಣನ ಆಭರಣ

ಬಿ.ಆರ್. ಲಕ್ಷ್ಮಣ ರಾವ್

ಭರಣ ಅತ್ಯಂತ ಸ್ನೇಹಶೀಲ ವ್ಯಕ್ತಿ. ಹೀಗಾಗಿ ಅವನ ಆತ್ಮೀಯ ಮಿತ್ರರ ಬಳಗ ತುಂಬ ದೊಡ್ಡದು. ಅದರಲ್ಲಿ ನಾನೂ ಒಬ್ಬನೆಂಬುದು ನನ್ನ ಹೆಮ್ಮೆ. ಭರಣನೊಂದಿಗೆ ನನಗೆ ಏಕವಚನದ ಸಲಿಗೆ.

ಭರಣನ ವಯಸ್ಸಿಗೆ ಅವನ ಸಾಧನೆಗಳು ನಿಜಕ್ಕೂ ದೊಡ್ಡವು. ಯಾರಿಗೇ ಆದರೂ ತಲೆ ತಿರುಗಿಸುವಂಥವು. ಆದರೆ ನಾನು ಕಂಡಂತೆ ಭರಣನ ನಡವಳಿಕೆಯಲ್ಲಿ ಠೇಂಕಾರದ ಲವಲೇಶವೂ ಇಲ್ಲ. ವಿನಯ ಭರಣನ ಆಭರಣ, ಅವನ ಜನಪ್ರೀತಿಯ ಗುಟ್ಟು.

ಭರಣ ನನಗೆ ಮೊಖ್ತಾ ಪರಿಚಯವಾದದ್ದು ಸಿ. ಅಶ್ವತ್ಥ್ ಅವರ ಮೂಲಕ. ಆ ವೇಳೆಗೆ ನಾನು ಭರಣ ನಿರ್ದೇಶಿಸಿದ, ನಟಿಸಿದ ನಾಟಕಗಳನ್ನು ಹಾಗೂ ಚಲನಚಿತ್ರಗಳನ್ನು ನೋಡಿ ಮೆಚ್ಚಿದ್ದೆ. ನಂತರ ಬಹು ಬೇಗ ನಮ್ಮ ಗೆಳೆತನ ಭದ್ರವಾಗಿ ಬೇರೂರಿತು. ಭರಣ ನನಗೆ ಆಪ್ತನಾದದ್ದು ಅವನ ಸದಭಿರುಚಿ ಮತ್ತು ಸಾಹಿತ್ಯಾಸಕ್ತಿಯ ಕಾರಣವಾಗಿ. ಕನ್ನಡದ ಉತ್ತಮ ನಾಟಕಗಳನ್ನು ರಂಗಕ್ಕೆ ಹಾಗೂ ಸಾಹಿತ್ಯ ಕೃತಿಗಳನ್ನು ಚಲನಚಿತ್ರಕ್ಕೆ ತರುವುದರಲ್ಲಿ ಭರಣ ವಹಿಸಿದ ಪಾತ್ರ ಸರ್ವವಿದಿತ.

ಭರಣ ಕನ್ನಡದ ಖ್ಯಾತ ಕವಿಗಳ ರಚನೆಗಳನ್ನು ತನ್ನ ಚಲನಚಿತ್ರಗಳಲ್ಲಿ ಹಾಗೂ ಕಿರುತೆರೆಯ ಧಾರಾವಾಹಿಗಳಲ್ಲಿ ಮೊದಲಿಂದಲೂ ಬಳಸುತ್ತ ಬಂದವನು. ನಾನು ಚಲನಚಿತ್ರಗಳಿಗೆ ಗೀತೆಗಳನ್ನು ರಚಿಸಿದ್ದು ತೀರಾ ವಿರಳ. ಕಾರಣ, ಸಿದ್ಧ ರಾಗಕ್ಕೆ ಗೀತೆ ರಚಿಸುವುದು ನನಗೆ ತುಂಬಾ ಪ್ರಯಾಸದ ಕೆಲಸ. ಆದರೂ ಭರಣನ ಸ್ನೇಹದ ಹಕ್ಕೊತ್ತಾಯಕ್ಕೆ ಮಣಿದು ಅವನ ನಿರ್ದೇಶನದ ಕೆಲವು ಚಲನಚಿತ್ರಗಳಿಗೆ ನಾನು ಗೀತೆಗಳನ್ನು ರಚಿಸಿದ್ದಿದೆ. ದುರ್ದೈವದ ಸಂಗತಿಯೆಂದರೆ, ಹೀಗೆ ನಾನು ಗೀತೆ ರಚಿಸಿದ ಅವನ ಬಹುತೇಕ ಚಿತ್ರಗಳು ಅಪೂರ್ಣವಾಗಿ ನಿಂತವು. ಉದಾ: 'ಶುಭಕಾಲ ಬರುತ್ತೈತೆ', 'ದಳವಾಯಿ ಮುದ್ದಣ್ಣ'. ಆದರೆ ಅವನ ಕಿರುತೆರೆಯ ಧಾರಾವಾಹಿಗಳಿಗಾಗಿ ನಾನು ರಚಿಸಿದ ಶೀರ್ಷಿಕೆ ಗೀತೆಗಳು (ಉದಾ: 'ಗೆಳತಿ', 'ಜೀವನ್ಮುಖಿ') ತುಂಬಾ ಜನಪ್ರಿಯವಾದವು. ನನ್ನ ಗೀತೆಗಳನ್ನು ಹಾಗೂ ಹನಿಗವನಗಳನ್ನು ಬಳಸಿಕೊಂಡು, ಒಂದು ಚಲನಚಿತ್ರವನ್ನು ನಿರ್ಮಿಸುವ ಉದ್ದೇಶ ಭರಣನಿಗಿತ್ತು. ಇದಕ್ಕಾಗಿ ಸಾಕಷ್ಟು ಸಿದ್ಧತೆಯೂ ನಡೆಯಿತು. ಆದರೆ ಅದೂ ಸಹ ಅಂತಿಮವಾಗಿ ಕೈಗೂಡಲಿಲ್ಲ. ಹಾಗೆಂದು ನನಗೆ ವಿಷಾದವೇನಿಲ್ಲ. ಭರಣನ ಒಡನಾಟದಲ್ಲಿ ನಾನಾಗ ಕಳೆದ ಸಮಯ ಅತ್ಯಂತ ಸಂತೋಷದಾಯಕವಾಗಿತ್ತು, ಸೃಜನಶೀಲವಾಗಿತ್ತು. ಅಂಥ ಸಾರ್ಥಕ ಗಳಿಗೆಗಳು ನನಗೆ ಇನ್ನಷ್ಟು ಒದಗಿ ಬರಲಿ ಎಂಬುದು ನನ್ನ ಆಸೆ.

ಭರಣ ತನ್ನ ಜೀವಮಾನದ ಅರ್ಧ ಶತಕವನ್ನು ಅತ್ಯಂತ ಸಾರ್ಥಕವಾಗಿ ಪೂರೈಸುತ್ತಿರುವ ಈ ಸುಸಂದರ್ಭದಲ್ಲಿ ಅವನಿಗೆ ನನ್ನ ಹಾರ್ದಿಕ ಅಭಿನಂದನೆ, ಶುಭ ಕಾಮನೆ. ತುಂಬು ಜೀವನ ಅವನದ್ದಾಗಲಿ; ಇನ್ನೂ ಎತ್ತರದ ಸಾಧನೆಗಳು ಅವನಿಗೆ ಕೈಗೂಡಲಿ; ಕನ್ನಡದ ಸಾಂಸ್ಕೃತಿಕ ರಂಗ ಅವನ ಅನನ್ಯ ಕೊಡುಗೆಗಳಿಂದ ಮತ್ತಷ್ಟು ಶ್ರೀಮಂತಗೊಳ್ಳಲಿ; ಹಾಗೆಯೇ, ನಮ್ಮನಡುವಿನ ಗೆಳೆತನ ಸದಾ ಹಸಿರುಟ್ಟು, ಹೂ ತೊಟ್ಟು, ಹಣ್ಣುಗಳ ತೂಗಲಿ ಎಂಬುವುದು ನನ್ನ ಹೃತ್ಪೂರ್ವಕ ಹಾರೈಕೆ.

❑ ❖ ❑ ❖ ❑



# ಹೊಸತನದ ಹರಿಕಾರ ಟಿ.ಎಸ್. ನಾಗಾಭರಣ

ಎ.ಎಸ್. ಮೂರ್ತಿ

'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ಗಾದೆ ಮಾತನ್ನು ನಿಜ ಮಾಡಿರುವವರು ನಾಗಾಭರಣ. ರಂಗಭೂಮಿಗೆ ಅಡಿ ಇಟ್ಟ ಮೊದಲ ದಿನಗಳಿಂದ ನಾಗಾಭರಣರನ್ನು ನಾನು ಬಲ್ಲೆ. ಯಾವುದೇ ಪಾತ್ರವಾಗಲಿ, ಸೆಟ್ ವರ್ಕ್ ಆಗಲಿ ಅವರ ಪಾಲಿಗೆ ದಕ್ಕಿದಾಗ ಆ ಜವಾಬ್ದಾರಿ ಯಶಸ್ವಿಯಾಗಿ ನಿರ್ವಹಿಸಲು ಅವರು ವಹಿಸುತ್ತಿದ್ದ ಶ್ರಮ ಮತ್ತು ಉತ್ಸಾಹ ಕಂಡು ಇಂದಲ್ಲ ನಾಳೆ ಗೌರಿಶಂಕರದೆತ್ತರ ಬೆಳೆಯಬಲ್ಲ ದೈತ್ಯ ಪ್ರತಿಭೆ ಈತನದು ಎಂದುಕೊಳ್ಳುತ್ತಿದ್ದೆ. ಆ ಮಾತು ಇಂದು ನಿಜವಾಗಿರುವುದು ನನಗಂತೂ ತುಂಬ ಹೆಮ್ಮೆ.

ನಾಗಾಭರಣರಿಗೆ 50 ವರುಷ ಎಂದು ನೆನಪಿಸಿದಾಗ 'ಹೌದೆ' ಎನ್ನುವಂತಾಯಿತೇ ಹೊರತು - ಅವರ ಬಿಜಿ ಷೆಡ್ಯೂಲ್‌ಗಳು, ಕಾರ್ಯಕ್ರಮದ ವೇಳಾಪಟ್ಟಿ, ಸಿನಿಮಾ ಷೂಟಿಂಗ್, ಎಡಿಟಿಂಗ್, ಹಾಡು ಹಬ್ಬ, ನಾಟಕಗಳ ರಿಪೀಟ್ ಷೋಗಳಲ್ಲಿ ಅವರು ತೋರುತ್ತಿದ್ದ ಅಪರಿಮಿತ ಉತ್ಸಾಹ ಕಂಡಾಗ - ಅವರ ಯೌವನಕ್ಕೆ ಮುಪ್ಪು ಬಾರದು ಎನಿಸಿದ್ದು ನಿಜ.

ರಂಗಭೂಮಿ ಅವರ ಬದುಕಿನ ಉಸಿರು. ಅವರ ವ್ಯಕ್ತಿತ್ವ ಅರಳಿದ್ದು ನಾಟಕದಿಂದ. ಜನಕ್ಕೆ ಅವರು ಪ್ರಿಯವಾದದ್ದು ನಾಟಕಾಭಿನಯದಿಂದ - ಹಾಡು - ಕುಣಿತಗಳಿಂದ. ನಟನಾಗಿ ರಂಗದ ಮೇಲೆ ಮಿಂಚಿದ ನಂತರ - ನಿರ್ದೇಶಕನಾಗುವ ಆಸೆ ಚಿಗುರಿತು. ಸಾಹಿತ್ಯ ಕೃತಿಯೊಂದನ್ನು ತನ್ನ ಕಲ್ಪನೆಗನುಗುಣವಾಗಿ ರಂಗಕ್ಕೆ ತರಬಯಸುವ ಹಂಬಲ ನಿರಂತರ ಕಾಡಿದಾಗ ಅವರು ನಿರ್ದೇಶಿಸಿದ ಮೊದಲ ನಾಟಕ ಎಂ.ಎಸ್.ಕೆ. ಪ್ರಭು ಅವರ 'ಬರ'.

ಅವರ ಪಾಲಿನ ನಿಜವಾದ ಮೇಸ್ಟರಾದ ರಂಗ ಭೀಷ್ಮ ಬಿ.ವಿ. ಕಾರಂತ್. ಅವರೊಂದಿಗಿನ ಓಡಾಟ ಭರಣರ ಅನುಭವ ಪಕ್ವವಾಗಲು ಕಾರಣವಾಯಿತು. ಮಾತ್ರವಲ್ಲ ಸರಿದಿಕ್ಕಿನಲ್ಲಿ ಮುನ್ನಡೆಯಲು ಕೈಮರವಾಯಿತು.

ಸಾಹಿತ್ಯ ವಲಯದಲ್ಲಿ ನವ್ಯದವರ ಹಾವಳಿಯೇ ಅತಿಯಾಗಿದ್ದಾಗ. ಹವ್ಯಾಸೀ ರಂಗಭೂಮಿಗೆ ಮಾಂತ್ರಿಕನಂತೆ ಬಂದು, ಕನ್ನಡ ರಂಗಭೂಮಿಯಲ್ಲೊಂದು ಸುವರ್ಣ ಅಧ್ಯಾಯವನ್ನೇ ಆರಂಭಿಸಿದ ಕಾರಂತ್ ಕಲಾಕ್ಷೇತ್ರದಲ್ಲಿ ನಾಟಕ ಮೊದಲಾದ ಜನ ಜಾತ್ರೆಯಂತೆ ಸೇರುವ ಸನ್ನಿವೇಶ ಕಲ್ಪಿಸಿದರು.

ಹಾಡು-ಕುಣಿತಗಳೂ ಕಾರಂತರ ನಾಟಕದ ಪ್ಲಸ್ ಪಾಯಿಂಟ್ ಆಗಿತ್ತು. ಆಗೆಲ್ಲ ನಾಗಾಭರಣ ಕಾರಂತರ ಗರಡಿಯ ವಸ್ತಾದಿ. ತಮಗಿಲ್ಲದ ಜನಪ್ರಿಯತೆ ಕಾರಂತರಿಗೆ ದಕ್ಕಿದ್ದಕ್ಕೆ ಕರುಬಿ ಖಾರ ಕಕ್ಕಿದವರು - 'ಮುಕ್ತ' ಪತ್ರಿಕೆಯೇ ಆರಂಭಿಸಿ - ಸಂಭ್ರಮಿಸಿದರು. ಗೇಲಿ - ವಿಡಂಬನೆಗಳಿಂದ ಕಾರಂತರನ್ನು ಲೇವಡಿ ಮಾಡಿ ಒಂದು ವಿಶೇಷ ಸಂಚಿಕೆಯೇ ತಂದರು.

ಅದ್ಯಾವುದಕ್ಕೂ ಪ್ರತಿಕ್ರಿಯಿಸುವ ಗೋಜಿಗೂ ಹೋಗದ ಕಾರಂತ್. ರಂಗಭೂಮಿಯ ಕಾಯಕಕ್ಕೆ ತಮ್ಮ ನಿಷ್ಠೆ ತೋರುತ್ತ ಬಂದರು.

ನವ್ಯ ಪ್ರಿಯರಿಗೆ ಮಕ್ಕಳ ರಂಗಭೂಮಿ ಬಗ್ಗೆ ಸ್ವಲ್ಪವೂ ಕಾಳಜಿ ಇರಲಿಲ್ಲ. ಆದರೆ ಕಾರಂತ್‌ಗೆ ಮಕ್ಕಳ ರಂಗಭೂಮಿ ಬಗ್ಗೆ ಅಪಾರ ಒಲವಿತ್ತು. ಬುದ್ಧಿಜೀವಿಗಳೊಂದಿಗೆ ಅವರ ಒಡನಾಟ ಹೆಚ್ಚು ಇದ್ದರೂ - ಮಕ್ಕಳ ರಂಗಭೂಮಿಗೆ ಸ್ಪಂದಿಸುವ ತುಡಿತವಿದ್ದೇ ಇತ್ತು. ಆ ಸಮಯದಲ್ಲಿ ಗೌರಿಸುಂದರ್ 'ರಂಗ ಪರಿಚಯ' ಎಂಬ ಸಂಸ್ಥೆ ಆರಂಭಿಸಿ ಮಕ್ಕಳ ನಾಟಕ ಆಡಿಸುವ ಪ್ರೀತಿ ತೋರಿದಾಗ ಬಿ.ವಿ. ಕಾರಂತ್ ಉತ್ಸುಕರಾಗಿ ಬಂದರು - ಜತೆಗೆ ನಾಗಾಭರಣರನ್ನೂ ಕರೆತಂದರು.

ನಾನು ಬರೆದ 'ಜಂಬೂ ಸವಾರಿ' ನಾಟಕದ ಕಥಾಹಂದರ ಕೇಳಿಯೇ ಪುಳಕಿತರಾದ ಕಾರಂತ್ "ಈ ಮಕ್ಕಳ ನಾಟಕಕ್ಕೆ ನನಗೆ 40-50 ಮಕ್ಕಳು, ಬೃಹದಾಕಾರದ ಆನೆ ಹಾಗೂ ರಂಗದ ಮೇಲೆ ರೀಪರುಗಳಲ್ಲಿ ಮನೆಯ ಆಕಾರ ಸಾಂಕೇತಿಕವಾಗಿ ಸೂಚಿಸುವ ಭರ್ಜರಿ ಸೆಟ್ ಬೇಕು" ಎಂದರು. ಮೇಸ್ಟರು ಆ ಮಾತು ಹೇಳಿದ ಮರುಘಳಿಗೆ ನಾಗಾಭರಣ ರಂಗ ಸಜ್ಜಿಕೆ ಹೊಣೆ ಹೊತ್ತರು.

ನಿತ್ಯ ಬಸವನಗುಡಿ ಹೆಚ್‌ಬಿ ಸಮಾಜದಲ್ಲಿ ಮಕ್ಕಳ ಜಾತ್ರೆ. ಕಾರಂತರೊಂದಿಗೆ ನಾಗಾಭರಣರೂ ಹಾಜರಿದ್ದು - ಬ್ಲಾಕಿಂಗ್, ಇಂಪ್ರೊವೈಸೇಷನ್ ಕಡೆ ಕಾರಂತರು ನಿಗಾ ವಹಿಸುತ್ತಿದುದನ್ನು ಗಮನಿಸಿದರು. ಫಿನಿಷ್ ಆದ ಸೀನ್ ಪಾಲೀಷ್ ಮಾಡುತ್ತಿದ್ದ ಕ್ರಮ ಸೂಕ್ಷ್ಮವಾಗಿ ವೀಕ್ಷಿಸುತ್ತಿದ್ದರು.

ಕಲಾಕ್ಷೇತ್ರದಲ್ಲಿ 'ಜಂಬೂ ಸವಾರಿ' ಮಕ್ಕಳ ನಾಟಕದ ಪೋಸ್ಟರ್ ತೂಗು ಹಾಕಿದಾಗ ಅದನ್ನೂ ಗೇಲಿ ಮಾಡಿದವರುಂಟು. ಒಂದೇ ದಿನ ಕಲಾಕ್ಷೇತ್ರದಲ್ಲಿ ಬೆಳಗಿನಿಂದ ಸಂಜೆವರೆಗೆ ಒಟ್ಟು 5 ಪ್ರದರ್ಶನಗಳಾದವು. ಬಿದಿರಿನಲ್ಲಿ ಮಾಡಿದ್ದ ಬೃಹದಾಕಾರದ ಆನೆ, ಭರಣರ ಸೆಟ್ ಜಾಣ್ಮೆ ಕಂಡು ಮಕ್ಕಳ ಹಿಂಡು ಕುಣಿದು ಕುಪ್ಪಳಿಸಿತು.

ಆಗಲೇ 'ಜಂಬೂ ಸವಾರಿ' ಸಿನಿಮಾ ಮಾಡುವ ಮಾತೂ ಬಂದದ್ದು. ನಿರ್ದೇಶಕ KSI ಸ್ವಾಮಿ (ರವೀ) "ನೀವೇ ಚಿತ್ರ ನಿರ್ದೇಶಿಸಿ ಕಾರಂತ್" ಎಂದರು. 'ಆಯಿತು' ಎಂದರು ಕಾರಂತರು.

ಆದರೆ ಕಾರಂತ್ ಬೇರೆ ನಾಟಕಗಳ ನಿರ್ದೇಶನದಲ್ಲಿ ಮಗ್ನರಾದುದರಿಂದ 'ಜಂಬೂ ಸವಾರಿ' ಮಾಡಲಾಗಲಿಲ್ಲ. ಆದರೆ ರವೀ ಆ ಚಿತ್ರ ನಿರ್ದೇಶಿಸಿ ಕೇಂದ್ರ ಪ್ರಶಸ್ತಿಯೂ ಗಳಿಸಿದರು.

ನಾಗಾಭರಣ ಇನ್ನೂ ಸಿನಿಮಾ ರಂಗಕ್ಕೆ ಕಾಲಿಟ್ಟಿರಲಿಲ್ಲ. ಇಲ್ಲವಾದಲ್ಲಿ 'ಜಂಬೂ ಸವಾರಿ' ನಾಗಾಭರಣ ಕೈಗೇ ರವಾನೆಯಾಗುತ್ತಿತ್ತೇನೋ.

ರಂಗಭೂಮಿಯಲ್ಲಿ ದುಡಿಯುತ್ತಿದ್ದ ಕಲಾವಿದರಿಗೆ - ಆಗ ಸಿನಿಮಾ ಎಂದರೆ ಒಂದು ರೀತಿ ನಿರಾಸಕ್ತಿಯಿದ್ದುದರಿಂದ - ಎಟುಕದ ದ್ರಾಕ್ಷಿ ಹುಳಿ ಎಂಬ ಕಾರಣಕ್ಕೋ ಏನೋ - ಚಿತ್ರ ನಟ-ನಟಿಯರನ್ನ - ನಿರ್ಮಾಪಕರನ್ನ - ನಿರ್ದೇಶಕರನ್ನ ಗೇಲಿ ಮಾಡುವುದೂ ಒಂದು ಫ್ಯಾಷನ್ ಆಗಿತ್ತು.



ಯಾವುದಾದರೂ ನಾಟಕ 20ನೇ ಪ್ರದರ್ಶನ ಎಂದು ಪ್ರಚಾರ ಮಾಡಿದರೆ - "ಓಹೊ! ಇನ್ನೊಂದು ಬಂಗಾರದ ಮನುಷ್ಯ" ಎನ್ನುತ್ತಿದ್ದರು.

ತಮಾಷೆ ಎಂದರೆ ಅಂದು ಸಿನಿಮಾದವರನ್ನು ಗೇಲಿ ಮಾಡುತ್ತಿದ್ದ ಲಂಕೇಶ್, ಟಿ.ಎನ್. ಸೀತಾರಾಮ್, ಮೋಹನರಾಂ, ಹಾಸಾಕೃ, ಆರ್. ನಾಗೇಶ್ ಮುಂತಾದವರೆಲ್ಲ ಕ್ರಮೇಣ ಸಿನಿಮಾ - ಟೀವಿಗಳತ್ತ ಒಂದಲ್ಲ ಒಂದು ರೀತಿ ವಾಲಿದ್ದನ್ನು ತಾವೆಲ್ಲ ಬಲ್ಲಿರಿ.

ಈಗಂತೂ ಮೆಗಾ ಧಾರವಾಹಿಗಳ ಚುಯಿಂಗಮ್ ಎಳೆತ ಅತಿಯಾಗಿ ರಿಹರ್ಸಲ್ ಇಲ್ಲದೆ ರಿಪೀಟ್ ಷೋಗಳಾಗುತ್ತಿರುವುದನ್ನು ನೀವು ಕಂಡಿದ್ದೀರಿ.

ನಾಗಾಭರಣ ಎಂದೂ ಇಂಥ ಟೀಕೆ-ಟಿಪ್ಪಣಿಗಳಿಗೆ ಬಲಿಯಾಗಲಿಲ್ಲ. ರಂಗಭೂಮಿ ಬೇರೆ - ಸಿನಿಮಾ ಬೇರೆ. ಈ ಎರಡೂ ಮಾಧ್ಯಮಗಳ ಸುವರ್ಣ ಸೇತುವೆಯಾಗಿ ನಾಳೆ ಏನಾದರೂ ಮಹತ್ತರವಾದುದನ್ನು ಮಾಡಬೇಕೆಂಬ ಅಂತರ್ಯದ ಆಸೆ ಹುದುಗಿಟ್ಟುಕೊಂಡೇ ಎಲ್ಲೆಡೆ ಕಲಿಕೆಗೆ ಮುಂದಾದರು.

ನಿರ್ಮಾಪಕ - ನಿರ್ದೇಶಕ ಗೌರಿಸುಂದರ್ 'ಸಂದರ್ಭ' ಚಿತ್ರ ಪ್ರಾರಂಭಿಸಿದಾಗ ನಾಗಾಭರಣ ಸಹಾಯಕರಾಗಿ ಬಂದರು. ಜೆಮಿನಿ ಗಣೇಶನ್, ಕಲ್ಪನಾ, ಗೀತಪ್ರಿಯ, ಭಾರತಿ ವಿಷ್ಣುವರ್ಧನ್ ಮುಂತಾದವರೆಲ್ಲಾ ಅಭಿನಯಿಸಿದ ಆ ಚಿತ್ರದ ಮೂಲಕವೂ ಚಿತ್ರರಂಗದ 'ಓನಾಮ' ಅರಿತರು.

ರಂಗಭೂಮಿಯನ್ನು ಮರೆಯದೆ 'ನೀಗಿಕೊಡ ಸಂಸ' ದಂಥ ನಾಟಕದಲ್ಲಿ 'ಸಂಸ'ರ ಪಾತ್ರ ವಹಿಸಿ ತಾನೊಬ್ಬ ಪ್ರತಿಭಾವಂತ ನಟ ಎಂಬುದನ್ನು ತೋರಿಸಿಕೊಂಡರು. ನಿರ್ದೇಶಕ ಸಿ.ಜಿ.ಕೆ. ನಾಟಕವೊಂದು ವಿಷುಯಲ್ ಗ್ರಾಂಜರ್ ಎಂಬುದನ್ನೂ ತೋರಿಸಿಕೊಟ್ಟರು. ಈವರೆವಿಗೆ ಅವರು ಅಭಿನಯಿಸಿರುವ ನಾಟಕಗಳ ಮೊತ್ತ ಒಂದು ಸಾವಿರಕ್ಕೂ ಜಾಸ್ತಿ.

ಜಾನಪದ ನಾಟಕವಾದ ಸಂಗ್ಯಾ ಬಾಳ್ಯ ಭರಣರ ಗ್ರೆಸ್‌ಫುಲ್ ಕುಣಿತಕ್ಕೊಂದು ಸ್ಯಾಂಪಲ್ ಆದರೆ, ಜೋಕುಮಾರ ಸ್ವಾಮಿ, ಹಯವದನ, ಕತ್ತಲ ಬೆಳಕು ಅವರ ನಟನಾ ಪ್ರತಿಭೆಗೆ ಸಾಕ್ಷಿ ಎನಿಸಿವೆ.

'ಬೆನಕ' ಸಂಸ್ಥೆ ಕಾರಂತರ ಕೂಸು. ಇದೀಗ ಆ ಕೂಸಿನ ಹೊಗೆ ಹೊತ್ತು ನಾಗಾಭರಣ 300 ಕ್ಕೂ ಹೆಚ್ಚು ಬಾರಿ ಸತ್ತವರ ನೆರಳು ಅಭಿನಯಿಸಿ ತಮ್ಮ ಗುರು ಕಾರಂತರ ಹೆಸರು ಸದಾ ಹಸಿರಾಗಿರುವಂತೆ ನೋಡಿಕೊಂಡಿದ್ದಾರೆ.

ರಂಗಭೂಮಿಯ ಆಸ್ತಿ ಎನ್ನಬಹುದಾದ ನಾಗಾಭರಣ ಸಿನಿಮಾದತ್ತ ವಾಲಿದ್ದು ನನಗೇನೂ ಅಚ್ಚರಿ ಎನಿಸಲಿಲ್ಲ.

ರಂಗಭೂಮಿಯಲ್ಲಿದ್ದುಕೊಂಡೇ ಇಲ್ಲಿನ ಪ್ರತಿಭಾವಂತರನ್ನು ನಾಳೆ ಹಿರಿತೆರೆ ಕಿರುತೆರೆಯಲ್ಲಿ ಪರಿಚಯಿಸುವುದು ಹೇಗೆ ಎಂದು ಚಿಂತಿಸುತ್ತ - ಕಾರಂತ್, ಕಾರ್ನಾಡರ ಸಿನಿಮಾಗಳಲ್ಲಿ ದುಡಿಯುತ್ತ - ಸಿನಿ ಮಾಧ್ಯಮದ ವಿಶೇಷಗಳನ್ನೂ, ಸೂಕ್ಷ್ಮಗಳನ್ನೂ ಅಧ್ಯಯನ ಮಾಡುತ್ತಾ - ಒಳ್ಳೆ ಮುಹೂರ್ತದಲ್ಲಿ 'ಗ್ರಹಣ' ಚಿತ್ರ ನಿರ್ದೇಶಿಸಿ ಹೆಸರಾದರು.

ಈವರೆಗೆ ಏಳು ನ್ಯಾಷನಲ್ ಅವಾರ್ಡ್, ಹದಿನಾಲ್ಕು ಬಾರಿ ಸ್ಟೇಜ್ ಅವಾರ್ಡ್ ಪಡೆದು ಪ್ರಶಸ್ತಿ ವಿಜೇತ ನಿರ್ದೇಶಕ ಎಂದೇ ಜನಪ್ರಿಯರಾಗಿದ್ದಾರೆ. ಅವರ ಯಶಸ್ಸಿನ ಗರಿಗೆ 30 ಚಿತ್ರಗಳಿವೆ. ನಾಗಾಭರಣ ಯಾವುದಾದರೊಂದು ಚಿತ್ರ ಮಾಡುತ್ತಾರೆ ಎಂದರೆ ಅದಕ್ಕೆ ಪ್ರಶಸ್ತಿ ಬಂದೀತು ಎಂಬುದು ಇಂದಿಗೂ ಗಾಂಧೀನಗರದ ಮಾತಿಗಿದೆ.

ಚಿತ್ರರಂಗದಲ್ಲಿ ಅವರು ನಿರ್ದೇಶಿಸಿದ "ಜನುಮದ ಜೋಡಿ" ಬೊಂಬಾಟ್ ಸಕ್ಸಸ್ ಗಳಿಸಿ ದಾಖಲೆ ಮಾಡಿತು.

ಅವರ ಚಿತ್ರಗಳಲ್ಲಿ ಅಶ್ಲೀಲಕ್ಕೆ ಎಡೆ ಇಲ್ಲ ಎಂಬುದನ್ನು ಎಲ್ಲ ಬಲ್ಲರು. ಡಬ್ಬಲ್ ಮೀನಿಂಗ್ ಅವರಿಗಾಗದು ಎಂಬುದೊಂದು ದೊಡ್ಡ ಸಮಾಧಾನ. ಲಕ್ಷಾಂತರ - ಕೋಟ್ಯಾಂತರ ಹಾಕಿ ಚಿತ್ರ ನಿರ್ಮಿಸುವುದರ ಹಿಂದಿನ ನೋವೇನಿರಬಹುದು ಎಂಬುದನ್ನೂ ಭರಣ ಬಲ್ಲರು.

ಆದರೂ ಇಂಥ ಚಿತ್ರ ಗೆಲ್ಲುತ್ತದೆ - ಇಂಥ ಚಿತ್ರ ಸೋಲುತ್ತದೆ ಎಂದು ಭಾಷ್ಯ ಬರೆಯಬಲ್ಲ ಭೂಪತಿ ಯಾರೂ ಇನ್ನು ಹುಟ್ಟಿಲ್ಲವಾಗಿ - ಚಿತ್ರ ಬಿಡುಗಡೆಯಾದ ದಿನ ಎಲ್ಲ ಹೆರಿಗೆ ನೋವು ಅನುಭವಿಸಬೇಕಾದದ್ದು ಅನಿವಾರ್ಯ.

ಚಿತ್ರರಂಗ ಒಂದು ರೀತಿ ಹಾವು ಏಣಿ ಆಟವಿದ್ದಂತೆ. ಗೆದ್ದೆನೆಂದು ಬೀಗಿ 'ನನ್ನಯ ಸಮಾನರಾರಿಹರಿಲ್ಲಿ' ಎಂದು ಗಾಂಧೀನಗರದಲ್ಲಿ ಮೀಸೆ ತಿರುವಿದವರು ಮತ್ತೊಂದು ಚಿತ್ರ ಬಿಡುಗಡೆಯಾದಾಗ ಕೇರಾಫ್ ಫುಟ್‌ಪಾತಾಗಿ - ಮಕಾಡೆ ಮಲಗಿರುವುದನ್ನೂ ಚಿತ್ರ ರಸಿಕರು ಬಲ್ಲರು.

ಇಂಥ ಅನೇಕ ನೋವುಗಳನ್ನು ನುಂಗಿ ನಗುನಗುತ್ತಿರುವ ನಿರ್ದೇಶಕ ನಾಗಾಭರಣ.

ಏನಾಯಿತು 'ನೀಲ', 'ಸಿಂಗಾರವ್ವ', 'ಚಿಗುರಿದ ಕನಸು'.

ಇಂಥವು ಗೆಲ್ಲದಿರಲು ಕಾರಣ ಹಿಂಸೆಯನ್ನು ವಿಜೃಂಭಿಸುತ್ತಿರುವ ಹಾಗೂ ಭೋಗದ ವಾಕರಿಕೆ ತರಿಸುವಂಥ ಚಿತ್ರಗಳು ಹೆಚ್ಚುತ್ತಿರುವುದೂ ಕಾರಣ. ಚಿತ್ರ ಗೆಲ್ಲಲಿ - ಬಿಡಲಿ ತಮಗೊಂದು ಸಾಮಾಜಿಕ ಜವಾಬ್ದಾರಿ ಇದೆ ಎಂಬುದನ್ನೇ ಬಲ್ಲವರು ಭರಣ.

ಅಂತ ಚಿಂತನೆಗಳಿದ್ದುದರಿಂದಲೇ ಆರ್.ಕೆ. ನಾರಾಯಣ್ ಕೃತಿ ಆಧಾರಿತ 'ಬ್ಯಾಂಕರ್ ಮಾರ್ಗಯ್ಯ' ತೆರೆಗಿತ್ತದ್ದು. ಸಾಹಿತ್ಯದ ಬಗೆಗಿನ ಅಪಾರ ಒಲವಿನ ಪರಿಣಾಮವಾಗಿ 'ಸಂತ ಶಿಶುನಾಳ ಷರೀಫ' ತೆರೆಗೆ ಬಂತು.

ಷರೀಫರ ಗೀತೆಗಳು ಕ್ಯಾಸೆಟ್ ಆಗಿ ಜನಪ್ರಿಯವಾಗಿರಬಹುದು. ಸುಗಮ ಸಂಗೀತ ಗಾಯಕರನೇಕರು ಆ ಹಾಡುಗಳನ್ನೇ ನಿರಂತರ ಹಾಡುತ್ತ ಬಂದಿರಬಹುದು. ಆದರೆ



ಪಡ್ಡೆ-ಹುಡುಗ-ಹುಡುಗಿಯರು ಮೋಟು ಬಟ್ಟೆ ಧರಿಸಿ - ಇಂಗ್ಲೀಷ್ - ಕನ್ನಡದ ಕಲಸು ಮೇಲೋಗರದ ಗೀತೆಗಳನ್ನೇ ಕನ್ನಡ ಚಿತ್ರಗೀತೆಗಳೆಂದು ಕನ್ನಡಮ್ಮ ಅಡಿದಾವರೆಗೆ ಅರ್ಪಿಸುತ್ತಿರುವಾಗ ಶಿಶುನಾಳ ಷರೀಫರನ್ನು ಕುರಿತ ಸದಭಿರುಚಿ ಚಿತ್ರ ನೀಡಿದರೆಂಬ ಹಿರಿಮೆಗಾಗಿಯಾದರೂ ಅವರ ಸೇವೆ ಸಾರ್ಥಕ ಎನ್ನಲೇಬೇಕು.

ತಾವು ಪ್ರೀತಿಸಿದ ಕವನಗಳ ಮೂಲಕ ಕವಿಗೆ ಕೋಡು ಮೂಡಿಸುವ ಮನ ಬಂದಾಗ ಕೆ.ಎಸ್. ನರಸಿಂಹಸ್ವಾಮಿಗಳ ಬಿಡಿ ಕವನಗಳನ್ನೇ ಪೋಣಿಸಿ ಒಂದು ಸುಂದರ ಹಾರ ಮಾಡಿ 'ಮೈಸೂರು ಮಲ್ಲಿಗೆ' ತೆರೆಗಿತ್ತದ್ದು ಕಡಿಮೆ ಸಾಧನೆ ಏನಲ್ಲ.

ಯಾರು ಎಂಥದೇ ಮಹತ್ಕಾರ್ಯ ಮಾಡಿದರೂ - ಟೀಕೆ - ಕುಟೀಕೆಗಳು ಇದ್ದದ್ದೆ. ಹೀಗಾಗಿ ಆ ಚಿತ್ರದ ಬಗ್ಗೆ ಮಿಶ್ರ ಪ್ರತಿಕ್ರಿಯೆಗಳು ಬಂದದ್ದು ನಿಜ. ಮುಂದೆ ಯಾರೇ ಇತಿಹಾಸ ಬರೆಯ ಕೂತರೂ "ಮೈಸೂರು ಮಲ್ಲಿಗೆ" ಮರೆಯುವುದು ಸಾಧ್ಯವೇ ಇಲ್ಲ.

ಗಿರೀಶ್ ಕಾರ್ನಾಡರ 'ನಾಗ ಮಂಡಲ'ದ ಬಗೆಗೂ ಭಿನ್ನಾಭಿಪ್ರಾಯಗಳಿರಬಹುದು. ಆದರೆ ಸದ್ದಿಲ್ಲದೆ ಬಂದು ಗುರುತಿಲ್ಲದೆ ಹೋಗುವ ಚಿತ್ರಗಳ ಸಾಲಿಗಂತೂ ಭರಣರ ಚಿತ್ರಗಳು ಸೇರುವುದಿಲ್ಲ.

'ಆಸ್ಫೋಟ', 'ಅನ್ವೇಷಣೆ', 'ಬಂಗಾರದ ಜಿಂಕೆ', 'ವಿಮೋಚನೆ', 'ಪ್ರೇಮಾಗ್ನಿ', 'ಪ್ರಾಯ ಪ್ರಾಯ ಪ್ರಾಯ' ಹೀಗೆ ಹೆಸರುಗಳನ್ನೇ ಗಮನಿಸಿದರೂ ಕತೆಯ ಆಯ್ಕೆಯಲ್ಲಿ ವೈವಿಧ್ಯ ಕಾಣಬಹುದು. ರೀಮೇಕ್ ಹಾಗೂ ಡಬ್ಬಿಂಗ್ ಚಿತ್ರಗಳ ಬಗ್ಗೆ ಅವರಿಗೆ ಒಲುವಿಲ್ಲದಿರುವುದರಿಂದಾಗಿಯೇ ಸ್ವಮೇಕ್‌ಗಳು ಹೆಚ್ಚಿಗೆ ಬಂದಿವೆ.

ಇಷ್ಟೆಲ್ಲ ಕೆಲಸ ಕಾರ್ಯಗಳ ನಡುವೆಯೂ ನಾಟಕವೆಂದಾಗ ಅವರ ಮೊಗದಲ್ಲಿ ಉತ್ಸಾಹ ಮಿನುಗುತ್ತದೆ. ಅಭಿನಯ ತರಂಗ ಭಾನುವಾರದ ನಾಟಕ ಶಾಲೆ 1981 ರಲ್ಲಿ ಆರಂಭ ಮಾಡಿದ ಅಂದಿನಿಂದ ಇಂದಿನವರೆಗೆ ಬೆನಕದ ಚಂದ್ರಕುಮಾರ್ ಸಿಂಗ್ - ನಾಗಾಭರಣ ನಮ್ಮೊಂದಿಗಿದ್ದು ಬೆನ್ನು ತಟ್ಟಿದ್ದಾರೆ - ಪಾಠ ಮಾಡಿದ್ದಾರೆ. ಮಕ್ಕಳ ಬಗೆಗೂ ಅದೇ ಪ್ರೀತಿ ತೋರುತ್ತ ಬಿಂಬ ಮಕ್ಕಳ ನಾಟಕಗಳಾದಾಗ ಬಂದು 'ನಾವಿದ್ದೇವೆ ನಿಮ್ಮೊಂದಿಗೆ' ಎಂಬುದನ್ನು ತೋರಿದ್ದಾರೆ.

ನಾಗಾಭರಣ ರಂಗಭೂಮಿ ಹಾಗೂ ಸಿನಿಮಾದಲ್ಲಿ ಮಾಡುವುದು ಬಹಳಷ್ಟಿದೆ. ಗೆಳೆಯ ಭರಣ ಎಂಥ ಸವಾಲನ್ನೂ ಸ್ವೀಕರಿಸಬಲ್ಲ ಜಾಣ.

50 ಹರೆಯದ ಯುವಕನಿಗೆ ನನ್ನ ಪ್ರೀತಿಯ ಹಾರೈಕೆಗಳು.

❑ ❖ ❑ ❖ ❑

# ನಿರಂತರ ಶ್ರಮಜೀವಿ, ಪ್ರತಿಭಾ ಸಂಪನ್ನ ನಮ್ಮ ನಾಗಾಭರಣ

ಪ್ರೊ॥ ದೊಡ್ಡರಂಗೇಗೌಡ

ಆಗ ಎಪ್ಪತ್ತರ ದಶಕ. ಒಬ್ಬ ಯುವಕ. ಅವನಿಗೆ ಸದಾ ನಾಡಕದ ಗೀಳು. ಅವನ ಹತ್ತಿರ ಆತ್ಮೀಯವಾಗಿ ಮಾತಾಡಿದವರಿಗೆ ಖಂಡಿತಾ ಗೊತ್ತಾಗುತ್ತಿತ್ತು. ಅವನ ಮಹತ್ವಾಕಾಂಕ್ಷಿ ಹಂಬಲು. ಅದು ಬೇರೇನೂ ಅಲ್ಲ.. ಮತ್ಯಾವುದೂ ಅಲ್ಲವೇ ಅಲ್ಲ. ನಿರ್ದೇಶನದ ಅಪೂರ್ವ ಕನಸಿನ ಮಜಲು. ಮೂವತ್ತು ವರ್ಷಗಳ ನಂತರ ಈಗ ಗೊತ್ತಾಗುತ್ತಿದೆ. ಈತ ಅಂದುಕೊಂಡದ್ದನ್ನೆಲ್ಲಾ ಮಾಡಿದ ಸಾಧಕ, ಅಂತ!

ತನ್ನ ಕನಸನ್ನು ನನಸು ಮಾಡಿದ ಮಹನೀಯ-ನನ್ನ ಅಕ್ಕರೆಯ ಗೆಳೆಯ: ಭರಣ ತುಡಿಯುತ್ತದೆ ಹಗಲೂ ಇರುಳೂ ಕಲೆಗಾಗಿ ಅವನ ಹರಣ.

ನಮ್ಮೆಲ್ಲರ ನಡುವಿನ ಪಾದರಸ ಈ ಮಿತ್ರ. ಸದಾ ಅವನಿಗೆ ನೇಪಥ್ಯದ ಕೆಲಸ ಕಾರ್ಯ ಜೀವಂತ ಪಾತ್ರ. ಒಂದು ವೇಳೆ ಹೊರೆವ ಕೆಲಸವಾದರೂ ಸರಿ... ಶ್ರದ್ಧಾವಂತ! ಅದು ಅವನ ಗುಣ. ಜಾಣ. ಕಾರಂತರ ಹತ್ತಿರ ಪಳಗಿದ ಜಾಣಾಕ್ಷ ಗಿರೀಶ್ ಕಾರ್ನಾಡರ ನಿರಂತರ ಸಂಪರ್ಕ ಪಡೆದ ಸ್ನೇಹಜೀವಿ. ಗುರು ಜಿ.ವಿ. ಐಯ್ಯರ್ ಹತ್ತಿರವೂ ಕೆಲಸ ಕಲಿತ ಧೀಮಂತ ಕಲೆ, ಸಾಹಿತ್ಯ, ನಟನೆ, ಯೋಜನೆ, ಕಾರ್ಯಾಚರಣೆ, ಎಲ್ಲದರ ಸಂಗಮ, ನಮ್ಮ ಭರಣ. ದುಡಿಮೆಯೇ ಅವರ ಪಲ್ಲವಿ, ತೊಡಗಿಸುಕೊಳ್ಳುವಿಕೆಯೇ ಅವನ ಚರಣ.

"ಜೋಕುಮಾರ ಸ್ವಾಮಿ" ನಾಟಕದಲ್ಲಿ ನಾನು ಮೇಳದಲ್ಲಿ ಹಿನ್ನೆಲೆ ಹಾಡುಗಾರ. ಅವನು ಬಂದೂಕು ಹೊರುವ, ಗೌಡನ ಭಂಟ.. "ಸ್ವಾಮಿ ನಮ್ಮಯ ದೇವರು, ಢಂ ಢಂ ಅವನ ಹೆಸರು". ಅಂಥ ಸಣ್ಣ ಪಾತ್ರವನ್ನೂ ಆತ ಶ್ರದ್ಧೆಯಿಂದಲೇ ಮಾಡಿದ್ದ. ನಾಟಕದಲ್ಲಿ ಅವನಿಗೆ ಹೆಚ್ಚು ಮಾತೇ ಇಲ್ಲ. ಆದರೂ ಅಂಥ ಪಾತ್ರದಲ್ಲಿ ಅನನ್ಯವಾಗಿಯೇ ಮಿಂಚುತ್ತಿದ್ದ. ಅದು ಅವನು ರಂಗಭೂಮಿಗೆ, ಕಲೆಗೆ ತೊಡಗಿಸಿಕೊಂಡ ರೀತಿ. ಅಲ್ಲಿ ಪ್ರತಿಭೆ, ನಿಷ್ಠೆ, ಪರಿಶ್ರಮ, ಕಲಿಕೆ, ಅಚ್ಚುಕಟ್ಟಾದ ಅಭಿವ್ಯಕ್ತಿ, ಶಿಸ್ತು, ಎಲ್ಲಕ್ಕೂ ಆದ್ಯತೆಯೇ. ಅದೇ ತಾನೆ ಕಲಾವಿದನ ಜೀವನ ರೂಪಣ-ವ್ಯಕ್ತಿತ್ವ!

ಯಾವುದೇ ನಿರ್ದೇಶಕನಿಗೆ ಉತ್ತಮ ಕಲಾಕೃತಿ ನಿರ್ಮಾಣ ಮಾಡಲು "ಕಾಣ್ಕೆ" (vision) ಬೇಕಾಗುತ್ತದೆ. ಅದಿಲ್ಲದೆ ಹೋದರೆ ಸಾಧಾರಣವಾದ ಕೃತಿಗಳ ನಿರ್ಮಾಣವಾಗುತ್ತದೆಯೇ ಹೊರತು ಉತ್ತಮ ಸೃಜನೆಯು ನಾಡಿಗೆ ಫಲಿತವಾಗುವುದಿಲ್ಲ.

ಭರಣನಲ್ಲಿ ಮೂಲತಃ ಶ್ರಮಿಕಗುಣವಿದೆ. ಇತ್ಯಾತ್ಮಕ ಹೊಳಹಿನ ದೊಡ್ಡ ಭಂಡಾರವಿದೆ. ಇದರ ಜೊತೆಗೆ ಆತ ರಂಗಭೂಮಿಯ ನಿರಂತರವಾದ ತೊಡಗಿಸಿಕೊಳ್ಳುವಿಕೆಯಿಂದ ದಕ್ಕಿಸಿಕೊಂಡ "ವ್ಯುತ್ಪತ್ತಿ" ಗುಣವಿದೆ. (ಪೂರ್ವಸೂರಿಗಳ ಅಧ್ಯಯನದ ನಿಷ್ಠೆ) ಹೀಗಾಗಿ ಭರಣನಲ್ಲಿರುವ ಕಲ್ಪನಾ ರೆಕ್ಕೆ ಗರಿಗೆದರಲು ಅವನ ಸೃಜನಶೀಲತೆ ಇಂಬಾಗಿ "ಅನ್ವೇಷಣೆ"ಯಂಥ, "ಜನುಮದ ಜೋಡಿ"ಯಂಥ, "ವಿಮೋಚನೆ"ಯಂಥ, "ಚಿಗುರಿದ ಕನಸು"ವಿನಂಥ ಕಲಾತ್ಮಕ ಚಿತ್ರಗಳ ಕೊಡುಗೆ ನಾಡಿಗೆ ಸಾಧ್ಯವಾಗಿದೆ.



ನಿರ್ದೇಶಕ ಭರಣ ಕೇವಲ ಬೌದ್ಧಿಕ ಪ್ರಪಂಚದ ಕಲಾ ಸ್ವತ್ತು. ಅಷ್ಟೇ ಅಲ್ಲ, ಜನಪ್ರಿಯತೆಯ ರಂಗು ಗುಂಗು, ಆ ಬಗೆಯ ಜಾಣತನದ ಪಾಂಗು ಎಲ್ಲವೂ ಇದೆ. ಉದಾಹರಣೆಗೆ 'ಪ್ರಾಯ! ಪ್ರಾಯ!! ಪ್ರಾಯ!!!' ಚಿತ್ರವನ್ನೇ ನೀವು ನೋಡಬಹುದು. ಉದ್ಯಮದ ಯಶಸ್ಸಿನ ಸೂತ್ರಗಳನ್ನು ಜಾಚೂತಪ್ಪದೆ ಭರಣ ಅಳವಡಿಸಿದ್ದಾನೆ. ಹೀಗಾಗಿ ಭರಣ ನಿರ್ದೇಶಕನಾಗಿ "ಗಲ್ಲಾಪೆಟ್ಟಿಗೆ" ತುಂಬಿಸುವಲ್ಲಿ ಭರ್ಜರಿಯಾಗೇ ಗೆದ್ದಿದ್ದಾನೆ. ಮಹಾಕಾವ್ಯದ ಅಷ್ಟಾದಶ ಸೂತ್ರಗಳಂತೆ ಅವನಲ್ಲೂ ಯಶಸ್ವೀ ಚಿತ್ರದ ಇತ್ಯಾತ್ಮಕ ಸತ್ಯಾನ್ವಯಗಳು ಖಂಡಿತಾ ಇವೆ.

ನಾಗಾಭರಣ ಹಾಡಿನ ಚಿತ್ರೀಕರಣದಲ್ಲಿ ಎತ್ತಿದ ಕೈ. ಗೀತೆಗಳ ಅಳವಡಿಕೆಗೆ ಅವನದೇ ಆದ ತಂತ್ರವಿದೆ. ಅದು ಶುದ್ಧ ಭಾವನಾತ್ಮಕವಾದದ್ದು. ಸಾಹಿತ್ಯಪ್ರಿಯಭರಣ ಕವಿಗೆ ಅವರ ಕವಿತೆಗೆ ಅದರ ಆಸಯಕ್ಕೆ ನ್ಯಾಯವನ್ನು ದೊರಕಿಸಿಕೊಡುತ್ತಾನೆ. ನಾನು ಮೆಚ್ಚಿಕೊಂಡ ಗೀತೆಗಳ ಚಿತ್ರೀಕರಣ.

'ಕೋಲುಮಂಡೆ ಜಂಗಮ ದೇವರು
ಕ್ವಾರಣ್ಯಕೆ ದಯಮಾಡವ್ರೇ...'
(ಜನುಮದ ಜೋಡಿ)

* * * * *

ನಿನ್ನ ಕಣ್ನಾಗೆ ಪ್ರೀತಿ ಕೂಗಿದೆ
(ಪ್ರೇಮ ಯುದ್ಧ)

ಒಲುಮೆ ಸಿರಿಯ ಕಂಡು
ಬಯಕೆ ಸಿಹಿಯ ಉಂಡು
ಪ್ರೀತಿ ಮಾತಾಡಿದೆ
(ಬಂಗಾರದ ಜಿಂಕೆ)

ಭೂಮಿತಾಯಾಣೆ ನೀನಿಷ್ಟಾ ಕಣೇ
ಯಾಕೋ ಏನೋ ನಾನು ನಿನ್ನಾ ಮೆಚ್ಚಿದೆ
(ಪ್ರಾಯ! ಪ್ರಾಯ! ಪ್ರಾಯ!)

ಮಾನವ ಜಾತಿಯ ಎಂದೂ ಒಂದೇ!
(ವಿಮೋಚನೆ)

ಈಳಿದೆ ಬದುಕಿನ ಕಡಲಲಿ..

(ನೆನಪಿನ ದೋಣಿ)

ಭರಣ ಹಾಡಿಗೆ ಒಂದು ಸೂಕ್ತ ಪರಿಸರ ನಿರ್ಮಿಸುವ ರೀತಿಯೇ ಚೆನ್ನ. ಹಿನ್ನೆಲೆ ಮನೋಜ್ಞವಾಗಿರುತ್ತದೆ. ಸಂದರ್ಭಕ್ಕೆ ಅನುಗುಣವಾಗಿರುತ್ತದೆ. ಅತ್ಯಂತ ಸೂಕ್ತ ಅನ್ನಿಸುವ ಹಾಗೆ-ಅವನ ಆಯ್ಕೆ ಏಕ ಕಾಲಕ್ಕೆ ಭಾವೋದ್ದೀಪಕವಾಗುತ್ತದೆ, ಕಲಾತ್ಮಕತೆಗೆ ಪೂರಕವಾಗಿರುತ್ತದೆ.

ಭರಣನೊಳಗೆ ಒಬ್ಬ "ಹಳ್ಳಿಮುಕ್ಕ" ಇದ್ದಾನೆ. ಅವನ ಮನಸ್ಸನ್ನು ಸಂತೋಷ ಪರಿಸಲು ಅವನ ಅಭಿರುಚಿಗೆ ತಕ್ಕ ಹಾಗೆ ಸ್ಪಂದಿಸುತ್ತಾನೆ.

ಉದಾಹರಣೆಗೆ "ಜನುಮದ ಜೋಡಿ"ಯ ಆರತಿ ಅಣ್ಣಮ್ಮಂಗೆ ಆರತಿ ಮಾರಮ್ಮಂಗೆ" ಹಾಡಿನ ಚಿತ್ರೀಕರಣ ಶೈಲಿ ಸಂಪೂರ್ಣ ದೇಸೀಯವಾಗಿದೆ. ಅಲ್ಲಿ ಭರಣ ನೂರಕ್ಕೆ ನೂರುಪಟ್ಟು ಇದ್ದಾನೆ.

ಅದೇ ರೀತಿ "ಪ್ರಾಯ! ಪ್ರಾಯ! ಪ್ರಾಯ"ದಲ್ಲಿ

"ಥೈಯ ಥಕ್ಕ! ಥೈಯ ಥಕ್ಕ
ಕಾಲೇಜಿಗೆ ಬಂದ ನಮ್ಮ ಹಳ್ಳಿಮುಕ್ಕ"

ಅಲ್ಲಿಯ ರಾಗಿರೊಟ್ಟಿ, ಉಚ್ಚೆಳ್ಳು ಚಟ್ನಿ -ಪ್ರಿಯ ತನ್ನ ಜೀವಂತ ಅನುಭವದ ಸವಿನೆನಪನ್ನು ಆ ಗ್ರಾಮೀಣಗುಂಗನ್ನು ಸಹೃದಯ ರಸಿಕ ಪ್ರೇಕ್ಷಕನಿಗೂ ಉಣಬಡಿಸಲು ಭರಣ ಅಂಥ ಪ್ರಸಂಗಗಳನ್ನೇ ಹೆಚ್ಚು ಹೆಚ್ಚಾಗಿ ಚಿತ್ರಗಳಲ್ಲಿ ಅಳವಡಿಸಿ ಆ ಸನ್ನಿವೇಶವನ್ನು ಪುನರ್ ಸೃಷ್ಟಿಸುತ್ತಾನೆ.

ಭರಣ ನನ್ನಂಥ ಗೆಳೆಯರ ಜೊತೆ ಎಷ್ಟು ಆತ್ಮೀಯವಾಗಿ ಬೆರೆಯುತ್ತಾನೆ ಎಂದರೆ ಅವನಲ್ಲಿ ಒಬ್ಬ ಸ್ನೇಹಜೀವಿ ಸದಾ ಇದ್ದೇ ಇದ್ದಾನೆ. ನಾನು, ವ್ಯಾಸ, ರುದ್ರಮೂರ್ತಿ, ಅಶ್ವತ್ಥ್, ಕಪ್ಪಣ್ಣ, ನೀಲು, ಲಕ್ಷ್ಮಣ, ಹೀಗೆ ನಮ್ಮ ಗೆಳೆಯರ ಬಳಗದಲ್ಲಿ ಅವನು ಎಲ್ಲರಂತೆ ಗೆಳೆಯ ಸಹೃದಯ. ಹರಟೆಪ್ರಿಯ. ಹೊಂದಿಕೊಂಡು ಹೋಗುವ ಸ್ವಭಾವ ಅವನಲ್ಲಿದೆ ಅದೇ "ಬಾಳಪಯಣ"ದ ನಿಜಗುಟ್ಟು...

ನಿರ್ದೇಶಕ ಭರಣನಲ್ಲಿರುವ ಕೆಲವು ಗೆಲುವಿನ ಗುಟ್ಟುಗಳು, ನಾನು ಗ್ರಹಿಸಿದಂತೆ,

1. ದುಂಬಿಯಂತೆ ನಿರಂತರ ದುಡಿಮೆ.
2. ಸಂಘಟನಾ ಶಕ್ತಿ; ಕೆಲಸವನ್ನು ವಿಕೇಂದ್ರೀಕರಣ ಮಾಡುವ ಕಲೆ.
3. ನಿರ್ಮಾಪಕರನ್ನು ಅರಿತು ಚಿತ್ರ ನಿರ್ಮಿಸುವ ಪರಿ.
   (ಹಾಸಿಗೆ ಇದ್ದಷ್ಟು ಕಾಲ ಚಾಚುವ ಒಳ್ಳೆಯ ಗುಣ)
4. ಕಥೆಯ ಆಯ್ಕೆಗೆ ಆತ ಹುಡುಕಾಡುವ ರೀತಿಯಂತೂ ಒಬ್ಬ ಅಪ್ಪಟ ಸಂಶೋಧಕನ ಬಗೆಯದೇ!
5. ತಂತ್ರಜ್ಞರ ಆಯ್ಕೆಯಲ್ಲಿ ತೋರುವ ಸದಭಿರುಚಿ



6. ಕಲಾವಿದರನ್ನು ಅವರ ಪ್ರತಿಭೆಯನ್ನು ಬಳಸಿಕೊಳ್ಳುವ ಜಾಣತನ.
7. ತಾನು ಸಾಧಿಸಬೇಕಾಗಿರುವ ಕಾರ್ಯ. ಅದು ಕೈಗೂಡಿಬರುವ ತನಕ ಕಾರ್ಯ ಸಂಯಮ.
8. ಹೊಸಬರನ್ನು ಪ್ರೋತ್ಸಾಹಿಸುವ, ಪೋಷಿಸುವ, ಅವರ ವ್ಯಕ್ತಿತ್ವ ಪಲ್ಲಿಸುವ ಹಾಗೆ ಮಾಡುವಲ್ಲಿ ತೆಗೆದುಕೊಳ್ಳುವ ಅಪೂರ್ವ ಆಸಕ್ತಿ.

ಹೀಗೆ ಹಲವು ಹನ್ನೊಂದು ಒಳ್ಳೆಯ ಗುಣಗಳು ಅವನಲ್ಲಿ ಇವೆ. ಅವನನ್ನು ಮುನ್ನಡೆಸಿವೆ.

ಚಿತ್ರಗಳ ಸಾಲು ಸಾಲು ನಿರ್ಮಿಸಿದ ಪ್ರತಿಭಾವಂತ ನಿರ್ದೇಶಕ ಟಿ.ಎಸ್. ನಾಗಾಭರಣನಲ್ಲಿ ಒಬ್ಬ ಆರ್ದ್ರ ಸೃಜನಶೀಲ ಇದ್ದಾನೆ. ಆತ ಯಾವಾಗಲೂ "ಸಾಹಿತ್ಯ-ಜೇನು" ಸವಿಯುತ್ತಾ ಒಳಿತು ಎಲ್ಲೆಲ್ಲಿ ಏನೇನು ಇದೆಯೋ ಅದೆಲ್ಲವನ್ನೂ ಸಂಚಯಿಸುತ್ತಾ ಆನಂದಿಸುತ್ತಾ ಅದನ್ನು ರಜತ ಪರದೆಯ ಮೇಲೆ ಕಾವ್ಯಾತ್ಮಕವಾಗಿ ಮೂಡಿಸುವುದು ಹೇಗೆಂದು ಚಿಂತಿಸುತ್ತಿರುತ್ತಾನೆ.

ಭರಣನಲ್ಲೊಂದು ಕಲಾರಾಧನೆಯ ಕಲಾಸೃಜನೆಯ ರಸಪಾಕವೇ ಹುದುಗಿದೆ. ಅವನಲ್ಲಿ ಎಂಥ ಕಲಾ ಜೌತಣದಡುಗೆ ಇದೆಯೆಂದರೆ, 'ಬಂಗಾರದ ಜಿಂಕೆ', 'ಪ್ರಾಯ ಪ್ರಾಯ ಪ್ರಾಯ', 'ಅನ್ವೇಷಣೆ', 'ಜನುಮದ ಜೋಡಿ' ಚಿತ್ರಗಳ ನೋಡಿದರೆ ಗೊತ್ತಾಗುತ್ತದೆ. ಒಟ್ಟಾರೆ ಭರಣನ ಚಿತ್ರಗಳನ್ನೆಲ್ಲಾ ನಾವು ಸಮಗ್ರವಾಗಿ ನೋಡುತ್ತಾ ಹೋದರೆ ಅಲ್ಲಿ ಒಬ್ಬ "ರಸಜ್ಞ ನಟನಾ ನಿಪುಣ" ಕೂಡ ಇದ್ದಾನೆ. ವೈವಿಧ್ಯಮಯವಾದ ಸೀತಿನಿಸಿನ ಹಾಗೆ ಅವನ ಒಂದೊಂದು ಬಗೆಬಗೆ ಚಿತ್ರಗಳ ತಿರುಳು. ಸಹೃದಯ ಪ್ರೇಕ್ಷಕರಿಗೆ ಯಾವತ್ತೂ ಅವನಿಂದ ಒಳ್ಳೆಯ ಕಲಾ ಭೋಜನವೇ ಸಿಗುತ್ತದೆ. ಇತ್ತೀಚಿನ ಭರಣನ "ಚಿಗುರಿದ ಕನಸು" ನೋಡಿದರೆ ಸಹೃದಯರಿಗೆ ನನ್ನ ಮಾತಿನ ಸತ್ಯ ಅರ್ಥವಾಗುತ್ತದೆ.

ಭರಣನ ಜೊತೆಯಲ್ಲಿ ನಾನು ಅನೇಕ ಮೆಗಾ ಧಾರಾವಾಹಿಗಳಿಗಾಗಿ ಕೆಲಸ ಮಾಡಿದ್ದೇನೆ. ಅಲ್ಲೆಲ್ಲಾ ಅವನ ಪಾಲ್ಗೊಳ್ಳುವಿಕೆ, ಲೇಖಕರನ್ನು ಬಳಸಿಕೊಳ್ಳುವ ರೀತಿ ಉಲ್ಲೇಖನೀಯ. ನನ್ನ ಹಾಡನ್ನು ಆತ ಚಿತ್ರಿಸಿರುವ ರೀತಿ ಅವಿಸ್ಮರಣೀಯ.

"ಹೇ...ಮೂಡಿ ಮುಳುಗೇಳ ನೇಸರಿನಾ ಜೊತೆಯಾಗೆ
ದಿನ ದಿನ ಕ್ಷಣ ಕ್ಷಣ
ಕಂಡೂಕಾಣದ್ಹಂಗೆ ನಡೆದೈತೋ... ಸಂಕ್ರಾಂತಿ
ಸಂಕ್ರಾಂತಿ....ಸಂಕ್ರಾಂತಿ...ಸಂಕ್ರಾಂತಿ"

ಆ ಧಾರಾವಾಹಿಯ ಆ ಗೀತೆಯ ಪ್ರತಿ ಚಿತ್ರಿಕೆ ಮಣ್ಣಿನ ವಾಸನೆಯಿಂದ ಕೂಡಿದೆ. ಗ್ರಾಮೀಣ ಗಂಧ ಗಾಳಿಯ ಸಂಸ್ಪರ್ಶ ಪಡೆದಿದೆ. ಅಪ್ಪಟ ಹಳ್ಳಿಸೊಗಡು ತುಂಬಿದೆ. ಬರೆದವನು ಏನು ಆಶಯವನ್ನು ಹೊಂದಿದ್ದನೋ ಅದನ್ನು ಯಶಸ್ವಿಯಾಗಿ ವಾಗರ್ಥದಿಂದ ಹಿಡಿದು ರಜತ ಪರದೆಯ ಮೇಲೆ ದೃಶ್ಯಕಾವ್ಯವಾಗಿ ಮೂಡಿಸುವಲ್ಲಿ ಭರಣನ ಅದ್ಭುತ ಪ್ರತಿಭೆಯೇ ಅಲ್ಲಿ ಅಭಿವ್ಯಕ್ತವಾಗಿದೆ. ಈ ಅರ್ಥದಲ್ಲಿ ಸತ್ಯಜಿತ್‌ರಾಯ್‌ನಂತೆ ನಮ್ಮ ನಲ್ಮೆಯ ಭರಣನೂ

ಸಹ "ಸೆಲ್ಯುಲಾಯ್ಡ್ ಪೊಯೆಟ್ರಿ" ನೀಡಬಲ್ಲ "ಗ್ರೇಟ್ ಡೈರೆಕ್ಟರ್"; "ಮಾಸ್ಟರ್ ಕ್ರಾಫ್ಟ್‌ಮನ್". ಆ ಸಿದ್ಧಿ ಅವನಿಗೆ ದಕ್ಕಿದೆ. ಕನ್ನಡ ಚಿತ್ರರಂಗದ ಅಪೂರ್ವ ಸಾಧಕರ ಪಟ್ಟಿಯಲ್ಲಿ ಪುಟ್ಟಣ್ಣ ಕಣಗಾಲರ ತರುವಾಯ ಅಂಥ ಅನನ್ಯ ಸ್ಥಾನವನ್ನೂ ನಮ್ಮ ಭರಣ ತುಂಬಿದ್ದಾನೆ.


ಕಲಾರಸದೂಟ ನೀಡಬೇಕಾದರೆ ನಿರ್ದೇಶಕನ ಕೈ ಪಳಗಿರಬೇಕಾಗುತ್ತದೆ. 'ಗ್ರಹಣ', 'ಬಂಗಾರದ ಜಿಂಕೆ', 'ಆಸ್ಫೋಟ', 'ಒಂಟಿಧ್ವನಿ', 'ಜನಮದ ಜೋಡಿ', 'ಅನ್ವೇಷಣೆ', 'ಮಕ್ಕಳಿರಲವ್ವ ಮನೆ ತುಂಬ', 'ಚಿಗುರಿದ ಕನಸು', 'ವಿಮೋಚನೆ' ಮುಂತಾದ ಚಿತ್ರಗಳನ್ನು ನೋಡಿದರೆ ಭರಣನಿಗೆ ಮನಸಾರೆ ವಂದಿಸಬೇಕೆಂದು ಅನ್ನಿಸುತ್ತದೆ. ಅವನ ಚಿತ್ರಗಳು ಕೇವಲ ಚಿತ್ರಗಳಲ್ಲ. ಕಲಾಕೃತಿಗಳು.


ಭರಣ ಇನ್ನೂ ಎತ್ತರಕ್ಕೆ ಬೆಳೆಯಬೇಕು. ಅದು ಅವನ ಒಬ್ಬ ಆತ್ಮೀಯ ಸ್ನೇಹಿತನಾಗಿ ನನ್ನ ಅಭಿಲಾಶೆ. ಅವನಿನ್ನೂ ಮಹತ್ವವಾದದ್ದನ್ನು ಸಾಧಿಸಬೇಕು. ಕಲಾಕ್ಷೇತ್ರದ "ಮ್ಯಾಗ್ನಓಪಸ್" ಆಗುವಂಥಾದ್ದನ್ನು ಅವನು ನಿರ್ದೇಶಿಸಬೇಕು.

ಅವನು ಈಗಾಗಲೇ ಕನ್ನಡ ಕವಿಗಳ ಕೆಲವು ಗೀತೆಗಳನ್ನು ಚೆನ್ನಾಗಿ ಚಿತ್ರೀಕರಿಸಿ ಶ್ರೇಷ್ಠವಾದ ಹೆಸರು ಸಂಪಾದಿಸಿದ್ದಾನೆ. ಅದೇ ರೀತಿ ನಮ್ಮ ಆಧುನಿಕ ಕನ್ನಡ ಕಾವ್ಯದ ಎಲ್ಲ ಪ್ರಾತಿನಿಧಿಕ ಗೀತೆಗಳನ್ನು ಅವನು ಚಿತ್ರೀಕರಿಸಿ ಕನ್ನಡಿಗರಿಗೆ ಚಿರಾತನ ಕಲಾತ್ಮಕ ಕೊಡುಗೆಯನ್ನು ನೀಡಬೇಕು. ಹಾಗಾಗಲು ಅವನು ನೂರುಕಾಲ ಬಾಳುವಂತಾಗಬೇಕು. ಬೆಳಗುವಂತಾಗಬೇಕು. ಆ ಮಹಾಮಾಯಿ ಜಗದೀಶ್ವರಿ ಅವನಿಗೆ ಸಂಪೂರ್ಣ ಕಲಾ ಚೈತನ್ಯವನ್ನು ಅನುಗ್ರಹಿಸುವಂತಾಗಲಿ.

❑ ❖ ❑ ❖ ❑








ಗೃಹಣ, ನೀಲಂ ಸಂಜೀವರೆಡ್ಡಿಯವರೊಂದಿಗೆ




ಸಿಂಗಾರವ್ವ - 2002







ಸಂತಶಿಷುನಾಳ ಷರೀಫ್ ರಾಷ್ಟ್ರ ಪ್ರಶಸ್ತಿ





ಸಂತಶಿಷುನಾಳ ಷರೀಫ್, ನರ್ಗೀಸ್‌ದತ್ - 2ನೇ ಬಾರಿ ಪ್ರಶಸ್ತಿ




[illegible]



[illegible]




ಪ್ಯಸೂರಮಟ್ಟಿಗೆ ರಾಮ್ಮ ಹಸ್ತಿ



ಪ್ಯಸೂರಮಟ್ಟಿಗ 25 ನಾರ ಓದಿದ ಕಂಡದ್ದು. [illegible]



ಚಿನ್ನಾರಿಮುತ್ತ ಪೆನೋರಮಾದಲ್ಲಿ ಪ್ರದರ್ಶನವಾದ ಸಂದರ್ಭ



ಸ್ಟೋನ್‌ಬಾಯ್ ಬಿಡುಗಡೆ ಸಮಾರಂಭ







ಮಾರಿಷಸ್ ಸ್ಟೋನ್ ಬಾಯ್ ಮಕ್ಕಳ ಚಿತ್ರ ಲಾಂಚಿಂಗ್ : ಮಾರಿಷಸ್ ಪ್ರಧಾನಿ ಜೊತೆ, ಅನಿರುಧ್ ಜಗನ್ನಾಥ್



ಬಿ.ಕೆ.ಸಿ., ಸುಬ್ಬಣ್ಣ ಪ್ರಶಸ್ತಿ ಪಡೆದ ಸಂದರ್ಭ



ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ




2003 ನವೆಂಬರ್ ರಾಜ್ಯೋತ್ಸವ ಪ್ರಸಸ್ತಿ, ಬಂಗಾರ ಪದಕ, ಶ್ರೀ ಎಸ್.ಎಂ.ಕೃಷ್ಣ
ನಾಗಾಭರಣ, ಶ್ರೀಮತಿರಾಣಿ ಸತೀಶ್





ನೀಲಾ ರಾಜ್ಯ ಪ್ರಶಸ್ತಿ ಕಾಗೋಡು ತಿಮ್ಮಪ್ಪ



ಬಾಲಗಂಗಾಧರ ಸ್ವಾಮಿಗಳಿಂದ ಸನ್ಮಾನ, 2002



ತರಂಗಿಣಿ ಬರ್ಕಲಿ ಪ್ರಶಸ್ತಿ ದ್ವಾರಕೀಶ್ ಅವರಿಂದ



ಇಂಡಿಯನ್ ಎಕ್ಸ್‌ಪ್ರೆಸ್ ಪ್ರಶಸ್ತಿ ನಾಗಾಭರಣರಿಗೆ



ತರಂಗಿಣಿ ಬರ್ಕಲಿ ಪ್ರಶಸ್ತಿ ಸುಮಲತಾ ಅವರಿಂದ



# ಗೆಳೆಯನಿಗೆ ಅಭಿನಂದನೆ

ಕೆ. ಚಂದ್ರಕುಮಾರ್ ಸಿಂಗ್ (ಚಿಂಕು ಸಿಂಗ್)

ಮುಗ್ಧತೆಯಿಂದ ರಂಗಭೂಮಿಯನ್ನು ಅಪ್ಪಿಕೊಂಡವರಲ್ಲಿ ನಾಗಾಭರಣ ಸಹ ಒಬ್ಬ. ಕಾಲೇಜಿನ 'ಉಲ್ಲಾಳ್ ಪಾರಿತೋಷಕ'ದ ಹಾಗೂ ನಾಟಕ ಅಕಾಡೆಮಿ ನಡೆಸಿದ ಶ್ರೀರಂಗ ಮತ್ತು ಬಿ.ವಿ. ಕಾರಂತರ ಮಾರ್ಗದರ್ಶನದಲ್ಲಿ ನಡೆದ ನಾಟಕ ಶಿಬಿರದಿಂದ ಪ್ರೇರಿತರಾಗಿ ರಂಗಭೂಮಿಯನ್ನು ಗಂಭೀರವಾಗಿ ತೆಗೆದುಕೊಂಡಾಗ ಹೆಚ್ಚಾಗಿ ಬ್ಯಾಕ್ ಸ್ಟೇಜ್‌ನಲ್ಲಿ ಹಲವಾರು ನಾಟಕಗಳಲ್ಲಿ ತನ್ನನ್ನು ತಾನೇ ತೊಡಗಿಸಿಕೊಂಡ ಸಮಯದಲ್ಲಿ 'ನೀವು 'ಶಕ ಶೈಲೂಷರು', (ಈಗಿನ ಬೆನಕ ತಂಡ) ಯಾರೂ ನಟರಲ್ಲ', ಎಂಬ ಕಾರಂತರ ಅಂದಿನ ಆ ಮಾತು ಭರಣನಿಗೆ ರಂಗಭೂಮಿಯಲ್ಲಿ ಒಬ್ಬ ಒಳ್ಳೆಯ ನಟ ಹಾಗೂ ಓರ್ವ ರಂಗಕರ್ಮಿಯಾಗಿ ರೂಪುಗೊಳ್ಳಲು ಪ್ರೇರೇಪಿಸಿತು.

ರಂಗಭೂಮಿಯಲ್ಲಿ ಭರಣ ಹಲವಾರು ತಂಡಗಳಿಗೆ ನಾಟಕಗಳನ್ನು ನಿರ್ದೇಶಿಸಿದ್ದರೂ ಸಹ ಅವನು ನಿರ್ದೇಶಕ ಎಂದು ಹೆಸರು ಮಾಡಿದ್ದಕ್ಕಿಂತ ಒಳ್ಳೆಯ ನಟನಾಗಿ ರೂಪುಗೊಂಡು ಹೆಸರು ಮಾಡಿದ ಎಂದರೆ ತಪ್ಪಾಗಲಾರದು. ನಾನು ಸಹ ಅವನ ನಿರ್ದೇಶನ ಸಾಮರ್ಥ್ಯಕ್ಕಿಂತ ಅವನ ನಟನಾ ಸಾಮರ್ಥ್ಯದಿಂದ ಭಾವುಕನಾಗಿದ್ದು ನಿಜ. ಅಲ್ಲದೆ, ಕ್ರಿಯಾಶೀಲತೆ/ಪ್ರಯೋಗಶೀಲತೆಯ ಜೊತೆಗೆ ಹೆಚ್ಚು ಪರಿಶ್ರಮ ವಹಿಸಿ ರಂಗಭೂಮಿಯಲ್ಲಿ ತನ್ನನ್ನು ತಾನು ಅವಿರತವಾಗಿ ತೊಡಗಿಸಿಕೊಂಡು ಯುವ ಹಾಗೂ ಇತರ ರಂಗಕರ್ಮಿಗಳಿಗೆ ಮಾದರಿಯಾಗಿ ಗಟ್ಟಿಯಾಗಿ ನೆಲೆಸಿರುವುದು ಗಮನಾರ್ಹ.

ಇನ್ನು ಭರಣನಲ್ಲಿ ಕಂಡು ಬರುವ ಮುಖ್ಯವಾದ ಗುಣವೆಂದರೆ ಪ್ರತಿಯೊಂದನ್ನು ಕಲಿಯುವ ಆಸಕ್ತಿ. ಇದೇ ಗುಣವನ್ನು ನಾವು ಬಿ.ವಿ. ಕಾರಂತರಲ್ಲಿ ಕಾಣಬಹುದು. ಕಾರಂತರನ್ನು ಅನುಸರಿಸಿದ ಅವರ ಶಿಷ್ಯ ಕೋಟಿಯಲ್ಲಿ ಭರಣ ಅಗ್ರಗಣ್ಯ ಎನ್ನಬಹುದು. ಭರಣ ಯಾವುದೇ ಕೆಲಸದಲ್ಲಿ ನಿರತನಾದನೆಂದರೆ ಅಲ್ಲಿ ಅಚ್ಚುಕಟ್ಟು ಕಾಣಬಹುದು. ಅದಕ್ಕೆ ಹಲವಾರು ನಿದರ್ಶನಗಳು ಹಾಗೂ ಉದಾಹರಣೆಗಳನ್ನು ಕೊಡಬಹುದು. ಕಾಲೇಜಿನ ದಿನಗಳಲ್ಲಿ ನಾನೂ ಅವನೂ ಕೆಲವು ಚುನಾವಣೆ ಸಮಯದಲ್ಲಿ ಪ್ರಚಾರ ಮಾಡಿದ್ದೂ ಉಂಟು. ಆಗ ಮೈಕಿನಲ್ಲಿ ಪ್ರಚಾರ ಮಾಡುವಲ್ಲಿ ಧ್ವನಿಯ ಏರಿಳಿತ ಕ್ರಿಯಾಶೀಲತೆ ಹಾಗೂ ಜನರನ್ನು ಆಕರ್ಷಿಸುತ್ತಿದ್ದುದು ನನಗೆ ಹೊಟ್ಟೆಕಿಚ್ಚನ್ನು ಉಂಟು ಮಾಡುತ್ತಿತ್ತು. ನಂತರ ಅವನು ಈಗಿನ ಬಾಲಭವನದಲ್ಲಿ ರಂಗಸ್ಥಳದ ಉಸ್ತುವಾರಿಯನ್ನು ದಿನದ ಸಂಬಳದ ಮೇಲೆ ಕೆಲಸ ನಿರ್ವಹಿಸುತ್ತಿದ್ದ ಸಮಯದಲ್ಲಿ ರಂಗಸ್ಥಳದ ಎಲ್ಲಾ ಆಗುಹೋಗುಗಳನ್ನು ಅತಿ ಮುತುವರ್ಜಿ ಹಾಗೂ ಕಾಳಜಿಯಿಂದ ನಿರ್ವಹಿಸಿ ಸಾಕಷ್ಟು ಕೆಲಸಗಳನ್ನು ನೋಡಿ ಕಲಿತಿರುವುದೂ ಇದೆ. ಅವನು ತುಂಬಾ ನಿಷ್ಠೆಯಿಂದ ಕೆಲಸವನ್ನು ಮಾಡುವಷ್ಟೇ ಗತ್ತಿನಿಂದ ಕೆಲಸ ನಿಭಾಯಿಸಿದ ಉದಾಹರಣೆಯೆಂದರೆ ಆದರ್ಶ ಫಿಲಂ

ಇನ್ಸ್ಟಿಟ್ಯೂಟಿನ ನಿರ್ದೇಶಕನಾಗಿ ಕೆಲಸ ಮಾಡಿದ ಸಮಯದಲ್ಲಿ ಚೂಟಿಯಿಂದ ನಿರ್ವಹಿಸುತ್ತಿದ್ದ ಕಾರ್ಯಪ್ರವೃತ್ತಿ ಸಾಕಷ್ಟು ಕ್ರಿಯಾತ್ಮಕವಾದ ಕಾರ್ಯಕ್ರಮಗಳನ್ನು ಹಾಕಿ ಇನ್ಸ್ಟಿಟ್ಯೂಟಿನ ವಿದ್ಯಾರ್ಥಿಗಳು ಹಾಗೂ ಸಂಸ್ಥೆಯ ಬೆಳವಣಿಗೆಗೆ ಕಾರಣ ಪುರುಷನಾದ.

ರಂಗಭೂಮಿಯಲ್ಲಿ ಹೆಚ್ಚಿನ ಕಲಾವಿದರು ನೌಕರಿಯಲ್ಲಿದ್ದು, ತಮ್ಮ ಬಿಡುವಿನ ಸಮಯದಲ್ಲಿ ನಾಟಕದಲ್ಲಿ ಅಭಿನಯಿಸುವುದು ಅಥವಾ ಇನ್ನಾವುದೇ ನಾಟಕದ ವಿಭಾಗದಲ್ಲಿ ಭಾಗವಹಿಸುವುದು ಸರ್ವೇಸಾಮಾನ್ಯ. ಆದರೆ, ಭರಣ ಬಾಲಭವನದ ಕೆಲಸವನ್ನು ತೊರೆದು ನಾಟಕದಲ್ಲಿ, ಸಿನಿಮಾದಲ್ಲಿ ತನ್ನನ್ನು ಪೂರ್ಣವಾಗಿ ತೊಡಗಿಸಿಕೊಂಡು ದೊಡ್ಡ ಸವಾಲು ಎದುರಿಸುತ್ತ ತನ್ನ ಜೀವನವನ್ನು ಕಲಾರಂಗದಲ್ಲಿ ಕಂಡುಕೊಂಡಿದ್ದು, ಅಚ್ಚರಿಯನ್ನುಂಟು ಮಾಡುತ್ತದೆ. ರಂಗಭೂಮಿ ಚಳುವಳಿಗೆ ತನ್ನ ಅಮೂಲ್ಯವಾದ ಕಾಣಿಕೆಯನ್ನು ನೀಡಿದ್ದಾರೆ. ಯಾವುದೇ ಕ್ಷೇತ್ರದಲ್ಲಿ ಆಳಕ್ಕೆ ಇಳಿಯದೇ, ರಿಸ್ಕನ್ನು ತೆಗೆದುಕೊಳ್ಳದೆ, ಈ ರೀತಿಯಾದ ಯಶಸ್ಸನ್ನು ಕಾಣಲು ಸಾಧ್ಯವಿಲ್ಲ ಎಂಬುದು ಸಾಬೀತು ಸಹ ಆಗಿದೆ, ಅಲ್ಲದೆ ಅನೇಕ ರಂಗಭೂಮಿ ಕಲಾವಿದರಿಗೆ ಮೂಗಿನ ಮೇಲೆ ಬೆರಳು ಇಡುವಂತಾಗಿದೆ.

ಈ ಮೇಲಿನ ಗುಣಗಳೊಂದಿಗೆ ಜಾಣತನ, ಚತುರತೆಯಿಂದ ಅವನು ಕೆಳ ಹಂತದಿಂದ (ಸಹಾಯಕ ನಿರ್ದೇಶನ ಇತ್ಯಾದಿ) ಇಂದು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಒಬ್ಬ ಸಮರ್ಥ ನಿರ್ದೇಶಕ ಹಾಗೂ ನಿರ್ಮಾಪಕನಾಗಿ ಮಿಂಚಿದ್ದು ಅಲ್ಲದೇ, ರಂಗಭೂಮಿ, ಸಿನಿಮಾದ ಆಗುಹೋಗುಗಳ ಬಗ್ಗೆ ಸ್ಪಷ್ಟವಾಗಿ ಮಾತನಾಡುವ ಕೆಲವೇ ಮಂದಿಗಳಲ್ಲಿ ಇವನೂ ಒಬ್ಬನಾಗಿ ನಮ್ಮೊಂದಿಗೆ ಇರುವುದು ನಮಗೆಲ್ಲಾ ಸಂತೋಷದ ವಿಷಯ.

ಚಲನಚಿತ್ರ ನಿರ್ದೇಶಕನಾಗಿ (ತನಗೆ 25 ವರ್ಷವಿದ್ದಾಗ) 'ಗ್ರಹಣ' ಚಿತ್ರಕ್ಕಾಗಿ ರಾಷ್ಟ್ರ ಪ್ರಶಸ್ತಿಯನ್ನು ಪಡೆದು ಕನ್ನಡ ಚಿತ್ರರಂಗದಲ್ಲಿ ಅತಿ ಸಣ್ಣ ವಯಸ್ಸಿನಲ್ಲಿ ಅತಿ ದೊಡ್ಡದಾದ ಪ್ರಶಸ್ತಿಯನ್ನು ಪಡೆದ ನಿರ್ದೇಶಕನೆಂಬ ಕೀರ್ತಿ ಅನೇಕರಿಗೆ ಅಚ್ಚರಿಯಿಂದ ಹುಬ್ಬೇರಿಸುವಂತೆ ಮಾಡಿದೆ. ಕರ್ನಾಟಕ ಹಾಗೂ ಕನ್ನಡ ಚಿತ್ರರಂಗಕ್ಕೆ ಹೆಸರನ್ನು ಸಹ ತಂದುಕೊಟ್ಟಿದ್ದಾನೆ.

ಒಂದು ಸಮೀಕ್ಷೆ ಪ್ರಕಾರ ರಂಗಭೂಮಿ, ಚಲನಚಿತ್ರ ಹಾಗೂ ಧಾರಾವಾಹಿಗಳಲ್ಲಿ ತನ್ನನ್ನು ತೊಡಗಿಸಿಕೊಂಡು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಹೆಚ್ಚಿಗೆ ಪ್ರಶಸ್ತಿಗಳನ್ನು ಪಡೆದವರಲ್ಲಿ ಅಗ್ರಗಣ್ಯನಾಗಿದ್ದಾನೆ.

ಸತತವಾಗಿ ಚಲನಚಿತ್ರ, ಧಾರಾವಾಹಿಗಳಲ್ಲಿ ಬಿಡುವಿಲ್ಲದೇ ಕೆಲಸ ನಿರ್ವಹಿಸುತ್ತಿದ್ದರೂ ಸಹ ರಂಗಭೂಮಿಯ ಕೆಲಸ ಮತ್ತು ನಾಟಕ ಪ್ರದರ್ಶನವೆಂದರೆ ತನ್ನೆಲ್ಲ ಕೆಲಸದ ಒತ್ತಡವನ್ನೂ ಪಕ್ಕಕ್ಕೆ ಇಟ್ಟು ರಂಗತಾಲೀಮಿಗೆ ಬಂದು ಹೊಸ ನಟರ, ಗಾಯಕರೊಂದಿಗೆ ಒಟ್ಟಿಗೆ ಕಲೆತು ಅವರಿಗೆ ಮಾರ್ಗದರ್ಶನ ಸಲಹೆಗಳನ್ನು ನೀಡುತ್ತಾ, ನಾಟಕ ಪ್ರದರ್ಶನ ಮುಗಿದು ಎಲ್ಲಾ ರಂಗ ಸಲಕರಣೆಗಳೂ ರಂಗಮಂದಿರದಿಂದ ನಿರ್ಗಮಿಸುವವರೆಗೂ ಎಲ್ಲಾ ಕಲಾವಿದರೂ ರಂಗ ಕಲಾವಿದರೂ ಹಾಗೂ ರಂಗ ಕರ್ಮಿಗಳೊಂದಿಗಿದ್ದು, ನಂತರವೇ ಮನೆಗೆ ತೆರಳುವುದು ಇದು ಅವನ ರಂಗಭೂಮಿಯ ಕಾಳಜಿ ಹಾಗೂ ಕಮಿಟ್‌ಮೆಂಟ್ ತೋರಿಸುತ್ತದೆ. ಇದು ಎಲ್ಲಾ ರಂಗಕರ್ಮಿಗಳಿಗೆ ಒಂದು ರೀತಿಯ ದಾರಿದೀಪ. ಕಲಾಮಾಧ್ಯಮದಲ್ಲಿ ಎಲ್ಲಾರೂ



ತಪ್ಪು ಮಾಡುವುದು ಸಹಜ. ಅದೇ ರೀತಿಯ ತಪ್ಪು ಮಾಡಿದಾಗ ಅದನ್ನು ಅರಿತು ಸರಿಪಡಿಸಿಕೊಳ್ಳುವ ಗುಣವನ್ನು ಅವನಲ್ಲಿ ನಾನು ಕಂಡಿದ್ದೇನೆ, ಹಾಗೂ ಮೌನವಾಗಿ ನನ್ನ ಮೆಚ್ಚುಗೆಯನ್ನು ಸೂಚಿಸಿ ಖುಷಿ ಪಟ್ಟಿದ್ದೇನೆ. ಈ ಮೇಲಿನ ಎಲ್ಲಾ ಗುಣಗಳಿಂದ ಅವನು ರಂಗಭೂಮಿ, ಚಲನಚಿತ್ರ ಕ್ಷೇತ್ರದಲ್ಲಿ ದಾಪುಗಾಲು ಹಾಕಿ ಮುನ್ನುಗ್ಗಲು ಸಹಕಾರಿಯಾಗಿದೆ. ಹಾಗೂ ಅವನ ಗ್ರಹಣಶಕ್ತಿ, ಸ್ಮರಣಶಕ್ತಿ ಮತ್ತು ಏಕಾಗ್ರತೆ ಅದ್ಭುತವಾದದ್ದು.

ಬದುಕಿನಲ್ಲಿ ಐವತ್ತನೆಯ ವರ್ಷ ಎಂಬುವುದು ಒಬ್ಬ ವ್ಯಕ್ತಿಗೆ ಆರಂಭದ ಕುರುಹು, ಈ ಸಾಧನೆಯ ನೆಲಗಟ್ಟಿನ ಮೇಲೆ ಭರಣ ರಂಗಭೂಮಿ ಹಾಗೂ ಚಲನಚಿತ್ರಕ್ಕೆ ಮುಂದಿನ ವರ್ಷಗಳಲ್ಲಿ ಮತ್ತಷ್ಟು ಆಭರಣ ತೊಡಿಸಲಿ ಎಂಬುದೇ ನನ್ನ ಹಾರೈಕೆ.

❑ ❖ ❑ ❖ ❑

# The winner takes it all...

ಪಿ. ಶೇಷಾದ್ರಿ

"ನಾಗಾಭರಣರನ್ನು ಕಂಡ್ರೆ ನಿಮಗೆ ಏನನ್ನಿಸುತ್ತೆ?"

ಅನ್ನೋ ಪ್ರಶ್ನೆ ನಿಮಗೆ ಎದುರಾಯಿತು ಅಂತ ಇಟ್ಕೊಳ್ಳಿ, ಆಗ ನೀವು ಏನು ಹೇಳ್ತೀರ?

ಏನು ಹೇಳಬಹುದು ಅಂತ ಯೋಚನೆ ಮಾಡ್ತಾ ಇದ್ದೀರ? ನೀವು ಯೋಚ್ನೆ ಮಾಡ್ತಾ ಇರಿ. ನಾನು, ನನಗೆ ಏನನ್ನಿಸುತ್ತೆ ಅಂತ ಹೇಳಿಬಿಡ್ತೀನಿ...

'ನಂಗೆ, ನಾಗಾಭರಣರನ್ನ ನೋಡಿದ್ರೆ ಅಸೂಯೆ ಆಗುತ್ತೆ!', '......'

ನಿಮಗೆ ಆಗುತ್ತೋ ಇಲ್ವೋ ಗೊತ್ತಿಲ್ಲ; ನನಗಂತೂ ಆಗುತ್ತೆ! ಯಾಕೆ ಗೊತ್ತಾ? ಆಗಸ್ಟ್ ಮೂವತ್ತೊಂದನೇ ತಾರೀಖು 'ಜಲಸ್ ಡೇ' (ಅಸೂಯೆಯ ದಿನ) ಅಂತೆ. ನಾನು ಮೊದಲಿಗೆ ನಾಗಾಭರಣರನ್ನು ಭೇಟಿ ಮಾಡಲು ಹೋದದ್ದು ಅಂದೇ!

ಆಮೇಲೆ ನಾನು ಅವರತ್ರ ಕೆಲಸ ಮಾಡಿದ್ದು; ಸಿನಿಮಾದ ಎಬಿಸಿಡಿ ಕಲಿತದ್ದು; ಅವರ ಹಾಗೆಯೇ ಒಳ್ಳೆ ಸಿನಿಮಾ ಮಾಡಿ ಪ್ರಶಸ್ತಿ ತಗೊಂಡಿದ್ದು... ಎಲ್ಲಾ ಇತಿಹಾಸ ಬಿಡಿ. ಈಗಲೂ ಚಿತ್ರರಂಗದಲ್ಲಿ ನನಗೆ ಅವರು ಗುರು ಸಮಾನ. ಒಬ್ಬ ಗುರುವಿನ ಬಗ್ಗೆ ಅಸೂಯೆ ಅಂತೆಲ್ಲಾ ಹೇಳಬಹುದೊ ಇಲ್ವೋ ನಂಗೆ ಗೊತ್ತಿಲ್ಲ. ಆದ್ರೆ ಅನ್ನಿಸಿದ್ದನ್ನ ಅನ್ನಿಸಿದ ಹಾಗೆಯೇ ಹೇಳುವ ಸ್ವಭಾವ ನನ್ನದಾದ್ದರಿಂದ ನೇರವಾಗಿ ಹೇಳಿಬಿಟ್ಟೆ. ತಪ್ಪಿದ್ದರೆ ದಯವಿಟ್ಟು ಕ್ಷಮಿಸಿ.

'ಅವರನ್ನ ನೋಡಿದ್ರೆ ಅಸೂಯೆ ಯಾಕಾಗಬೇಕು?' ಅಂತ ನೀವು ಕೇಳೇ ಕೇಳ್ತೀರಿ. ನನ್ನ ಉತ್ತರವೂ ಸಿದ್ಧ!

ನೀವೇ ಹೇಳಿ, ಒಬ್ಬ ಸಾಮಾನ್ಯ ಮನುಷ್ಯ ತನ್ನ ಐವತ್ತನೇ ವಯಸ್ಸಿನ ಒಳಗೆ ಏನೇನು ಮಾಡಿರತಾನೆ?

... ಓದ್ತಾನೆ, ಓದಿ ಒಂದು ಡಿಗ್ರಿ ತಗೋತಾನೆ, ಕೆಲಸ ಹುಡುಕ್ತಾನೆ, ಮದುವೆ ಮಾಡಿಕೊತಾನೆ, ಒಂದು ಸೈಟ್ ತಗೋತಾನೆ, ಮನೆ ಕಟ್ತಾನೆ, ಮಗಳಿಗೆ ಒಂದು ಗಂಡು ಹುಡುಕಿ ಅದ್ದೂರಿಯಾಗಿ ಮದುವೆ ಮಾಡ್ತಾನೆ, ಬಂಧು-ಮಿತ್ರರ ಪ್ರೀತಿ ವಿಶ್ವಾಸ ಸಂಪಾದನೆ ಮಾಡ್ತಾನೆ... ಇತ್ಯಾದಿ ಇತ್ಯಾದಿ ಇತ್ಯಾದಿ. ಅದೆಲ್ಲವನ್ನೂ ಭರಣರೂ ಮಾಡಿದ್ದಾರೆ.

ಜೊತೆಗೆ,

ಅಸಾಮಾನ್ಯರು ಮಾಡೋ ಹಾಗೆ ನಾಟಕ ಆಡಿದ್ದಾರೆ, ಸಿನಿಮಾ ಮಾಡಿದ್ದಾರೆ, ಸೀರಿಯಲ್ ಮಾಡಿದ್ದಾರೆ, ಡಾಕ್ಯುಮೆಂಟರಿ ಮಾಡಿದ್ದಾರೆ. ಲೆಕ್ಕವಿಲ್ಲದಷ್ಟು ಪ್ರಶಸ್ತಿ ಪುರಸ್ಕಾರ ಸಿಕ್ಕಿದೆ. ಜೊತೆಗೆ ಲಕ್ಷಾಂತರ ರೂಪಾಯಿ ಸಂಪಾದಿಸಿದಾರೆ, ಅಷ್ಟನ್ನೇ ಕಳೆದಿದ್ದಾರೆ! ಇದಿಷ್ಟನ್ನೂ ಮಾಡಿರೋದು ಬರೀ ಮೂವತ್ತು ವರ್ಷದಲ್ಲಿ!



ಈಗ ಹೇಳಿ, ಒಬ್ಬ ಮನುಷ್ಯನ ಹಿಂದೆ ಇಷ್ಟೆಲ್ಲಾ ಕತೆ ಇದೆ ಅಂದ್ರೆ ಅದು ದೊಡ್ಡ ವಿಷ್ಯ ಅಲ್ವ? ಅಂಥೋರ ಬಗ್ಗೆ ಹೆಮ್ಮೆ, ಹಾಗೇ ಒಂದು ಕಾರ್ನರ್‌ನಲ್ಲಿ ಅಸೂಯೆ ಪಡೋದು ತಪ್ಪಾ? ಯೋಚ್ನೆ ಮಾಡಿ.

ಸುಮಾರು ಹದಿನಾಲ್ಕು ವರುಷಗಳ ಹಿಂದಿನ ಮಾತು. ಅದನ್ನ 1990ರ ಆಗಸ್ಟ್ 31 ಅಂದ್ಕೊಳ್ಳಿ...

ಬದುಕಿನ ಹಾದಿಯನ್ನು ಗುರುತಿಸಿಕೊಳ್ಳೋ ಪ್ರಮುಖ ಘಟ್ಟದಲ್ಲಿ ನಾನು ನಿಂತಿದ್ದೆ. ಸಿನಿಮಾ ಕ್ಷೇತ್ರದಲ್ಲಿ ಕೆಲಸ ಮಾಡಬೇಕು ಅಂತ ಬಯಕೆ. ಆದರೆ ಹೇಗೆ? ಎಲ್ಲಿ? ಎಂಬ ಬೃಹದಾಕಾರವಾದ ಪ್ರಶ್ನೆ. ನನ್ನ ಸಮಸ್ಯೆ ಗೊತ್ತಿದ್ದ ಗೆಳೆಯರೊಬ್ಬರು 'ನಂಗೆ ನಾಗಾಭರಣ ಚನ್ನಾಗಿ ಗೊತ್ತು, ಅವರ ಹತ್ರ ಕೆಲಸ ಮಾಡಿದ್ರೆ ತುಂಬಾ ಕಲೀಬಹುದು. ನಾನು ನಿನ್ನನ್ನ ಅಲ್ಲಿಗೆ ಸೇರಿಸ್ತೀನಿ ಬಾ' ಅಂತ ಕರೆದುಕೊಂಡು ಬಂದು ನಾಗಾಭರಣರ ಮನೆಮುಂದೆ ನಿಲ್ಲಿಸಿದರು. ತಾವೊಬ್ಬರೇ ಒಳಗೆ ಹೋದರು. ಐದು ನಿಮಿಷ ಬಿಟ್ಟು ಹೊರಗೆ ಬಂದರು. 'ಸ್ಸಾರಿ ಗುರು ಆಗಲಿಲ್ಲ, ಅವರ ಹತ್ರ ಕೆಲಸ ಮಾಡೋರು ತುಂಬಾ ಜನ ಇದ್ದಾರಂತೆ... ಹೊಸಬರಿಗೆ ಜಾಗ ಇಲ್ಲ ಅಂದ್‌ಬಿಟ್ರು' ಎಂಬ ಪೆಚ್ಚು ಮೋರೆ ಹಾಕಿದ. ಸರಿ ಇನ್ನೇನು ಮಾಡೋದು? ವಾಪಾಸ್ಸು ಬಂದ್ವಿ...

ಆಮೇಲೆ ಗೊತ್ತಾಯಿತು ಅವರು ಭರಣರನ್ನು ಮೀಟ್ ಮಾಡಿ ತಮಗೆ ಬೇಕಾದ ಯಾವುದೋ ಕೆಲಸ ಕೇಳಿ ಬಂದ್ರೇ ಹೊರತು ನನ್ನ ಬಗ್ಗೆ ಒಂದು ಮಾತೂ ಹೇಳಿರಲಿಲ್ಲ ಅಂತ. ತಮಗೆ ಕೆಲಸ ಸಿಕ್ರೆ ಆಮೇಲೆ ನನ್ನನ್ನೂ ಸೇರಿಸಿಕೊಳ್ಳೋದು ಅಂತ ಅಂದ್ಕೊಂಡಿದ್ರಂತೆ, ಆದ್ರೆ ಅದು ಆಗಲಿಲ್ಲ. ಹಾಗಂತ ಅವರೇ ಇತ್ತೀಚೆಗೆ ಒಂದು ದಿನ ಹೇಳಿದ್ರು!

ನಾನು ಚಿತ್ರರಂಗದಲ್ಲಿ ಕೆಲಸ ಮಾಡಲು ಇದ್ದ ಬೇರೆ ಬೇರೆ ಹಾದಿ ಹುಡುಕುತ್ತಾ ಹೋದೆ. ಒಂದೊಂದಾಗಿ ಸಂಪರ್ಕ ಬೆಳೀತಾ ಹೋಯ್ತು, ಕೆಲಸಾನೂ ಮಾಡ್ತಿದ್ದೆ. ಆಗ ಅಶೋಕ ಬಾದರದಿನ್ನಿ ನಿರ್ದೇಶನದ 'ಗೌರಿಶಂಕರ' ಸಿನಿಮಾಕ್ಕೆ ಸಂಭಾಷಣೆ ಬರೆದಿದ್ದೆ, ಜೊತೆಗೆ ಸಹನಿರ್ದೇಶನವೂ ನನ್ನದೇ. ಆ ಚಿತ್ರದಲ್ಲಿ ನಾಗಾಭರಣ ಒಂದು ಪ್ರಮುಖ ಪಾತ್ರ ಮಾಡಲು ಬಂದರು. ಹತ್ತಾರು ದಿನ ನಮ್ಮ ಜೊತೇನೆ ಇದ್ರು. ನಂಗೆ ಅವರ ಬಗ್ಗೆ ವಿಶೇಷವಾದ ಗೌರವ ಉಂಟಾಗಿದ್ದು ಆಗಲೇ. 'ತುಂಬಿದ ಕೊಡ ತುಳುಕೋಲ್ಲ' ಅಂತಾರಲ್ಲ, ಹಾಗಿದ್ರು. ಆದಾಗಲೇ ದೊಡ್ಡ ಡೈರೆಕ್ಟರ್ ಅನ್ನೋ ಹೆಸರು ತಗೊಂಡಿದ್ದ ಮನುಷ್ಯ ಇಷ್ಟು ಸಿಂಪಲ್ಲಾಗಿ ಇರೋಕೆ ಸಾಧ್ಯಾನ ಅಂತ ನಂಗೆ ಆಶ್ಚರ್ಯ. ಚಿತ್ರೀಕರಣದ ಸಂದರ್ಭದಲ್ಲಿ ಡಿಸ್‌ಕಷನ್, ಅದೂ-ಇದೂ ಅಂತ ಅವರ ಜೊತೆ ಒಡನಾಟ ಹೆಚ್ಚಾಯಿತು. ನಮ್ಮ ದತ್ತಣ್ಣ ನನ್ನ ಕಿವೀಲಿ 'ನೀನು ಅವನತ್ರ ಕೆಲಸ ಮಾಡೋ, ಒಳ್ಳೇದಾಗುತ್ತೆ' ಅಂತ ಬೇರೆ ಹೇಳಿದ್ರು. ಆಮೇಲೆ ಅವರ ಹತ್ರ ಹೋಗಿ ನನ್ನ ಹೆಸರನ್ನ ಶಿಫಾರಸ್ ಮಾಡಿದ್ರು. ಹಾಗಾಗಿ, ಆ ಪ್ರಾಜೆಕ್ಟ್ ಮುಗಿದ ಮೇಲೆ ಮುಂದೆ ನಾನು ನಾಗಾಭರಣರ ಜೊತೆ ಕೆಲಸ ಮಾಡೋಕೆ ಶುರು ಮಾಡ್ದೆ. ಒಂದೆರಡಲ್ಲ ನಾಲ್ಕು ವರ್ಷ...

ನಾಲ್ಕು ವರ್ಷಗಳಲ್ಲಿ (1992-95) ನಾನು ನಾಗಾಭರಣರನ್ನು ಗುರುವಾಗಿ, ನಿರ್ದೇಶಕನಾಗಿ, ನಟನಾಗಿ, ನಿರ್ಮಾಪಕನಾಗಿ, ಸಂಘಟಕನಾಗಿ, ಬಾಸ್ ಆಗಿ ತೀರ ಹತ್ತಿರದಿಂದ ನೋಡ್ದೆ. ಹೆಚ್ಚು-ಕಮ್ಮಿ ಪ್ರತಿ ದಿನಾನೂ ಅವರ ಜೊತೆ ಇರತಿದ್ದೆ. ಅವರ ಎಲ್ಲ ಕೆಲಸಗಳಲ್ಲೂ ಭಾಗಿಯಾಗಿರತಿದ್ದೆ. ಅವರ ಸರಳತೆ, ಶಾಂತ ಸ್ವಭಾವ, ವಿವೇಚನಾ ಪೂರ್ಣ ಮಾತುಗಳು ನನ್ನನ್ನು ತುಂಬಾ ಇಂಪ್ರೆಸ್ ಮಾಡಿದ್ದು. ಆಗ ನಾನು ಕಂಡ ಕೆಲವು ಸಂದರ್ಭಗಳನ್ನ ನಿಮ್ಮ ಮುಂದೆ ಇಡೋದರ ಮೂಲಕ ಅವರನ್ನ ವ್ಯಕ್ತಿಯಾಗಿ ನೋಡೋಕೆ ಪ್ರಯತ್ನ ಪಡ್ತೀನಿ.

ತಾವು ನಂಬಿದ ತತ್ವದಲ್ಲಿ-ಸಿದ್ಧಾಂತದಲ್ಲಿ ನಾಗಾಭರಣರಿಗೆ ಯಾವಾಗಲೂ ಅಚಲ ವಿಶ್ವಾಸ. ಎಂಥ ಸಂದರ್ಭದಲ್ಲೂ ಅದನ್ನು ಮೀರಿ ನಡೆದದ್ದನ್ನು ನಾನು ಕಂಡಿಲ್ಲ. ಭರಣರಿಗೆ ದೇವರಲ್ಲಿ ನಂಬಿಕೆ ಇದೆ. ಅವರು ಒಂದು ವ್ರತ ಪಾಲಿಸಿಕೊಂಡು ಬಂದಿದ್ದರು. ಅದು ಮಂಗಳವಾರದ ಉಪವಾಸ! ಅಂದು ಸೂರ್ಯ ಮುಳುಗುವವರೆಗೂ ಅವರು ಊಟ ಮಾಡುವುದಿಲ್ಲ. ವ್ರತ ಅಂತ ಮನೇಲೂ ಕೂರೋಲ್ಲ. ತಮ್ಮನ್ನ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಿದ್ರು. ಅಂದು ಎಂಥ ಕೆಲಸವೇ ಇರಲಿ, ದೈಹಿಕ ಶ್ರಮದಿಂದ ಹೊಟ್ಟೆ ಹಸಿದಿರಲಿ, ಶಕ್ತಿ ಕುಂದಿರಲಿ ತಮ್ಮ ಉಪವಾಸದ ವಿಷಯದಲ್ಲಿ ಮಾತ್ರ ಕಟ್ಟುನಿಟ್ಟು. ಏನನ್ನೂ ತಿನ್ನುತ್ತಿರಲಿಲ್ಲ.

'ಆಕಸ್ಮಿಕ' ಚಿತ್ರ ಸೆಟ್ಟೇರಿತ್ತು. ಅದರ ನಾಯಕ ಪಾತ್ರ ವರನಟ ಡಾ. ರಾಜ್‌ಕುಮಾರ್ ಅವರದು. ನಾನು ಆ ಚಿತ್ರದ ಸಹನಿರ್ದೇಶಕನಾಗಿದ್ದೆ. ಅದು ತರಾಸು ಅವರ ಕಥೆ ಆಧಾರಿತ ಚಿತ್ರ. ಅದರ ಚಿತ್ರಕಥೆಯ ತಯಾರಿ, ಚರ್ಚೆಗಾಗಿ ಸುಮಾರು ಆರು ತಿಂಗಳ ಕಾಲ ಡಾ. ರಾಜ್‌ಕುಮಾರ್ ಅವರ ಮನೆಗೆ ಭರಣ, ನಾನು ಹೋಗಿ ಬರುತ್ತಿದ್ದೆವು. ಒಮ್ಮೆ ಹೀಗಾಯಿತು.

ಭರಣರಿಗೆ ಚಿಕನ್ ಎಂದರೆ ಇಷ್ಟ. ಇದು ಅಣ್ಣಾವ್ರಿಗೆ ಹೇಗೋ ತಿಳಿದಿದೆ. ಅಣ್ಣಾವ್ರಿಗೂ ಚಿಕನ್ ಅಂದ್ರೆ ಇಷ್ಟ, ಆದ್ರೆ ಸೋಮವಾರ, ಗುರುವಾರ ಮಾತ್ರ ಅದನ್ನು ತಿನ್ನುವುದಿಲ್ಲ. ವಾರದಲ್ಲಿ ಎರಡು ದಿನ ಬಿಟ್ಟರೆ ಸಾಮಾನ್ಯವಾಗಿ ನಿತ್ಯವೂ ಅವರಿಗೆ ಊಟದೊಂದಿಗೆ ಚಿಕನ್ ಬಳಸುವುದು ರೂಢಿ. ಅದು ನಾವು ಅವರ ಮನೆಗೆ ಡಿಸ್‌ಕಷನ್‌ಗೆ ಹೋಗಲು ಶುರು ಮಾಡಿದ ಮೊದಲ ಮಂಗಳವಾರ. ಅಣ್ಣಾವ್ರಿಗೆ ತಮ್ಮ ಮನೆಗೆ ಬಂದ ಅತಿಥಿಗಳಿಗೆ ಊಟ ಹಾಕಿ ಸತ್ಕರಿಸುವುದೆಂದರೆ ವಿಶೇಷ ಪ್ರೀತಿ. ಭರಣರು ಅಂದು ಅವರ ಮನೆಗೆ ಸ್ಪೆಷಲ್ ಗೆಸ್ಟ್! ಅಣ್ಣಾವ್ರು ತಮ್ಮ ಮನೆಯ ಅಡಿಗೆಯವನಿಗೆ ಚಿಕನ್‌ನಲ್ಲಿ ಸ್ಪೆಷಲ್ ಐಟಂ ಮಾಡಲು ಹೇಳಿದ್ದಾರೆ. ಊಟದ ಸಮಯದವರೆಗೂ ಈ ವಿಷಯ ನಮಗೆ ಯಾರಿಗೂ ಗೊತ್ತಾಗಲಿಲ್ಲ. ಭೋಜನದ ಸಮಯ ಎಲ್ಲರೂ ಊಟಕ್ಕೆ ಎದ್ದೆವು ಭರಣರೂ ಪಂಕ್ತಿ ಶಿಸ್ತನ್ನು ಪಾಲಿಸಲು ಊಟದ ಮೇಜಿಗೆ ಬಂದರು. ರಾಜಣ್ಣ ಚಿಕನ್ ಬಗ್ಗೆ ಬಾಯಲ್ಲಿ ನೀರೂರುವಂತೆ ಕಥೆಗಳನ್ನು ಹೇಳತೊಡಗಿದರು. ನಾವಿಬ್ಬರೂ 'ಹೂಂ'ಗುಡತೊಡಗಿದೆವು. ಅಡುಗೆ ಹುಡುಗ ಮಾತಿನ ಮಧ್ಯೆಯೇ ಬಿಸಿ ಬಿಸಿ ಚಿಕನ್ ತಂದು ಬಡಿಸತೊಡಗಿದ. ಭರಣ ತಮ್ಮ ಮುಂದಿದ್ದ ತಟ್ಟೆಯನ್ನು ಬೋರಲಾಗಿ ಇಟ್ಟು ನಾನು ಊಟ ಮಾಡುವುದಿಲ್ಲ ಎಂದರು. ರಾಜ್‌ಕುಮಾರ್‌ಗೆ ಆಶ್ಚರ್ಯ. 'ನೀವು ಚಿಕನ್ ತಿನ್ನುವುದಿಲ್ಲವೇ? ನಿಮಗಾಗಿಯೇ ಚಿಕನ್ ಮಾಡಿಸಿರುವೆ...' ಎಂದರು.



ಭರಣ 'ಇಲ್ಲಣ್ಣ, ತಿನ್ನುತ್ತೇನೆ... ಆದರೆ ಇವತ್ತು ಮಂಗಳವಾರ ನಾನು ಉಪವಾಸ. ಬರೀ ಫಲಾಹಾರ ಅಷ್ಟೇ' ಎಂದರು. ಅಣ್ಣಾವ್ರು 'ಅಯ್ಯೋ ಕ್ಷಮಿಸಿ, ನನಗೆ ಗೊತ್ತಾಗಲಿಲ್ಲ. ನೀವು ತಿನ್ನದೆ ನಾನು ತಿನ್ನುವುದು ಹೇಗೆ? ನಂಗೂ ಬೇಡ' ಎಂದುಬಿಟ್ಟರು. ಅವರಿಬ್ಬರೂ ತಿನ್ನುವುದಿಲ್ಲ ಎಂದ ಮೇಲೆ ನಾನು ತಿನ್ನಲು ಸಾಧ್ಯವೇ? ಚಿಕನ್ ಪ್ರೇಮಿಯಾಗಿದ್ದ ನನಗೆ ಅದು ತಪ್ಪಿಹೋಯಿತಲ್ಲ ಎಂದು ಪೇಚಾಟವಾಗತೊಡಗಿತು. ಒಂದು ಕ್ಷಣ ಮೌನ! ಅಣ್ಣಾವ್ರಿಗಾಗಿ ಭರಣ ತಮ್ಮ ವ್ರತ ಮುರಿಯುವರೇ ಎನ್ನುವ ಅನುಮಾನ ನನ್ನನ್ನು ಕಾಡತೊಡಗಿತು. ಊಹುಹು ಭರಣರು ಬಗ್ಗಲಿಲ್ಲ. ಬದಲಿಗೆ ಅಣ್ಣಾವ್ರನ್ನೇ ಕನ್‌ವಿನ್ಸ್ ಮಾಡಿ ಚಿಕನ್ ತಿನ್ನುವಂತೆ ಮಾಡಿ ತಾವು ಹಣ್ಣಿಗೇ ತೃಪ್ತಿ ಪಟ್ಟುಕೊಂಡರು.

ಡಾ. ರಾಜ್‌ಕುಮಾರರಂತಹ ಮೇರುನಟನೊಂದಿಗೆ ಕೆಲಸ ಮಾಡುವ ಸಂತೋಷವನ್ನು ಯಾರು ತಾನೇ ಸಂಭ್ರಮಿಸುವುದಿಲ್ಲ. ಭರಣರಲ್ಲೂ ಆ ಸಂಭ್ರಮದ ಕ್ಷಣಗಳನ್ನ ನಾನು ಆಗ ನೋಡ್ತಿದ್ದೆ. ಒಂದ್ಸಲ ಶೂಟಿಂಗ್ ಮುಗಿಸಿಕೊಂಡು ಬರತಾ ಹೇಳ್ತಾ ಇದ್ದರು. "ನನ್ನ ಚಿತ್ರ ಜೀವನದಲ್ಲಿ ಚಿತ್ರರಂಗದ ಬಹುತೇಕ ಎಲ್ಲ ಹೀರೋಗಳನ್ನ ನಿರ್ದೇಶಿಸಿದ್ದೀನಿ. ಆದ್ರೆ, ದೊಡ್ಡೋರೊಬ್ರನ್ನ ನಿರ್ದೇಶಿಸಿರಲಿಲ್ಲ, ಇವತ್ತು ಆ ದಿನಾನು ಬಂತು... Really, I am very happy" ಅಂತ. ಆ ಚಿತ್ರಕ್ಕಾಗಿ ಅವರು ತಗೊಂಡ ಶ್ರಮ, ಎಚ್ಚರಿಕೆ, ಅರಿವು ಅವಿಸ್ಮರಣೀಯ.

ಭರಣ ತುಂಬಾ ಸಮರ್ಥ ನಾಯಕರು ಅನ್ನೋದರಲ್ಲಿ ಅನುಮಾನವೇ ಇಲ್ಲ. 'ಆಕಸ್ಮಿಕ' ಚಿತ್ರಕ್ಕಾಗಿ ನಾವು ಕೊಲ್ಲಾಪುರ, ಕೊಡಚಾದ್ರಿಯ ಲೊಕೇಶನ್ ನೋಡಿಕೊಂಡು ಬರಲು ಹೋಗಿದ್ದೆವು. ಅದು ಮಳೆಗಾಲ. ಮಳೆಗಾಲ ಎಂದ ಮೇಲೆ ಕೇಳಬೇಕೆ. ಅರೆಮಲೆನಾಡಿನ ಆ ಸೀಮೆಯಲ್ಲಿ ಎಲ್ಲೆಡೆಯೂ ಮಳೆ ಮಳೆ ಮಳೆ! ಕೊಲ್ಲಾಪುರದಲ್ಲಿ ರಾತ್ರಿ ತಂಗಿ ಬೆಳಗಿನ ಜಾವ ಐದು ಗಂಟೆಗೇ ಎದ್ದು, ರಸ್ತೆ ಸರಿ ಇರುವವರಿಗೂ ಕಾರಲ್ಲಿ ಹೋಗಿ ಅಲ್ಲಿಂದ ಕಾಲು ದಾರಿಯಲ್ಲಿ ಕೊಡಚಾದ್ರಿಯ ಬೆಟ್ಟ ಏರಲು ತೊಡಗಿದೆವು. ಅದು ದಟ್ಟ ಕಾಡಿನ ಹಾದಿ. ಮೇಲೆ ಧಾರಾಕಾರ ಮಳೆ ಕೆಳಗೆ ನೆಲದಲ್ಲಿ ಇಂಬಳ. ಅಂದ್ರೆ ಗೊತ್ತಲ್ಲ ಜಿಗಣೆ!

ಈ ಸಮಸ್ಯೆ ಬಗ್ಗೆ ಮೊದಲೇ ಅರಿತಿದ್ದವರಂತೆ ಭರಣ ಹೊರಡುವಾಗ ಎಲ್ಲರ ಕೈಗೋ ಒಂದೊಂದು ಉಪ್ಪು ಕಟ್ಟಿದ್ದ ಕೋಲು ಕೊಟ್ಟಿದ್ದರು. ಮುಷ್ಟಿಯಷ್ಟು ಉಪ್ಪನ್ನು ಒಂದು ಬಟ್ಟೆಯಲ್ಲಿ ಸಣ್ಣ ಗಂಟು ಕಟ್ಟಿ ಅದನ್ನು ಕೋಲಿಗೆ ಬಿಗಿದು ಇಂಬಳ ಕಾಲನ್ನು ಏರಿದಾಗ ಅದನ್ನು ಉಪ್ಪಿನ ಗಂಟಲ್ಲಿ ಬಡಿದು ಕೊಡವಿ ಮುಂದೆ ಹೆಜ್ಜೆ ಇಡಬೇಕಿತ್ತು. ನಾವು ಇದ್ದವರು ನಾಲ್ಕು ಜನ. ಐದು ನಿಮಿಷ ನಡೆಯುವಷ್ಟರಲ್ಲಿ ಉಪ್ಪಿನ ಗಂಟು ಮಳೆ ನೀರಲ್ಲಿ ಕರಗಿ ಇಂಬಳಗಳು ಅವರೆ ಹುಳುವಿನಂತೆ ಕಾಲೇರಿ ರಕ್ತ ಹೀರತೊಡಗಿದಾಗ ನಮಗೆಲ್ಲಾ ಜಂಘಾಬಲವೇ ಉಡುಗಿದಂತಾಯಿತು. ಲೊಕೇಶನ್ನನ್ನು ಇನ್ನೊಂದು ಸಲ ಬಂದು ನೋಡಿದರಾಯಿತು, ಈಗ ಹಿಂತಿರುಗಿ ಹೋಗೊದೆ ಸರಿ ಅಂತ ನಾವೆಲ್ಲಾ ಚಿಂತಿಸುತ್ತಿದ್ದಾಗ, ಭರಣ ಯೋಚಿಸುತ್ತಿದ್ದುದ್ದೇ ಬೇರೆ! ನಮಗೆ ಹಣ ಕೊಟ್ಟು ಕಳಿಸಿದ ನಿರ್ಮಾಪಕನಿಗೆ ಇದರಿಂದ ನಷ್ಟ ಆಗಬಾರದು. ನಮ್ಮ ಕೆಲಸ ಮುಗಿಸಿಯೇ ಹೋಗಬೇಕು ಅಂತ!

ಅಂದು ನಮಗೆ ಭರಣರ ಮುಂದಾಳತ್ವವಿಲ್ಲದಿದ್ದರೆ ನಾಲ್ಕು ಅಡಿಯೂ ಏರಲೂ ಸಾಧ್ಯವಾಗುತ್ತಿರಲಿಲ್ಲ. ನೀರು ಹರಿದು ಕಾಡಿನ ಕಾಲು ದಾರಿಯೂ ಮುಚ್ಚಿಹೋಗಿತ್ತು. ಹತ್ತು ಅಡಿ ಆಚೆ ಮಂಜು ಮುಸುಕಿ ಮುಂದೆ ಏನೇನೂ ಕಾಣದು. ಮಳೆ-ಗಾಳಿ-ಚಳಿಯ ಹೊಡೆತಕ್ಕೆ ಮೈ ಕಂಪಿಸುತ್ತಿತ್ತು. ಇನ್ನು ಊಟ ತಿಂಡಿಯ ಬಗ್ಗೆ ಕೇಳುವಂತೆಯೇ ಇಲ್ಲ. ಆ ವಾತಾವರಣದಲ್ಲಿ ಕೊಡಚಾದ್ರಿಯ ತುದಿಯನ್ನು ತಲಪೋದು ಹೇಗೆ? ಭರಣರ ಮಾತುಗಳಿಂದ ಉತ್ಸುಕರಾಗಿ ನಡೆದು ಹೊರಟೆವು. ಎಷ್ಟೋ ಕಡೆ ಪ್ರಪಾತದ ಅಂಚಿನಲ್ಲಿ ನಡೆಯುವಾಗ ಜೀವವೇ ಬಾಯಿಗೆ ಬಂದಂತಾಗುತ್ತಿತ್ತು. ಒಂದು ಹೆಜ್ಜೆ ಅತ್ತಿತ್ತ ಇಟ್ಟರೂ ಪ್ರಪಾತದ ಪಾಲು! ಹಿಂದೆ ಹೋಗಲು ಸಂಕಟ ಮುಂದೆ ಹೋಗಲು ಭಯ. ಅಂತ ಸಂದರ್ಭದಲ್ಲಿ ಜೀವ ಭಯವನ್ನು ಲೆಕ್ಕಿಸದೆ ನಮಗಿಂತ ಮುಂದೆ ಹೊರಟು ನಾವು ಅನಿವಾರ್ಯವಾಗಿ ಅವರನ್ನ ಹಿಂಬಾಲಿಸಬೇಕಾದ ಪರಿಸ್ಥಿತಿಯನ್ನು ಭರಣ ತಂದೊಡ್ಡುತ್ತಿದ್ದರು. ಅಂತೂ ಮೂರು ಗಂಟೆಗಳಿಗೂ ಹೆಚ್ಚು ಕಾಲ ನಡೆದು ಕೊಡಚಾದ್ರಿಯ ತುದಿಯನ್ನು ತಲಪಿದಾಗ, ಅಲ್ಲಿದ್ದ ಭಟ್ಟರ ಮನೆಯಲ್ಲಿ ಬಿಸಿ ಬಿಸಿ ಉಪ್ಪಿಟ್ಟು, ಕಾಫಿ ಸವಿದಾಗ, ಆಹ್! ಎಂಥ ಅನುಭವ. ನಿಜವಾಗಿಯೂ ಆ ಕ್ಷಣಗಳನ್ನು ನೆನೆದರೆ ನನಗೆ ಈಗಲೂ ರೋಮಾಂಚನವಾಗುತ್ತದೆ...

ನಿಮಗೆಲ್ಲಾ ಗೊತ್ತಿರೋ ಹಾಗೆ ನಾಗಾಭರಣರದು ತುಂಬಾ ಶಾಂತ-ಸಮಾಧಾನದ-ಸ್ವಭಾವ. ಡೈರೆಕ್ಟರ್‌ಗಳು ಅಂದ್ರೆ ಅಹಂಕಾರದಿಂದ, ದೂರ್ವಾಸ ಮುನಿಗಳ ತರ ಇರೋದೆ ಹೆಚ್ಚು. ಅದಕ್ಕೆ ತದ್ವಿರುದ್ಧವಾಗಿ ಭರಣ ಇರತಿದ್ರು. ಅವರು ಕೋಪ ಮಾಡ್ಕೊತಾನೇ ಇರಲಿಲ್ಲ. ಅಂಥವರೂ ಕೂಡ ಒಂದು ಸಲ ಕೋಪ ಮಾಡಿಕೊಂಡ್ರು!

ಅದು 'ಆಫೀಸಾಯಣ' ಧಾರಾವಾಹಿ ಚಿತ್ರೀಕರಣ ಆಗುತ್ತಿದ್ದ ಸಂದರ್ಭ. ಅದರ ನಿರ್ಮಾಪಕರು ಕನ್ನಡಿಗರೇ ಆದ್ರೂ ಹೈದರಾಬಾದ್‌ನಲ್ಲಿ ನೆಲಸಿದ್ದವರು. ಕನ್ನಡ ಸೀರಿಯಲ್ ಮಾಡಬೇಕು ಅಂತ ಅಲ್ಲಿಂದ ಬಂದು ನಿರ್ಮಾಣ ಕೈಗೆ ತಗೊಂಡರು. ಮನುಷ್ಯ ಒಳ್ಳೆಯವನೇ, ಆದ್ರೆ ಒಂಥರಾ ನಸೆ ಬುದ್ಧಿ. ಹೇಳಿ ಕೇಳಿ ಆತ ಸೀರೆ ವ್ಯಾಪಾರಿ ಬೇರೆ. ತಮ್ಮ ವ್ಯಾಪಾರೀ ಬುದ್ಧೀನ ಧಾರಾವಾಹಿ ನಿರ್ಮಾಣದಲ್ಲೂ ತೋರಿಸತಿದ್ರು. ಆದ್ರೆ ಎಂಥಾ ಸಂದರ್ಭದಲ್ಲೂ ತಾಳ್ಮೆ ಕಳಕೊಳ್ಳೊರಲ್ಲ ಭರಣ, ಅಂಥವರೂ ಕೋಪ ಮಾಡಿಕೊಂಡು ಕೂಗಾಡಿದ್ರೂ ಅಂದ್ರೆ ಆ ಹೈದರಾಬಾದಿ ಹ್ಯಾಗಿರಬೇಕು ಅಂತ ನೀವೇ ತೀರ್ಮಾನ ಮಾಡಿಕೊಳ್ಳಿ. ಅದು ವ್ಯವಹಾರಕ್ಕೆ ಸಂಬಂಧಿಸಿದ ಮಾತು-ಕತೆ, ಇಬ್ಬರ ಮಧ್ಯೆ ಚರ್ಚೆ ಆಗ್ತಾ ಇತ್ತು... ಭರಣರಿಗೇ ಎಲ್ಲಿತ್ತೋ ಕೋಪ. ಇದ್ದಕ್ಕಿದ್ದಂತೆಯೇ ಏರಿದ ಧ್ವನಿಯಲ್ಲಿ ಕೂಗಾಡಿದರು. ಒಂದೇ ಒಂದು ಕೆಟ್ಟ ಮಾತನ್ನ ಆಡಿದ್ರು... ಆ ದೃಶ್ಯ ನಡೆದಾಗ ನಾವು ಮೂರು ನಾಲ್ಕು ಜನ ಅಷ್ಟೇ ಇದ್ವಿ. ಅದನ್ನ ನೋಡಿ ಎಲ್ರೂ ದಂಗು! ನಾವಿರಲಿ, ಸ್ವತಃ ನಾಗಾಭರಣರೇ ದಂಗು!! ನಾನು ಹೀಗೆ ಬಿಹೇವ್ ಮಾಡಿದ್ನಲ್ಲಾ ಅಂತಾನೋ, ಏನೊ, ಆಮೇಲೆ ಎರಡು ದಿನ ಸಂಕೋಚದಿಂದ ಕುಗ್ಗಿ ಹೋಗಿದ್ರು.

ಕೆಲಸದ ವಿಷಯದಲ್ಲಿ ಭರಣ ಅದು ದೊಡ್ಡ ಕೆಲಸ ಇದು ಚಿಕ್ಕ ಕೆಲಸ ಎಂದು ವರ್ಗೀಕರಿಸಿದವರಲ್ಲ. ಅದು ಸಿನಿಮಾ ಇರಬಹುದು, ಸೀರಿಯಲ್ ಆಗಿರಲಿ, ಸಾಕ್ಷ್ಯ ಚಿತ್ರವಿರಲಿ, ಫೋಟೋ ಕಾಮಿಕ್ಸ್ ಇರಲಿ ಪ್ರತಿಯೊಂದನ್ನೂ ಶ್ರದ್ಧೆಯಿಂದ ಮಾಡಿ



ಮುಗಿಸುವವರೇ. ಅನಿವಾರ್ಯ ಕಾರಣಗಳಿಂದ ಕೆಲವೊಮ್ಮೆ ಕೆಲಸ ಓವರ್‌ಲ್ಯಾಪ್ ಆಗುತ್ತಿದ್ದುದೂ ಉಂಟು. ಅಂಥ ಸಂದರ್ಭದಲ್ಲಿ ಅದನ್ನು ಅವರು ನಿರ್ವಹಿಸುವ ರೀತಿ ವಿಶಿಷ್ಟವಾದುದು. ಅವರ ಡೈರಿ ನೋಡಬೇಕು ನೀವು. ಮುಂದಿನ ಮೂರು ತಿಂಗಳಿಗೆ ಪ್ರತಿಯೊಂದು ದಿನವೂ ಎಂಗೇಜ್ ಆಗಿರುತ್ತದೆ. ಒಂದು ಕೆಲಸವನ್ನು ಅಚ್ಚುಕಟ್ಟಾಗಿ ವ್ಯವಸ್ಥಿತವಾಗಿ ಪ್ಲಾನ್ ಮಾಡುವ ರೀತಿಯನ್ನು ಅವರಿಂದ ಕಲಿಯಬೇಕು. ಪ್ರತಿಯೊಂದೂ ಪೇಪರ್ ಮೇಲೆ ಬ್ಲಾಕ್ ಅಂಡ್ ವೈಟ್‌ನಲ್ಲಿರುತ್ತದೆ.

ಚಿತ್ರಕಥೆಗೆ ಎಷ್ಟು ದಿನ? ಕಲಾವಿದರು ಯಾರು ಯಾರಾಗಿರಬಹುದು ಎಂಬ ಸಂಭಾವ್ಯ ಪಟ್ಟಿ. ನಂತರ ಚಿತ್ರೀಕರಣದ ಸ್ಥಳ ವೀಕ್ಷಣೆಗೆ ಎಂದು ಹೋಗಬೇಕು? ಸಾಂಗ್ ರೆಕಾರ್ಡಿಂಗ್ ಯಾವಾಗ? ಚಿತ್ರೀಕರಣ ಎಷ್ಟು ಶೆಡ್ಯೂಲ್‌ಗಳಲ್ಲಿ ಎಂಬ ವಿವರ. ಅದರ ದಿನಾಂಕಗಳು... ಚಿತ್ರೀಕರಣದ ನಂತರ ಒಂದು ವಾರದ ಗ್ಯಾಪ್ ಕೊಟ್ಟು ಸಂಕಲನದ ಶೆಡ್ಯೂಲ್. ನಂತರ ಡಬ್ಬಿಂಗ್. ಆಮೇಲೆ ರಿರೆಕಾರ್ಡಿಂಗ್. ತದನಂತರ ಮೊದಲ ಪ್ರತಿ. ಕೊನೆಗೆ ರಿಲೀಸ್ ದಿನಾಂಕ! ಹೀಗೆ ಎಲ್ಲವೂ ಪ್ಲಾನ್ ಪ್ರಕಾರವೇ ನಡೆಯಬೇಕು. ನಿರ್ಮಾಪಕರು ಸಹಕರಿಸಿದರೆ ಎಲ್ಲವೂ ಸರಾಗವಾಗಿ ಅಂದುಕೊಂಡಂತೆಯೇ ನಡೆಯುತ್ತಿತ್ತು.

ಹಾಗೆಯೇ ಅವರ ಜೀವನದಲ್ಲಿಯೂ ಎಲ್ಲವೂ ಪ್ಲಾನ್ ಪ್ರಕಾರವೇ ನಡೆದಿದೆ ಎಂದು ಭಾವಿಸುತ್ತೇನೆ. ಮದುವೆ, ಮಡದಿ, ಮಕ್ಕಳು, ಸಿನಿಮಾ, ಸೀರಿಯಲ್ ಇತ್ಯಾದಿ. ಆದ್ದರಿಂದಲೇ ಇರಬೇಕು ಯಶಸ್ಸು ಕೀರ್ತಿ ಇವರನ್ನು ಹುಡುಕಿಕೊಂಡು ಬಂದಿತು. ಗೆಲುವಿನ ಕುದುರೆ ಏರಿದ ಸವಾರರಾದರು. ಗೆಲುವಿನ ಕುದುರೆ ಎಂದಾಗ ನನಗೆ 'ಆಕಸ್ಮಿಕ' ಚಿತ್ರೀಕರಣ ಸಂದರ್ಭದಲ್ಲಿ ಅದರ ನಟಿ ಮಾಧವಿ ತಮ್ಮ ಮೊದಲ ಭೇಟಿಯಂದು ಭರಣರಿಗೆ ಒಂದು ಗ್ರೀಟಿಂಗ್ ಕೊಟ್ಟಿದ್ದು ನೆನಪಿಗೆ ಬರುತ್ತದೆ. ಅದರಲ್ಲಿನ ಮಾತುಗಳು ಇಲ್ಲಿ ಪ್ರಸ್ತುತ.

The winner takes it all,
The loser standing small;
Spectators of the charm,
Always stay alone.
The game is on again,
A lover or a friend;
A big thing or a small,
The winner takes it all.

❑ ❖ ❑ ❖ ❑

# ಭರಣ - ನಾ ಕಂಡಂತೆ

ಎಚ್.ಜಿ. ದತ್ತಾತ್ರೇಯ

ರಂಗಭೂಮಿಯಲ್ಲಿ ತೊಡಗಿಸಿಕೊಂಡ ಜನರ ಜೊತೆಯ ಸ್ನೇಹ ಎಲ್ಲಿ - ಹೇಗೆ ಪ್ರಾರಂಭವಾಗಿರುತ್ತದೆ ಎಂದು ಹೇಳುವುದು ಕಷ್ಟ. ಹೇಗೋ ಆಗಿಬಿಟ್ಟಿರುತ್ತದೆ, ಬೆಳೆದುಬಿಟ್ಟಿರುತ್ತದೆ. ಅದು ರಂಗಭೂಮಿಯ ವೈಶಿಷ್ಟ್ಯ. ಭರಣ ಮತ್ತು ನನ್ನ ಗೆಳೆತನ ಬೆಳೆದದ್ದೂ ಹಾಗೇ. ಸುಮಾರು ಇಪ್ಪತ್ತು ವರ್ಷಗಳಿಗೂ ಮೀರಿದ್ದು. ಈ 20 ವರ್ಷಗಳಲ್ಲಿ ಭರಣನ ಬೆಳವಣಿಗೆಯನ್ನು ಹತ್ತಿರದಿಂದ ನೋಡಿದ್ದೇನೆ - ಮೆಚ್ಚಿದ್ದೇನೆ. ಮೆಚ್ಚುಗೆಗೆ ಕಾರಣ ಅವನ ಉತ್ಸಾಹ, ಶ್ರದ್ಧೆ, ವೃತ್ತಿಪರತೆ, ಆತ್ಮವಿಶ್ವಾಸ, ಪ್ರಯೋಗಶೀಲತೆ, ಸಾಹಸ ಪ್ರವೃತ್ತಿ, ಪ್ರತಿಭಾನ್ವೇಷಣೆ ಮತ್ತು ನಾಡು-ನುಡಿ ಹಾಗೂ ಸಂಸ್ಕೃತಿಯ ಬಗೆಗಿನ ಅವನ ಅಪಾರ ಕಾಳಜಿ. ರಂಗಭೂಮಿ - ಕಿರುತೆರೆ - ಹಿರಿತೆರೆ ಈ ಮೂರೂ ಕ್ಷೇತ್ರಗಳಲ್ಲಿ ಅವನು ಮಾಡಿರುವ ಕೆಲಸಗಳಲ್ಲಿ ಇವೆಲ್ಲ ಗುಣಗಳೂ ಸ್ಪಷ್ಟವಾಗಿ ಎದ್ದು ಕಾಣುತ್ತವೆ.

1987ರ ಒಂದು ದಿನ ಅನಿರೀಕ್ಷಿತವಾಗಿ ಬೆಂಗಳೂರಿನ ಅರವಿಂದ ಸ್ಟುಡಿಯೋಗೆ ಹೋಗಿದ್ದೆ. ಅಲ್ಲಿ ಭರಣನ 'ಆಸ್ಫೋಟ' ಚಿತ್ರದ ಹಾಡುಗಳ ರೆಕಾರ್ಡಿಂಗ್‌ಗೆ ಸಿದ್ಧತೆ ನಡೆದಿತ್ತು. ಉಭಯ ಕುಶಲೋಪರಿಗಳಾಗುತ್ತಿರುವಾಗಲೇ ನನ್ನನ್ನು ಒಂದೆರಡು ಬಾರಿ ಪರೀಕ್ಷಾತ್ಮಕ ದೃಷ್ಟಿಯಲ್ಲಿ ನೋಡಿದ ಭರಣನಿಂದ "ಈ ಚಿತ್ರದಲ್ಲಿ M.L.A. ಶ್ರೀನಿವಾಸಯ್ಯನ ಪಾತ್ರ ಮಾಡುತ್ತೀರಾ" ಎಂಬ ಪ್ರಶ್ನೆ. ಪಾತ್ರದ ವಿವರಣೆಯನ್ನೂ ಕೊಟ್ಟ. ಅದು ಆ ಚಿತ್ರದ ಪ್ರಮುಖ ಪಾತ್ರ. ಅವನು ಹೇಳಿದ ರೀತಿಯಲ್ಲಿ ಅದೊಂದು ಸಂಕೀರ್ಣ ಪಾತ್ರ. ಅವನ ಪ್ರಶ್ನೆಯಿಂದ ತಬ್ಬಿಬ್ಬಾಗಿದ್ದ ನನ್ನ ಮನಸ್ಥಿತಿಯನ್ನು ಅರಿತ ಭರಣ 'ನಾನೇ ಬಿಜ್ಜಳ ನಾಟಕದಲ್ಲಿ ನಿಮ್ಮ ಬಿಜ್ಜಳನ ಪಾತ್ರ ನೋಡಿದ್ದೇನೆ. ಇದು ನಿಮಗೆ ಸೂಕ್ತವಾದ ಪಾತ್ರ' ಎಂದ. ಆದರೆ ನನಗೆ ಏನೋ ಅಳುಕು. ಆಗ ತಾನೇ ಟಿ.ಎಸ್. ರಂಗಾ ನಿರ್ದೇಶನದ ಹಿಂದಿ ಕಿರುಚಿತ್ರದಲ್ಲಿ ಮೊಟ್ಟ ಮೊದಲ ಬಾರಿಗೆ ಒಂದು ಸಣ್ಣ ಪಾತ್ರ ಮಾಡಿದ್ದೆನಾದರೂ ಒಂದು ಪೂರ್ಣ ಪ್ರಮಾಣದ ಸಿನಿಮಾದಲ್ಲಿ ಇಂತಹ ಕ್ಲಿಷ್ಟ ಪಾತ್ರ ನನ್ನಿಂದ ಸಾಧ್ಯವೇ? ಎಂಬ ಪ್ರಶ್ನೆ ನನ್ನದಾಗಿತ್ತು. ಎಂದಿನ ತನ್ನ ಕಿರುನಗೆ ಬೀರಿ 'ಈಗ ನಿಮ್ಮ ಒಪ್ಪಿಗೆಯಷ್ಟೆ ಬೇಕು. ನಿಮ್ಮಿಂದ ಆ ಪಾತ್ರ ಮಾಡಿಸುವ ಹೊಣೆ ನನ್ನದು' ಎಂದಾಗ ನನ್ನ ಆಯ್ಕೆ ಆಗಿಬಿಟ್ಟಿತ್ತು. ನನ್ನ ಅಧೈರ್ಯ ಸ್ವಲ್ಪ ಮಟ್ಟಿಗೆ ತಗ್ಗಿತ್ತು. ಅಲ್ಲಿಂದ ಮುಂದೆ ಚಿತ್ರೀಕರಣ ಸಮಯದಲ್ಲಿ ಅವನಿಂದ ದೊರೆತ ಪ್ರೋತ್ಸಾಹ - ಮಾರ್ಗದರ್ಶನ, ಅಲ್ಲಿನ ಆತ್ಮೀಯ ವಾತಾವರಣ, ಮುಕ್ತ ಸಂವಾದಗಳು, ನನ್ನನ್ನು ಪ್ರೀತಿಯಿಂದ ನಡೆಸಿಕೊಂಡ ರೀತಿ ಇವೆಲ್ಲ ನನ್ನ ಪಾತ್ರ ನಿರ್ವಹಣೆಯ ಜವಾಬ್ದಾರಿಯನ್ನು ಸರಳವಾಗಿಸಿತ್ತು. ಆ ವರ್ಷದ ಅತ್ಯುತ್ತಮ ಪೋಷಕ ನಟ ರಾಷ್ಟ್ರ ಪ್ರಶಸ್ತಿಯನ್ನು ನನ್ನದಾಗಿಸಿತ್ತು. ಆ 20 ದಿನಗಳ ಚಿತ್ರೀಕರಣ ನನ್ನ ಪಾಲಿಗೆ ಒಂದು ಪಾಠಶಾಲೆಯಂತಿತ್ತು. ಅಲ್ಲಿ ಕಲಿತ ಮೊದಲ ಪಾಠಗಳು ಇವತ್ತಿಗೂ



ನನ್ನ ಸಂಗಾತಿಗಳಾಗಿ ನನ್ನ ಬೆಳವಣಿಗೆಗೆ ಕಾರಣೀಭೂತವಾಗಿವೆ, ಅವನ ಹಲವಾರು ಪ್ರಯೋಗಗಳಲ್ಲಿ ಸಕ್ರಿಯವಾಗಿ ಭಾಗಿಯಾಗುವ ಅವಕಾಶಗಳನ್ನೂ ಕಲ್ಪಿಸಿ ಕೊಟ್ಟಿವೆ. 'ಆಸ್ಫೋಟ' ಹಲವಾರು ಕಾರಣಗಳಿಂದಾಗಿ ಮಹತ್ವದ ಚಿತ್ರ. ಅಲ್ಲಿಯವರೆಗೆ ಹೊಸ ಅಲೆ ಚಿತ್ರಗಳು ಮತ್ತು ಪ್ರಧಾನವಾಹಿನಿ ಚಿತ್ರಗಳು ಎರಡು ಬೇರೆ ಬೇರೆ ಮಾರ್ಗಗಳಲ್ಲೇ ನಡೆಯುವ ಪ್ರಕ್ರಿಯೆಗಳೆಂದೇ ಭಾವಿಸಲಾಗಿತ್ತು. ಅವೆರಡನ್ನೂ ಕಲ್ಪಿಸಿಕೊಳ್ಳುವ-ಚಿತ್ರೀಕರಿಸುವ ವಿಧಾನಗಳೇ ಬೇರೆ ಬೇರೆ ಎನ್ನುವ ಯೋಚನಾಕ್ರಮವಿತ್ತು. ಅಷ್ಟು ಹೊತ್ತಿಗಾಗಲೇ ಎರಡೂ ರೀತಿಯ ಚಿತ್ರಗಳನ್ನು ಮಾಡಿ ಅನುಭವ ಪಡೆದಿದ್ದ ಭರಣನಿಗೆ ಎರಡೂ ಕಡೆಯ ಒಳ್ಳೆಯ ಅಂಶಗಳನ್ನು ಸಮೀಕರಿಸಿ ಎರಡೂ ಕಡೆಗೂ ಸಲ್ಲುವಂತಹ ಒಂದು ಚಿತ್ರ ಮಾಡಿದರೆ ಹೇಗೆ ಎನ್ನುವ ಹೊಸ ಯೋಚನೆ ಬಂದಿತ್ತು. 'ಆಸ್ಫೋಟ'ವನ್ನು ಈ ಬ್ರಿಜ್ ಮಾದರಿ ಸಿನಿಮಾ ಆಗಿ ರೂಪಿಸುವ ಪ್ರಯತ್ನ ನಡೆಸಿದ್ದು ಮತ್ತು ಆ ಪ್ರಯತ್ನ ಸಫಲವಾಗಿದ್ದು ಭರಣನ ಪ್ರಯೋಗಶೀಲತೆಗೆ ಸಾಕ್ಷಿಯಾಗಿತ್ತು. ಅಲ್ಲಿಂದ ಮುಂದೆ ಅವನು ಮಾಡಿದ ಬಹುತೇಕ ಪ್ರಯತ್ನಗಳು ಈ ದಿಶೆಯಲ್ಲೇ ಸಾಗಿ ಬಂದಿವೆ. ಹಾಗಾಗಿ ಭರಣನನ್ನು ಕನ್ನಡದ ಬ್ರಿಜ್ ಸಿನಿಮಾ ಪ್ರವರ್ತಕ ಎಂದರೆ ತಪ್ಪಾಗಲಾರದು. ಮೊಟ್ಟ ಮೊದಲ ಬಾರಿಗೆ ಅರವಿಂದ್ ತರಹದ ರೆಕಾರ್ಡಿಂಗ್ ಸ್ಟುಡಿಯೋದಲ್ಲಿ ಕನ್ನಡ ನಾಡಿನ ಸಂಗೀತಗಾರರು ವಾದ್ಯವೃಂದದವರನ್ನೇ ಬಳಸಿ ಸೃಷ್ಟಿಸಿದ ಸಿನಿಮಾ ಸಂಗೀತ 'ಆಸ್ಫೋಟ'ದ ಇನ್ನೊಂದು ಹಿರಿಮೆ. ಈ ಕಾರ್ಯದಲ್ಲಿ ಭರಣನ ಜೊತೆ ಕೈಜೋಡಿಸಿದ ಇನ್ನೊಬ್ಬ ಪ್ರತಿಭಾನ್ವಿತ ವ್ಯಕ್ತಿ ಸಂಗೀತ ನಿರ್ದೇಶಕ ಸಿ. ಅಶ್ವಥ್. ಈ ಜೋಡಿ ಮುಂದೆ ಹಲವಾರು ಬ್ರಿಜ್ ಸಿನಿಮಾಗಳಿಗೆ ಕಾರಣಕರ್ತರಾಗಿದ್ದು ಕನ್ನಡ ಚಿತ್ರರಂಗದ ಇತಿಹಾಸದ ಒಂದು ಭಾಗವಾಗಿ ನಿಂತಿದೆ. ಆ ಕಾಲಘಟ್ಟದಲ್ಲಿ ಇಂತಹ ಪ್ರಯತ್ನಗಳು ಸುಲಭ ಸಾಧ್ಯವಾಗಿರಲಿಲ್ಲ ಎನ್ನುವುದನ್ನು ಗಮನಿಸಿ ಇಂತಹ ನೂತನ ಪ್ರಯೋಗಗಳಿಗೆ ನಾಂದಿ ಹಾಡಿದ 'ಆಸ್ಫೋಟ' ಭರಣನ ಪ್ರಯೋಗಶೀಲತೆ ಮತ್ತು ಸಾಹಸ ಪ್ರವೃತ್ತಿಯನ್ನು ಎತ್ತಿ ತೋರಿಸುತ್ತವೆ. ಜೊತೆ ಜೊತೆಗೇ ಸೃಜನಶೀಲ ಸಾಹಿತ್ಯದ ಉತ್ತಮ ಕೃತಿಗಳನ್ನು ಅಳವಡಿಸಿಕೊಂಡ ಅನೇಕ ಚಿತ್ರಗಳೂ ಸೇರಿದಂತೆ ಅವನ ಪ್ರತಿ ಚಿತ್ರದಲ್ಲೂ ಎದ್ದು ಕಾಣಿಸುವ ಸೂಕ್ಷ್ಮ ಸಂವೇದನೆ, ದೇಸೀ ಸೊಗಡು, ಪರಿಸರ ಪ್ರೇಮ, ನಾಡು-ನುಡಿಯ ಬಗೆಗಿನ ಪ್ರೀತಿ, ಔಚಿತ್ಯಪೂರ್ಣತೆ ಇವೆಲ್ಲವೂ ಭರಣನ ಚಿತ್ರಗಳಿಗೆ ಒಂದು ಸಾಂಸ್ಕೃತಿಕ ಮೆರುಗನ್ನು ಕೊಟ್ಟಿವೆ. ಚಲನಚಿತ್ರಗಳಿಗೆ ಸೆನ್ಸಾರ್ ಬೇಕಿಲ್ಲ - ಸ್ವನಿಯಂತ್ರಣವಷ್ಟೆ ಇರಬೇಕು ಎನ್ನುವ ಈ ಕಾಲದಲ್ಲಿ ಭರಣನ ಚಿತ್ರಗಳು ಸ್ವನಿಯಂತ್ರಣಕ್ಕೆ ಮಾದರಿಯಾಗಿ ನಿಲ್ಲುತ್ತವೆ.

ಹಾಗಾಗಿ ಅವನ ಹಲವಾರು ಚಿತ್ರಗಳು ರಾಷ್ಟ್ರೀಯ - ಅಂತರ ರಾಷ್ಟ್ರೀಯ ಮಟ್ಟದಲ್ಲಿ ಗೌರವಾನ್ವಿತ ಸ್ಥಾನ ಪಡೆದಿರುವುದು ಅರ್ಥಪೂರ್ಣವಾಗಿದೆ - ಸರ್ವಸಮ್ಮತವಾಗಿದೆ.

ಸಂಘಟನೆ - ಹೋರಾಟಗಳಲ್ಲೂ ಭರಣನ ಪಾತ್ರ ಸಣ್ಣದೇನಲ್ಲ. ರೀಮೇಕ್ - ಡಬ್ಬಿಂಗ್ - ಅಶ್ಲೀಲ ಚಿತ್ರಗಳ ಬಗ್ಗೆ ತನ್ನ ವಿರೋಧದ ಸ್ಪಷ್ಟ ನಿಲುವನ್ನು ವಿವಿಧ ವೇದಿಕೆಗಳಲ್ಲಿ ವ್ಯಕ್ತಪಡಿಸಿ ಅಂತಹ ಪ್ರಹಾರಗಳ ವಿರುದ್ಧ ಕೆಲವೊಮ್ಮೆ ಟೊಂಕ ಕಟ್ಟಿ ನಿಂತಿದ್ದೂ ಉಂಟು.

ಈ 20 ವರ್ಷಗಳಲ್ಲಿ ಭರಣ ಒಂದಾದ ಮೇಲೊಂದು ಅನೇಕ ಚಿತ್ರಗಳನ್ನು ಮಾಡಿದ್ದು ದೊಡ್ಡ ವಿಷಯವಲ್ಲ. ಆದರೆ, ಬಹುತೇಕ ಚಿತ್ರಗಳಲ್ಲಿ ಸಮಾಜದ ಪ್ರಚಲಿತ ಸಮಸ್ಯೆಗಳನ್ನು

ಎಳೆಎಳೆಯಾಗಿ ಬಿಡಿಸಿ ಅಲ್ಲಿನ ಕಾರ್ಯ-ಕಾರಣ ಸಂಬಂಧಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸುವ ಅವನ ಪ್ರಯತ್ನಗಳು ನಿಜಕ್ಕೂ ಗಮನಾರ್ಹವಾದ ವಿಷಯ. ಗ್ರಹಣದಲ್ಲಿ ಜಾತಿಪದ್ಧತಿ, ಅನ್ವೇಷಣೆಯಲ್ಲಿ ನಿರುದ್ಯೋಗ ಸಮಸ್ಯೆ, ಆಸ್ಫೋಟದಲ್ಲಿ ದುಷ್ಟರಾಜಕೀಯ, ಸಂತ ಶಿಶುನಾಳ ಷರೀಫದಲ್ಲಿ ಕೋಮು ಸಾಮರಸ್ಯ, ಚಿನ್ನಾರಿ ಮುತ್ತದಲ್ಲಿ ಮಕ್ಕಳ ಶಕ್ತಿ-ಸಾಮರ್ಥ್ಯವನ್ನು ಗುರುತಿಸಿ ಅವರನ್ನು ಬೆಳೆಸುವ ರೀತಿ, ವಿಮೋಚನೆ, ಸಿಂಗಾರೆವ್ವಗಳಲ್ಲಿ ಶೋಷಣೆಯ ವಿರುದ್ಧ ಹೆಣ್ಣಿನ ಪ್ರತಿಭಟನೆ ಇಂತಹ ವಿಷಯಗಳ ಕೂಲಂಕುಷ ವಿಶ್ಲೇಷಣೆ ಅವನ ಸಾಮಾಜಿಕ ಪ್ರಜ್ಞೆಗೆ ಹಿಡಿದ ಕನ್ನಡಿ. ಒಬ್ಬ ಸೃಜನಶೀಲ ನಿರ್ದೇಶಕನ ಹಿರಿಮೆಯನ್ನು ಗುರುತಿಸುವುದೇ ಇಂತಹ ಕೊಡುಗೆಗಾಗಿ. ಈ ದೃಷ್ಟಿಯಿಂದ ಭರಣ ನಿರ್ದೇಶಕನಾಗಿ ಗೆದ್ದಿದ್ದಾನೆ; ತನ್ನದೇ ಆದ ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದ್ದಾನೆ.

ಒಟ್ಟಿನಲ್ಲಿ ಚಲನಚಿತ್ರ ರಂಗದ ಸರ್ವತೋಮುಖ ಬೆಳವಣಿಗೆಗೆ ಭರಣನ ಕೊಡುಗೆ ಮೆಚ್ಚುವಂಥದ್ದು. ಅವನಿಂದ ಇನ್ನೂ ಅನೇಕ ಗಮನಾರ್ಹ ಕೆಲಸಗಳು ಆಗುತ್ತವೆ ಎನ್ನುವ ನಂಬಿಕೆ ನನ್ನದು.

❑ ❖ ❑ ❖ ❑



# ಕನ್ನಡದಾಭರಣ - ನಾಗಾಭರಣ

ಮಂಜುನಾಥ ಬೆಳೆಕೆರೆ

ಯಾವುದೇ ವ್ಯಕ್ತಿಯ ಜೀವಿತಾವಧಿಯ ಎಂದು ಕಾಲ ಘಟ್ಟದಲ್ಲಿ ನಿಂತು ತಾನು ನಡೆದು ಬಂದ ದಾರಿಯನ್ನ ಕುರಿತು ಚಿಂತಿಸುವುದು, ಆತ್ಮಾವಲೋಕನ ಮಾಡಿಕೊಳ್ಳುವುದು ಮಹತ್ವದ ಸಂಗತಿ. ಈ ರೀತಿಯ ಪ್ರಕ್ರಿಯೆ ಮುಂದೆ ಸಾಗುವ ದಾರಿಯ ಬಗ್ಗೆ ದಿಕ್ಸೂಚಿಯಾಗುತ್ತದೆ. ಅದೇ ರೀತಿ ಸಾರ್ವಜನಿಕ ಜೀವನದ ಯಾವುದೇ ಕ್ಷೇತ್ರದ ಸಾಧಕನಾಗಲಿ, ದಾರ್ಶನಿಕನಾಗಲಿ ಅಥವಾ ನಿಷ್ಠ ರಾಜಕಾರಣಿಯಾಗಿರಲಿ ಅವರ ಸಾಧನೆಯ ಹಾದಿಯನ್ನ ಸಾರ್ವಜನಿಕರು ಅರಿತುಕೊಳ್ಳುವುದು, ಸಾಧಕನು ಸಾಧನೆಯಲ್ಲಿ ತೋರಿದ ನಿಷ್ಠೆ ಮತ್ತು ಪ್ರಮಾಣೀಕತನವನ್ನ ವಿಮರ್ಶಿಸಿ ಅರ್ಥ ಮಾಡಿಕೊಳ್ಳುವುದು ಸಾಮಾಜಿಕ ಸಂದರ್ಭದಲ್ಲಿ ಬಹಳ ಮಹತ್ವದ ಸಂಗತಿ. ಸಾಧಕನ ಸಾಧನೆಯ ಬಗ್ಗೆ ನಡೆಯುವ ಆತ್ಮೀಯ ವಿಮರ್ಶೆ ಕಿರಿಯರಿಗೆ ಮಾರ್ಗದರ್ಶನವಾಗುವುದು. ಜೊತೆಗೆ ಸಾಧಕನು ಮುಂದೆ ಸಾಗುವ ದಾರಿಗೆ ನೈತಿಕ ಬೆಂಬಲ ನೀಡಿದಂತಾಗುತ್ತದೆ.

ನಮ್ಮ ನಡುವಿನ ಹಿರಿಯ ಸಾಧಕ ಟಿ.ಎಸ್. ನಾಗಾಭರಣ. ಈ ವರ್ಷ ಅವರಿಗೆ ಐವತ್ತು ವರ್ಷ ತುಂಬಿದ ಸಂಭ್ರಮ. ಚಿತ್ರರಂಗಕ್ಕೆ ಹಾಗೂ ದಾಂಪತ್ಯದ ಜೀವನ ರಂಗಕ್ಕೆ ಕಾಲಿರಿಸಿದ ಇಪ್ಪತ್ತೈದು ವರ್ಷ, ಹರುಷದ ಬೆಳ್ಳಿ ಸಂಭ್ರಮ. ಜೊತೆಗೆ ಅವರ ಮುಡಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ..., 'ಸಿಂಗಾರವ್ವ' ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿಯ ಗರಿಗಳು, ಸಂತಸದ ಸಂಭ್ರಮ. ಇವೆಲ್ಲ ಯೋಗಾಯೋಗವೆಂಬಂತೆ ಜೊತೆಗೂಡಿ ಬಂದಿವೆ. ಈ ಸಂದರ್ಭದಲ್ಲಿ ರಂಗಭೂಮಿ, ಚಲನಚಿತ್ರ ಹಾಗೂ ಕಿರುತೆರೆಯಲ್ಲಿ ಅನೇಕ ಮೈಲುಗಲ್ಲುಗಳನ್ನ ನೆಟ್ಟ ಭರಣರವರ ಸಾಧನೆಯನ್ನ ಗುರುತಿಸಿ 'ಭರಣ-50' ಎಂಬ ಅಭಿನಂದನಾ ಸಮಾರಂಭ ಏರ್ಪಡಿಸಿ, ಅವರಿಗೆ ಗೌರವ ತೋರುವ ಸ್ತುತ್ಯಾರ್ಹ ಕಾರ್ಯಕ್ರಮ ಮಾಡಲು ಹೊರಟ ಎಲ್ಲ ಮಹನೀಯರಿಗೆ ನನ್ನ ತುಂಬು ಹೃದಯದ ಅಭಿನಂದನೆಗಳು.

ಶ್ರೀ ನಾಗಾಭರಣರ ಮತ್ತು ನನ್ನ ಒಡನಾಟ ತೀರಾ ಈಚಿನದ್ದು. ಅವರು ನಿರ್ದೇಶನ ಮಾಡಿದ ಕೆಲವು ಧಾರವಾಹಿಗಳಿಗೆ 'ಸಂಭಾಷಣೆ' ಒದಗಿಸುವ ಜವಾಬ್ದಾರಿಯನ್ನು ನನಗೆ ನೀಡಿದ್ದರು. ಆ ಸಂದರ್ಭದಲ್ಲಿ ಅವರನ್ನ ಹತ್ತಿರದಿಂದ ಮತ್ತಷ್ಟು ಅರ್ಥ ಮಾಡಿಕೊಳ್ಳುವ ಅವಕಾಶ ದೊರೆಯಿತು. ಅವರ ಒಡನಾಟದಲ್ಲಿ ಕಲಿತಿದ್ದೇನೆ, ನನ್ನನ್ನ ಪ್ರೀತಿಯಿಂದ ಕಂಡಿದ್ದಾರೆ. ರಂಗಭೂಮಿಯಲ್ಲಿ ನಿರಂತರವಾಗಿ ಕೆಲಸ ಮಾಡವವರನ್ನ ತುಂಬು ಹೃದಯದಿಂದ ಕಾಣುತ್ತಾರೆ. ಅಪಾರ ಪ್ರೀತಿ ತೋರುತ್ತಾರೆ.

## ರಂಗಭೂಮಿಯ ನಂಟು - ಭರಣರ ಯಶಸ್ಸಿನ ಗುಟ್ಟು

ಕಲಾಕ್ಷೇತ್ರದ ಮೆಟ್ಟಿಲುಗಳಿಗೆ ಒಂದು ದೊಡ್ಡ ಪರಂಪರೆ ಇದೆ. ಅವು ಸಾಮಾನ್ಯ ಮೆಟ್ಟಿಲುಗಳಲ್ಲ. ಅನೇಕ ದಂತಕಥೆಗಳನ್ನ ತಮ್ಮ ಗರ್ಭದಲ್ಲಿ ಅಡಗಿಸಿಕೊಂಡಿವೆ. ಕಲಾಕ್ಷೇತ್ರದ ಮೆಟ್ಟಿಲ ಮೇಲೆ ಕೂತು ಕನಸು ಕಂಡು ಮೆಟ್ಟಿಲುಗಳನ್ನೇರುತ್ತಾ ಮುಂದ್ಹೋದವರ ಕತೆಗಳು ನಮ್ಮೆದುರಿಗೆ ಜೀವಂತವಾಗಿವೆ. ಈ ಮೆಟ್ಟಿಲುಗಳ ಮೇಲೆ ಕೂತೇ ನಾಗಾಭರಣರವರು ತಮ್ಮ ಕಲಾಜೀವನದ ಕನಸು ಕಂಡಿದ್ದು.

ಕಲಾಕ್ಷೇತ್ರದಲ್ಲಿ ತಾವು ನೋಡಿದ ನಾಟಕಗಳನ್ನ ಗೆಳೆಯರಿಗೆ ಕಲಿಸುತ್ತಾ, ಕಲಿಯುತ್ತಾ, ಪ್ರದರ್ಶನ ಮಾಡುತ್ತಾ ಬೆಳೆದರು. ಎದೆ ತುಂಬಾ ರಂಗಭೂಮಿಯ ಬಗ್ಗೆ ಅಪಾರವಾದ ಪ್ರೀತಿಯುನ್ನು ಬೆಳೆಸಿಕೊಂಡರು. ಅವರ ಉತ್ಸಾಹ ಮತ್ತು ರಂಗಭೂಮಿ ಬಗ್ಗೆ ಅವರಿಗಿದ್ದ ಪ್ರೀತಿಯನ್ನ ರಂಗಮಾಂತ್ರಿಕ ಬಿ.ವಿ. ಕಾರಂತರು ಬಹುಬೇಗ ಗುರುತಿಸಿದರು. ತಮ್ಮ ಆಪ್ತವಲಯಕ್ಕೆ ಭರಣರನ್ನ ಸೇರಿಸಿಕೊಂಡು ಬೆಳೆಸಿದರು. ಕಾರಂತರ ಒಡನಾಟದಲ್ಲಿ ರಂಗಭೂಮಿಯ ಪ್ರಾಥಮಿಕ ಪಾಠಗಳನ್ನ ಕಲಿತರು. ಕಲಿತು ಅರಿತರು, ಅರಿತು ನುರಿತರು.

ಭರಣರಿಗೆ ಪ್ರಾರಂಭದಿಂದಲೂ ಕೊಟ್ಟ ಜವಾಬ್ದಾರಿಯನ್ನ ಸವಾಲನ್ನಾಗಿ ಸ್ವೀಕರಿಸಿ ನಿಭಾಯಿಸುವ ಸ್ವಭಾವ ಉಂಟು. ಈ ಮನೋಭಾವವೇ ಅವರನ್ನ ರಂಗಭೂಮಿಯ ನೇಪಥ್ಯಗಾರನಾಗಿ, ಸಂಘಟಕ ನಿರ್ದೇಶಕನಾಗಿ ನಟನಾಗಿ ರೂಪುಗೊಳ್ಳುವಂತೆ ಮಾಡಿತು.

ಸ್ವಾತಂತ್ರ್ಯದ ನಂತರ ಕರ್ನಾಟಕದ ಸಾಂಸ್ಕೃತಿಕ ರಂಗದಲ್ಲೂ ರಾಜಕೀಯ ರಂಗದಲ್ಲಿ 'ಸಮಾಜವಾದ' ಪ್ರಭಾವ ಸಾಕಷ್ಟಿತ್ತು. ಸಮಾಜವಾದಿ ಶ್ರೀ ಗೋಪಾಲಗೌಡರು ನಡೆಸಿದ ಸಾಮಾಜಿಕ ಆಂದೋಲನ, ಲೋಹಿಯಾ, ಜಯಪ್ರಕಾಶ ನಾರಾಯಣರಂತಹ ನಾಯಕರ ಪ್ರಭಾವದಿಂದ ಸಮಾಜವಾದಿ ರಾಜಕಾರಣಿಗಳ ದಂಡೇ ಇತ್ತು. ಸಮಾಜವಾದಿ ನಾಯಕರ ದಳ ವಿಚಾರಧಾರೆಗಳು ಹೇರಳವಾಗಿ ಲಭ್ಯವಿದ್ದ ಪ್ರಭಾವದಿಂದ ಕನ್ನಡದ ಅನೇಕ ಲೇಖಕರು ಸಮಾಜವಾದದ ಕಡೆಗೆ ಒಲವು ತೋರಿದರು. ಆಧುನಿಕ ಕನ್ನಡ ರಂಗಭೂಮಿ ಕೂಡ 'ಸಮಾಜವಾದ' ಪ್ರಭಾವ ಸ್ವೀಕರಿಸಿ ಬೆಳೆಯಿತು. ಮಾನವತೆಗಾಗಿ ರಂಗಭೂಮಿ ಎಂಬ ಸಿದ್ಧಾಂತವನ್ನ ಅಂತರ್ಗತವಾಗಿಸಿಕೊಂಡು ಬೆಳೆಯಿತು. ಬಿ.ವಿ. ಕಾರಂತರ ಪ್ರಮುಖ ಧ್ಯೇಯ ಕೂಡ ಇದೇ. 'ಮಾನವತೆಗಾಗಿ ರಂಗಭೂಮಿ' ಇದನ್ನ ಅರಿತುಕೊಳ್ಳುತ್ತಲೇ ನಾಗಾಭರಣರು ಬೆಳೆದರು... ಚಿತ್ರರಂಗದಲ್ಲಿ ಸಾಧನೆಗೈಯುತ್ತಾ "ಮಾನವತೆಗಾಗಿ ಚಲನಚಿತ್ರ" ಎಂಬುದನ್ನ ಸಾಧಿಸಿದರು.

ರಂಗಭೂಮಿ ಕಲಿಸಿದ ಬದ್ಧತೆ, ಶಿಸ್ತುಗಾರಿಕೆ, ಸಂಘಟನಶಕ್ತಿ, ಕಲ್ಪನಾಶಕ್ತಿಯನ್ನು ಚಿತ್ರ ಮಾಧ್ಯಮದಲ್ಲಿ ವಿಸ್ತರಿಸಿಕೊಂಡಿದ್ದಾರೆ. ರಂಗಭೂಮಿಯಲ್ಲಿ ಕಲಿಯುವುದು ಸಾಕಷ್ಟಿದೆ ಎಂದು ನಂಬಿದ್ದಾರೆ. ಚಿತ್ರ ಮಾಧ್ಯಮ ಉತ್ತುಂಗದ ಶಿಖರದ ಮೇಲೆ ಅವರನ್ನ ಕೂರಿಸಿದ್ದರೂ, ರಂಗಭೂಮಿಯನ್ನ ಮರೆತಿಲ್ಲ. ಬಿಡುವು ಮಾಡಿಕೊಂಡು ನಾಟಕದಲ್ಲಿ ಅಭಿನಯಿಸುತ್ತಾರೆ. ರಂಗಭೂಮಿಯ ಕೆಲಸ ಮಾಡುತ್ತಾರೆ. ಚಿತ್ರರಂಗಕ್ಕೆ ಬರುವವರಿಗೆ ರಂಗಭೂಮಿಯಲ್ಲಿ ಮೊದಲ



ಪಾಠ, ಪರಿಚಯವಾಗಿರಬೇಕು ಎನ್ನುತ್ತಾರೆ. ಹೀಗಾಗಿ ಭರಣರವರಿಗೆ "ರಂಗಭೂಮಿಯ ಕೆಲಸ ಪ್ರಾಮಾಣಿಕ ಕೆಲಸ, ಚಿತ್ರರಂಗದ ಕೆಲಸ ಕಾಳಜಿಯ ಕೆಲಸ" ಎಂದು ಭಾವಿಸುತ್ತಾರೆ. ಎರಡೂ ಮಾಧ್ಯಮದ ಬಗ್ಗೆ ಅಪಾರವಾದ ಗೌರವವನ್ನ ತೋರುತ್ತಾರೆ.

## ಮಾನವತೆಗಾಗಿ ಚಲನಚಿತ್ರ

ರಂಗಭೂಮಿಯ ಮೊದಲ ಆಶಯ ಮಾನವತೆಗಾಗಿ ಚಿತ್ರ ಮಾಧ್ಯಮದ ಮೊದಲ ಆಶಯ ಮನೋರಂಜನೆಗಾಗಿ ಭರಣರವರು ಈ ಎರಡರ ಸಮೀಕರಣವನ್ನ ತಮ್ಮ ಚಿತ್ರಗಳಲ್ಲಿ ಮಾಡಿ ತೋರಿಸಿದ್ದಾರೆ. ಚಿತ್ರ ಮಾಧ್ಯಮ ಕೇವಲ ಮನೋರಂಜನೆಗಾಗಿ ಅಲ್ಲ "ಮನೋರಂಜನೆಯ ಮೂಲಕ ಮಾನವೀಯತೆಗಾಗಿ" ಎಂಬುದನ್ನ ಸಾಬೀತು ಪಡಿಸುತ್ತಾರೆ. ಹೀಗಾಗಿ ಅವರ ಕಾಳಜಿ 'ಸಾಮಾಜಿಕ ಬದ್ಧತೆ ಮತ್ತು ಸಾಮಾಜಿಕ ನ್ಯಾಯ'ದ ಪರವಾಗಿರುತ್ತದೆ. ಈ ಘೋಷಣೆಯನ್ನ ಪ್ರಧಾನವಾಗಿಟ್ಟುಕೊಂಡು ಅವರು ಚಿತ್ರ ನಿರ್ಮಾಣದಲ್ಲಿ ತೊಡಗುವುದಿಲ್ಲ. ಅವರು ನಿರ್ದೇಶನ ಮಾಡಿದ ಪ್ರತೀ ಚಿತ್ರದಲ್ಲೂ ಪ್ರತೀ ಧಾರಾವಾಹಿಯಲ್ಲಿ ಸಹಜವಾಗಿ ಮೇಲಿನ ಕಾಳಜಿ ಪರ ಧ್ವನಿ ಅಂತರ್ಗತವಾಗಿರುತ್ತದೆ.

ಇದರ ನಿರಂತರ ಹುಡುಕಾಟ ಅವರ ಕಾಯಕದಲ್ಲಿ ಅಡಕವಾಗಿದೆ.

## ಕಲಾತ್ಮಕ ಮತ್ತು ವ್ಯಾಪಾರೀ ಚಿತ್ರದ ಸೇತು

ಯಾವುದೇ ಕತೆ ನೋಡುಗನಿಗೆ ಸಂವಹನಗೊಳ್ಳುವುದು ಮುಖ್ಯವೇ ಹೊರತು, ಚಿತ್ರದ ವರ್ಗೀಕರಣದಿಂದ ಚಿತ್ರಕ್ಕೆ ಪ್ರಾಮುಖ್ಯತೆ ಬರಬಾರದು! ಈ ಕಲಾತ್ಮಕ ಮತ್ತು ವ್ಯಾಪಾರೀ ಚಿತ್ರಗಳ ಚಿತ್ರ ವ್ಯಾಕರಣವನ್ನ ಬಲ್ಲ ಭರಣರವರು ಏಕ ಚಿತ್ರದಲ್ಲಿ ಎರಡು ಚಿತ್ರ ವ್ಯಾಕರಣಗಳನ್ನ ನಿರರ್ಗಳವಾಗಿ ಬಳಸಿ ಯಶಸ್ವಿಯಾಗಿದ್ದಾರೆ. ಹೇಗೆ ಪ್ರಸಿದ್ಧ ಕವಿಯಾದವನು ಗದ್ಯವನ್ನು ಬರೆದಾಗ ಕಾವ್ಯಾತ್ಮಕ ಗುಣಗಳು ಗದ್ಯದಲ್ಲಿ ನುಸುಳಿ ಬರುತ್ತವೆಯೋ ಹಾಗೆ ಕಲಾತ್ಮಕ ಚಿತ್ರದ ಸೂತ್ರಗಳು ಭರಣರವರ ನಿರ್ದೇಶನದ ಚಿತ್ರಗಳಲ್ಲಿ ನುಸುಳಿ ಬರುತ್ತವೆ. ಭರಣರವರ ನಿರ್ದೇಶನದ ಚಿತ್ರಗಳನ್ನ ನೋಡಿದಾಗೆಲ್ಲ ಕಲಾತ್ಮಕ ಮತ್ತು ವ್ಯಾಪಾರೀ ಚಿತ್ರ ಎಂಬ ವರ್ಗೀಕರಣವೇ ತಪ್ಪೇನು? ಎಂದನ್ನಿಸುತ್ತದೆ.

ಗಲ್ಲಾ ಪೆಟ್ಟಿಗೆಯ ಆಧಾರದ ಮೇಲೆ ಯಶಸ್ವಿಯಾದ ವ್ಯಾಪಾರಿ ಸೂತ್ರದ ಚಿತ್ರವೂ ಕೂಡ ಕಲಾತ್ಮಕ ಅಂಶಗಳಿಂದ ರೂಪುಗೊಳ್ಳಬಹುದು ಎಂಬುದನ್ನ ಅವರು ತಮ್ಮ ಚಿತ್ರಗಳಲ್ಲಿ ಸಾಧಿಸಿ ತೋರಿಸಿದ್ದಾರೆ. ಈ ಕಾರಣಕ್ಕಾಗಿ ಕನ್ನಡ ಚಲನಚಿತ್ರ ರಂಗದ ಮುಖ್ಯ ನಿರ್ದೇಶಕನಾಗಿ ನನಗೆ ಕಾಣುತ್ತಾರೆ.

ಯಾವುದೇ ನಾಟಕವನ್ನ ನೋಡಿದ ನಂತರ ಪ್ರೇಕ್ಷಕನ ಮನಸ್ಸಿನಲ್ಲಿ 'ಭಾವಶೋಧ'ದ ಕಾರ್ಯ ನಡೆಯಬೇಕು. ಆ ಮೂಲಕ ಅವನಿಗೆ 'ದರ್ಶನ' ಲಭ್ಯವಾಗಬೇಕು. ಒಳಿತು ಕೆಡಕನ್ನ ಕುರಿತು ಚಿಂತಿಸುವಂತಾಗಬೇಕು. ಒಳಿತಿನ ಬಗ್ಗೆ ಪ್ರೀತಿ ಮೂಡಬೇಕು. ಕೆಡಕಿನ ಬಗ್ಗೆ ಅನಾದರತೆ ಮೂಡಬೇಕು. ಇಂತಹ ಪ್ರಕ್ರಿಯೆ ನೋಡುಗನಲ್ಲಿ ನಡೆದಾಗ ಅವನು ಸಮಾಜವನ್ನ ಪ್ರೀತಿಸುತ್ತಾನೆ. ಮಾನವತೆಯಲ್ಲಿ ನಂಬಿಕೆಯನ್ನಿಡುತ್ತಾನೆ. ಇದು ಭರಣರ ಚಿತ್ರಗಳಲ್ಲಿ ಸಾವು

ಕಾಣಬಹುದಾಗಿದೆ. ಯಾವತ್ತೂ ಭಾವ ಪ್ರಚೋದನೆಯನ್ನ ಮಾಡುವಂತಹ ದೃಶ್ಯ ಸಂಯೋಜನೆಗೆ ಕೈ ಹಾಕಿಲ್ಲ. ಸೃಜನಶೀಲತೆಯಲ್ಲಿ ಭಾವವನ್ನು ಪ್ರಚೋದಿಸುವ ಅಥವಾ ಕೆರಳಿಸುವ ಅಂಶಗಳನ್ನ ಬಿತ್ತಿದರೆ ಸಾಮಾಜಿಕ ಜವಾಬ್ದಾರಿಯಿಂದ ಹಿಂದೆ ಸರಿದಂತೆ. ಇಂತಹ ಸಂದರ್ಭದಲ್ಲಿ ಅವರು ಜವಾಬ್ದಾರಿಯುತ ನಿರ್ದೇಶಕನಾಗಿ ನಮಗೆ ಕಾಣುತ್ತಾರೆ.

## 'ದೇಸಿ' ಮೂಲದ ಸೃಜನಕಾರ - ವೈವಿಧ್ಯತೆಯ ಹರಿಕಾರ

ಭರಣರವರು ಕನ್ನಡದಲ್ಲಿ ನಿರ್ದೇಶಿಸಿದ ಎಲ್ಲ ಚಿತ್ರಗಳನ್ನ ಗಮನದಲ್ಲಿಟ್ಟುಕೊಂಡು ನನ್ನ ಅನಿಸಿಕೆಗಳನ್ನ ಇಲ್ಲಿ ಪ್ರಸ್ತಾಪಿಸುತ್ತೇನೆ. 'ಗ್ರಹಣ'ದಿಂದ ಹೊರಟ ಅವರ ಚಿತ್ರ ಸೃಷ್ಟಿ ಅನೇಕ 'ಅನ್ವೇಷಣೆ'ಗಳನ್ನ ಮಾಡುತ್ತಾ, ಚಿತ್ರದಿಂದ ಚಿತ್ರಕ್ಕೆ ಬೆಳೆಯುತ್ತಾ, ಭಿನ್ನತೆಯನ್ನ ಸಾಧಿಸುತ್ತಾ ವೈವಿಧ್ಯಮಯವಾದ ಚಿತ್ರಗಳನ್ನ ನೀಡಿದ ಏಕೈಕ ನಿರ್ದೇಶಕ ನಾಗಾಭರಣ. ಅವರು ನಿರ್ದೇಶನ ಮಾಡಿದ ಚಿತ್ರಗಳೆಲ್ಲ ಒಂದಲ್ಲ ಒಂದು ಬಗೆಯಲ್ಲಿ 'ಮೈಲಿಗಲ್ಲು' ಎನ್ನಬಹುದಾದ ಚಿತ್ರಗಳು. ಅಂತರ್‌ರಾಷ್ಟ್ರೀಯ ಖ್ಯಾತಿಯನ್ನ ಭರಣರವರಿಗೂ, ಕನ್ನಡ ನಾಡಿಗೂ ತಂದುಕೊಟ್ಟಿವೆ.

ಗಲ್ಲಾ ಪೆಟ್ಟಿಗೆಯ ಯಶಸ್ಸನ್ನ ಭರಣರವರು ಯಾವತ್ತೂ ನಂಬುವುದಿಲ್ಲ. ಹಾಗೆ ಗಲ್ಲಾ ಪೆಟ್ಟಿಗೆಯ ಯಶಸ್ಸಿನ ಆಧಾರದ ಮೇಲೆ ಯಾವುದೇ ಚಿತ್ರದ ಯಶಸ್ಸು ಪರಿಗಣಿಸಬಾರದು. ಒಂದು ಒಳ್ಳೆ ಚಿತ್ರ, ಸದಭಿರುಚಿಯ ಚಿತ್ರ ಸಾರುವ ಸಾಂಸ್ಕೃತಿಕ ಸಂದೇಶದ ಮಹತ್ವದ ಆಧಾರದ ಮೇಲೆ ಚಿತ್ರದ ಯಶಸ್ಸು ಅಡಕವಾಗಿದೆ. ಮನುಷ್ಯನ ಅಂತರಂಗವನ್ನ ಕಲಕುವ ಸಂದೇಶ ಚಿತ್ರದಲ್ಲಿದ್ದರೆ ಅಥವಾ ಸಾರ್ವಕಾಲಿಕವಾದ ಸತ್ಯವನ್ನ ಸಾರುತ್ತಿದ್ದರೆ ಅಥವಾ ಇಡೀ ಸಮಾಜವನ್ನ ಚಿಕಿತ್ಸಕ ದೃಷ್ಟಿಕೋನದಿಂದ ನೋಡಿದ್ದರೆ ಅದು ಯಶಸ್ಸನ್ನ ಸಾಧಿಸಿದ ಹಾಗೆ. ಇಂತಹ ಸಂದೇಶ, ಸಾರ್ವಕಾಲಿಕ ಸತ್ಯ, ಚಿಕಿತ್ಸಕ ದೃಷ್ಟಿಕೋನ, ಭರಣರವರ ಚಿತ್ರಗಳಲ್ಲಿ ನಾವು ಕಾಣಬಹುದು.

ಆಧುನೀಕರಣದ ಅತಿಯಾದ ನಾಗಾಲೋಟದಲ್ಲಿ ಕಳೆದು ಹೋಗುತ್ತಿರುವ ಬದುಕಿನ ಮೌಲ್ಯಗಳು. ಅಂಧ ಧಾರ್ಮಿಕ ಪ್ರಜ್ಞೆ ಮತ್ತು ಅನಿಷ್ಟ ರಾಜಕಾರಣ ಬದುಕನ್ನ ಛಿದ್ರಗೊಳಿಸುತ್ತಿವೆ. ಸಂಸ್ಕೃತಿ ಮಾತ್ರವೇ ಬದುಕನ್ನ ಸದಾ ಒಗ್ಗೂಡಿಸುತ್ತದೆ. ಇದನ್ನ ಭರಣರವರು ಬಲವಾಗಿ ನಂಬುತ್ತಾರೆ. ವ್ಯಕ್ತಿ ಪ್ರಜ್ಞೆಗಿಂತ ಸಮಷ್ಟಿ ಪ್ರಜ್ಞೆಯಲ್ಲಿ ಆಸಕ್ತಿ ಮತ್ತು ನಂಬಿಕೆಯನ್ನ ತೋರುತ್ತಾರೆ. ವ್ಯಕ್ತಿ ಪ್ರಜ್ಞೆಯ ಸ್ಪಷ್ಟ ರೂಪವೇ ಮಾರ್ಗ ಪ್ರಜ್ಞೆ. ಸಮಷ್ಟಿ ಪ್ರಜ್ಞೆಯ ನಿಜ ಜೀವಾಳವೇ 'ದೇಸಿ ಪ್ರಜ್ಞೆ'. ಮಾರ್ಗ ಮತ್ತು ದೇಸೀ ಪ್ರಜ್ಞೆಯ ನಡುವೆ ಅಂತರ್ಗತವಾದ ಸಂಘರ್ಷ ಅನಾದಿ ಕಾಲದಿಂದಲೂ ನಡೆದು ಬಂದಿದೆ. ಮಾರ್ಗ ಪ್ರಜ್ಞೆಯಲ್ಲಿ ವ್ಯಕ್ತಿ ಪ್ರಾಧಾನ್ಯತೆ ಪಡೆದು 'ಅಹಂ' ಜಾಗೃತ ಸ್ಥಾನದಲ್ಲಿದ್ದು ಸದಾ ಅಧಿಕಾರಿಯುತ ಸ್ಥಾನದಲ್ಲಿ ವ್ಯವಹರಿಸುತ್ತದೆ. ಆದರೆ ದೇಸಿ ಪ್ರಜ್ಞೆಯಲ್ಲಿ ಸಮಾಜ ಪ್ರಾಧಾನ್ಯತೆ ಪಡೆದು ಅನಧಿಕಾರವಾಗಿ ಸಾಗುತ್ತದೆ. ಮಾರ್ಗ ಸಂಸ್ಕೃತಿ ಆಯಾ ಕಾಲ ಘಟ್ಟದ ಕ್ಷಣ ಕಾಲದ ಸೃಷ್ಟಿ, ಆದರೆ ದೇಸಿ ಸಂಸ್ಕೃತಿಯಲ್ಲಿ ಇತಿಹಾಸದ ನೆನಪು ಅಡಕವಾಗಿರುತ್ತದೆ. ಈ ಬಗೆಯ ಗ್ರಹಿಕೆಗಳು ಅವರ ಚಿತ್ರಗಳಲ್ಲಿ ನಾವು ಗಮನಿಸಬಹುದು.



ಜೊತೆಗೆ ಮಹಿಳೆ ಮತ್ತು ನಾಡಿನ ಜಾನಪದದ ಬಗ್ಗೆ ಅಪಾರ ಕಾಳಜಿಯನ್ನ ತೋರುತ್ತಾರೆ. ಹಲವು ಚಿತ್ರಗಳಲ್ಲಿ 'ಸ್ತ್ರೀ ಪರವಾದ'ದ ತಮ್ಮ ನಿಲುವನ್ನ ಪ್ರಕಟಿಸುತ್ತಾರೆ.

ಈ ನಿಟ್ಟಿನಲ್ಲಿ ಭರಣರವರು 25 ವರ್ಷಗಳಲ್ಲಿ 35 ಚಿತ್ರಗಳನ್ನ (ಹಲವು ಕಿರುತೆರೆಗೆ) ಅನೇಕ ಧಾರವಾಹಿಗಳನ್ನು ನಿರ್ದೇಶನ ಮಾಡಿದ್ದಾರೆ. 35 ಚಿತ್ರಗಳಲ್ಲಿ ಒಂದೇ ಒಂದು ರೀಮೇಕ್ ಚಿತ್ರವಿಲ್ಲ. ಒಂದಕ್ಕಿಂತ ಒಂದು ಭಿನ್ನ. ಅವರ ಹಲವು ಚಿತ್ರಗಳು ಕನ್ನಡದ ಕವಿತೆಗಳು, ನಾಟಕ, ಕಾದಂಬರಿಗಳ ಆಧಾರದ ಮೇಲೆ ಸೃಷ್ಟಿಗೊಂಡವು. ಬೇರ್‍ಯಾವ ಚಿತ್ರದ ಅನುಕರಣೆ ಇಲ್ಲವೇ ಇಲ್ಲ. ಪಕ್ಕಾ ಕನ್ನಡ ನೆಲದ ಸಿನಿಮಾಗಳು. ಕನ್ನಡ ನಾಡು ನುಡಿಯನ್ನ ಬೆಳೆಸಬಲ್ಲ ಸಿನಿಮಾಗಳು. ಕನ್ನಡದ ಹಿರಿಮೆಯನ್ನ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಸಾರಿದ ಸಿನಿಮಾಗಳು.

ಮೇಲೆ ಪ್ರಸ್ತಾಪಿಸಿದ 'ದೇಸಿ' ಸಂಸ್ಕೃತಿ ಸಾರಿ ಹೇಳುವ ಶ್ರೇಷ್ಠ ಚಿತ್ರ 'ಮೈಸೂರು ಮಲ್ಲಿಗೆ'. ಈ ಚಿತ್ರ ಕಲ್ಪನೆಯೇ ವಿಸ್ಮಯವನ್ನು ಹುಟ್ಟಿಸುವಂತಹದು. ಕವಿಯ ಕವಿತೆಗಳನ್ನ ಆಧಾರವಾಗಿಟ್ಟುಕೊಂಡು ಆ ಕವಿತೆಗಳು ಕವಿ ಮನಸ್ಸಿನಲ್ಲಿ ಹುಟ್ಟಿ ಬಂದ ಸಂದರ್ಭವನ್ನು, ಕವಿತೆಯ ಹುಟ್ಟಿಗೆ ಕಾರಣವಾದ ಕಾಲ ಮತ್ತು ಘಟನೆಯನ್ನು ಗ್ರಹಿಸಿಕೊಂಡು ಅಗೋಚರ ಕಥಾ ಎಳೆಯನ್ನ ಹುಡುಕಿ ತೆಗೆದು ಸ್ವಾತಂತ್ರ ಪೂರ್ವದ ಭಾರತೀಯ ಸಾಮಾಜಿಕ ಜೀವನದ ಸುಂದರ ಕಥೆಯನ್ನಾಗಿಸಿ ಒಂದು ಸದಭಿರುಚಿಯ ಚಿತ್ರವನ್ನ ನಿರ್ದೇಶನ ಮಾಡಿ ದಾಖಲೆಯಾಗಿಸಿದ್ದು ವಿಸ್ಮಯವನ್ನು ತರುತ್ತದೆ.

ಕನ್ನಡದ ಸಾಹಿತ್ಯ ಚರಿತ್ರೆಯನ್ನ ಬಲ್ಲವರಿಗೆ, ಸ್ವಾತಂತ್ರ ಪೂರ್ವದ ಕವಿ ಮನಸ್ಸುಗಳು ದೇಶವನ್ನ ಮುಕ್ತಿಗೊಳಿಸುವ ಕನಸು ಕಾಣುವುದನ್ನ ಅವರ ಪದ್ಯಗಳಲ್ಲಿ ಗದ್ಯಗಳಲ್ಲಿ ನಾವು ಕಾಣಬಹುದಾಗಿದೆ. ಅದೇ ಮನಸ್ಥಿತಿಯನ್ನ ಯಶಸ್ವಿಯಾಗಿ ಗ್ರಹಿಸಿದ್ದಾರೆ. ಕೆ.ಎಸ್. ನರಸಿಂಹ ಸ್ವಾಮಿಯವರ ಪ್ರೇಮ ಕವಿತೆಗಳಿಗೆ ಸ್ಪಷ್ಟ ಆಖ್ಯಾನವನ್ನ ಭರಣರವರು ನೀಡಿದ್ದಾರೆ.

ಇಡೀ ಕಥೆಯನ್ನ ಕನ್ನಡ ನೆಲ ನುಡಿಗೆ ಹೊಂದಿಸಿ, ಒಂದು ಕೌಟುಂಬಿಕ ಪ್ರೇಮ ಕಥೆಯನ್ನಾಗಿಸಿ, ದೇಶದ ಮಧ್ಯಮ ವರ್ಗ ದೇಶದ ಮುಕ್ತಿಗಾಗಿ ನೀಡಿದ ಬಲಿದಾನ ತ್ಯಾಗಗಳ ಬೆಲೆಯನ್ನ ನಮ್ಮ ಮುಂದಿಡುತ್ತಾರೆ.

ಇಂತಹ ಪ್ರಯತ್ನ ಭಾರತದಲ್ಲೇ ಮೊದಲು. ಪ್ರಪಂಚದ ಚಿತ್ರ ಮಾಧ್ಯಮದಲ್ಲಿ ಇಂತಹದು ನಡೆದಿಲ್ಲವೇನು? ಇದ್ದರೂ ಇರಬಹುದಲ್ವೆ, ಹಾಗಿದ್ದಲ್ಲಿ ಕನ್ನಡ ಸಿನಿಮಾದ ಶ್ರೇಷ್ಠತೆ ಹಾಗೂ ನಾಗಾಭರಣರ ನಿರ್ದೇಶನದ ವೈಶಿಷ್ಟತೆ ಎಂತಹದು? ಊಹಿಸಿ.

'ಸಂತ ಶಿಶುನಾಳ ಶರೀಫ' ಭರಣರ ಮತ್ತೊಂದು ಉತ್ತಮ ಪ್ರಯತ್ನದ ಚಿತ್ರ. ಕನ್ನಡದ ಸಾಹಿತ್ಯದಲ್ಲಿ ಶಿಶುನಾಳ ಶರೀಫರ ಜೀವನ ಚರಿತ್ರೆ ಅಲಿಖಿತ ಮತ್ತು ಅಲಭ್ಯ. ನಿಖರವಾಗಿ ಶರೀಫರ ಬಗ್ಗೆ ಹೇಳುವುದೇ ಕಷ್ಟ. ಹಾಗಿರುವಲ್ಲಿ ಶರೀಫರ ಪ ್ಯಗಳನ್ನೇ ಆಧಾರವಾಗಿಟ್ಟುಕೊಂಡು, ಜನಪದದಲ್ಲಿ ಅವರ ಬಗ್ಗೆ ಇದ್ದ ಕಥೆಗಳನ್ನ ಆಧಾರವಾಗಿಸಿಕೊಂಡು, ಶರೀಫರ ನಿಜ ಜೀವನಕ್ಕೆ ಹತ್ತಿರವಾಗುವಂತೆ ಕಥಾ ಹಂದರವನ್ನ ಸೃಜಿಸಿ ಚಿತ್ರಿಸಿದ್ದು ಸಾಮಾನ್ಯ ಮಾತಲ್ಲ. ಮತೀಯ ಕಲಹದ ನಡುವೆ ಶರೀಫರಂತಹ ಹೂ ಮನಸ್ಸು ನಮ್ಮ ನಡುವೆ ಬದುಕಬೇಕು!

ಭರಣರ ಸೃಜನಶೀಲ ವಿಸ್ತಾರ ಬಹಳ ದೊಡ್ಡದು. ಪ್ರಯೋಗಶೀಲತೆಯೇ ಅವರ ಶಕ್ತಿ. ವಿಭಿನ್ನತೆ ಅವರ ಆಸ್ತಿ... ಭಾರತದಲ್ಲಿ ಮೊದಲು ಎಂಬಂತೆ ಅವರ ನಿರ್ದೇಶನದ ಮತ್ತೊಂದು ಚಿತ್ರ 'ಆಕಸ್ಮಿಕ'. ತರಾಸುರವರ ಮೂರು ಕಾದಂಬರಿಗಳ ಸಮೀಕರಿಸಿ ಒಂದು ಕಥೆಯನ್ನಾಗಿಸಿ ತೆಗೆದ ಚಿತ್ರ 'ಆಕಸ್ಮಿಕ'. ಕನ್ನಡದ ವರನಟ ಡಾ|| ರಾಜ್ ಈ ಚಿತ್ರದಲ್ಲಿ ಅಭಿನಯಿಸಿದ್ದುದರಿಂದಾಗಿ ಇದು ಮತ್ತೊಂದು ವಿಶೇಷದ ಚಿತ್ರ.

ಜ್ಞಾನಪೀಠ ಪ್ರಶಸ್ತಿ ವಿಜೇತ ಪನ್ನಲಾಲ್ ಪಟೇಲರ ಕಾದಂಬರಿಯ ಆಧಾರಿತ ಚಿತ್ರ 'ಜನುಮದ ಜೋಡಿ'. ಈ ಚಿತ್ರವನ್ನ ಪಕ್ಕಾ ಕಮರ್ಷಿಯಲ್ ಚಿತ್ರವೆನ್ನಬೇಕೋ ಅಥವಾ ಪಕ್ಕಾ ಕಲಾತ್ಮಕ ಚಿತ್ರವೆನ್ನಬೇಕೋ... ವಿಮರ್ಶೆಯ ಯಾವ ಮಾನದಂಡ ಈ ಚಿತ್ರಕ್ಕೆ ಅನ್ವಯ ಮಾಡಲು ಸಾಧ್ಯ? ಅನ್ಯ ಭಾಷೆ ಕಾದಂಬರಿಯನ್ನ ಕನ್ನಡದ ಪರಿಸರಕ್ಕೆ ಹೊಂದಿಸಿದ್ದು, ಒಂದು ಹಳ್ಳಿಯ ಸಮಗ್ರ ಚಿತ್ರಣವನ್ನ ಅದರಲ್ಲಿ ಮೂಡಿಸಿದ್ದು ಅದ್ಭುತ. ಹಳ್ಳಿಗಾಡಿನ ಪರಿಸರದಲ್ಲಿ ಅವರು ಬೆಳೆದು ಬಂದ ಅನುಭವಗಳು 'ದೇಸಿತನ'ದ ಬಗ್ಗೆ ಅವರ ಗ್ರಹಿಕೆಗಳು ಈ ಚಿತ್ರದಲ್ಲಿ ಮೂರ್ತರೂಪ ಪಡೆಯುತ್ತವೆ. ಚಿತ್ರದಲ್ಲಿ ಬಳಸಿದ ಪ್ರತಿಯೊಂದು ವಸ್ತು, ವಸ್ತ್ರ, ಹಾಡು, ಕುಣಿತ, ನಡೆ ನುಡಿ ಎಲ್ಲವೂ 'ದೇಸಿತನ'ದ 'ದೇಶಿ ಸಂಸ್ಕೃತಿ'ಯ ಪ್ರತಿರೂಪಗಳು. ಮರೆತು ಹೋದದ್ದನ್ನ ನೆನಪಿಸುವ ಆಕರಗಳು. ನಮ್ಮ ಹಳೆಯ ಎಷ್ಟೋ ವಿವಾಹಿತ ಮಹಿಳೆಯರು ತಮ್ಮ ಅಶಕ್ತ ಗಂಡನನ್ನ ಸಂಪ್ರದಾಯದ ಚೌಕಟ್ಟಿನಲ್ಲಿ ಒಪ್ಪಿಕೊಂಡು, ಸೆರಗಿನ ಮರೆಯಲ್ಲಿ ಕಣ್ಣೀರು ಸುರಿಸುತ್ತಾ ಹೊಸಲೊಳಗೆ ಬದುಕನ್ನ ತೇಯುವ ದಾರುಣ ಕಥೆಗಳು ಕಾಲಗರ್ಭದಲ್ಲಿ ಹುದುಗಿ ಹೋಗಿವೆ. ಇನ್ನೂ ಇವೆ. ಅಂತಹ ಒಂದು ಸುಂದರ ಹಳ್ಳಿ ಹುಡುಗಿ ತನ್ನ ಅಶಕ್ತ ಗಂಡನ್ನ ಧಿಕ್ಕರಿಸಿ ಮನ ಮೆಚ್ಚಿದ ಪ್ರಿಯಕರನ್ನ ಸೇರುವ ಚಿತ್ರ 'ಜನುಮದ ಜೋಡಿ'. ಚಿತ್ರದ ಪ್ರತಿ ಹಂತದಲ್ಲೂ ಭರಣರು ಯಶಸ್ಸನ್ನ ಸಾಧಿಸಿದ್ದಾರೆ.

ವಿಮೋಚನೆಗಾಗಿ ಹೋರಾಡುವ 'ವಿಮೋಚನೆ' ಚಿತ್ರದ ಮಹಿಳೆಯರು, ನಾಗಮಂಡಲದ ರಾಣಿ, ಸಿಂಗಾರವ್ವ, ಜನುಮದ ಜೋಡಿಯ ನಾಯಕಿ (ಕನಕರ) ಮೂಲಕ, ಸ್ತ್ರೀ ಸಮುದಾಯ ಎಲ್ಲ ಕಟ್ಟಳೆಗಳನ್ನ ಮುರಿದು ಬದುಕಬೇಕು, ತಮ್ಮ ಬದುಕಿನ ಆಯ್ಕೆಯನ್ನ ತಾವೇ ಮಾಡಿಕೊಳ್ಳಬೇಕು ಎಂಬ ಸಂದೇಶವನ್ನು ಹಿರಿಯ ತೆರೆಯ ಮೇಲೆ ಸಾರುತ್ತಾರೆ. ದುಃಖಿತಪ್ತ ಮಹಿಳೆಯರ ಎದೆಯಲ್ಲಿ ಒಂದು ಮಿಂಚಿನ ಆಶಾಕಿರಣವನ್ನ ಬಿತ್ತುವಲ್ಲಿ ನಾಗಾಭರಣರು ಯಶಸ್ವಿಯಾಗುತ್ತಾರೆ.

ಅವರ ಮೆಗಾ ಧಾರಾವಾಹಿ 'ಸಂಕ್ರಾಂತಿ' ಅತ್ಯಂತ ಕೀರ್ತಿವೆತ್ತ ಧಾರಾವಾಹಿ. ಇದು ಅಪಾರವಾದ ಜನಮನ್ನಣೆಯನ್ನು ಪಡೆಯಲು ಮುಖ್ಯ ಕಾರಣ 'ಸಂಕ್ರಾಂತಿ' ಧಾರಾವಾಹಿ ಹುಡುಕಲು ಹೊರಟ 'ದೇಸಿತನ'. ಸಮಗ್ರ ಭಾರತದ ಚಿತ್ರಣ ಈ ಕಥೆಯಲ್ಲಿತ್ತು. ಜನಾಂಗೀಯ ದಾರುಣ ಕಥೆ, ಕುಟುಂಬಗಳ ಸಂಘರ್ಷದ ಕಥೆ ರಾಜಕೀಯ-ಧಾರ್ಮಿಕದ ಅಟ್ಟಹಾಸದ ಕಥೆ... ಜೊತೆಗೆ ಪ್ರೀತಿ ಪ್ರೇಮದ ನಿಜ ಬದುಕಿನ ಕಥೆ... ಹೀಗೆ ಸಂಸ್ಕೃತಿಯ ಕಣಜ ಸಂಕ್ರಾಂತಿಯಲ್ಲಿತ್ತು. ಮಾರ್ಗ ಪ್ರಜ್ಞೆ ಮತ್ತು ದೇಸಿ ಪ್ರಜ್ಞೆಯ ಸೃಷ್ಟಿ ಚಿತ್ರಣ ಇದರಲ್ಲಿದೆ. ಮಾರ್ಗ ಪ್ರಜ್ಞೆಯಲ್ಲಿ ಶೇಷಪ್ಪ ಮತ್ತು ಅವನ ವರ್ಗ ನಿಂತರೆ, ದೇಸಿ ಪ್ರಜ್ಞೆಯಲ್ಲಿ ಮಾರೇಗೌಡ



ಮತ್ತು ಇಡೀ ಹಳ್ಳಿ ನಿಲ್ಲುತ್ತದೆ. ಇವೆರಡರ ಸಂಘರ್ಷ ಅನಾದಿ ಕಾಲದ್ದು ಹೌದು, ಈಗಿನದ್ದು ಹೌದು ಎಂಬಂತೆ ತೋರಿಸುತ್ತಾರೆ... ಗ್ರಾಮೀಣ ಬದುಕಿನ ಒಳಿತನ್ನ ಕೆಡುಕನ್ನ ಸಮತಟ್ಟೆಯಲ್ಲಿಟ್ಟು ವಿಶ್ಲೇಷಿಸಿದ್ದಾರೆ.

'ಸಂಕ್ರಾಂತಿ!' ಧಾರಾವಾಹಿಯ ಪರಂಪರೆಯಲ್ಲಿ ದೊಡ್ಡ ಮೈಲುಗಲ್ಲು. ಭರಣರವರ ಸೃಜನ ಶಕ್ತಿ ಮತ್ತು ಯೋಚನಾ ಶಕ್ತಿ... ಸ್ಪಷ್ಟ ನಿಲುವನ್ನ ಹೇಳಲು 'ಸಂಕ್ರಾಂತಿ' ಧಾರಾವಾಹಿ ಅತ್ಯಂತ ಧೀಮಂತ ಉದಾಹರಣೆ.

## ಸದಾ ಹಸನ್ಮುಖಿ-ಸ್ನೇಹ ಜೀವಿ

ನಾಗಾಭರಣರಿಗೆ ರಂಗಭೂಮಿ ಮತ್ತು ಚಿತ್ರರಂಗ ಅಪಾರ ಖ್ಯಾತಿಯನ್ನ ತಂದುಕೊಟ್ಟಿದೆ. ಅಂತರ್‌ರಾಷ್ಟ್ರೀಯ ಖ್ಯಾತಿಯನ್ನ ತಂದುಕೊಟ್ಟರೂ ಅವರ ಸರಳತನ ಅವರಿಂದ ದೂರವಾಗಿಲ್ಲ... ಕೀರ್ತಿ ಬಂದರೂ ಅಪಕೀರ್ತಿ ಬಂದರೂ ಸರಿಯೇ ಅವರಲ್ಲಿರುವುದು ಒಂದು ಉತ್ತರ ಅವರ 'ನಗು'. ಅವರ ನಗುವಿಗೆ ಎಲ್ಲವನ್ನ ಸಹಿಸಿಕೊಳ್ಳುವ ಶಕ್ತಿಯ ಗುಣವಿದೆ. ರಂಗಭೂಮಿಯವರನ್ನ ಸಾಹಿತಿಗಳನ್ನ ಕಂಡರೆ ಅಪಾರ ಪ್ರೀತಿ. ಧರ್ಮ ಗುರುಗಳು, ರಾಜಕಾರಣಿಗಳೆಂದರೆ ಮೂರು ಮಾರು ದೂರ ನಿಲ್ಲುತ್ತಾರೆ.

ಭರಣರ ದೊಡ್ಡ ಗುಣ 'ಪ್ರತಿಭೆ'ಯನ್ನ ಗೌರವಿಸುವುದು. ವ್ಯಕ್ತಿಗಿಂತ 'ಪ್ರತಿಭೆ' ದೊಡ್ಡದು ಎಂದು ಸದಾ ನಂಬುತ್ತಾರೆ. ರಂಗ ನಾಟಕವಾಗಲಿ ಚಿತ್ರ ನಾಟಕವಾಗಲಿ ಅದು ಸಮಷ್ಟಿಯ ಸೃಷ್ಟಿ ಎಂದು ಭಾವಿಸುತ್ತಾರೆ. ಯಾವುದೇ ಧಾರಾವಾಹಿಯಾಗಲಿ ಚಲನಚಿತ್ರವಾಗಲಿ ನಿರ್ಮಾಣ ಮಾಡುವ ಹಂತದಲ್ಲಿ ಇಡೀ ತಂಡ ಭಾಗಿಯಾಗುವಂತೆ ನೋಡಿಕೊಳ್ಳುತ್ತಾರೆ. ಯಾರೇ ಸಲಹೆ ಸೂಚನೆಗಳನ್ನ ಕೊಟ್ಟರೂ ಪ್ರೀತಿಯಿಂದ ಸ್ವಾಗತಿಸುತ್ತಾರೆ. ಯಾರ ಭಾವನೆಗಳಿಗೂ ಘಾಸಿಯಾಗದ ರೀತಿಯಲ್ಲಿ ವರ್ತಿಸುತ್ತಾರೆ. ಪ್ರತಿಯೊಂದು ಕೆಲಸದಲ್ಲಿ ಅಚ್ಚುಕಟ್ಟುತನ ವ್ಯವಹಾರ ಪ್ರಜ್ಞೆ ಎದ್ದು ಕಾಣುತ್ತದೆ.

ತಮ್ಮ ಮನಸ್ಸಿಗೆ ಒಗ್ಗದ ಹೊರತು ಯಾವ ಕೆಲಸವನ್ನೂ ಮಾಡಲಾರರು. ಕನ್ನಡ ಚಿತ್ರರಂಗ ಬೆಳೆಯಬೇಕು, ಕನ್ನಡದ ಕಥೆಗಾರರು, ಸಂಭಾಷಣೆಗಾರರು, ತಂತ್ರಜ್ಞರು ಬೆಳೆಯಬೇಕು. ಕನ್ನಡಕ್ಕೆ ಸಾಗಿ ಬರುವ ಎರವಲು ಸಂಸ್ಕೃತಿ ನಿಲ್ಲಬೇಕು. ನಮ್ಮಲ್ಲಿರುವ ಅಪಾರ ಕಥಾ ವಸ್ತುಗಳು ಚಿತ್ರರಂಗವನ್ನ ಪ್ರವೇಶಿಸಬೇಕು ಎಂದು ನಿತ್ಯ ಕನಸು ಕಾಣುತ್ತಾರೆ.

## ಜನುಮದ ಜೋಡಿ

ಇಷ್ಟೆಲ್ಲ ಭರಣರ ಬಗ್ಗೆ ಹೇಳಿದ ಮೇಲೆ ಅವರ ಸಾಧನೆಯ ಹಿಂದೆ ಇರುವ ಅಪರೂಪದ ವ್ಯಕ್ತಿಯ ಬಗ್ಗೆ ಹೇಳದಿದ್ದರೆ, ಮನಸ್ಸಿಗೆ ಸಮಾಧಾನವಾಗಲಾರದು. ಪ್ರತಿಯೊಬ್ಬ ಸಾಧಕನ ಹಿಂದೆ ಶ್ರೀರಕ್ಷೆಯಂತೆ ಸ್ತ್ರೀರಕ್ಷೆ ಇದ್ದೇ ಇರುತ್ತದೆ. ಇದು ಭರಣರ ಪಾಲಿಗೆ ಸುಳ್ಳಲ್ಲ. ಆ ಶ್ರೀರಕ್ಷೆ ಅವರ ಧರ್ಮಪತ್ನಿ ನಾಗಿಣಿಭರಣ. ಪ್ರತಿಹಂತದಲ್ಲೂ ಭರಣರ ಸಾಧನೆಯ ಹಿಂದೆ ನಾಗಿಣಿಭರಣ ಇದ್ದಾರೆ. ಇದ್ದೇ ಇರುತ್ತಾರೆ. ನಾಗಾಭರಣರು ಸೃಷ್ಟಿಸ ಹೊರಟ ಪ್ರತಿಯೊಂದು ಕೃತಿಯ ಕಥನ ಮಂಥನ ಪ್ರಾರಂಭದ ಹಂತದಲ್ಲಿ ಪತಿ ಪತ್ನಿಯರ ಮಧ್ಯೆ ನಡೆಯುತ್ತದೆ.

ನಾಗಿಣಿಭರಣರವರು ಮೊದಲ ಪ್ರೇಕ್ಷಕಿ ಮೊದಲ ವಿಮರ್ಶಕಿಯೂ ಹೌದು. ನಾಗಾಭರಣರ ಸೃಜನ ಕಾರ್ಯದ ಪ್ರತಿ ಹಂತದಲ್ಲೂ ಭರಣರ ತದ್ರೂಪದಂತೆ ಕೆಲಸ ಮಾಡುತ್ತಾರೆ. ದೂರದೃಷ್ಟಿ ಕಂಡದ್ದನ್ನ ಕಂಡ ಹಾಗೆ ಹೇಳುವ ಗುಣ ನಾಗಿಣಿಭರಣರವರದ್ದು. ಈ ದಿಶೆಯಲ್ಲಿ ಭರಣರು ಪುಣ್ಯಶಾಲಿ... ಅವರಿಬ್ಬರ ಜೋಡಿ 'ಜನುಮದ ಜೋಡಿ'. ಆ ಜೋಡಿಗೆ ಅಭಿನಂದನೆಗಳು. ಕನ್ನಡದ ಕೀರ್ತಿ ಪತಾಕೆಯನ್ನ ಮತ್ತಷ್ಟು ಎತ್ತರಕ್ಕೆ ನಾಗಾಭರಣರು ಕೊಂಡೊಯ್ಯಲಿ, ಅವರ ಎಲ್ಲ ಕಾರ್ಯಗಳು ಶುಭ ತರಲಿ. ನೂರು ಕಾಲ ಬಾಳಲಿ ಎಂಬ ಹಾರೈಕೆಗಳು.

ಮುಂಬರುವ ಪೀಳಿಗೆ ಕನ್ನಡ ಚಿತ್ರರಂಗಕ್ಕೆ ನಾಗಾಭರಣರ ಕೊಡುಗೆಯನ್ನ ಅರ್ಥಮಾಡಿಕೊಳ್ಳಲಿ, ಅವರು ತೋರಿಸಿಕೊಟ್ಟ ಮಾರ್ಗದಲ್ಲಿ ನಡೆಯಲಿ, ಅವರು ಅನುಸರಿಸಿದ ಕಾಳಜಿಗಳನ್ನ ಅರ್ಥಮಾಡಿಕೊಂಡು ಅನುಸರಿಸಲಿ, 'ದೇಸಿ ಪ್ರಜ್ಞೆ'ಯ ಬೇರುಗಳ ಹುಡುಕಾಟ ನಡೆಸಲಿ ಎಂದು ಆಶಿಸುತ್ತೇನೆ.

❑ ❖ ❑ ❖ ❑



# ರಂಗಸಂಸ್ಕೃತಿಯಾಭರಣ

ಡಾ.ನಾ. ದಾಮೋದರ ಶೆಟ್ಟಿ

ಒಮ್ಮೆ ನಾಗಾಭರಣವ ಜೊತೆ ಬೆಂಗಳೂರು ನಗರದಲ್ಲಿ ಅವರ ಕಾರಿನಲ್ಲೆ ಪಯಣಿಸುತ್ತಿದ್ದೆ. ಅವರು ತುಸು ಗಂಭೀರವಾಗಿ ಯಾವುದೋ ಕ್ಯಾಸೆಟ್ ಸಂಭಾಷಣೆ ಆಲಿಸುತ್ತಿದ್ದರು. 'ಇದೇನಪ್ಪಾ, ಮಂಗಳೂರಿನಿಂದ ಬಂದಿದ್ದೀನಿ. ಮಾತನಾಡೋದು ಬೇಕಾದಷ್ಟಿದೆ. ಹೀಗಾ ಮಾಡೋದು' ಅಂತ ಅಂದುಕೊಳ್ಳುತ್ತಿದ್ದಾಗಲೇ ಕ್ಯಾಸೆಟ್ ಆಫ್ ಮಾಡಿ ಯಾವುದೋ ನಾಟಕದ ಒಂದು ಡೈಲಾಗನ್ನು ಒಂದೇ ಉಸುರಿಗೆ ಒದರಿದರು. ಆಗಲೇ ಗೊತ್ತು, ಅವತ್ತು ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ಸಿಜಿಕೆಯವರ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭರಣರು ಬಣ್ಣ ಬಳಿಯುವುದಕ್ಕಿದೆ ಎಂದು. ಹಳೆಯ ನಾಟಕದ ದೃಶ್ಯವೊಂದರ ಮರುಪ್ರಯೋಗ!

ಇದನ್ನೇ ಬದ್ಧತೆ ಎನ್ನುವುದು. ತಾನು ವಹಿಸಿಕೊಂಡ ಕರ್ತವ್ಯವನ್ನು ನಿಭಾಯಿಸುವುದಕ್ಕೆ ಸಮಯ ಹೊಂದಿಸುವ ವಿನೂತನ ಕ್ರಮ ವಿನ್ಯಾಸವಿದು. ಇಲ್ಲದಿದ್ದರೆ ದುಂಡಿರಾಜರ ಹನಿಕವನಗಳ 'ಡುಂಡಿಕಾ ಮಿಡಿ ಉಪ್ಪನ್‌ಕಾಯ್' ಧ್ವನಿಸುರುಳಿಯನ್ನು ತಯಾರಿಸುವ ತುಡಿತಕ್ಕೆ ಭರಣರಿಗೆ ಹೇಗೆ ಸಮಯಾವಕಾಶ ಒದಗಬೇಕು. ದತ್ತಣ್ಣ, ಕಿಟ್ಟಿ, ಚಿನ್ನಾ, ಮಾಲತಿ, ನಾಗಿಣಿ, ಮುದ್ದುಕೃಷ್ಣ, ರಮೇಶ್ಚಂದ್ರ, ನರಸಿಂಹ ನಾಯಕ್, ಜೆರ್ರಿ - ಎಲ್ಲರೂ ಬಂದು ಒಂದೊಂದು ಹನಿಗವನಕ್ಕೆ ಧ್ವನಿ ಕೊಡುತ್ತಾ ಸಾಗುತ್ತಿದ್ದರು. ನಾಗಾಭರಣ ಮಾತ್ರ ಸಿ. ಅಶ್ವತ್ಥರೊಂದಿಗೆ ಸ್ಥಾಯಿಯಾಗಿ ಕುಳಿತು ಅರವಿಂದ ಕಿಗ್ಗಾಲರ ಸ್ಟುಡಿಯೋದಲ್ಲಿ ಟೀ ಹೀರುತ್ತಾ ಧ್ವನಿಸುರುಳಿಯನ್ನು ಸಿದ್ಧಪಡಿಸಿಯೇ ಬಿಟ್ಟರು! ಸಾಹಿತ್ಯದ ಬಗೆಗಿನ ಒಲವು ಎಲ್ಲ ಗೊಡವೆಗಳನ್ನೂ ಮರೆಯಿಸಿತ್ತು!

ಒಳ್ಳೆಯ ಓದುಗ ಭರಣ. ಮನೆಯಲ್ಲೊಂದು ಸುಂದರ ವಾಚನಾಲಯ. ಬೇಕಾದಷ್ಟು ಹೊತ್ತಿಗೆಗಳು. ಉದ್ದೇಶ ಸಿನಿಮಾ ಇರಬಹುದು. ನಾಟಕವೆ ಇರಬಹುದು. ಓದದೆ ನಾಟಕ, ಸಿನಿಮಾ ಮಾಡುವ ಕಮರ್ಶಿಯಲ್ ನಿರ್ದೇಶಕರ, ನಟರ ಯೋಚನೆ ಅವರದ್ದಲ್ಲ. ಆದ್ದರಿಂದಲೇ ಅವರ ಹೆಚ್ಚಿನ ಚಲನಚಿತ್ರಗಳು, ನಾಟಕಗಳು ಕಲಾತ್ಮಕತೆಯ ಸಿಂಚನದಿಂದ ಕೂಡಿ ಪರದೆಗೆ, ರಂಗಪರದೆಗೆ ಬರುತ್ತವೆ.

ನಾಗಾಭರಣ ನಮಗೆಲ್ಲ ಗೊತ್ತಿರುವಂತೆ ರಂಗಭೂಮಿಯ ಮೂಲದಿಂದ ಚಿತ್ರರಂಗಕ್ಕೆ ಬಂದವರು. ಹಾಗಾಗಿಯೇ ಇರಬೇಕು, ಚಿತ್ರರಂಗದಲ್ಲೂ ನಾಟಕದ ಅಭಿನಯ ಶಕ್ತಿ, ಫ್ರೇಮಿನೊಳಗಿನ ಸಮತೋಲನ ಸ್ಥಿತಿಯ ಅರಿವು, ಬೇಕು ಬೇಡಗಳಲ್ಲಿನ ನಿಖರತೆ - ಇತ್ಯಾದಿಗಳ ಮುದ್ರೆ ಅವರ ಚಲನಚಿತ್ರಗಳಲ್ಲಿ ಢಾಳಾಗಿ ಕಾಣಿಸುವುದು. ಅವರ ಸಿನಿಮಾಗಳು ಇತರ ಕನ್ನಡದ ನಿರ್ದೇಶಕರದ್ದಕ್ಕಿಂತ ಭಿನ್ನವಾಗಿ ನಿರ್ದೇಶಿಸಲ್ಪಡುವುದಕ್ಕೂ ಅವರ ರಂಗದ ಹಿನ್ನೆಲೆಯೇ ಕಾರಣ.

ಸಾಮಾನ್ಯವಾಗಿ ನಿರ್ದೇಶಕರು ನಟರ ಮೇಲೆ ರೇಗಾಟ ನಡೆಸುತ್ತಿರುತ್ತಾರೆ. ನಾಗಾಭರಣ ನಟರಿಗೆ, ಯೂನಿಟ್‌ನ ಇತರರಿಗೆ ಆಜ್ಞಾಪಿಸುವ, ಹೇಳುವ ಮಾತುಗಳಲ್ಲಿ ಮೊನಚು, ಅನ್ಯಾರ್ಥಗಳಿರಬಹುದು. ಆದರೆ ಇನ್ನೊಬ್ಬರ ಎದುರಿಗೆ ಅವರ ಮುಖಭಂಗ ಮಾಡುವ ಕೆಲಸವನ್ನು ಯಾವತ್ತೂ ಮಾಡುವುದಿಲ್ಲ. ಅದು ನಿಜರಾದ ರಂಗಭೂಮಿ! ಇತರ ನಿರ್ದೇಶಕರು ಈ ದೃಷ್ಟಿಯಲ್ಲಿ ಭರಣರಿಂದ ಕಲಿಯಬೇಕಾದ್ದು ಬಹಳ ಇದೆ.

ಭರಣರಿಗೆ ಆಯಾ ಪ್ರದೇಶದ ಪ್ರಾದೇಶಿಕ ಕಲೆ, ಸಂಸ್ಕೃತಿಯ ಬಗ್ಗೆ ಯಾವತ್ತೂ ಕುತೂಹಲ. ಅದನ್ನವರು ಸಾಧಾರವಾಗಿ ತಿಳಿದುಕೊಳ್ಳುವುದಷ್ಟೇ ಅಲ್ಲದೆ ತಾನು ನಿರ್ದೇಶಿಸುವ ಚಲನಚಿತ್ರಗಳಲ್ಲಿ ಅಳವಡಿಸುತ್ತಾರೆ. ಭೂತಾರಾಧನೆಯ ಕುರಿತಾದ ತಿಳುವಳಿಕೆಯನ್ನು ವೃದ್ಧಿಸಿಕೊಳ್ಳುವ ಕುತೂಹಲವನ್ನೊಮ್ಮೆ ಮಂಗಳೂರಿಗೆ ಬಂದಾಗ ತಿಳಿಸಿದ್ದರು. ಪ್ರೊ. ಅಮೃತಸೋಮೇಶ್ವರ ಅವರೊಂದಿಗೆ ಒಂದು ಸಂವಾದವನ್ನೇರ್ಪಡಿಸಿದ್ದೆವು. ಅದು ಅವರ ಮೇಲೆ ತುಂಬ ಪರಿಣಾಮ ಬೀರಿದ್ದು ಕಂಡು ಬಂತು. ಮುಂದೊಮ್ಮೆ 'ಸಾಗರದೀಪ' ಎನ್ನುವ ಚಲನಚಿತ್ರ ನಿರ್ದೇಶಿಸುವಾಗ ಅಲ್ಲಿ ಭೂತಗಳಿಗೆ ಪ್ರವೇಶ ಕೊಟ್ಟರು. ಭೂತಗಳು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಹಾಕಿಕೊಟ್ಟ ಪರಂಪರೆಯನ್ನೊಮ್ಮೆ ಕೆದಕಿ ಧಾರಾವಾಹಿಯಾಗಿಸಬೇಕೆಂಬ ಅವರ ಬಯಕೆ ಇನ್ನು ಕೈಗೂಡಬೇಕಷ್ಟೆ.

ನಾಗಾಭರಣ ಒಳ್ಳೆಯ ರಂಗನಟ. ಬೆನಕ ತಂಡದ ಸತ್ತವರ ನೆರಳಿನಲ್ಲಿ ಹಾಡುತ್ತಾ ವೇದಿಕೆಗೆ ಬಂದ ನಾಗಾಭರಣರನ್ನು ಮೊದಲ ಬಾರಿಗೆ ಕಂಡಿದ್ದೆ. ಬಿ.ವಿ. ಕಾರಂತರ ಖಾಸಾ ಶಿಷ್ಯರಂತೆ ಅವರು ಕಂಡುಬಂದರು. ಕಾರಂತರ ಜೊತೆಗಿನ ಅವರ ಸಂಬಂಧಗಳು ಮಂಗಳೂರು ಆಕಾಶವಾಣಿಯ 'ಮಾತುಕತೆ'ಯ ಮೂಲಕ ಬಹಿರಂಗಗೊಂಡದ್ದು ಕಾರಂತರ ನಿಧನಕ್ಕೆ ಕೆಲದಿನಗಳ ಮುನ್ನ. ರಂಗಭೂಮಿಯ ಜೊತೆಗಿನ ಅವರ ನಂಟು ಅನೂಚಾನವಾಗಿ ಹರಿದು ಬಂದದ್ದೆ. ಕಿಂಚಿತ್ ಬಿಡುವಾದರೂ ಸರಿ; ಒಂದು ನಾಟಕಾಭಿನಯದ ಹಸಿರುಚಿಯನ್ನವರು ಅನುಭವಿಸಿಯೇ ಸಿದ್ಧ. ಮರುಪ್ರದರ್ಶನದ ಪ್ರಶ್ನೆ ಬಂದಾಗಲಷ್ಟೇ ಸಮಸ್ಯೆ. ಆದರೂ ತಬರನ ಕಥೆಯ ತಬರನಾಗಿ, ನೀಗಿಕೊಂಡ ಸಂಸದ ಸಂಸನಾಗಿ ನಾಗಾಭರಣರು ನೀಡಿದ ಅಭಿನಯ ಮನೋಜ್ಞ. ಅವುಗಳ ಅನೇಕ ಮರುಪ್ರದರ್ಶನಗಳೂ ಬೆಳಕು ಕಂಡಿವೆ. ಭರಣರ ಅಭಿನಯದಲ್ಲಿ ಕೃತ್ರಿಮತೆ ಇಲ್ಲ. ನೈಜ, ನೇರ, ಸಹಜ. ಆ ಕಾರಣಕ್ಕಾಗಿಯೇ ಮೈಸೂರಿನಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದಲ್ಲಿ ಪ್ರದರ್ಶನಗೊಂಡ ನೀಗಿಕೊಂಡ ಸಂಸ ಹಿರಿಯ ವಿದ್ವಾಂಸರ ಮುಕ್ತಕಂಠದ ಪ್ರಶಂಸೆಗೆ ಭಾಜನವಾದುದು.

ಇತ್ತೀಚೆಗಿನ ದಿನಗಳಲ್ಲಿ ನಾಗಾಭರಣರ ರಂಗಪ್ರವೇಶಕ್ಕೆ ಅಡಚಣೆಗಳುಂಟಾದದ್ದು ಕಂಡು ಬರುತ್ತದೆ. ಇಂತಹ ಪ್ರಬುದ್ಧ ನಟರು ಚಲನಚಿತ್ರರಂಗದಲ್ಲಿ ಆರ್ಜಿಸಿದ ಪ್ರಸಿದ್ಧಿಯನ್ನು ಬಳಸಿಕೊಂಡು ಬಿಡುವಾದಾಗಲೆಲ್ಲ ರಂಗಭೂಮಿಗೆ ಪ್ರವೇಶಿಸುತ್ತಲಿದ್ದರೆ ಯುವ ತಲೆಮಾರಿಗೆ ಇನ್ನಷ್ಟು ಪ್ರಚೋದನೆ ಲಭಿಸಿದಂತಾಗುತ್ತದೆ. ನಾಟಕ ರಂಗದಿಂದ ಸಿನಿಮಾಕ್ಕೆ ಹೋದವರು 'ಮರಳಿ ಮಣ್ಣಿಗೆ' ಬರುವುದು ಸಾಧ್ಯವಾಗಲೇಬೇಕು. ನಾಗಾಭರಣರು ಈ ದಿಶೆಯಲ್ಲೊಂದು ದಿಟ್ಟ ಮಾದರಿ ಹಾಕಿಕೊಡಬೇಕು. ಅದು ಯಶಸ್ವಿಯಾದರೆ ರಂಗಭೂಮಿ ಗಟ್ಟಿಗೊಳ್ಳುತ್ತದೆ. ನಾಗಾಭರಣರು ಮಾರ್ಗ ಪ್ರವರ್ತಕರಾಗುತ್ತಾರೆ. ಹಾಗಾಗಲಿ ಎಂಬುದು ಹಾರೈಕೆ.



# ಆ-ಭರಣ

ಗೋಪಿ, ಬೆನಕ

ಗೆಳೆಯ ಭರಣನಿಗೆ 50ರ ಪ್ರಾಯ. ಹುಡುಗುತನದ ಹುಮ್ಮಸ್ಸನ್ನು ಹುಗಿದು, ಅರಳಿರುವ ಅನುಭವವನ್ನು ಅನಾವರಣಗೊಳಿಸುವ ಕಾಲ. ಮಕರ ಸಂಕ್ರಾಂತಿಗೆ ಸೂರ್ಯನು ಪಥ ಬದಲಿಸಿದಂತೆ ಹೊರಳು ಹಾದಿಯಲ್ಲಿ ನಿಂತು ಗತ ಕಾಲದ ಸಾಫಲ್ಯತೆಯನ್ನು ಒಮ್ಮೆ ಅವಲೋಕಿಸುವ ಕಾಲ. ಹಾಗೆ ನೋಡುತ್ತಾ ಹಿಂದೆ ಸರಿದಾಗ...

... 30 ವರ್ಷಗಳ ಹಿಂದೆ ... 70ರ ದಶಕ ... ಪದವೀಧರನಾಗಿ ಹೊರಬಂದಿದ್ದ ಭರಣ, ಜೀವನಕ್ಕಾಗಿ ಕಾನೂನು ಪದವಿಯನ್ನು ಪಡೆಯಬೇಕೆಂಬ ಹಂಬಲ ಹೊತ್ತಿದ್ದ. ಅದೇ ಸಮಯದಲ್ಲಿ, ರವೀಂದ್ರ ಕಲಾಕ್ಷೇತ್ರದ ಬಯಲು ರಂಗಭೂಮಿಯಲ್ಲಿ ಕಾರಂತ ನಿರ್ದೇಶನದ "ಈಡಿಪಸ್", "ಸಂಕ್ರಾಂತಿ", "ಜೋಕುಮಾರ ಸ್ವಾಮಿ" ನಾಟಕಗಳ ಪ್ರಯೋಗ. ಹೊಸತನ, ಹೊಸ ಛಾಪು, ಮುಗಿಬಿದ್ದ ಪ್ರೇಕ್ಷಕರು. ರಂಗಭೂಮಿಗೆ ಹೊಸ ಮಿಂಚು ಹರಿದಿತ್ತು. ಮಾಯಾಲೋಕದಂತೆ ಮಿರುಗಿದ ಉತ್ಸವ, ಉತ್ಸಾಹ, ಎಂಥಾ ಅಪ್ರಬುದ್ಧನಲ್ಲೂ ಗರಿಗೆದರಿದ ಕಲ್ಪನೆಗಳು. ತಂಡೋಪತಂಡವಾಗಿ ರಂಗಾಸಕ್ತರು ವಿಭಿನ್ನ ಪ್ರಯೋಗಗಳಲ್ಲಿ ಮುಳುಗಿದರು. ಈ ನಾಟಕಗಳ ಚಟುವಟಿಕೆಯಲ್ಲಿ, ದುಡಿತದಲ್ಲಿ ಪಾಲ್ಗೊಂಡ ತರುಣ ಭರಣನಲ್ಲಿದ್ದ ಕಲಾವಿದನೂ ಎಚ್ಚೆತ್ತುಕೊಂಡ. ಕಾನೂನು ಪದವಿಯೋ? ರಂಗಭೂಮಿಯೋ? ದ್ವಂದ್ವ-ತುಡಿತ ಆರಂಭ. ಕೊನೆಗೆ ಒಲಿದಿದ್ದು ರಂಗಭೂಮಿಗೆ. ಅಂದಿನ ತುಡಿತ ಇನ್ನೂ ಬಿಟ್ಟಿಲ್ಲ.

ಕಾರಂತರ ಆಶೀರ್ವಾದದೊಂದಿಗೆ ರಂಗಭೂಮಿಯಲ್ಲಿ ನಿರಂತರ ಚಟುವಟಿಕೆ. ಏವಂ ಇಂದ್ರಜಿತ್, ನಿರ್ದೇಶಕನ ಶೋಧದಲ್ಲಿ ಆರು ಪಾತ್ರಗಳು, ರಸಗಂಧರ್ವ, ಪಂಜರ ಶಾಲೆ, ಇಸ್ಪೀಟ್ ರಾಜ್ಯ - ಒಂದೇ ಎರಡೆ! ಪ್ರತಿಯೊಂದು ನಾಟಕದಲ್ಲೂ ರಂಗಸಜ್ಜಿಕೆಯಲ್ಲಿ, ಬೆಳಕಿನ ವ್ಯವಸ್ಥೆಯಲ್ಲಿ ಹಗಲೂ ರಾತ್ರಿ ದುಡಿತ. ಹಲವಾರು ತಂಡಗಳು, ಹಲವಾರು ನಾಟಕಗಳು. ಗೊಂದಲವಾಗದಿರಲೆಂದು ಒಂದು ನೆಲೆಗಾಗಿ ಅಲೆದಾಟ. ಪ್ರತಿಫಲ - ಆತ್ಮೀಯ ಗೆಳೆಯರೊಂದಿಗೆ ಕಲಾಸಂಪದ - ತದನಂತರ ಬೆನಕ ತಂಡದ ಹುಟ್ಟು.

1976 ರಲ್ಲಿ ಪ್ರಾರಂಭವಾದ ಬೆನಕ ತಂಡದಲ್ಲಿ ನಟನಾಗಿ, ನಿರ್ದೇಶಕನಾಗಿ, ನೇಪಥ್ಯದಲ್ಲೂ ಎಡಬಿಡದೆ ದುಡಿತ. ಗುರ್‍ಯಾನಾಗಿ ಜೋಕುಮಾರ ಸ್ವಾಮಿಯಲ್ಲಿ, ಶೀನ್ಯಾ ಆಗಿ ಸತ್ತವರ ನೆರಳಿನಲ್ಲಿ, ನಟನಾಗಿ-ಭಾಗವತನಾಗಿ ಹಯವದನದಲ್ಲಿ, ಪೊಲೀಸ್ ಆಗಿ ಕತ್ತಲೆ ಬೆಳಕಿನಲ್ಲಿ ನೆನಪುಳಿಯುವ ಅಭಿನಯ. ಹಲವಾರು ನಾಟಕಗಳಲ್ಲಿ ದುಡಿದರೂ, ತಾನೇ ಸ್ವತಂತ್ರವಾಗಿ ನಾಟಕ ನಿರ್ದೇಶಿಸಬೇಕೆಂಬ ಬಯಕೆ. ಅಳುಕು ಮನಸ್ಸಿನಿಂದಲೇ "ಬಕ" ನಾಟಕದ ನಿರ್ದೇಶನ. ಅದು ಯಶಸ್ವಿಯಾದಾಗ ಮತ್ತೇನನ್ನೋ ಸಾಧಿಸುವ ತವಕ. ಅಸಂಗತ ನಾಟಕಗಳು,

ಅನುವಾದಿತ ನಾಟಕಗಳು ಅಮರಿಕೊಳ್ಳುತ್ತಿದ್ದ ಕಾಲ ಅದು. ಪರಿಣಾಮ ಲೋರ್ಕನ "ಬ್ಲಡ್ ವೆಡಿಂಗ್" ನಾಟಕ. ಕಾರಂತರ ಸಂಗೀತ. ಪ್ರಯೋಗವೇನೋ ಯಶಸ್ವಿಯಾಯಿತು. ಅದರ ಜೊತೆಗೇ ನಮ್ಮದಲ್ಲದ ಸಂಸ್ಕೃತಿಯ ಬಗ್ಗೆ ಭ್ರಮನಿರಸನವಾಯಿತು. ಮುಂದೇನು? ಎಂತಹ ನಾಟಕ ಮಾಡುವುದು! ಮತ್ತೆ ದ್ವಂದ್ವ-ತುಡಿತ.

ಈ ಹೊರಳು ಹಾದಿಯಲ್ಲಿ ನೆರವಿಗೆ ಬಂದದ್ದು, ಗಿರೀಶ್ ಕಾರ್ನಾಡರ "ಕಾಡು", ಕಾರಂತರ "ಚೋಮನ ದುಡಿ" ಚಿತ್ರಗಳಲ್ಲಿ ದುಡಿದ ಅನುಭವ. ವಯಸ್ಸು ಏರುತ್ತಿತ್ತು. ಮದುವೆಯಾಗಿತ್ತು. ಜೀವನ ನಿರ್ವಹಣೆಗೆ ನೆಲೆ ಕಂಡುಕೊಳ್ಳುವ ಅವಶ್ಯಕತೆ ಇತ್ತು. ರಂಗಭೂಮಿಯ ತುಡಿತ ಮತ್ತು ಚಿತ್ರರಂಗದ ಸೆಳೆತ ಇಬ್ಬಗೆಯಾಗಿ ಕಾಡುತ್ತಿತ್ತು. ಅಭಿರುಚಿ, ಆಸಕ್ತಿ ಮತ್ತು ವ್ಯಕ್ತಿತ್ವದ ಜೊತೆ ಹೊಂದಾಣಿಕೆಯಾಗಬೇಕಿತ್ತು.

ಇನ್ನೊಬ್ಬರ ನೆರಳಿನಿಂದ ಹೊರಟು, ಸ್ವತಂತ್ರವಾಗಿ ಗುರಿಯನ್ನು ಅರಸಬೇಕೆಂಬ ಹಂಬಲ ಹೆಡೆಯಾಡಿತು. ಆಗ ಮೊಟ್ಟಮೊದಲು ನಿರ್ದೇಶಿಸಿದ ಚಿತ್ರ "ಗ್ರಹಣ". ಅದು ಹೊಟ್ಟೆ ತುಂಬಿಸಲಿಲ್ಲ. ಮತ್ತೆ ದ್ವಂದ್ವ. ಕಲಾತ್ಮಕ ಚಿತ್ರವೋ ಕಮರ್ಷಿಯಲ್ ಚಿತ್ರವೋ? ಇದಕ್ಕಾಗಿ ಕಂಡುಕೊಂಡ ಸೂತ್ರ ಎರಡೂ ಪ್ರಕಾರಗಳನ್ನೂ ಹಿತಮಿತವಾಗಿ ಸಮ್ಮಿಳಿಸಿದ ಸಮತೋಲನ ಚಿತ್ರ. ಅದರ ಚಿಂತನೆಗೆ "ಬಿಂಬ" ಸಂಸ್ಥೆಯ ಜನನ. ಬದುಕಿನ ಬವಣೆಗೆ "ಬಂಗಾರದ ಜಿಂಕೆ"ಯಾದರೆ, ಮನಸ್ಸಿನ ಅಭಿರುಚಿಗೆ "ಮೈಸೂರು ಮಲ್ಲಿಗೆ". ಪ್ರಶಸ್ತಿಗಳಿಗೆ "ನಾಗಮಂಡಲ", "ಸಿಂಗಾರೆವ್ವ" ಇತ್ಯಾದಿ. ಚಿತ್ರಗಳು ಯಶಸ್ವಿಯಾದವು, ಹಣ ಕೈ ಸೇರಿತು, ಪ್ರಶಸ್ತಿಗಳು ಮುಡಿಗೇರಿದವು.

ಈ ಜಂಜಡಗಳ ಮಧ್ಯೆ, ಭರಣ ರಂಗಭೂಮಿಯನ್ನು ಮರೆತನೇನೋ ಎಂಬ ಅನುಮಾನವೂ ಕಾಡಿದ್ದುಂಟು. ಆ ಭಾವನೆಯನ್ನು ಹುಸಿಗೊಳಿಸುವಂತೆ, ರಂಗಸಂಪದ ತಂಡಕ್ಕೆ "ಸಂಗ್ಯಾ-ಬಾಳ್ಯ" ನಿರ್ದೇಶನ. ಈ ಮುಂಚೆಯೇ ನಾಟಕ ಪ್ರಯೋಗವಾಗಿದ್ದರೂ, ನಾಟಕದ ಗೀತೆಗಳಿಗೆ ಹೊಸರಾಗಗಳನ್ನು ಹೊಂದಿಸಿ, ಹೊಸ ರೂಪದಲ್ಲಿ ಪ್ರಯೋಗಿಸಿದಾಗ ಕಂಡದ್ದು ಹಲವಾರು ಪ್ರದರ್ಶನಗಳು ಮತ್ತು ಯಶಸ್ಸು. ಅನಂತರ ಬಹುಕಾಲ ನಾಟಕಗಳ ಪ್ರದರ್ಶನದಲ್ಲಿ ನಿರತನಾಗಿದ್ದರೂ, ನಿರ್ದೇಶನಕ್ಕೆ ಕೈ ಹಾಕಲಿಲ್ಲ. ಕಳೆದ ವರ್ಷ ಶ್ರೀರಂಗರ ಶತಮಾನೋತ್ಸವಕ್ಕೆ ನಿರ್ದೇಶಿಸಿದ "ಕತ್ತಲೆ ಬೆಳಕು" ಹೊರತು ಪಡಿಸಿ.

ಭರಣ ಬೆನಕ ತಂಡದ ಆಭರಣ. ಬಹಳ ಸಂಕೋಚ ಮತ್ತು ದಾಕ್ಷಿಣ್ಯಕ್ಕೆ ಒಳಗಾಗುವ ವ್ಯಕ್ತಿ. ಚಿತ್ರರಂಗದಲ್ಲಿ ಅಪಾರ ಯಶಸ್ಸು ಮತ್ತು ಪ್ರಶಸ್ತಿಗಳನ್ನು ಸಂಪಾದಿಸಿದ್ದರೂ ಅವರ ಅಮಲನ್ನು ತಲೆಗೇರಿಸಿಕೊಂಡಿಲ್ಲದ ಸೌಜನ್ಯಶೀಲ. ಅಭಿನಂದಿಸಿದಾಗಲೂ ಸುಮ್ಮಾನದಿಂದ ನಕ್ಕು ಸುಮ್ಮನಾಗಿಬಿಡುವ ಸಹೃದಯಿ. ಕ್ಷಣಕಾಲ ಕಣ್ಣಿನಲ್ಲಿ ಹೊಳಪು ಮೂಡಿಸಿ, ಸ್ಫೂರ್ತಿ ಪಡೆದು ಮುಂದಿನ ಕೆಲಸದ ಬಗ್ಗೆ ಚಿಂತಿಸುವ ಜೀವಿ.

ಚಲನಚಿತ್ರಗಳು, ಕಿರುತೆರೆಯ ಧಾರಾವಾಹಿಗಳು, ವಾರ್ತಾ ಚಿತ್ರಗಳ ಅವಿರತ ದುಡಿತದ ನಡುವೆಯೂ ಭರಣ ರಂಗಭೂಮಿಯನ್ನು ಮರೆತಿಲ್ಲ. ಆದರೂ ಏನೋ ಕೊರತೆ ಕಾಡುತ್ತದೆ.



ಉತ್ತಮ ನಾಟಕಗಳನ್ನು ನಿರ್ದೇಶಿಸಬಲ್ಲ ಸಾಮರ್ಥ್ಯ ಭರಣನಲ್ಲಿದೆ. ಅದರ ಕಡೆ ಗಮನ ಹರಿಸಬೇಕಷ್ಟೆ. ಈಗ ಅನುಭವವಿದೆ, ಹಣವಿದೆ, ಯಶಸ್ಸಿದೆ, ಸಂಘಟನಾ ಚಾತುರ್ಯವಿದೆ, ಹೊಸ ಕಲಾವಿದರನ್ನು ಬೆಳಕಿಗೆ ತರುವ ಶಕ್ತಿಯೂ ಇದೆ. ಮಗಳ ಮದುವೆಯನ್ನೂ ಮುಗಿಸಿ ನಿರಾತಂಕವಾಗಿರುವ ಭರಣ, ತನ್ನ ವಿಶಿಷ್ಟ ವ್ಯಕ್ತಿತ್ವಕ್ಕೆ ತಕ್ಕಂತೆ ಹತ್ತಾರು ಉತ್ತಮ ಯಶಸ್ವೀ ನಾಟಕಗಳನ್ನು ಪ್ರಯೋಗಿಸಿ ರಂಗಭೂಮಿಯನ್ನು ತುಂಬಬಹುದು. ಪ್ರತಿವರ್ಷವಲ್ಲದಿದ್ದರೂ, ಕಡೆಯ ಪಕ್ಷ ಎರಡು ವರ್ಷಗಳಿಗೊಮ್ಮೆಯಾದರೂ ಹೊಸ ನಾಟಕಗಳತ್ತ ಮನಸ್ಸು ಹರಿಸಬೇಕು.

ಗೆಳೆಯ ಭರಣನಿಗೆ ಈಗ 50 ವರ್ಷ. ಇನ್ನೂ 50 ವರ್ಷ ಬಾಳಿ, ಚಿತ್ರರಂಗದಂತೆ ರಂಗಭೂಮಿಯಲ್ಲೂ ಹಲವಾರು ಪ್ರಶಸ್ತಿಗಳನ್ನು ಗಳಿಸಿ ಕನ್ನಡ ರಂಗಭೂಮಿಯ ಶ್ರೀಮಂತಿಕೆಯನ್ನು ಹೆಚ್ಚಿಸಲಿ. ತನ್ನ ಸಾಧನೆಯ ಮಕುಟಕ್ಕೂ ಗರಿಗಳನ್ನು ಹೆಚ್ಚಿಸಿಕೊಳ್ಳಲಿ. ತನ್ನ ವಿಶಿಷ್ಟ ಹಾದಿಯಲ್ಲಿ ಹೆಜ್ಜೆ ಮೂಡಿಸಲಿ.

❑ ❖ ❑ ❖ ❑

# ಭರಣ ಮತ್ತು ಛಾಯಾಗ್ರಹಣ

ಬಿ.ಸಿ. ಗೌರಿಶಂಕರ್

ಛಾಯಾಗ್ರಹಣ ಹಾಬಿ ಆಗಿತ್ತು. ಅದನ್ನೇ ರೂಢಿಸಿಕೊಂಡು ವೃತ್ತಿಯನ್ನಾಗಿ ಮಾಡಿಕೊಳ್ಳುವ ಹಂಬಲ ಇತ್ತು. ಟಾಮ್ ಕೋವೆನ್‌ರ ಸಂಸ್ಕಾರ ಛಾಯಾಗ್ರಹಣ ನೀಡಿದ ಪ್ರಸಿದ್ಧ ಛಾಯಾಗ್ರಾಹಕ ರಾಮಚಂದ್ರ ನನ್ನ ಗುರುಗಳಾದರು. ನಾಗಾಭರಣರೇ ಬರೆದ ಅವರ ಮೊದಲ ಚಿತ್ರ ಗ್ರಹಣದ ಸ್ಕ್ರಿಪ್ಟ್ ಚೆನ್ನಾಗಿದೆ ಎಂದು ಹೇಳಿ ನನ್ನನ್ನು ಸಹಾಯಕನಾಗಿ ಸೇರಿಸಿಕೊಂಡರು.

ನಾನು ಪಟ್ಟಣವಾಸಿ. ಹಳ್ಳಿಯ ಜೀವನವನ್ನು ಹತ್ತಿರದಿಂದ ನೋಡಿರಲಿಲ್ಲ. ಚಿತ್ರೀಕರಣ ತಂಡದೊಡನೆ ಹೊಸ ಹುರುಪಿನಿಂದ ಹೊರಟೆ. ಬೆಂಗಳೂರಿನಿಂದ ಸಾಗಿ ಬಿಳಿಗಿರಿರಂಗನ ಬೆಟ್ಟದ ತಪ್ಪಲು ಸೇರಿಕೊಂಡೆವು. ಹೊಂಗನೂರು ಒಂದು ಹಳ್ಳಿ. ಬೆಂಗಳೂರು ಪಟ್ಟಣದಲ್ಲಿನ ವಾಹನಗಳ ಹೊಗೆ, ಮೂಗಡರುವ ವಾಸನೆ ಇತ್ಯಾದಿಗಳಿಂದ ಭಿನ್ನವಾದ ಹಳ್ಳಿಯ ಮಣ್ಣು ರಸ್ತೆಗಳ ಧೂಳು, ಎಮ್ಮೆ ದನಗಳ ವಿಚಿತ್ರ ವರ್ತನೆ, ಜನರ ಸಂಕೋಚ, ಮಕ್ಕಳ ಕುತೂಹಲ ಹಾಗೂ ಇಂತಹ ಇತರ ನೇರ ಹಳ್ಳಿ ಚಿತ್ರಣಗಳು ಮೊದಲ ಬಾರಿಗೆ ಮನಸ್ಸಿನಲ್ಲಿ ಮೂಡಲು ಪ್ರಾರಂಭವಾಯಿತು. ನನ್ನ ಅಂತರ್ಯದ ಕ್ಯಾಮೆರಾ ಕಣ್ಣನ್ನು ತೆರೆಯಲಾರಂಭಿಸಿತು. ನಾನು ನನ್ನ ಮುಜುಗರ ಬಿಟ್ಟು ಅವತ್ತು ನನ್ನ ಮನಸ್ಸಿನಲ್ಲೇ ಕ್ಲಿಕ್ಕಿಸಿ ಸೆರೆ ಹಿಡಿದಿಟ್ಟ ಅನೇಕ ಸ್ಥಿರ ಚಿತ್ರಣಗಳು ಇಂದಿಗೂ ನನ್ನ ಮನಃಪಟಲದ ಮೇಲೆ ಅಚ್ಚಳಿಯದೆ ಮೂಡಿ ಬರುತ್ತವೆ.

ಮೆದು ಸ್ವಭಾವದ ಭರಣ ಎಲ್ಲರಿಗೂ ಸಹಾಯಕನಾಗಿ ವರ್ತಿಸುತ್ತಾ ನಮ್ಮೆಲ್ಲಾ ಬಹು ಬೇಗ ಒಂದು ಆತ್ಮೀಯ ವಾತಾವರಣಕ್ಕೊಯ್ದು ಬಿಟ್ಟಿದ್ದರು. ಕಪ್ಪು ಬಿಳುಪು ಗ್ರಹಣದ ಮೊದಲ ಶಾಟ್‌ಗೆ ತಯಾರಾದಾಗ ಭರಣರೊಡನೆ ನನಗೂ ಒಂದು ರೋಮಾಂಚನ. ಚಿತ್ರೀಕರಣ ಸಾಗಿತ್ತು. ಒಂದೆರಡು ದಿನಗಳ ನಂತರ, ಬಹು ದಿನಗಳಿಂದ ಮಳೆಯೇ ಕಾಣದ ಹೊಂಗಲೂರಿನಲ್ಲಿ ಧಾರಾಕಾರ ಮಳೆ. ರಾತ್ರಿಯೆಲ್ಲ ಸೋರುತ್ತಿರುವ ಹೆಂಚಿನ ಮನೆಯಲ್ಲಿ ಕೊಡೆ ಹಿಡಿದು ಮಳೆ ನಿಲ್ಲುವುದನ್ನೇ ಕಾಯುತ್ತಿದ್ದೆವು. ಮರುದಿನ ಹಳ್ಳಿ ಎಲ್ಲಾ ಕೆಸರಿನ ಗದ್ದೆ. ಅಷ್ಟೇ ಅಲ್ಲ... ಆಗ ಟೆಲಿಫೋನೂ ಇಲ್ಲದ ಹೊಂಗನೂರಿಗೂ ಮತ್ತು ಹೊರಗಿನ ಪ್ರಪಂಚಕ್ಕೂ ಸಂಪರ್ಕವೇ ಇಲ್ಲದೆ ಆ ಹಳ್ಳಿ ಮಾತ್ರವೇ ನಮ್ಮ ಪ್ರಪಂಚವಾಗಿ ಬಿಟ್ಟಿತ್ತು.

ಸಿನಿಮಾದ ಎಲ್ಲಾ ಡಿಪಾರ್ಟ್‌ಮೆಂಟಿನಲ್ಲೂ ಸ್ವತಃ ದುಡಿಯುವ ಭರಣ ಕೆಲವೇ ದಿನಗಳಲ್ಲಿ ನನಗೂ ಅತ್ಯಂತ ಆತ್ಮೀಯನಾಗಿಬಿಟ್ಟನು. ಹೀಗೆ ಶುರುವಾಯಿತು ನನ್ನ ಭರಣನ ಸ್ನೇಹ.



ಸಿನಿಮಾದಲ್ಲಿ ಲೈಟಿಂಗ್‌ಗೆ ಅತ್ಯಂತ ಮಹತ್ವವಿದೆ. ನಿರ್ದೇಶಕ ಲೈಟಿಂಗ್ ಬಗ್ಗೆ ಕಾಳಜಿ ವಹಿಸಿದರೆ ಚಿತ್ರೀಕರಿಸಿದ ದೃಶ್ಯ ನಿಜವಾಗಿಯೂ ವಿಜೃಂಭಿಸುತ್ತದೆ. ಈ ವಿಜೃಂಭಣೆಯನ್ನು ನಾನು ಮೊದಲ ಬಾರಿಗೆ ಅನುಭವಿಸಿದ್ದು, ಭರಣನ ಅತ್ಯಂತ ಯಶಸ್ವೀ ಚಿತ್ರಗಳಲ್ಲೊಂದಾದ ಮೈಸೂರ ಮಲ್ಲಿಗೆ ಚಿತ್ರಕ್ಕೆ ಇಂಡಿಪೆಂಡೆಂಟ್ ಆಗಿ ಛಾಯಾಗ್ರಾಹಕನಾಗಿ ದುಡಿದಾಗ. ಮೈಸೂರ ಮಲ್ಲಿಗೆ ಪೀರಿಯಡ್ ಲೈಟಿಂಗ್ ಚಿತ್ರ. ಭರಣ ಪ್ರತೀ ದೃಶ್ಯವನ್ನೂ ಬಹಳ ರೋಚಕವಾಗಿ ವಿವರಿಸುತ್ತಿದ್ದ. ಸಿ. ಅಶ್ವಥ್, ದತ್ತಣ್ಣ ಮತ್ತಿತರೊಡನೆ ಸ್ಕ್ರಿಪ್ಟ್ ಲೆವೆಲ್‌ನಿಂದಲೂ ಇನ್ವಾಲ್‌ಮೆಂಟ್ ಇರುತ್ತಿತ್ತು. ಸಂಸಾರವಂದಿಗರ ಚಿತ್ತ ಕಲಕುವ ಕೆಎಸ್‌ನ ಅವರ ಕವಿತೆಗಳಿಂದಲೇ ಹುಟ್ಟಿದ ಈ ಚಿತ್ರದಲ್ಲಿ ಕವಿಯ ಉನ್ಮೀಳನವನ್ನು ಯಶಸ್ವಿಯಾಗಿ ಪ್ರದರ್ಶಿಸಲಾಗಿದೆ. ಭೂಪಟದಲ್ಲಿ ಮಲೆನಾಡಿನ ಹೃದಯಸ್ಥಾನದಲ್ಲಿರುವ ತೀರ್ಥಹಳ್ಳಿ ಮತ್ತು ಸುತ್ತಮುತ್ತ ಈ ಚಿತ್ರ ಚಿತ್ರೀಕರಿಸಲ್ಪಟ್ಟು ಹಳ್ಳಿಗಾಡು ವಾತಾವರಣ ನನಗೆ ಒಗ್ಗಿ ಹೋಯಿತು. ಆರು ಪ್ರಶಸ್ತಿಗಳನ್ನು ಗಳಿಸಿದ ಮೈಸೂರ ಮಲ್ಲಿಗೆ ಛಾಯಾಗ್ರಹಣಕ್ಕೂ ಪ್ರಶಸ್ತಿ ಗಳಿಸಿತು. ಈ ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ಭರಣ ಮತ್ತು ನನ್ನ ಗೆಳೆತನ ಇನ್ನೂ ಗಾಢವಾಯಿತು.

ನಂತರ ಚಿನ್ನಾರಿ ಮುತ್ತ ಹಳ್ಳಿ ಮತ್ತು ಪಟ್ಟಣವೆರಡರಲ್ಲೂ ಚಿತ್ರೀಕರಿಸಲ್ಪಟ್ಟಿತು. ಮಕ್ಕಳ ಮನೋವಿಕಾಸವನ್ನು ಹಂತ ಹಂತವಾಗಿ ಮೂಡಿಸುವ ಪ್ರಕ್ರಿಯೆಯನ್ನು ಕ್ಯಾಮೆರಾದಲ್ಲಿ ಹಿಡಿದಿಡುವುದು ಬಹಳ ಖುಷಿ ಕೊಟ್ಟ ವಿಷಯ. ಚಿನ್ನಾರಿಮುತ್ತದ ನಂತರ ಸಾಗರ ದೀಪ ನನ್ನ ಛಾಯಾಗ್ರಹಣವಿರುವ ಮತ್ತೊಂದು ಚಿತ್ರ. ಭರಣನ ಇಂತಹ ಅವಿರತ ಪ್ರಯತ್ನ ಮೆಚ್ಚುವಂಥಾದ್ದು.

ಗೊರೂರು ರಾಮಸ್ವಾಮಿ ಐಯಂಗಾರರ "ಆ್ಯನ್ ಇಂಡಿಯನ್ ಇನ್ ಅಮೆರಿಕಾ" – "ಸಂಸ್ಮರಣ್" ಎಂಬ ಹೆಸರ್ಗೊಂಡು ರಾಷ್ಟ್ರೀಯ ಜಾಲದಲ್ಲಿ ಹಿಂದಿ ಧಾರವಾಹಿಯಾಗಿ ಮೂಡಿಬಂದಿದ್ದು ಭರಣನೊಡನೆ ನನಗೂ ಆದ ಒಂದು ವಿಶಿಷ್ಟ ಅನುಭವ. ಇದು ಅಮೆರಿಕಾದಲ್ಲೂ ದೃಶ್ಯೀಕರಿಸಲ್ಪಟ್ಟಿತ್ತು. ಕೇವಲ ಎಂಟು ಜನರ ಟೀಮಿನಲ್ಲಿ ಭರಣ ಉಳಿದವರೆಲ್ಲರಿಗೂ ಮೊದಲ ಸಹಾಯಕನಾಗಿದ್ದು ಅಚ್ಚರಿಗಿಂತ ಆತ್ಮೀಯತೆಯನ್ನು ಹೆಚ್ಚಿಸುವ ವಿಷಯ. ನಾನೊಬ್ಬನೇ ಕ್ಯಾಮೆರಾಮ್ಯಾನ್. ಭರಣನೇ ಮುಂದಾಗಿ ಎಲ್ಲಾ ನಿಖರವಾಗಿ ಸಜ್ಜುಗೊಳಿಸಿ, "ಗೌರಿ... ನೋಡಮ್ಮಾ... ಎಲ್ಲಾ ಸರಿಗಿದಿಯಾ..." ಎಂದಾಗ ಹೃದಯ ತುಂಬಿ ಬರುತ್ತಿತ್ತು. ಚಿತ್ರೀಕರಣದ ಸಮಯದಲ್ಲಿ ಕ್ಯಾಮೆರಾ ಕಳುವಾದಾಗ ಭರಣ ನಡೆದುಕೊಂಡ ರೀತಿ, ಅವನ "ಇಂಗ್ಲಿಷ್ ಕೂಲ್" ನನಗೆ ಭಾಳ ಹಿಡಿಸಿತು.

ಮೈಸೂರ ಮಲ್ಲಿಗೆ ನಂತರ ಛಾಯಗ್ರಹಣದ ನಿಜವಾದ ಆನಂದವನ್ನು ಅನುಭವಿಸಿದ್ದು ಕನ್ನಡದ ಹೆಸರಾಂತ ಕವಿಗಳ ಕವನಗಳನ್ನು ದೃಶ್ಯಕ್ಕೆ ಅಳವಡಿಸಿ ಸುಂದರವಾಗಿ ಕಿರುತೆರೆಗೆ ತಂದ ಭರಣ ನಿರ್ದೇಶಿತ ಗೀತಮಾಧುರಿಯಲ್ಲಿ. ಕುವೆಂಪು, ಬೇಂದ್ರೆ, ಪುತಿನ, ಚನ್ನವೀರ ಕಣವಿ, ಕೆಎಸ್‌ನ, ಗೋಪಾಲಕೃಷ್ಣ ಅಡಿಗ, ಜಿ.ಹೆಚ್. ಶಿವರುದ್ರಪ್ಪ, ಚಂದ್ರಶೇಖರ ಕಂಬಾರ್, ಕೆ.ಎಸ್. ನಿಸಾರ್ ಅಹ್ಮದ್, ಸಿದ್ಧಲಿಂಗಯ್ಯ, ಲಕ್ಷ್ಮೀನಾರಾಯಣ ಭಟ್ಟ, ಹೆಚ್.ಎಸ್. ವೆಂಕಟೇಶ ಮೂರ್ತಿ, ಬಿ.ಆರ್. ಲಕ್ಷ್ಮಣ ರಾವ್, ಸತ್ಯಾನಂದ ಪಾತ್ರೋಟ ಇವರೇ

ಮೊದಲಾದ ಕವಿಗಳ ಒಂದೊಂದು ಕವನವೂ ತನ್ನದೇ ಆದ ವಿಭಿನ್ನ ಅನುಭವ ನೀಡುತ್ತಿತ್ತು. ಆ ಅನುಭವವನ್ನು ದೃಶ್ಯೀಕರಿಸಿ ಚಿತ್ರಿಕರಿಸುವುದು ಬಹಳ ಕಠಿಣ ಕೆಲಸ. ಅದನ್ನು ಆಗುಗೊಳಿಸಿದ್ದು ನಿಜವಾಗಿಯೂ ಹೆಮ್ಮೆಯ ವಿಷಯ. ಇಲ್ಲಿ ಮತ್ತೆ ಭರಣನಿಂದ ಲೈಟಿಂಗ್‌ಗೆ ದೊರೆತ ಪ್ರಾಶಸ್ತ್ಯ ಸೆರೆಹಿಡಿದ ಪ್ರತೀ ಶಾಟ್‌ನಲ್ಲೂ ಎದ್ದು ಕಾಣುತ್ತದೆ.

"ಮಣಿ ಮಣಿ ಮಣಿ ಮಣಿ ಮಣಿಗೊಂದು ಹಾರ" ಈ ಟ್ಯೂನ್ ನೆನಪಾದ ಕೂಡಲೇ ನಾನು ನಾಸ್ಟಾಲ್ಜಿಕ್ ಆಗಿ ಜನುಮದ ಜೋಡಿ ಚಿತ್ರದಲ್ಲಿ ನಾನು ಸತತವಾಗಿ 14 ದಿನ ಸೂರ್ಯ ಮುಳುಗುವ ಹೊತ್ತಿನಲ್ಲೇ ಕ್ಯಾಮೆರಾದಲ್ಲಿ ಹಿಡಿದಿಟ್ಟ ದೃಶ್ಯಗಳಲ್ಲಿ ಮುಳುಗಿಬಿಡುತ್ತೇನೆ. ಸೂರ್ಯ ಮುಳುಗುವಾಗ ದೊರಕುವ ನೈಜ ಬೆಳಕೇ ಇರಬೇಕು ಎಂದು ತೀರ್ಮಾನಿಸಿ, ಅಂತಹ ಬೆಳಕಿಗಾಗಿ ಇಡೀ ದಿನ ಕಾದು ಇನ್ನೇನು ಸೂರ್ಯ ಮುಳುಗಬೇಕೆನ್ನುವಷ್ಟರಲ್ಲಿ ಕ್ಯಾಮೆರಾ ಕಣ್ಣಿನಿಂದ ನೋಡಿ, ಕಂಟಿನ್ಯೂಯಿಟಿಗೆ ಚ್ಯುತಿ ಬಾರದಂತೆ ಸೆರೆ ಹಿಡಿದಿಡುವುದು ಒಂದು ಗೀಳಾಗಿ ಹೋಗಿತ್ತು. ಇದು ಭರಣನ ಸೃಜನಶೀಲತೆ ಮತ್ತು ಕ್ಯಾಮೆರಾ ಕಣ್ಣಿನೊಂದಿಗೆ ಸಹಚರನಾಗಿ ನಡೆಯುವ ಮನೋಭಾವಗಳ ಸಮೀಕರಣದ ಫಲ. ನಿರ್ದೇಶಕ ಇಷ್ಟೊಂದು ಸಹಕಾರ ಕೊಟ್ಟರೆ, ಛಾಯಾಗ್ರಣ ಯಶಸ್ವಿಯಾಗುವುದರಲ್ಲಿ ಸಂಶಯವೇ ಇಲ್ಲ.


ನಂತರ, ವಿಮೋಚನೆ, ಜನುಮದಾತ ಇವೆಲ್ಲಾ ಸಿಟಿ ಜೀವನಕ್ಕೆ ಹತ್ತಿರವಾದ ಸಿನಿಮಾಗಳು. ಸಿಂಗಾರೆವ್ವ ಚಿತ್ರೀಕರಣ ಮತ್ತೆ ನನ್ನ ಕುತೂಹಲ ಕೆರಳಿಸಿತು. ಗದಗ್ ಜಿಲ್ಲೆಯ ಅಣ್ಣಿಗೇರಿಯಲ್ಲಿ ಕರ್ನಾಟಕದ ಐತಿಹಾಸಿಕ ಕಟ್ಟಡದಲ್ಲಿ ಚಿತ್ರೀಕರಿಸಿದ ದೃಶ್ಯಗಳು, ಅಲ್ಲಿ ಲೈಟಿಂಗ್‌ಗೆ ದೊರೆತ ಸಹಕಾರ ಎಲ್ಲಾ ಅತ್ಯಂತ ಮಾರ್ಮಿಕವಾದ ಅನುಭವದ ಪ್ರತೀಕ.

ಇತ್ತೀಚೆಗೆ ಬಿಡುಗಡೆಯಾದ ಚಿಗುರಿದ ಕನಸು ಚಿತ್ರೀಕರಣ ಉತ್ತರ ಭಾರತದ ಡೆಲ್ಲಿ, ಕಾಶಿಯಲ್ಲಿ ಮತ್ತು ಚಿಗುರಿದ ಕನಸು ಕಾದಂಬರಿಕಾರ ಶಿವರಾಮ ಕಾರಂತರೇ ಕಾದಂಬರಿಯಲ್ಲಿ ಹೆಸರಿಸಿರುವ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಬಂಗಾಡಿಯಲ್ಲೇ ಛಾಯಾಗ್ರಹಣ ಮಾಡಿದ್ದು ಒಂದು ವಿಶಿಷ್ಟ ಅನುಭವ. ಚಿತ್ರಕ್ಕೆ ಭರಣ ತಯಾರಿಸಿದ ಸ್ಕ್ರಿಪ್ಟ್ ಓದುತ್ತಿದ್ದಂತೆಯೇ ಕುದುರೆಮುಖದ ತಪ್ಪಲು, ದಿನನಿತ್ಯ ಕುಗ್ರಾಮ, ದಟ್ಟ ಹಸಿರು ಅರಣ್ಯ, ಗುಡ್ಡ-ಬೆಟ್ಟ, ಜಲಪಾತ, ನದಿ, ಗದ್ದೆ, ಬಯಲು ಇತ್ಯಾದಿ ಕಣ್ಮುಂದೆ ಚಿತ್ರಿತವಾಗುತ್ತಿತ್ತು. ಇನ್ನು ಮಳೆಯ ದೃಶ್ಯಗಳನ್ನು ಮಳೆಯಲ್ಲೇ ತೆಗೆಯಬೇಕೆಂದು ತಾಕೀತು ಮಾಡಿಕೊಂಡು 15 ದಿನಗಳ ಕಾಲ ಕೆಲವು ದಿನ 24 ಘಂಟೆ ಕಾಲ ಪ್ರಚಂಡ ಮಳೆ, ಪ್ರವಾಹ ಇವೆಲ್ಲವನ್ನೂ ಚಿತ್ರೀಕರಿಸಿದ್ದು ಒಂದು ವಿಶಿಷ್ಟ ಮರೆಯಲಾಗದ ಅನುಭವ.


ಪ್ರಶಸ್ತಿ, ಪುರಸ್ಕಾರಗಳು ತಾವಾಗಿಯೇ ಬರುತ್ತವೆ. ಕೆಲವೊಮ್ಮೆ ಅತ್ಯಂತ ಶ್ರದ್ಧೆಯಿಂದ ಮಾಡಿದ ಛಾಯಾಗ್ರಹಣ ಚಿತ್ರದಲ್ಲಿ ಮಾತ್ರ ಉಳಿದು ಪ್ರೇಕ್ಷಕನ ಕಣ್ಮನ ತಣಿಸಿರುತ್ತವೆ. ಏನೇ ಆದರೂ, ಛಾಯಾಗ್ರಹಣದ ಸಮಯದಲ್ಲಿ ದುಡಿಯುವಾಗ ಭರಣನಿಂದ ದೊರೆಯುವ ಸಹಕಾರ ಮತ್ತು ಉತ್ತೇಜನ ಮರೆಯಲಾಗದು. ಅದು ಯಾವ ಪ್ರಶಸ್ತಿ-ಪುರಸ್ಕಾರಗಳಿಗೂ ನಿಲುಕುವಂಥದ್ದಲ್ಲ, ಮೀರಿದ್ದು.

❑ ❖ ❑ ❖ ❑







ಕುಣಿಯೋ ಕತ್ತೆ ನಾಟಕದಲ್ಲಿ ಭರಣ



ಗುಬ್ಬಿ ವೀರಣ್ಣ ಅವರಿಂದ ಕಮ್ಮಟದ ಸರ್ಟಿಫಿಕೇಟ್




ಬೆಂಗಳೂರು 'ಬೆನಕ' ತಂಡದ "ಭೂರ್ಜ್ವಾ ಜಂಟಲಮನ್"



ಬಯಲುರಂಗಮಂದಿರದ ನಾಟಕದಲ್ಲಿ ಗಿರೀಶ್‌ಕಾರ್ನಾಡ್‌ರ ಜೊತೆ





ಕುಂಟ ಕುರಬ ಕುರವತ್ತಿ ನಾಟಕದಲ್ಲಿ ಕುಂಟನಾಗಿ



ಕತ್ತಲೆ ಬೆಳಕು ನಾಟಕದಲ್ಲಿ ನಾಗಾಭರಣ




ಶ್ರೀರಂಗರ ಶೋಕಚಕ್ರದಲ್ಲಿ
ಭೀಮಣ್ಣನಾಗಿ ನಾಗಾಭರಣ

ಜಸ್ಮಾಓಡನ್‌ನಲ್ಲಿ ರಂಗಲಾ ಆಗಿ ಭರಣ








ನಟ ಸುಂದರರಾಜ್ ಜೊತೆ ಭರಣ



“ಸತ್ತವರ ನೆರಳು” ಮೇಕಪ್ ರಾಮಕೃಷ್ಣ ಮೇಕಪ್ ನಾಣಿ, ನಾಗಾಭರಣ



ಸತ್ತವರ ನೆರಳು 200ನೇ ಪ್ರದರ್ಶನ ಪಿ.ಜಿ.ಕೆ. ಒಂದಿಗೆ



ತಬರನ ಕಥೆ ನಾಟಕ







ವಾರ್ತಾ ನಿರ್ದೇಶಕರು ರೇಣು ಆನಂದರಾವ್ 1979 ದೆಹಲಿ ಚಿತ್ರೋತ್ಸವದಲ್ಲಿ



ಗಿರೀಶ್ ಕಾಸರವಳ್ಳಿ ಒಂದಿಗೆ ಗ್ರಹಣ ಚಿತ್ರೀಕರಣ ಸಮಯದಲ್ಲಿ



ಎಸ್.ಪಿ. ವರದರಾಜ್ ಜೊತೆ ಪ್ರಾಯ ಪ್ರಾಯ ಪ್ರಾಯ



ಗ್ರಹಣ ಚಿತ್ರೀಕರಣದ ಸಂದರ್ಭ



# ನಾಗಾಭರಣರ ಚಿತ್ರಗಳಲ್ಲಿ ಸಂಗೀತ

ದೊಡ್ಡ ಹುಲ್ಲೂರು ರುಕ್ಕೋಜಿ

ಕಳೆದ ಇಪ್ಪತ್ತು ವರ್ಷಗಳಿಂದೀಚೆಗೆ ಕನ್ನಡ ಚಲನಚಿತ್ರ ಸಂಗೀತವು ತನ್ನ ಹಿಂದಿನ ದಾರಿಯಿಂದ ಸಾಕಷ್ಟು ಹೊರಳಿ ನಡೆದಿದೆ. ಈ ಬದಲಾದ ಸಂಗೀತದ ರೂಪವನ್ನು 'ಭಾರತೀಯ ಸಂಗೀತದ ದಾರಕ್ಕೆ ಪಾಶ್ಚಾತ್ಯ ರಾಗಗಳ ತರಹೇವಾರಿ ಹೂಗಳನ್ನು ಪೋಣಿಸಿರುವ ಮಾಲೆ'ಗೆ ಹೋಲಿಸಬಹುದು. ಇದು ಭಾವನೆಗಳನ್ನು ಅರಳಿಸಬಲ್ಲದು. ಆದರೆ ಅವಕ್ಕೆ ಪರಸ್ಪರ ಸಂಬಂಧವಿಲ್ಲದ ಬಗೆಬಗೆಯ ರಂಗುಗಳಿರುತ್ತವೆ; ನಿರ್ದಿಷ್ಟ ಬಣ್ಣವಿರುವಂತೆಯೇ ನಿರ್ದಿಷ್ಟ ರೂಪವೂ ಇರುತ್ತದೆ. ಭಾವಗಂಧೀ ತುಣುಕುಗಳಾದ ಇವನ್ನು ದೃಶ್ಯಗಳಲ್ಲಿ 'ಮೂಡ್ ಮ್ಯೂಸಿಕ್' ಪರಿಭಾಷೆಯಲ್ಲಿ ಬಳಸಲಾಗುತ್ತದೆ. ಇದನ್ನು ವಿಸ್ತರಿಸಿಯೂ ವಿವರಿಸಬಹುದು: ವಿದಾಯ, ವಿಷಾದ, ಪ್ರೇಮ, ಅತ್ಯಾಚಾರಗಳಂಥ ಸರ್ವೇಸಾಮಾನ್ಯವಾದ ನಿರೀಕ್ಷಿತ ಸನ್ನಿವೇಶಗಳಿಗೆ ಬೇರೆ ಚಿತ್ರಗಳಿಗೆಂದು ಸಿದ್ಧಪಡಿಸಲಾಗಿರುವ ಸ್ವರ ಪ್ರಸ್ತಾವವನ್ನು (ನೊಟೇಷನ್) ಮರುಬಳಕೆ ಮಾಡುವುದು.

ಭಾರತೀಯ ಚಿತ್ರ ಸಂಗೀತದಲ್ಲಿ ಇನ್ನೊಂದು ಅಂಶವೂ ಮಿಳಿತವಾಗಿದೆ. ಅದು 'ಶಾಸ್ತ್ರೀಯ ಸಂಗೀತ'. ಸ್ಫೂರ್ತಿ ಸೃಷ್ಟಿಯಾದ ಶಾಸ್ತ್ರೀಯ ಸಂಗೀತವು ಅದನ್ನು ಬಲವಂತವಾಗಿ ಸಿನಿಮಾಕ್ಕೆ ಹೊಂದಿಸುವಂಥವರ ಮೂಲಕ ವಿಚ್ಛಿನ್ನಗೊಳ್ಳುತ್ತಿದೆ. ಇದರಿಂದಾಗಿ ಅದು ಸಿನಿಮಾದಂಥ ಯಂತ್ರಾಧಾರಿತ ಮಾಧ್ಯಮದ ಸೃಷ್ಟಿ ಕ್ರಿಯೆಗೆ ಎಷ್ಟರ ಮಟ್ಟಿಗೆ ಸಹಕಾರಿಯಾಗಿದೆ ಎಂಬುದು ವಿಶ್ಲೇಷಣೆಗೊಳಪಟ್ಟಿಲ್ಲ; ಕನ್ನಡದಲ್ಲಂತೂ ಅದನ್ನು ವಿವರಿಸುವ, ಅವಲೋಕಿಸುವ ಪ್ರಯತ್ನವೇ ನಡೆದಿಲ್ಲ. ಹೀಗಾಗಿ ಸಿನಿಮಾ ಸಂಗೀತವನ್ನು ಕುರಿತ ಚರ್ಚೆಗಳಲ್ಲಿ ಸಾಮಾನ್ಯವಾಗಿ ಹಾಡುಗಳನ್ನಷ್ಟೇ ಪರಿಗಣಿಸುವ ಪ್ರವೃತ್ತಿಯನ್ನು ಕಾಣುತ್ತೇವೆ.

ಹಾಗೆ ನೋಡಿದರೆ ಹಾಡುಗಳನ್ನು ಹೊರತುಪಡಿಸಿ ಕೂಡ ಚಲನಚಿತ್ರ ಇತಿಹಾಸವನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಈ ಮಾತು ಎಲ್ಲ ಭಾಷೆಯ ಚಿತ್ರಗಳಿಗೂ ಅನ್ವಯಿಸುತ್ತದೆ. ಇದರಿಂದಾಗಿಯೇ ಹಾಡಿಲ್ಲದ ಚಿತ್ರವನ್ನು ಮಾಡಿದವರು ತಮ್ಮ ಪ್ರಯತ್ನವನ್ನು 'ಪ್ರಯೋಗ' ಎಂದು ಕರೆದುಕೊಳ್ಳುತ್ತಾರೆ. ಅವರು ಹಾಗೆ ಹೇಳಿಕೊಳ್ಳಲಿಲ್ಲವಾದರೆ ಜನರು ಅಥವಾ ಮಾಧ್ಯಮವೇ ಆ ಚಿತ್ರಕ್ಕೆ ಅಂಥ ಹಣೆಪಟ್ಟಿಯನ್ನು ಹಚ್ಚುತ್ತದೆ.

ಕನ್ನಡದಲ್ಲಿ ಇದುವರೆಗೆ ಎರಡೂ ಕಾಲೂ ಸಾವಿರಕ್ಕಿಂತ ಹೆಚ್ಚು ಚಿತ್ರಗಳು ತೆರೆಕಂಡಿವೆ. ಇದರಲ್ಲಿ ಹಾಡಿಲ್ಲದ ಚಿತ್ರಗಳು ಕೇವಲ ಏಳೆಂಟು ಮಾತ್ರ. ಈ ನಗಣ್ಯ ಸಂಖ್ಯೆಯೇ ಹಾಡುಗಳು ನಮ್ಮ ಚಿತ್ರಗಳ 'ಪ್ರಾಣವಾಯು'ವಾಗಿದೆ ಎಂಬುದನ್ನು ಹೇಳುತ್ತದೆ. ಆದರೆ ಈ ಪ್ರಾಣವಾಯುವಿನ ಶಕ್ತಿ ಅದನ್ನು ಧರಿಸಿದ ದೇಹದ ಆರೋಗ್ಯವನ್ನು ಕೂಡ ಅವಲಂಬಿಸಿ

ಆಯುಷ್ಯವನ್ನು ನಿರ್ಧರಿಸಿಕೊಂಡಿರುತ್ತದೆ. ಈ ಮಾತನ್ನು ಚಿತ್ರದ ಅಥವಾ ಸಂಗೀತ, ಹಾಡನ್ನು ಬಳಸುವ ನಿರ್ದೇಶಕರ ಸಾಮರ್ಥ್ಯವನ್ನು ಕುರಿತು ಹೇಳುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಸಂಗೀತದ ಬಗ್ಗೆ ಅಪಾರವಾದ ಪ್ರತಿಭೆಯನ್ನುಳ್ಳ ಕೆಲವರಾದರೂ ನಮ್ಮ ಚಿತ್ರಗಳನ್ನು ರೂಪಿಸಿದ್ದಾರೆ ಎಂಬುದು ನಿಜಕ್ಕೂ ಕನ್ನಡ ಚಿತ್ರರಂಗದ ಭಾಗ್ಯ. ಇಂಥವರಲ್ಲಿ ಆರ್. ನಾಗೇಂದ್ರರಾವ್, ಹೊನ್ನಪ್ಪ ಭಾಗವತರ್, ಹುಣಸೂರು ಕೃಷ್ಣಮೂರ್ತಿ, ಬಿ.ಆರ್. ಪಂತುಲು, ದೊರೆ-ಭಗವಾನ್, ಕೆ.ಎಸ್.ಎಲ್. ಸ್ವಾಮಿ, ವಿಶೇಷವಾಗಿ ಪುಟ್ಟಣ್ಣ ಕಣಗಾಲ್ ಮತ್ತು ನಾಗಾಭರಣ ಪ್ರಮುಖರು. ಇವರೆಲ್ಲ ಸಂಗೀತವನ್ನು ಪ್ರಧಾನ ಅಂಶವನ್ನಾಗಿಸಿಕೊಂಡೇ ತಮ್ಮ ಚಿತ್ರಗಳನ್ನು ಸೃಷ್ಟಿಸಿದ್ದಾರೆ. ಇವರೆಲ್ಲರ ಶ್ರಮದಿಂದಾಗಿಯೇ ಇವತ್ತು ಕನ್ನಡ ಚಿತ್ರರಂಗದ ಉಸಿರು ಉಳಿದಿದೆ, ಮಾತ್ರವಲ್ಲ, ಬಹಳಷ್ಟು ಕಾಲ ಬದುಕುವಂಥ ಶಕ್ತಿಯುನ್ನು ಗರ್ಭೀಕರಿಸಿಕೊಂಡಿದೆ.

ಇದೆಲ್ಲ ಹೌದು, ಆದರೆ ಕನ್ನಡ ಚಿತ್ರ ಸಂಗೀತಕ್ಕೆ ಪ್ರತ್ಯೇಕ ಮಾನ್ಯತೆ ಇದೆಯೇ? ಚಿತ್ರ ಸಂಗೀತ ಹೊಸ ಜಾಡೊಂದನ್ನು ಸೃಷ್ಟಿಸಿಕೊಂಡಿದೆಯೇ? ಚಿತ್ರ ಸಂಗೀತದ ನಿಜವಾದ ಅಸ್ತಿತ್ವ, ಮಾರ್ಗ ಹಾಗೂ ಮಾದರಿಗಳೆಂಬುದು ಏನು? ಇಂತಹ ಕೆಲವು ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಇಲ್ಲಿ ನಾಗಾಭರಣರ ಚಿತ್ರಗಳ ವಸ್ತು, ಶೈಲಿ ಮತ್ತು ಅವರ ಸಂಗೀತ ಪ್ರಜ್ಞೆಯನ್ನು ಅವಲೋಕಿಸಲು ಪ್ರಯತ್ನಿಸಿದ್ದೇನೆ.

ನಮ್ಮಲ್ಲಿ ಮೊದಲಿಗೆ ಸಂಗೀತ ಸಂಯೋಜಕ ಮಾಡಿರುವ ಪ್ರಯೋಗಗಳನ್ನು ಗ್ರಹಿಸುವ ಸಾಮರ್ಥ್ಯವಿಲ್ಲದಿರುವುದು ಒಂದು ಬಹು ದೊಡ್ಡ ಕೊರತೆಯಾಗಿದೆ. ನಿರ್ದಿಷ್ಟವಾದ ಒಂದು ದೃಶ್ಯದಲ್ಲಿ ಸಂಗೀತ ಸಂಯೋಜಕ ಏಕೆ ಈ ವಾದ್ಯ ಬಳಸಿದ್ದಾನೆ, ಏಕೆ ಕೆಲವು ದೃಶ್ಯಗಳಲ್ಲಿ ವಿರುದ್ಧ ಧ್ವನಿಗಳುಳ್ಳ ವಾದ್ಯಗಳ ಪ್ರಯೋಗ ಮಾಡಿದ್ದಾನೆ ಎನ್ನುವುದನ್ನು ಅರ್ಥ ಮಾಡಿಕೊಳ್ಳುವಷ್ಟು ಪ್ರಬುದ್ಧತೆ ನಮ್ಮ ಪ್ರೇಕ್ಷಕನಲ್ಲಿ ಇಲ್ಲ. ನಿರ್ದೇಶಕ ನಿರೂಪಿಸುತ್ತಿರುವ ಸನ್ನಿವೇಶಕ್ಕೆ ಕೇವಲ ಒತ್ತು ಕೊಡುವುದಷ್ಟೆ, ಅಂದರೆ ಅಂಡರ್ ಲೈನ್ ಮಾಡುವುದಷ್ಟೇ ಇಲ್ಲಿ ಸಂಗೀತ ಸಂಯೋಜಕ ಮಾಡಿರುವ ಕೆಲಸ ಎಂಬ ಸಣ್ಣ ಅರಿವನ್ನು ಪ್ರೇಕ್ಷಕನಲ್ಲಿ ಜಾಗೃತಗೊಳಿಸಲಾಗದಷ್ಟು ಅಮಲಿನ ಯಶಸ್ಸನ್ನು ಈ ಮಾಧ್ಯಮ ಸಾಧಿಸಿದೆ. ಆದರೆ ಇಂಥದನ್ನು ಗುರುತಿಸಿ ಹೇಳುವ ಜವಾಬ್ದಾರಿ ಇರುವ ವಿಮರ್ಶಕರು ಕೂಡ ಇಲ್ಲದಿರುವುದು ಈ ಅವಸ್ಥೆಗೆ ಒಂದು ಕಾರಣ. ಅತ್ಯಂತ ಗಂಭೀರ ಉದ್ದೇಶದ ಚಿತ್ರಗಳ ಕುರಿತಾಗಿ ಇರಲಿ, ತೀರಾ ಸಾಧಾರಣವಾದ ಫಾರ್ಮುಲಾ ಚಿತ್ರಗಳಲ್ಲಿ ಕೂಡ ಸಂಗೀತದ ಸಾಂದರ್ಭಿಕತೆಯನ್ನು ಗುರುತಿಸುವ ಪ್ರಾಥಮಿಕ ತಿಳುವಳಿಕೆ ನಮ್ಮ ಪ್ರೇಕ್ಷಕನಲ್ಲಿ ಇಲ್ಲ.

ಇಲ್ಲಿ ನನ್ನ ಅವಲೋಕನವು ನಾಗಾಭರಣರ ಚಿತ್ರಗಳಲ್ಲಿ ಸಂಗೀತದ ಬಳಕೆಯನ್ನು ಕುರಿತು ಮಾತ್ರ ಇರುವುದರಿಂದ ನಾನು ಅವರ ಚಿತ್ರಗಳಲ್ಲಿನ ಹಾಡು ಹಾಗೂ ಹಿನ್ನೆಲೆ ಸಂಗೀತವನ್ನು ಒಳಗೊಂಡಂತೆಯೇ ಒಂದು ದೃಷ್ಟಿಕೋನವನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದೇನೆ. ಸಿನಿಮಾ ಸಂಗೀತವೆನ್ನುವುದು "ದೃಶ್ಯ ಶಕ್ತಿಗೆ ತಕ್ಕಂತೆ ಸಂಗೀತ ಸಂಯೋಜಕ ತನ್ನ ಸೃಷ್ಟಿ ಶಕ್ತಿಯನ್ನು ಹೊಂದಿಸಿಕೊಳ್ಳಬೇಕಾದ ಕ್ರಿಯೆ" ಎಂಬ ಅಭಿಪ್ರಾಯದ ಚೌಕಟ್ಟಿನಿಂದಾಚೆಗೆ ನನ್ನ



ಕೆಲವು ಅಭಿಪ್ರಾಯಗಳು ಬೆಳೆದರೆ ಅದಕ್ಕೆ ಈ ಮಾಧ್ಯಮದ ಕುರಿತು ನನ್ನಲ್ಲಿರುವ ಕುತೂಹಲವೇ ಕಾರಣ.

ಸಿನಿಮಾ ಸಂಗೀತ ಸೃಷ್ಟಿಯಾಗುತ್ತಿರುವ ರೀತಿಯಲ್ಲಿ ಈಗ ಮೂರು ವಿಧಾನಗಳ ಬಳಕೆಯಿದೆ. ಇವುಗಳಲ್ಲಿ ಮುಖ್ಯವಾದದ್ದು ದೃಶ್ಯ ಹೇಳುತ್ತಿರುವುದನ್ನು ಸಂಗೀತ ಒತ್ತು ಕೊಡುತ್ತಾ ಅಂದರೆ ಅನುಮೋದಿಸುತ್ತಾ ಹೋಗುವುದು. ಈಗಿನ ಹೆಚ್ಚು ಚಿತ್ರಗಳಲ್ಲಿ ಅಂದರೆ ಫಾರ್ಮುಲಾ ಚಿತ್ರಗಳಲ್ಲಿ ಇರುವುದು ಈ ರೀತಿಯ ಸಂಗೀತದ ಬಳಕೆ. ಇದು ದೃಶ್ಯ ಹೇಳುವುದನ್ನು ಇನ್ನಷ್ಟು ಹಿತವಾಗಿಸುವ ಕೆಲಸ. ಇನ್ನೊಂದು ಬಗೆಯದು, ದೃಶ್ಯದಲ್ಲಿ ಆ ಕ್ಷಣದಲ್ಲಿ ವ್ಯಕ್ತವಾಗದೆ ಉಳಿದ ಕೆಲವು ಭಾವನೆಗಳನ್ನು ಹೊರತರುವಂಥ ಅಥವಾ ಸೃಷ್ಟಿಸುವಂಥ ಕೆಲಸ. ಸಂಗೀತವನ್ನು ಹೀಗೆ ಬಳಸುವವರು ತುಂಬಾ ಕಡಿಮೆ. ಮತ್ತೊಂದು ಬಗೆ ಸ್ಥಳಾವಕಾಶದ ಸಮಸ್ಯೆಯನ್ನು ನಿಭಾಯಿಸುವುದು. ಅಂದರೆ ಎರಡು ಅಥವಾ ಮೂರು ಸಂದರ್ಭಗಳ ಕಾಲ, ಭಾವಗಳನ್ನು ಒಂದೇ ಕ್ಷಣದಲ್ಲಿ ಹಿಡಿದಿಡೋದು. ಇಲ್ಲಿ ಹೊಸದೇ ಸಂಗೀತದ ಸೃಷ್ಟಿ ಆಗಬೇಕಾಗಿದೆ.

ಈ ಮೂರು ವಿಧಾನಗಳ ಹಿನ್ನೆಲೆಯಲ್ಲಿ ನಾಗಾಭರಣರ ಚಿತ್ರಗಳಲ್ಲಿ ಸಂಗೀತ ಸಂಯೋಜಕನಿಗೆ ಯಾವ ಬಗೆಯ ಸವಾಲು ಎದುರಾಗುತ್ತದೆ ಎನ್ನುವುದನ್ನು ಗುರುತಿಸುವುದರ ಮೇಲೆ ಅವರ ಚಿತ್ರಗಳಲ್ಲಿ ಸಂಗೀತಕ್ಕೆ ಇರುವ ಮಹತ್ವವನ್ನು ಕಂಡುಕೊಳ್ಳಲು ಸಾಧ್ಯ. ಕನ್ನಡದ ಸಂದರ್ಭದಲ್ಲಿ ಚಲನಚಿತ್ರವು ಸ್ವಲ್ಪ ಮಟ್ಟಿಗೆ ನಿರ್ದೇಶಕನ ಮಾಧ್ಯಮ ಅನ್ನುವಂತಿದೆ. ಆದ್ದರಿಂದ ಚಿತ್ರದಲ್ಲಿ ಬಳಸಲಾಗುವ ಉಳಿದೆಲ್ಲ ಅಂಶಗಳು ಅವನ ಪ್ರಜ್ಞೆಗೆ ಹೊಸತಲ್ಲದ ಅಂಗಗಳು. ಆದರೆ ಅವೆಲ್ಲವನ್ನು ಅವನು ಪ್ರತ್ಯೇಕವಾಗಿ ಮತ್ತು ಸಮರ್ಥವಾಗಿ ನಿರ್ವಹಿಸುವಷ್ಟು ಪರಿಣತನಾಗಿರುವುದಿಲ್ಲ. ಹೀಗಾಗಿ ಚಿತ್ರವೊಂದರ ಸೃಷ್ಟಿಯಲ್ಲಿ ಪ್ರತಿಯೊಬ್ಬ ತಂತ್ರಜ್ಞನು ನಿರ್ದೇಶಕನ ಅಮೂರ್ತ ಕಲ್ಪನೆಗಳಿಗೆ ಜೀವ ತುಂಬುವ ಅಂಗವಾಗಿ ಬರುತ್ತಾನೆ. ಸಂಗೀತ ಸಂಯೋಜಕನೂ ಅಷ್ಟೇ. ನಿರ್ದೇಶಕನ ಕಲ್ಪನೆ ಅಗತ್ಯಗಳನ್ನು ಅನುಸರಿಸಿ ಸಂಗೀತವನ್ನು ರೂಪಿಸಿಕೊಡುತ್ತಾನೆ. ಇದನ್ನು ಇನ್ನಷ್ಟು ಸರಳಗೊಳಿಸಿ ಹೇಳಬೇಕೆಂದರೆ, ನಿರ್ದೇಶಕನಲ್ಲಿ ಎಷ್ಟು ಪ್ರತಿಭೆ ಇದೆ ಅನ್ನುವುದರ ಮೇಲೆ ಅಥವಾ ನಿರ್ದೇಶಕನು ಸಂಗೀತ ಸಂಯೋಜಕನನ್ನು ಹೇಗೆ ದುಡಿಸಿಕೊಳ್ಳುತ್ತಾನೆ ಅನ್ನುವುದರ ಮೇಲೆ ಚಿತ್ರ ಸಂಗೀತದ ಗುಣಮಟ್ಟ ನಿರ್ಧಾರವಾಗುತ್ತದೆ. ಅಂದರೆ ಎಲ್ಲವೂ ನಿರ್ದೇಶಕನ ಪ್ರತಿಭೆಯನ್ನು ಅವಲಂಬಿಸಿರುತ್ತದೆ.

ಕನ್ನಡ ಚಿತ್ರರಂಗದ ಮಟ್ಟಿಗೆ ಸಂಗೀತವನ್ನು ಚಿತ್ರವೊಂದರ ಅತ್ಯಂತ ಮುಖ್ಯ ಹಾಗೂ ಪೂರಕ ಅಂಶವನ್ನಾಗಿ ಬಳಸುವ ನಿರ್ದೇಶಕರು ತುಂಬಾ ಕಡಿಮೆ. 80ರ ದಶಕದಲ್ಲಿ ದಕ್ಷಿಣ ಭಾರತದ ಇತರೆ ಭಾಷೆಗಳಲ್ಲಿ ಸಂಗೀತವೇ ಪ್ರಧಾನವಾದ ಚಿತ್ರಗಳು ಸುಮಾರು ಹತ್ತು ವರ್ಷಗಳ ಕಾಲ ಚಲಾವಣೆಯಲ್ಲಿದ್ದವು. ಈ ಅವಧಿಯಲ್ಲಿ ಸಾಮಾನ್ಯವಾಗಿ ಪರಭಾಷಾ ಚಿತ್ರಗಳ ಎಲ್ಲ ರೀತಿಯ ಪ್ರಭಾವಗಳಿಗೆ ಒಳಗಾಗುವ ಕನ್ನಡ ಚಿತ್ರರಂಗ ಇದೊಂದು ವಿಷಯದಲ್ಲಿ ಮಾತ್ರ ಬದಲಾಗಲಿಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದದ್ದು ನಮ್ಮ ನಿರ್ದೇಶಕರು ಸಂಗೀತವನ್ನು ಬದುಕಿನ ಬಹುಮುಖ್ಯ ಅಂಗವೆಂದು ಭಾವಿಸದಿರುವುದು. ಹಾಗೆಯೇ ಸಂಗೀತಕ್ಕೆ ಸಂಬಂಧಿಸಿದ ಪ್ರಾಥಮಿಕ ಅಂಶಗಳನ್ನು ಗ್ರಹಿಸುವಷ್ಟು ಸಿದ್ಧತೆ

ಹೊಂದಿಲ್ಲದಿರುವುದು. ಚಿತ್ರವೊಂದರ ಯೋಜನೆ ಸಿದ್ಧಪಡಿಸುವಾಗ ನಾಲ್ಕೈದು ಹಾಡುಗಳು ಚೆನ್ನಾಗಿದ್ದರಾಯಿತು ಎಂಬ ಧೋರಣೆಯಿಂದಲೇ ಹೊರಡುವ ನಿರ್ಮಾಪಕ ನಿರ್ದೇಶಕರಿಗೆ ಅದರಿಂದಾಚೆಗೂ ಸಂಗೀತದ ವಿರಾಟ್ ಶಕ್ತಿಯನ್ನು ಬಳಸಿಕೊಳ್ಳಲು ಸಾಧ್ಯ ಎಂಬ ಕಲ್ಪನೆಯೇ ಇರುವುದಿಲ್ಲ. ಕನ್ನಡದ ಮಟ್ಟಿಗೆ ಪುಟ್ಟಣ್ಣನವರು ಮಾತ್ರ ಅಂತಹ ವಿಶಿಷ್ಟ ಸಾಮರ್ಥ್ಯ, ಅತೀತ ಕಲ್ಪನೆಗಳನ್ನು ಹೊಂದಿದ್ದರು. ಶಾಸ್ತ್ರೀಯ ಸಂಗೀತ ಅಥವಾ ಬೇರಾವುದೇ ಸಂಗೀತದ ಆಳವಾದ ಪರಿಚಯ ಇಲ್ಲದಿದ್ದರೂ ಅವರು ತಮ್ಮ ಕಲ್ಪನೆಯ ಭಾವ-ಲಹರಿಗಳಿಗೆ ರಾಗದ ರೂಪ ಕೊಡಲು ಸಾಕಷ್ಟು ಶ್ರಮಿಸುತ್ತಿದ್ದರು.

ಕನ್ನಡ ಚಿತ್ರರಂಗದ ಇಂಥ ಹಿನ್ನೆಲೆಯಲ್ಲಿ ನಾಗಾಭರಣರಂಥವರ ಪ್ರವೇಶ ಆದಾಗ ಕೆಲವು ನಿರೀಕ್ಷೆಗಳು ತಂತಾನೆ ಹುಟ್ಟಿಕೊಳ್ಳುವುದು ಸಹಜ. ಏಕೆಂದರೆ ನಾಗಾಭರಣರು ರಂಗಭೂಮಿಯಲ್ಲಿ ತಾಳ ಹಾಕುತ್ತಿದ್ದವರು, ಹಾಡುತ್ತಿದ್ದವರು. ಇದೆಲ್ಲಕ್ಕಿಂತ ಹೆಚ್ಚಾಗಿ ಹಿಂದೂಸ್ಥಾನಿ ಸಂಗೀತವನ್ನು ಅಭ್ಯಾಸ ಮಾಡಿದವರು. ಈ ಹಿನ್ನೆಲೆಯಲ್ಲಿ ಇವರಿಂದ ವಿಭಿನ್ನ ಪ್ರಯತ್ನಗಳಾಗಬಹುದೆಂಬ ನಿರೀಕ್ಷೆ ಸಹಜವಾಗಿಯೇ ಉಂಟಾಯಿತು. ಇಂಥ ನಿರೀಕ್ಷೆಗೆ ಅನುಗುಣವಾಗಿ ಅವರು ಕೂಡ ಕೆಲಸ ಮಾಡಿದ್ದರು. ಹಾಡುಗಳೇ ಇಲ್ಲದ ಚಿತ್ರ ಮಾಡಿ ಯಶಸ್ವಿಯಾದದ್ದು ಮಾತ್ರವಲ್ಲದೆ, ಹಾಡುಗಳನ್ನೇ ಕೇಂದ್ರವಾಗಿ ಇಟ್ಟುಕೊಂಡು ಕೂಡ ಅತ್ಯುತ್ತಮ ಚಿತ್ರ ಕೊಟ್ಟರು.

ನಾಗಾಭರಣ ಅವರನ್ನು ಅವರ ಈವರೆಗಿನ ಒಟ್ಟು ಚಿತ್ರಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಅವರೊಬ್ಬ ಕಾವ್ಯಪ್ರೀತಿಯುಳ್ಳ ನಿರ್ದೇಶಕರಾಗಿ ಕಾಣುತ್ತಾರೆ. ಶಿಶುನಾಳ ಶರೀಫ, ಮೈಸೂರು ಮಲ್ಲಿಗೆ, ಚಿನ್ನಾರಿ ಮುತ್ತ, ನೀಲಾ, ಸಿಂಗಾರೆವ್ವ ಇಂತಹ ಆಧುನಿಕ ಸಿನಿಮಾ ವಾತಾವರಣಕ್ಕೆ ಒಗ್ಗದ ಚಿತ್ರಗಳನ್ನು ಅವರು ಅತ್ಯಂತ ಧೈರ್ಯದಿಂದ ಮಾಡಿದ್ದಾರೆ ಎಂಬುದಷ್ಟೇ ಅಲ್ಲದೆ ಅನ್ವೇಷಣೆ, ಗ್ರಹಣ ಚಿತ್ರಗಳಲ್ಲಿ ಅವರು ಭಿನ್ನವಾಗಿ ಸಂಗೀತ ಬಳಸಲು ಮಾಡಿರುವ ಪ್ರಯತ್ನ - ಆ ಕುರಿತು ಅವರಿಗಿರುವ ಅತೀವ ಆಸಕ್ತಿ ಅವರನ್ನು ಅವರ ಓರಗೆಯ ನಿರ್ದೇಶಕರಿಗಿಂತ ಬಹಳ ಎತ್ತರದಲ್ಲಿ ನಿಲ್ಲಿಸುತ್ತದೆ.

ನಾಗಾಭರಣರ ಮತ್ತೊಂದು ವಿಶೇಷ ಅರ್ಹತೆಯೆಂದರೆ ಅವರಿಗಿರುವ ಜಾನಪದ ರಂಗಭೂಮಿಯ ದಟ್ಟ ಅನುಭವ. ಹಾಗೆಯೇ ಹಳ್ಳಿಗಾಡಿನ ಬದುಕಿನ ಬಗೆಗಿನ ಆಳವಾದ ತಿಳುವಳಿಕೆ. ತಮ್ಮ ನಿರ್ದೇಶಕನ ಬದುಕನ್ನು ಅವರು ಗ್ರಾಮ ಭಾರತದ ಅತ್ಯಂತ ವಿಲಕ್ಷಣ ಆಚರಣೆಗಳಲ್ಲಿ ಒಂದನ್ನು ಆಧರಿಸಿದ 'ಗ್ರಹಣ' ಚಿತ್ರದ ಮೂಲಕ ಆರಂಭಿಸಿದರು. 'ಅಸ್ಪೃಶ್ಯ' ಒಂದು ದಿನದ ಮಟ್ಟಿಗೆ 'ಸ್ಪೃಶ್ಯ'ನಾಗುವ ಅತ್ಯಂತ ಅಮಾನವೀಯವಾದ ಆಚರಣೆಯನ್ನು ಜೀವಪರವಾದ ವಿಶ್ಲೇಷಣೆಗೆ ಒಳಪಡಿಸಿ ತಮ್ಮ ಪ್ರಗತಿಪರ ಹಾಗೂ ಸೃಜನಶೀಲ ಮನೋಭಾವವನ್ನು ದಾಖಲಿಸಿದರು. ಈ ಚಿತ್ರದಲ್ಲಿ ಒಂದು ಸಾವಿನ ಮೂಲಕ ಏರ್ಪಡುವ ಸಂಘರ್ಷ ನೀತಿ-ಅನೀತಿಯ ಚರ್ಚೆಯ ಮೂಲಕ ತನ್ನ ಧ್ವನಿಯ ಪರಿಣಾಮಕ್ಕಾಗಿ ಸಂಗೀತದ ಬೆಂಬಲ ಬಯಸುತ್ತದೆ. ಏಕೆಂದರೆ ಮೂಢನಂಬಿಕೆಗಳ ಮೇಲೆ ನಿಂತಿರುವ ಈ ಆಚರಣೆಯು ಸಂಗೀತದ ಉನ್ನತ್ತತೆಯಿಂದ ವಿಕಾಸಗೊಳ್ಳುತ್ತಾ ಹೋಗುವಂಥದ್ದು. ಚಿತ್ರವು ಹಾಗೆ ಸಂಗೀತದ



ಮೂಲಕವೇ ಆರಂಭವಾಗುತ್ತದೆ. 'ವಾತಾವರಣ ಸೃಷ್ಟಿ'ಗಾಗಿ ನಿರಂತರವಾಗಿ ಸುಮಾರು 12 ನಿಮಿಷಗಳ ಕಾಲ ಉದ್ದೇಶಿತ ಆಚರಣೆಯನ್ನು ಚಿತ್ರಿಸಲಾಗಿದೆ. ಇಲ್ಲಿ ಒಂದು ದಿನದ ಮಟ್ಟಿಗೆ ಅಸ್ಪೃಶ್ಯರು ಬ್ರಾಹ್ಮಣರಾಗುತ್ತಿರುವುದರಿಂದ ಅದರ ಸಾಮಾಜಿಕ ವ್ಯಂಗ್ಯವನ್ನು ಪ್ರೇಕ್ಷಕರಿಗೆ ಅರ್ಥ ಮಾಡಿಸಬೇಕು. ಅಂದರೆ ವಿರುದ್ಧ ಭಾವಗಳನ್ನು ಉಂಟು ಮಾಡಬೇಕು. ಸಂಭಾಷಣೆಯನ್ನು ಕೈಬಿಡಲಾಗಿರುವುದರಿಂದ ದೃಶ್ಯಗಳಲ್ಲಿ ಇರುವ ಕತೆಯನ್ನು ಸಂಗೀತದ ಮೂಲಕ ಮುಂದುವರಿಸಬೇಕು.

ಇಲ್ಲಿ ಮೊದಲೇ ಹೇಳಿದಂತೆ ಆಚರಣೆಯ ಚಿತ್ರಣ ವಿವರಗಳ ಮೂಲಕ ನಿಧಾನವಾಗಿ ಸಾಗುತ್ತದೆ. ಆಚರಣೆಯ (ಜಾತ್ರೆ) ಸಹಜ ಶಬ್ದಗಳೊಂದಿಗೆ ಕತೆಯ ಮೂಲ ಆಶಯವನ್ನು ಸಂಕೇತಿಸುವ ಸಂಗೀತ ಬೇಕು. ಆದರೆ ಆಚರಣೆಯು ತನ್ನದೇ ಆದ ಶಬ್ದ ಹಾಗೂ ವಾದ್ಯ ಸಂಗೀತವನ್ನು ಹೊಂದಿರುವುದರಿಂದ ಸಂಗೀತ ಸಂಯೋಜಕನಿಗೆ ಸಮಸ್ಯೆ ಎದುರಾಗುತ್ತದೆ. ಈ ಸಮಸ್ಯೆಯನ್ನು ವಿಜಯ ಭಾಸ್ಕರ್ ತುಂಬಾ ಅರ್ಥಪೂರ್ಣವಾಗಿ, ಸುಲಲಿತವಾಗಿ ಪರಿಹರಿಸಿಕೊಂಡಿದ್ದಾರೆ. ಮಂತ್ರೋಚ್ಚಾರಣೆಯ ಮೇಲೆ ತಮಟೆ ಸದ್ದನ್ನು ತುಂಬಾ ಹದವಾಗಿ ಓವರ್‌ಲ್ಯಾಪ್ ಮಾಡಿ ನಿರ್ದೇಶಕನಿಗೆ ಬೇಕಾದ ಪರಿಣಾಮ ಸೃಷ್ಟಿಸಿದ್ದಾರೆ. ಇಂತಹ ಪ್ರಯೋಗವನ್ನು ರಾಜೀವ್ ತಾರಾನಾಥ್‌ರವರು 'ಸಂಸ್ಕಾರ' ಚಿತ್ರದಲ್ಲಿ ಚಂದ್ರಿ ಮತ್ತು ಪ್ರಾಣೇಶಾಚಾರ್ಯರ ಸಮಾಗಮದ ದೃಶ್ಯದಲ್ಲಿ ಸ್ವಲ್ಪ ಭಿನ್ನವಾಗಿ ಮಾಡಿದ್ದರು.

'ಗ್ರಹಣ' ದಂಥ ಚಿತ್ರದ ಸಂಗೀತ ಜಾನಪದೀಯ ಸ್ವರ ಲಹರಿಗಳಿಂದ ಕಳೆಗಟ್ಟಬೇಕಾದಂಥದ್ದು. ಜಾನಪದ ವಾದ್ಯಗಳನ್ನೇ ಬಳಸಿದರೆ ಹೆಚ್ಚಿನ ಪರಿಣಾಮ ಪಡೆಯಲು ಸಾಧ್ಯ. ಆದರೆ ವಿಜಯಭಾಸ್ಕರ್ ಕೆಲವಾರು ಕಡೆ ಆಧುನಿಕ ವಾದ್ಯಗಳ ಬಳಕೆ ಮಾಡಿದ್ದಾರೆ. ಮಿಕ್ಕಂತೆ - ಪರಿಚಯಾತ್ಮಕ ದೃಶ್ಯಗಳಲ್ಲಿ - ಅವರು ಬಳಸಿರುವ ಜಾನಪದ ವಾದ್ಯಗಳೇ ಹೆಚ್ಚು ಪರಿಣಾಮ ಬೀರುತ್ತವೆ.

ನಾಗಾಭರಣರಿಗೆ ಇರುವ ತಾಂತ್ರಿಕ ಪರಿಣತಿ ಹಾಗೂ ಚಿತ್ರದ ನಿರೂಪಣೆಯ ಮೇಲೆ ಇರುವ ಹಿಡಿತ ಸಂಗೀತ ನಿರ್ದೇಶಕನ ಶ್ರಮವನ್ನು ಸಾಕಷ್ಟು ಕಡಿಮೆ ಮಾಡುತ್ತದೆ. ಬಹಳ ಸಾರಿ ಕೆಲವು ನಿರ್ದೇಶಕರ ಚಿತ್ರಗಳಲ್ಲಿನ ಸನ್ನಿವೇಶಗಳ ಅಸಮರ್ಪಕ ಜೋಡಣೆ ಸಂಗೀತ ನಿರ್ದೇಶಕನನ್ನು ಕಂಗಾಲು ಮಾಡುವಂತಿರುತ್ತದೆ. ಆದರೆ ನಾಗಾಭರಣರ ಚಿತ್ರಗಳಲ್ಲಿ ದೃಶ್ಯಕ್ಕೆ ಅಗತ್ಯವಾದ ಸಂಗೀತ ನೀಡಲು ದೃಶ್ಯದ ವ್ಯಾಪ್ತಿ/ಮಿತಿ ನಿಲುಕುತ್ತಿಲ್ಲವೆಂಬುದೇ ಮುಂತಾಗಿ ಯಾವ ಸಮಸ್ಯೆಗಳೂ ಇರುವುದಿಲ್ಲ. ಇದಕ್ಕೆ 'ಅನ್ವೇಷಣೆ' ಚಿತ್ರದಲ್ಲಿ ಒಂದು ಉದಾಹರಣೆ ಇದೆ. ಈ ಮುಂಚೆ ಪ್ರಸ್ತಾಪಿಸಿದ ಸಂಗೀತ ನಿದೇರ್ಶಕನಿಗೆ ಎದುರಾಗುವ ಸ್ಥಳಾವಕಾಶದ ಸಮಸ್ಯೆ ಎಂದರೆ ಈ ಬಗೆಯದು: ಅನಂತನಾಗ್, ಗಿರೀಶ್ ಕಾರ್ನಾಡ್‌ರನ್ನು ಹುಡುಕಿಕೊಂಡು ಅವರ ಮನೆಗೆ ಬರುವ ಸನ್ನಿವೇಶ. ಇಲ್ಲಿ ಅನಂತನಾಗ್‌ಗೆ ಕೊಲೆಗಾರನಾಗಿರಬಹುದಾದ ವ್ಯಕ್ತಿಯನ್ನು ಎದುರಾಗಬೇಕಾಗಿರುವ ಭಯಮಿಶ್ರಿತ ಕುತೂಹಲ. ಮನೆಯಲ್ಲಿರುವ ಗಿರೀಶ್ ಕಾರ್ನಾಡ್‌ರ ಮಗಳ ಪಾತ್ರಕ್ಕೆ ಮನೆಗೆ ಬಂದಿರುವ ವ್ಯಕ್ತಿಯ ಪೂರ್ವಾಪರ ಗೊತ್ತಿಲ್ಲದೆ ಉದ್ವೇಗ. ಜೊತೆಗೆ ಅದೇ ಕ್ಷಣದಲ್ಲಿ ಒಳಗೆ ಹಾಸಿಗೆ ಹಿಡಿದಿರುವ ರೋಗಿ ತಾಯಿಗೆ ಉಪಚಾರ

ಮಾಡಬೇಕು. ಇದೇ ಗಳಿಗೆಯಲ್ಲಿ ಗಿರೀಶ್ ಕಾರ್ನಾಡ್ ಸೈಕಲ್ ಶಾಪ್‌ನಲ್ಲಿ ತನ್ನ ಮನೆಗೆ ತಾನು ನಿರೀಕ್ಷಿಸಿದ ವ್ಯಕ್ತಿ ಆಗಮಿಸಿರುವ ಸುದ್ದಿ ಕೇಳಿ ಭೀತಿಗೊಂಡು ಮನೆಯತ್ತ ಧಾವಿಸುತ್ತಾನೆ. ಕೆಲ ನಿಮಿಷ ಕಾದು ಬೇಸತ್ತ ಅನಂತನಾಗ್ ಮನೆಯಿಂದ ಹೊರಡುತ್ತಾನೆ. ಸಣ್ಣ ತಿರುವಿನಲ್ಲಿ ಇಬ್ಬರ ಭೇಟಿ ತಪ್ಪಿ ಹೋಗುತ್ತದೆ. ಇಬ್ಬರೂ ಬೇರೆ ಬೇರೆ ರಸ್ತೆಗೆ ಹೊರಳುತ್ತಾರೆ. ಇದಿಷ್ಟು ಸನ್ನಿವೇಶ.

ಇಲ್ಲಿ ಕತೆಯ ಸಂದರ್ಭಕ್ಕೆ ಹೊಂದುವಂತೆ ಚುರುಕಾದ ಸಂಕಲನವಿದೆ. ಸೆಕೆಂಡುಗಳ ಅಂತರದಲ್ಲಿ ಬೇರೆ ಬೇರೆ ಭಾವಗಳನ್ನು ಪ್ರಕಟಿಸಬೇಕಾದ ಈ ದೃಶ್ಯ ಸಂಗೀತ ಸಂಯೋಜಕನಿಗೆ ಬಹು ದೊಡ್ಡ ಸವಾಲು. ಇಲ್ಲಿ ವಾದ್ಯಗಳಿಗೇ ಇರಬಹುದಾದ ವೈವಿಧ್ಯಮಯ ಶಬ್ದಗಳನ್ನು ಬಳಸಿಕೊಳ್ಳುವಷ್ಟು ಸಮಯಾವಕಾಶವಿಲ್ಲ. ಹೆಚ್ಚು ವಾದ್ಯಗಳನ್ನು ವೇಗದ ಗತಿಯಲ್ಲಿ ಬಳಸಿದರೆ ಅಬ್ಬರ, ಒರಟುತನ ಕಾಣುತ್ತದೆ. ಕೆಲವರು ಇಂಥ ಕಡೆ ಎಲ್ಲಕ್ಕೂ ಅನ್ವಯಿಸುವಂಥ ಒಂದು ಸ್ವರ ಸೃಷ್ಟಿಸಿ ಕೈತೊಳೆದುಕೊಂಡು ಬಿಡುತ್ತಾರೆ. ಹೀಗೆ ಮಾಡುವುದು ಸುಲಭ. ಆದರೆ ಇದರಿಂದ ದೃಶ್ಯದ ಪರಿಣಾಮ ಹಾಳಾಗುತ್ತದೆ. ಅಲ್ಲದೆ ಇಂಥ ಸನ್ನಿವೇಶಗಳಲ್ಲಿ ದೃಶ್ಯಗಳಲ್ಲಿಯೇ ಬರುವ ಶಬ್ದಗಳನ್ನು ಬಳಸುವುದು ಕೂಡ ಫಲಕಾರಿಯಲ್ಲ. ಆದರೆ ವಿಜಯ ಭಾಸ್ಕರ್ ತಮ್ಮ ಸಂಗೀತ ಪ್ರತಿಭೆಯನ್ನು ಪೂರ್ಣವಾಗಿ ಬಳಸಿ ಶ್ರೇಷ್ಠ ಪರಿಣಾಮ ಸಾಧಿಸಿದ್ದಾರೆ. ದೃಶ್ಯದಲ್ಲಿ ಇರುವ ನೋವು, ಕಾತುರ, ಕುತೂಹಲ, ಭಯ ಮುಂತಾದ ಭಾವನೆಗಳ ನಡುವೆ ಇರುವ ಸಂಗೀತಾವಕಾಶವನ್ನು ಸ್ಪಷ್ಟವಾಗಿ ಗ್ರಹಿಸಿದ್ದಾರೆ. ವಯಲಿನ್ ಬಳಸಿ ಸೃಷ್ಟಿಸಿರುವ ರಾಗದಲ್ಲಿನ ಏರಿಳಿತಗಳು ಅತ್ಯಂತ ಭಾವಪೂರ್ಣವಾಗಿದ್ದು ಅದ್ಭುತವಾದ ಪರಿಣಾಮ ಉಂಟು ಮಾಡುತ್ತವೆ. ಬೇರೆ ಸಂಗೀತ ಸಂಯೋಜಕರ ಉದಾಹರಣೆಯಲ್ಲಾದರೆ, ಹಳೆಯ ಚಿತ್ರಗಳಲ್ಲಿ ಅದಾಗಲೇ ಬಳಸಿರುವ ಸಿದ್ಧ ಸ್ವರಪ್ರಸ್ತಾವವನ್ನಷ್ಟೇ ಕಾಣಬಹುದಾಗಿತ್ತು. ಅಥವಾ ನಾಲ್ಕಾರು ವಾದ್ಯಗಳಿಂದ ಹೆಚ್ಚಿನ ಶಬ್ದ ಹೊರಡಿಸಿ ಯಾವುದಾದರೂ ಒಂದೇ ಒಂದು ಭಾವನೆಗೆ ಹೆಚ್ಚು ಒತ್ತು ಕೊಟ್ಟು ಕೈತೊಳೆದುಕೊಳ್ಳುವುದು ನಡೆದಿರುತ್ತಿತ್ತು. ಸೃಜನಶೀಲ ಸಂಗೀತ ಸಂಯೋಜಕನಿಗೆ ಮಾತ್ರ ಇಂಥ ಸವಾಲುಗಳನ್ನು ಎದುರಿಸಿ ಹೊಸ ಸೃಷ್ಟಿ ನೀಡುವುದು ಸಾಧ್ಯ. ದೃಶ್ಯದಲ್ಲಿಯೆ ಇರುವ ಸಂಗೀತಾವಕಾಶವನ್ನು ಬಳಸಿಕೊಳ್ಳುವುದೆಂದರೆ ಇದೇನೆ. ಇಂತಹ ಸೃಷ್ಟಿಕ್ರಿಯೆಯ ಸಂದರ್ಭದಲ್ಲಿ ಸಂಗೀತ ಸಂಯೋಜಕ ಸೃಷ್ಟಿಸುವ ರಾಗಕ್ಕೆ ಸಿದ್ಧವಾದ ಶಾಸ್ತ್ರೀಯ ಸಂಗೀತವೆ ನೆರವಿಗೆ ಬರುತ್ತದೆ ಎಂದು ಹೇಳುವಂತಿಲ್ಲ. ಯಾವುದೋ ಒಂದು ಅನುಭವ ಪ್ರೇರಿತ ಸಂವೇದನೆಯ ಮಿಂಚು ಆ ಕ್ಷಣದಲ್ಲಿ ರಾಗವಾಗಿ ಹುಟ್ಟಿ ಬೆಳಗಿಬಿಡಬಹುದು. ಇಂಥದೆ ಸೃಷ್ಟಿ ಒಂದು ಅತ್ಯಾಚಾರದ ದೃಶ್ಯಕ್ಕೆ ಸಂಗೀತ ನೀಡುವಾಗಲು ಆಗುವುದು ಸಾಧ್ಯ. ಆದರೆ ನಮ್ಮ ಚಿತ್ರಗಳಲ್ಲಿ ಅತ್ಯಾಚಾರ, ದೇವರು ಪ್ರತ್ಯಕ್ಷವಾಗುವುದು ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ಎಂಟ್ರಿ ಮೂರಕ್ಕೂ ಒಂದೇ ಬಗೆಯ ಹಿನ್ನೆಲೆ ಸಂಗೀತ ಬಳಸಲಾಗುತ್ತದೆ. ಅತ್ಯಾಚಾರಕ್ಕೆ ಒಳಗಾಗುವ ಹೆಣ್ಣಿನ ಕಿರುಚಾಟದ ಜೊತೆಜೊತೆಗೇ ರಣತರಂಗಗಳ ಒರಟು ವಾದ್ಯಗಳನ್ನು ಯದ್ವಾತದ್ವಾ ಬಡಿಯುತ್ತಾ ಹೋಗುವುದರಿಂದ ಕಾಮಕ್ರಿಯೆ ವೈಭವಗೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ. ಇದರಿಂದಾಗಿ ನಮಗೆ ಹೆಣ್ಣಿನ ನೋವು ಆಕ್ರಂದನಕ್ಕಿಂತ ಅತ್ಯಾಚಾರಿಯ ವಿಕಟನಗೆ, ಅಟ್ಟಹಾಸವೇ ಪ್ರಿಯವಾಗುತ್ತದೆ. ಅತ್ಯಾಚಾರಕ್ಕೆ ಬಲಿಯಾಗುತ್ತಿರುವ ಹೆಣ್ಣಿನ ಅಂಗಾಂಗಳನ್ನು ಕಾಣುವ ತವಕ



ಹುಟ್ಟಿಸಿ ಕಾಮನೆಗಳನ್ನು ಪ್ರಚೋದಿಸುವ ಸಾಧನವಾಗಿ ಮಾರ್ಪಡುತ್ತದೆ. ಇದು, ಸರಿಯಾಗಿ ಬಳಸದಿದ್ದರೆ ಸಂಗೀತ ಕೂಡ ಎಂಥ ದುಷ್ಪರಿಣಾಮ ಬೀರಬಲ್ಲದು ಎಂಬುದಕ್ಕೆ ಉದಾಹರಣೆ. ಇಂದಿನ ಜನಪ್ರಿಯ ಚಿತ್ರಗಳ ಸಂಗೀತ ಪ್ರಾಮುಖ್ಯತೆ ಕಳೆದುಕೊಂಡಿರುವುದಕ್ಕೆ ಇರುವ ಕಾರಣಗಳು ಇಂಥವೇ. ಒಬ್ಬ ಸಂಗೀತ ಸಂಯೋಜಕ ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದೇ ಹೋದಾಗ ಅಷ್ಟರ ಮಟ್ಟಿಗೆ ಅವನು ನಿರ್ದೇಶಕನಿಗೆ ಇರಬಹುದಾದ ಪ್ರಾಯೋಗಿಕ ಉದ್ದೇಶಗಳಿಗೆ ದೊಡ್ಡ ಹಾನಿ ಮಾಡಿರುತ್ತಾನೆ. ಬಹಳ ಸಾರಿ ಇದು ನಿರ್ದೇಶಕನಿಗೆ ಗೊತ್ತಾಗದಂತೆಯೆ ನಡೆದುಹೋಗಿರುತ್ತದೆ.

ವೈಯಕ್ತಿಕವಾಗಿ ನನಗೆ 'ಅನ್ವೇಷಣೆ' ಚಿತ್ರದ ಸಂಗೀತ ಚಿತ್ರದ ಉದ್ದೇಶಿತ ಧ್ವನಿಗೆ ಅತ್ಯಂತ ಸಮರ್ಪಕವಾಗಿ ಹೊಂದಿಕೊಂಡಿದೆ ಎಂಬ ಭಾವನೆಯಿದೆ. ಒಬ್ಬನೇ ನಿರ್ದೇಶಕ ಸ್ಪಂದಿಸುವ ಅಪೂರ್ವ ಮಾದರಿ ಈ ಚಿತ್ರದಲ್ಲಿ ಒಡೆದು ಕಾಣುತ್ತದೆ. 'ಗ್ರಹಣ' ಇಡಿಯಾಗಿ ಶಾಬ್ದಿಕ ಕಲೆಯ ವಸ್ತುವನ್ನು ಆಧರಿಸಿದ್ದರೆ 'ಅನ್ವೇಷಣೆ'ಯದು ಮೌನ ಪ್ರಧಾನ ವಸ್ತುವಿನ ಕೌತುಕಮಯ ನಿರೂಪಣೆ. 'ಅನ್ವೇಷಣೆ' ಚಿತ್ರ 'ಶಬ್ದ ರಹಿತ' ಸ್ಥಿತಿಯಲ್ಲಿ ಅತ್ಯಂತ ಶಕ್ತಿಪೂರ್ಣವಾಗಿ ರೂಪುಗೊಳ್ಳುತ್ತಾ ಹೋಗುವಂಥದ್ದು. ಈ ಕ್ರಿಯೆಯಲ್ಲಿ ಅಸಹಾಯಕತೆ, ವಿಷಾದ, ಆರ್ದ್ರತೆಯೇ ಪ್ರಧಾನವಾದ ಘಟನೆಗಳು ಕೌತುಕದ ತಲ್ಲಣವನ್ನು ಉಂಟುಮಾಡುತ್ತಾ ಹೋಗುತ್ತದೆ. ಇಂಥ ಚಿತ್ರಗಳಲ್ಲಿ ನಿರ್ದೇಶಕ ಪ್ರೇಕ್ಷಕನ ನಿರೀಕ್ಷೆಗೆ ಅನುಗುಣವಾದ ನಿರೂಪಣೆಯನ್ನು ಅನುಸರಿಸದಿದ್ದಲ್ಲಿ ಅದನ್ನು ಸಂಗೀತದಿಂದ ಸರಿಪಡಿಸಲು ಅವಕಾಶಗಳಿರುತ್ತವೆ. ವಿಜಯ ಭಾಸ್ಕರ್ ಇಂಥ ಕೆಲಸವನ್ನು ಕೆಲವು ಕಡೆ ಉತ್ತಮವಾಗಿ ಮಾಡಿದ್ದಾರೆಂಬುದೇ ಅವರು ಈ ಬಗೆಯ ಪ್ರಯತ್ನಗಳಿಗೆ ಅರ್ಹರಾದ ಅತ್ಯಂತ ಸಮರ್ಥ ಸಂಗೀತ ನಿರ್ದೇಶಕರು ಎಂಬುದಕ್ಕೆ ಸಾಕ್ಷಿಯಾಗಿದೆ. ಇಂಥ ಕಡೆ ಸೃಜನಶೀಲ ಮನಸ್ಸೊಂದನ್ನು ಕ್ರಿಯಾಶಾಲಿ ಮನಸ್ಸೊಂದು ಆಶ್ರಯಿಸುವಂಥ ಸಾವಯವ ಕ್ರಿಯೆ ಜೀವಂತಗೊಳಿಸುತ್ತದೆ.

'ಅನ್ವೇಷಣೆ' ಚಿತ್ರದಲ್ಲಿ ನಿರ್ಣಾಯಕ ಕ್ಷಣಗಳು ಬರುವುದು ಚಿತ್ರದ ಕೊನೆಯಲ್ಲಿ ಮಾತ್ರ. ಆದರೆ 'ಗ್ರಹಣ'ದಲ್ಲಿ ಚಿತ್ರದುದ್ದಕ್ಕೂ ನಿರ್ಣಾಯಕ ತಿರುವುಗಳಿವೆ. ಗೌಡನ ನ್ಯಾಯದಲ್ಲಿ, ಅತ್ತಿಗೆಯ ಆಸೆಯನ್ನು ನಾಯಕ ತಿರಸ್ಕರಿಸಿದ್ದರಲ್ಲಿ, ತೋಟದಲ್ಲಿ ಕಳವು ಮಾಡಿದವರನ್ನು ಕಟ್ಟಿ ಹಾಕಿ ಹೊಡೆಯುವುದರಲ್ಲಿ ಕತೆ ಬೆಳೆಯುತ್ತಾ ಹೋಗುತ್ತದೆ. ಇಲ್ಲಿ ಸಂಗೀತ ಸಂಯೋಜಕನ ಮುಂದಿರುವುದು ಕಥೆಯ ಯಾವ ಯಾವ ತಿರುವುಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಸಮತೋಲನಗೊಳಿಸುತ್ತಾ ಹೋಗಬೇಕೆಂಬ ಸಮಸ್ಯೆ ಮಾತ್ರ. ಆದರೆ 'ಅನ್ವೇಷಣೆ'ಯಲ್ಲಿ ಈಗಾಗಲೇ ಸಂಭವಿಸಿರುವ - ಸಂಭವಿಸುತ್ತಿರುವ - ಘಟನೆಗಳಿಗೆ ಎಷ್ಟೆಷ್ಟು ರಂಜಕತೆ ತರಬೇಕೆಂಬ ನಿಭಾಯಿಸಬಹುದಾದ ಸವಾಲಿದೆ. ಇಂತಹ ಎರಡೂ ಚಿತ್ರಗಳ ಹಿನ್ನೆಲೆಯೇ ಅತ್ಯಂತ ಸೃಜನಶೀಲ ಸಂಗೀತ ಸಂಯೋಜಕನ ಅನಿವಾರ್ಯತೆಯನ್ನು ಹೇಳುತ್ತವೆ. ಈ ಎರಡು ಚಿತ್ರಗಳ ಪೈಕಿ ವಿಜಯ ಭಾಸ್ಕರ್‌ರವರ ಸಂಗೀತಾಭಿವ್ಯಕ್ತಿ 'ಅನ್ವೇಷಣೆ'ಯಲ್ಲಿ ಹೆಚ್ಚು ಸಫಲತೆ ಪಡೆದುಕೊಂಡಿದೆ ಅನ್ನಿಸುತ್ತದೆ. ಪರವಶತೆ ಹಾಗೂ ವಿವಶತೆಗಳ ಉತ್ಕಟ ಕ್ಷಣಗಳನ್ನು ಥಟ್ಟನೆ ಅನುಭವವಾಗಿಸುವುದರಲ್ಲಿ 'ಅನ್ವೇಷಣೆ'ಯ ಸಂಗೀತ 'ಗ್ರಹಣ'ಕ್ಕಿಂತಲೂ ಹೆಚ್ಚು ಶ್ರೇಷ್ಠತೆಯನ್ನು ಸಾಧಿಸಿದೆ.

ಇಷ್ಟಾಗಿಯೂ ಕಲಾತ್ಮಕ ಮತ್ತು ಜನಪ್ರಿಯ ಸಿನಿಮಾಗಳ ನಡುವೆ ಪ್ರಜ್ಞಾಪೂರ್ವಕವಾಗಿಯೇ ಭಿನ್ನ ದಾರಿ ತುಳಿಯಲು ಪ್ರಯತ್ನಿಸಿರುವ ನಾಗಾಭರಣರಿಗೆ ಸಂಗೀತವನ್ನು ಅಷ್ಟೆ ಭಿನ್ನ ರೀತಿಯಲ್ಲಿ ಬಳಸಿಕೊಳ್ಳುವ ಒಂದು ತೀವ್ರವಾದ ಆಕಾಂಕ್ಷೆಯಿದೆ ಎಂದು ಅನ್ನಿಸುವುದಿಲ್ಲ. ಆದರೆ ಚಾಲ್ತಿಯಲ್ಲಿರುವ, 'ಇದೇ ಮಾದರಿ' ಎಂಬಂತೆ ಆಗಿಬಿಟ್ಟಿರುವ ಜನಪ್ರಿಯ ಸಂಗೀತದ ಸಂಕೋಲೆಗಳಿಂದ ಪಾರಾಗಿ ನಿಲ್ಲಲು ಅವರು ತವಕಿಸಿದ್ದಾರೆಂಬುದಕ್ಕೆ ಅವರ ಚಿತ್ರಗಳಲ್ಲಿ ಕುರುಹುಗಳು ಕಾಣುತ್ತವೆ. ಕನಿಷ್ಟ ವಾದ್ಯಗಳ ಆಯ್ಕೆಯಲ್ಲಿಯೇ ನಾವು ಅದರ ಇಂಥ ವಸ್ತುನಿಷ್ಠ ಪ್ರಜ್ಞೆಯನ್ನು ಕಾಣಬಹುದಾಗಿದೆ. ಕೊಳಲು, ಹಾರ್ಮೋನಿಯಂ, ತಬಲ, ವೀಣೆಯಂಥ ವಾದ್ಯಗಳು ಅನ್ವೇಷಣೆಯಲ್ಲಿ ಪರಿಣಾಮಕಾರಿಯಗುವುದಿಲ್ಲವೆಂಬುದು ಹೇಗೋ ಹಾಗೆಯೆ ಇವೇ ವಾದ್ಯಗಳು 'ಗ್ರಹಣ'ಕ್ಕೆ ಜೀವ ತುಂಬುತ್ತವೆಂಬ ಗ್ರಹಿಕೆಯೇ ಅವರಿಗಿರುವ ಸಂಗೀತ ಪ್ರತಿಭೆಗೆ ಸಾಕ್ಷಿ ಒದಗಿಸುತ್ತದೆ.

ನಿರೂಪಣೆಗೆ ಸಂಬಂಧಿಸಿದಂತೆ ಇನ್ನೊಂದು ಮಾತನ್ನು ಹೇಳಬಹುದು. 'ಗ್ರಹಣ'ದಂಥ ವಸ್ತುವಿಗೆ ಬೇಕಾಗಿಲ್ಲದ ತಾಂತ್ರಿಕ ಕುಶಲತೆ 'ಅನ್ವೇಷಣೆ'ಯ ನಿರೂಪಣೆಗೆ ಬೇಕಾಗುತ್ತದೆ. 'ಗ್ರಹಣ'ದ ಕಳಕಳಿ ಹಾಗೂ 'ಅನ್ವೇಷಣೆ'ಯ ಕೌತುಕತೆ ಎರಡೂ ಬೆರೆತಿದ್ದು ಪರಿಶುದ್ಧವೆನ್ನಿಸಿಕೊಳ್ಳಲು ತವಕಿಸಿರುವ ಚಿತ್ರ 'ಮೈಸೂರು ಮಲ್ಲಿಗೆ' ಹಾಗೂ 'ಶಿಶುನಾಳ ಶರೀಫ'. ಮೈಸೂರು ಮಲ್ಲಿಗೆಯಲ್ಲಿ ನಾಗಾಭರಣರು ಪ್ರಥಮ ಬಾರಿಗೆ ಹಾಡುಗಳನ್ನು 'ಥೀಮ್' ಆಗಿ ಬಳಸಿಕೊಂಡಿದ್ದಾರೆ. ಇಲ್ಲಿ ಪ್ರತಿಯೊಂದು ಹಾಡು ಕೂಡ ಕತೆಯ ಪ್ರತಿಯೊಂದು ಪಾತ್ರದ ವೃತ್ತಾಂತದ ಬೆಳವಣಿಗೆಯಲ್ಲಿ ಅವಿಭಾಜ್ಯ ಅಂಗವಾಗಿ ಬರುತ್ತದೆ. ಈ ಎರಡೂ ಚಿತ್ರಗಳ ವಸ್ತು ನೀಡಬಹುದಾದ ಅನುಭವದ ರೂಪವನ್ನು ಹಾಡುಗಳು ನಿರ್ಣಯಿಸುವಂಥ ಒಂದು ವಿಶಿಷ್ಟವಾದ ವಿಧಾನ ಇಲ್ಲಿದೆ. ಹಾಡು ಹಾಡುಗಳ ನಡುವೆ ಉಂಟಾಗುವ ಅನುಭವದ ಅನುಕ್ರಿಯೆಯನ್ನು ಹಾಡಿನ ಅರ್ಥದಿಂದಲೇ ನಿರ್ದೇಶಿಸಬಲ್ಲ ಈ ಬಗೆಯ ಪ್ರಯತ್ನ ನಮ್ಮಲ್ಲಿ ತೀರಾ ಅಪರೂಪ. ಆದರೆ ಒಂದು ಸುವ್ಯವಸ್ಥಿತವಾದ ಬಂಧವಿಲ್ಲದೆ, ದಟ್ಟ ಅನುಭವಗಳ ದಿವ್ಯ ಸ್ಪರ್ಶವಿಲ್ಲದೆ ಈ ಪ್ರಯತ್ನದಲ್ಲಿ ನಾಗಾಭರಣರು ಅಷ್ಟೊಂದು ಯಶಸ್ವಿಯಾಗಲಿಲ್ಲ. ಇದು 'ಮೈಸೂರು ಮಲ್ಲಿಗೆ'ಯ ಬಗ್ಗೆ ಹೇಳಬಹುದಾದ ಮಾತು. 'ಶಿಶುನಾಳ ಶರೀಫ' ಚಿತ್ರದಲ್ಲಿ ಇದಕ್ಕಿಂತ ಸ್ವಲ್ಪ ಮೇಲ್ಮಟ್ಟವನ್ನು ಸಾಧಿಸಲಾಗಿದೆ.

ಶರೀಫ ಚಿತ್ರದಲ್ಲಿ ಸುಖಕ್ಕಿಂತ ಶೋಕದ ಛಾಯೆ ದಟ್ಟವಾಗಿದೆ. ವ್ಯಕ್ತಿಯೊಬ್ಬನ ಕುಟುಂಬದಲ್ಲಿ ನಡೆಯುವ ಘಟನೆಗಳು ಇಡೀ ಊರನ್ನೇ ತನ್ನ ಕಕ್ಷೆಗೆ ಎಳೆದುಕೊಳ್ಳುತ್ತವೆ. ಮೈಸೂರು ಮಲ್ಲಿಗೆಯ ವಸ್ತು ಇದಕ್ಕೆ ತದ್ವಿರುದ್ಧವಾದ್ದು. ಇಡೀ ದೇಶದ ಸಮಸ್ಯೆಗಳು ಮನೆಯೊಳಗೆ ನುಸುಳಿ ಕೋಲಾಹಲವನ್ನೆಬ್ಬಿಸುತ್ತವೆ. ಒಂದರಲ್ಲಿ ಹಾಡುಗಳ ಮೂಲಕ ಅನುಭಾವದ ರೂಪಕಾರ್ಥ ಸೃಷ್ಟಿಸುವ ಕ್ರಿಯೆ ಇದ್ದರೆ ಇನ್ನೊಂದರಲ್ಲಿ ಹಾಡುಗಳೇ ದೇಶವನ್ನೆಲ್ಲ ತುಂಬಿಕೊಂಡಿರುವ ಚಿತ್ರವಿದೆ. ನಾಗಾಭರಣರು ತಮ್ಮ ಚಿತ್ರಗಳ ಮೂಲಕ ಸಾಧಿಸಿದ ವೈವಿಧ್ಯ ಇದು. ಈ ಎರಡು ಚಿತ್ರಗಳ ವಸ್ತುಗಳನ್ನು ಅವರು ಸಂಗೀತ ಪ್ರೇರಿತ ಪ್ರಜ್ಞೆಯೊಂದರ ಮೂಲಕ ರೂಪಿಸಲು ಪ್ರಯತ್ನಿಸಿರುವುದು ಅವರನ್ನು ಅವರ ಓರಗೆಯ ಇತರೆ ನಿರ್ದೇಶಕರಿಗಿಂತ ಎತ್ತರದಲ್ಲಿ ನಿಲ್ಲಿಸಿದೆ.



ತನ್ನ ಇಡೀ ಬದುಕನ್ನು ನೋವಿಗೆ ಸಂಕೇತವಾಗಿ ಕಳೆಯುವ ಶರೀಫ ತನ್ನ ದರ್ಶನಾಭಿವ್ಯಕ್ತಿಗೆ ಹಾಡುಗಳ (ಸಂಗೀತ) ಮೊರೆ ಹೋಗುತ್ತಾನೆ. ಮೈಸೂರು ಮಲ್ಲಿಗೆಯದು ಈ ಬಗೆಯ ಜಾಡಲ್ಲ. ಅದು ಹಾಡುಗಳ ಮೂಲಕ ಭಾವದ ಅಭಿನಯ ಕ್ರಿಯೆಯನ್ನು ಸುಭಾಷಿತಗಳ ಶೈಲಿಯಲ್ಲಿ ಪ್ರಕಟಿಸಲು ತವಕಿಸುತ್ತದೆ. ಪುರುಷಾರ್ಥ ಪರಿಕಲ್ಪನೆ ಈ ಎರಡೂ ಚಿತ್ರಗಳಲ್ಲಿ ಎರಡು ಮಾರ್ಗಗಳ ಮೂಲಕ ಸಂಗೀತದ ಸ್ಪರ್ಶಗಳೊಂದಿಗೆ ಸಾಕಾರಗೊಳ್ಳುವಂತಿರುವುದು ಒಂದು ಪ್ರಮುಖ ವೈಶಿಷ್ಟ್ಯ.

'ಮೈಸೂರ ಮಲ್ಲಿಗೆ'ಯಲ್ಲಿ ಹಿನ್ನೆಲೆ ಸಂಗೀತ ಕೆಲವು ಕಡೆ ಪೂರ್ಣತ್ವ ಪಡೆದುಕೊಂಡಿರುವ ಕುರುಹುಗಳಿವೆ. ವಾದ್ಯಗಳ ಆಯ್ಕೆ ಮತ್ತು ಬಳಕೆಯ ಮಟ್ಟಿಗೆ ಸಹಜತೆಗೆ ಹೆಚ್ಚಿನ ಒತ್ತು ಕೊಡುವಲ್ಲಿ ಸಿ. ಅಶ್ವಥ್‌ರವರು ವಿಶೇಷವಾಗಿ ಶ್ರಮಿಸಿದ್ದಾರೆ. ಅವರ ಈ ಶ್ರಮ ಕೆಲವು ಕಡೆ ನಿರ್ದೇಶಕನ ಉದ್ದೇಶಕ್ಕೆ ಮಾತು ತಂದುಕೊಟ್ಟಷ್ಟು ಪ್ರಧಾನವಾಗಿ ಗೋಚರಿಸುತ್ತದೆ. ಚಿತ್ರದಲ್ಲಿ ಹಿನ್ನೆಲೆಗೆ ಒಂದೆರಡು ಕಡೆ ಮಾನವ ಧ್ವನಿ ಬಳಸಿಕೊಂಡು ದೃಶ್ಯದಲ್ಲಿನ ಭಾವನೆಗಳಿಗೆ ತೀವ್ರತೆ ತರಲಾಗಿದೆ. ಇಂಥ ಕಡೆ ವಾದ್ಯಗಳನ್ನು ಕೂಡ ಬಳಸಬಹುದಿತ್ತು. ಆದರೆ ಮಾನವ ಧ್ವನಿಯಲ್ಲಿ ಸಂಚಲನಗೊಳ್ಳಬಹುದಾದ ಜೀವಂತಿಕೆ ವಾದ್ಯದ ಶಬ್ದಗಳಿಂದ ಸೃಷ್ಟಿಯಾಗಲಾರದು. ಮ್ಯಾಂಡಲಿನ್, ವಯಲಿನ್, ಕೊಳಲುಗಳ ಹದವಾದ ಬಳಕೆ ನಾಗಾಭರಣರ ಇತರ ಚಿತ್ರಗಳಿಗಿಂತ ಇಲ್ಲಿ ಉತ್ತಮವಾಗಿದೆ. ಆದರೆ ಇಷ್ಟೆಲ್ಲಾ ಇದ್ದು ಇಲ್ಲಿ ಸಂಗೀತದ ಮೂಲಕವೇ ಒಂದು ದಿವ್ಯಾನುಭವ ಉಂಟಾಗುವುದಿಲ್ಲ. ಆದರೆ ವಸ್ತುವಿಗೆ ಪೂರಕವಾದ ಭಾವವನ್ನು ಉದ್ದೀಪಿಸುವಲ್ಲಿ ಈ ಪ್ರಯೋಗ ಸಹಕಾರಿಯಾಗಿ ಒದಗಿ ಬಂದಿದೆ. ಆದರೆ ಇದು ತಾನು ಸೃಷ್ಟಿಯಾಗುವ ಪರಿಸರದಿಂದಲೇ ಅತ್ಯಂತ ವಸ್ತುನಿಷ್ಠವಾಗಿ, ಪರಿಸರ ನಿಷ್ಠವಾಗಿ ಪ್ರಕಟವಾಗುವುದಿಲ್ಲ. ಅದನ್ನು ಹೀಗೆ ವಿವರಿಸಬಹುದು. ಈ ಎರಡೂ ಚಿತ್ರಗಳ ಆವರಣ ಬಹುತೇಕ ಹೊರಾಂಗಣದ್ದು. ಹೀಗಾಗಿ ಇಲ್ಲಿ ಹಾಡುವಂಥ ಸಂದರ್ಭ ಪ್ರಕೃತಿಯಲ್ಲಿನ ಶಬ್ದಗಳಿಂದ ಸ್ಫೂರ್ತಿ ಪಡೆದಂತಿರಬೇಕು. ರೈತ ಮಹಿಳೆಯರು ಪೈರು ನಾಟುವಾಗ ಅಥವಾ ರೈತರು ಉಳುವಾಗ ಗುನುಗುವ ಆಲಾಪಗಳಿಗೆ ಹೇಗೆ ಪ್ರಕೃತಿಯಲ್ಲಿನ ಶಬ್ದಗಳ ಸ್ಫೂರ್ತಿ ಇರುತ್ತದೋ ಹಾಗೆ. ಬೀಸುವ ಗಾಳಿಯಲ್ಲಿಯೇ ಇರುವ ಲಯ, ಎಲ್ಲಿಂದಲೊ ಕೇಳಿ ಬರುವ ಹಕ್ಕಿಯ ಇಂಚರ ಆ ಪರಿಸರದಲ್ಲಿ ಒಡನಾಡುವವರನ್ನು ಉದ್ದೀಪನಗೊಳಿಸುತ್ತವೆ. ಇಂಥ ಉದ್ದೀಪಕತೆಯ ಲಹರಿಗಳಲ್ಲಿ ಸೃಷ್ಟಿಯಾಗುವ ರಾಗಗಳಿಗೆ ಹಾಡುವವರು ಅನುಭವಿಸುವ ಆನಂದವನ್ನು ಬಿಟ್ಟರೆ ಶಾಸ್ತ್ರೀಯವಾದಂತಹ ಯಾವುದೇ ಕಟ್ಟುಪಾಡುಗಳಿರುವುದಿಲ್ಲ. (ಸ್ನಾನದ ಕೋಣೆಯ ಗಾಯನಕ್ಕೆ ಕೂಡ ಇಂಥದೇ ಬೇರೆ ಬೇರೆ ಶಬ್ದಗಳ ಸ್ಫೂರ್ತಿ ಇರುತ್ತದೆ) ಸಂಗೀತ ಪ್ರಧಾನ ಚಿತ್ರಗಳು ಇಂತಹ ಸಹಜತೆಯನ್ನು ಹೊಂದಿರಬೇಕು. ಶರೀಫ ಚಿತ್ರದಲ್ಲಿ ಈ ಬಗೆಯ ವಾತಾವರಣದಲ್ಲಿನ ಶಬ್ದಗಳು ರಾಗಗಳಾಗಿ ರೂಪಾಂತರಗೊಳ್ಳುವ ಕ್ರಿಯೆ ಇಲ್ಲ. ಪ್ರಕೃತಿಯಿಂದಲೇ ಪಡೆಯಿತೆಂಬಂಥ ನಾದಶರೀರವೊಂದನ್ನು ನಾವು ಆ ಚಿತ್ರದಲ್ಲಿ ಕಾಣುವುದಿಲ್ಲ. 'ಮೈಸೂರು ಮಲ್ಲಿಗೆ'ಯಲ್ಲಿ ಎಲ್ಲೋ ಒಂದೆರಡು ಕಡೆ ಎಳೆಗರುವಿನ ನೆಗೆತವೊ, ಗೆಜ್ಜೆ ಶಬ್ದವೊ ಕೇಳಿ ಉತ್ಸಾಹಗೊಂಡಂತೆ ವರ್ತಿಸಿ ಹಾಡುವುದನ್ನು ಬಿಟ್ಟರೆ ತಾನೇ ತಾನಾಗಿ ಆಕೃತಿ ಪಡೆಯುವಂತೆ ಸಹಜ ಸಂಗೀತದ ಜಾಗಗಳನ್ನು ಸೃಷ್ಟಿಸಿಲ್ಲ.

ಇದೇ ಮಾತನ್ನು 'ಚಿನ್ನಾರಿ ಮುತ್ತ' ಚಿತ್ರಕ್ಕೂ ಅನ್ವಯಿಸಬಹುದು. ಈ ಚಿತ್ರದಲ್ಲಿನ ಪ್ರತಿಯೊಂದು ಪಾತ್ರವು ಯಾವುದೋ ಒಂದು ಆಕಾಂಕ್ಷೆಯ ಬೆನ್ನು ಹತ್ತಿ ಹೊರಟಿದೆ. ಮತ್ತು ಈ ಕಾರಣಕ್ಕಾಗಿಯೇ ಹಾಡುಗಳಿಗೆ ಒಂದು ಸಂಗೀತದ ಕೊಂಡಿಯನ್ನು ಗರ್ಭೀಕರಿಸಿಕೊಂಡಿದೆ. ಚಿತ್ರದ ಬಾಲಕ 'ಮುತ್ತ' ತನ್ನ ಕನಸುಗಳು ಒಂದಲ್ಲಾ ಒಂದು ದಿನ ಬಂದೇ ಬರುವ ಮಾವನ ಮೂಲಕ ಈಡೇರುತ್ತವೆಂದುಕೊಳ್ಳುವುದು, ಮಗನನ್ನು ಕಳೆದುಕೊಂಡಿರುವ ಅಜ್ಜಿ ಮೊಮ್ಮಗನ ಮೂಲಕ ತನ್ನನ್ನು ಕಾಪಾಡಿಕೊಳ್ಳಲು ಬಯಸುವುದು, ಗಟ್ಟಿಮುಟ್ಟಾಗಿರುವ ಹುಡುಗ ಮನೆ, ತೋಟಕ್ಕೆ ಒಳ್ಳೆ ಕೆಲಸದಾಳಾಗುತ್ತಾನೆಂದು ಗೌಡ ಆಸೆಪಡುವುದು, ಅವಿನಾಶ್ ತನ್ನ ಶಿಷ್ಯನ ಮೂಲಕ ತನ್ನ ಸಾಧನೆಯನ್ನು ಕಾಣಲು ತವಕಿಸುವುದು. ಹೀಗೆ ಒಂದು ನಿರ್ದಿಷ್ಟ ಆಕಾಂಕ್ಷೆ ಎಲ್ಲಾ ಪಾತ್ರಗಳಿಗೂ ಇರುವುದರಿಂದ ಕಾವ್ಯಾತ್ಮಕ ನಿರೂಪಣೆಗೆ ಹೆಚ್ಚು ಅವಕಾಶ ಒದಗಿ ಬಂದಿದೆ. ಇದರೊಂದಿಗೆ ಮಕ್ಕಳನ್ನೇ ಕೇಂದ್ರವಾಗಿಟ್ಟುಕೊಂಡಿರುವ ಚಿತ್ರವಾದ್ದರಿಂದ ನಾಗಾಭರಣರು ಪದ್ಮಗಂಧೀ ಪ್ರಭಾವಲಯವನ್ನು ಆಶ್ರಯಿಸಿರುವುದು ಕೂಡ ಸಂಗತವಾಗಿ ಕಾಣುತ್ತದೆ. ಈ ಬಗೆಯ ವಸ್ತುವನ್ನು ಆಯ್ಕೆ ಮಾಡಿಕೊಂಡಾಗ ನಿರ್ದೇಶಕನಾದವನಿಗೆ ಕಾವ್ಯದ ಧಾತು ಹಾಗೂ ಮನುಷ್ಯ ಸಂಬಂಧಗಳ ಬಗ್ಗೆ ಆಳವಾದ ಗ್ರಹಿಕೆಯುಳ್ಳ ಸಂಗೀತ ಸಂಯೋಜಕನ ಅಗತ್ಯ ಎದುರಾಗುತ್ತದೆ. ನಮ್ಮಲ್ಲಿ ಈ ಬಗೆಯ ಕೆಲಸಕ್ಕೆ ಹೆಚ್ಚು ಅರ್ಹತೆಯಿರುವ ಮೂರ್ನಾಲ್ಕು ಮಂದಿಯಲ್ಲಿ ಸಿ. ಅಶ್ವಥ್ ಅಗ್ರಗಣ್ಯರು. 'ಚಿನ್ನಾರಿ ಮುತ್ತ'ದ ಅಭೂತಪೂರ್ವ ಯಶಸ್ಸು ಇದನ್ನು ಸಾಬೀತು ಪಡಿಸಿದೆ.

ನಾಗಾಭರಣರ ಇತ್ತೀಚಿನ ಮುಖ್ಯ ಚಿತ್ರಗಳಾದ ನೀಲಾ, ಜನುಮದ ಜೋಡಿ, ಸಿಂಗಾರೆವ್ವಗಳನ್ನು ಕೂಡ ಇದೇ ನಿಟ್ಟಿನಲ್ಲಿ ವಿವೇಚಿಸಬಹುದು. 'ಜನುಮದ ಜೋಡಿ'ಯ ಯಶಸ್ಸು ಜಾತ್ರೆಯ ಶಬ್ದ, ಸದ್ದು ಹಾಗೂ ಹೃದಯಂಗಮ ಗೀತೆಗಳಿಂದಲೇ ಆದದ್ದು ಅನ್ನುವವರಿದ್ದಾರೆ. ಸಂಗೀತದ ದೈವಿಕತೆಯ ಬಗ್ಗೆ ಅರಿವನ್ನುಳ್ಳವರು ಈ ಮಾತನ್ನು ಒಪ್ಪಬಹುದು. ಏಕೆಂದರೆ ಈ ಚಿತ್ರದಲ್ಲಿ 'ಪುರುಷ ಪ್ರಕೃತಿ'ಗೆ ಸಂಕೇತವಾದ 'ರಾಗ-ರಾಗಿಣಿ' ಸ್ವರೂಪದ ಪ್ರಧಾನ ರಾಗಗಳು ಹಾಗೂ ಮಕ್ಕಳೆನಿಸುವಂಥ ಕೆಲವಾರು ಅರ್ಥಪೂರ್ಣ ರಾಗರೂಪಗಳು ಸಂಗಮಗೊಂಡಿವೆ. ಆದ್ದರಿಂದಲೇ ಈ ಚಿತ್ರವು ಕಣ್ಣು ತುಂಬಿಕೊಳ್ಳುವಂಥ ರೂಪ ಲಾವಣ್ಯವನ್ನಷ್ಟೇ ಅಲ್ಲದೆ ಕಿವಿಯ ಮೂಲಕ ಕಣ್ಣಿಗೂ, ಮನಸ್ಸಿಗೂ ವಿದಿತವಾಗುವಂಥ 'ನಾದ'ವನ್ನು ಧರಿಸಿಕೊಂಡು ವಿಜೃಂಭಿಸಿತು.

'ಶಿವ-ಶಕ್ತಿ' ಸಂಯೋಗದ ಫಲವಾಗಿ ಹುಟ್ಟಿರುವುದು ಸಂಗೀತ ಎನ್ನುವುದನ್ನು ಒಪ್ಪಿಕೊಳ್ಳುವುದಾದರೆ 'ನೀಲಾ' ಚಿತ್ರದಲ್ಲಿನ ಬಂಡಕೆಟ್ಟ ನೀಲಗಾರರ ಸಂಗೀತ ಶ್ರದ್ಧೆಗೂ - ಅಧ್ಯಾತ್ಮ ಸ್ವರೂಪಿಯಾದ 'ಶಿವಪ್ಪ' ಸ್ತುತಿಸುವ ರಾಗಭಾವದ ದಿವ್ಯ ತೇಜಸ್ಸಿಗೂ ಅನೂಹ್ಯ ಸಂಬಂಧವಿದೆ. ವಿಜಯ ಭಾಸ್ಕರ್ ಇದನ್ನು ಗ್ರಹಿಸಿದ್ದರು. ಆದರಿಂದಲೇ ಅವರಿಗೆ 'ನೀಲಾ'ದ ಹಾಡುಗಳಿಗೆ ಅಷ್ಟೊಂದು ವೈವಿಧ್ಯಮಯವಾಗಿ ಜೀವ ತುಂಬಲು ಸಾಧ್ಯವಾಯಿತು. ಚಿತ್ರದ ಉಳಿದ ದುರ್ಬಲ ಅಂಶಗಳು ಶಿವಪ್ಪನ ಪ್ರಭೆಯಿಂದ ಅಳಿಸಿಹೋಗುವುದು ಕೂಡ ಈ ಕಾರಣದಿಂದಲೇ. 'ಸಿಂಗಾರೆವ್ವ'ದಲ್ಲಿ ಇಂಥ 'ಧ್ಯಾನ'ದ ಕೇಂದ್ರವಿಲ್ಲ. ಅಲ್ಲಿರುವುದು ನಾನಾ



ಬಗೆಯ ಹಸಿವಿನ ವಿಕೃತ ಚೀರಾಟಗಳು; ದುರ್ಬಲ ಮನಸ್ಸುಗಳ ರುದ್ರ ನರ್ತನಗಳು! ಇಂಥ ಆವರಣದಲ್ಲಿ ಸಂಗೀತ ಸಂಪೂರ್ಣವಾಗಿ ಅರಳಿ ಘಮಘಮಿಸುವ ಸಾಧ್ಯತೆಗಳು ಕಡಿಮೆ. ಆದರೆ ಅಸ್ತಿತ್ವ, ಹೋರಾಟ, ಬಿಡುಗಡೆಯ ನೆಲೆಗಳಲ್ಲಿ 'ಸಂಗೀತ ಪ್ರಭೆ'ಯನ್ನು ಘರ್ಷಣೆಗಿಳಿಸಿ ಪರಿಣಾಮಕ್ಕಾಗಿ ಕಾತರಿಸಿರುವ ಪ್ರಯತ್ನವಂತೂ ಕಾಣುತ್ತದೆ.

ಸಾಂದರ್ಭಿಕ ಸೃಷ್ಟಿಯಾಗಿರುವ ಚಲನಚಿತ್ರ ಸಂಗೀತದ ಬಗ್ಗೆ ಆಡುವ ಮಾತುಗಳಲ್ಲಿ ಶಿವಶಕ್ತಿ, ಪ್ರಕೃತಿ ಪುರುಷ, ದೈವಿಕ ಎಂಬ ಹೋಲಿಕೆ, ಉಪಮೆ, ವಿಶೇಷಣಗಳ ಮಾತು ಅಗತ್ಯವೇ ಎಂದೆನ್ನಿಸಬಹುದು. ಖಂಡಿತಾ ಅಗತ್ಯ. ಏಕೆಂದರೆ ಪುಟ್ಟಣ್ಣನವರ ನಾಲ್ಕು ಶಕ್ತಿಗಳಲ್ಲಿ ಒಂದಾಗಿದ್ದ 'ವಿಜಯ ಭಾಸ್ಕರ್' ಸಾಮಾನ್ಯರಾಗಿರಲಿಲ್ಲ; ಅಶ್ವಥ್‌ರವರ 'ಸಿದ್ಧಿ'ಯೂ ಅಷ್ಟೇ. ಇನ್ನು ನಾಗಾಭರಣ-ಜಾನಪದ, ಕರ್ನಾಟಕ, ಹಿಂದೂಸ್ತಾನಿ ಈ ಮೂರನ್ನು ಚೆನ್ನಾಗಿ ಬಲ್ಲವರು! ಈ ಮೂರರ ಆಳವಾದ ಅರಿವಿನಿಂದಲೇ 'ನಾಗಾಭರಣ' ಆದವರು.

❑ ❖ ❑ ❖ ❑

# ಭರಣ ಎಂಬ ದರ್ಪಣದಲ್ಲಿನ ದಾಳಿಂಬೆ ಹಾಗೂ 'ನೀಲಾ'ದೊಂದಿಗಿನ ನಾದಲೀಲಾನುಭವಗಳು

ಲಕ್ಷ್ಮೀಪತಿ ಕೋಲಾರ

ಮೂರು ವರ್ಷಗಳ ಹಿಂದಿನ ಮಾತು. ಬಹುಶಃ ಫೆಬ್ರವರಿ ತಿಂಗಳ 22ನೇ ತಾರೀಖು. ನನ್ನ ಎರಡನೆಯ ಕವನ ಸಂಕಲನ 'ನೀಲಿತತ್ತಿ' ಬಿಡುಗಡೆಯಾದ ದಿನ. ಸಂಕಲನದ ಬಗ್ಗೆ ಮಾತನಾಡಲು ಬಂದಿದ್ದ ಗೆಳೆಯ ಕೆ. ರಾಮಯ್ಯ ನನ್ನನ್ನು ನಾಗಾಭರಣರ ಬಳಿಗೆ ಕರೆದೊಯ್ದರು. ಅವರ ಹೊಸ ಚಿತ್ರವೊಂದರಲ್ಲಿ ನಾವು ಕೆಲಸ ಮಾಡುವುದರ ಕುರಿತು ಮಾತನಾಡುವುದಿತ್ತು. ನಮ್ಮೊಂದಿಗೇ ಪಿಚ್ಚಳ್ಳಿ, ಸಿಎಂ, ಬಾಲು ಮತ್ತಿತರರು ಬಂದಿದ್ದರು.

'ನೀಲಿತತ್ತಿ'ಯ ಕಾವ್ಯಗುಂಗಿನಲ್ಲೇ ಇನ್ನೂ ಇದ್ದ ನನಗೆ 'ನೀಲಾ' ಚಿತ್ರದ ಸಾಂಸ್ಕೃತಿಕ ಎಳೆಯ ಗುಂಗೂ ಸೇರಿ ದ್ಯಾವಾಪೃಥವಿಯ ದರ್ಶನವಾಗತೊಡಗಿತು. ಅಂದು ನಾವು ಕಾವ್ಯ, ಸಾಹಿತ್ಯ, ಚಳವಳಿ, ಸಂಘಟನೆ, ಚಲನಚಿತ್ರ... ಹೀಗೇ ಏನೇನೋ ಮಾತನಾಡಿದ ನೆನಪು. 'ನೀಲಾ' ಚಿತ್ರದ ಬಗ್ಗೆ ಆಗ ಕೇವಲ ಪ್ರಾಸ್ತಾವಿಕವಾಗಿಯಷ್ಟೇ ಮಾತನಾಡಿದೆವು.

ಎರಡನೆಯ ದಿನದಿಂದಲೇ ಭರಣರ 'ನೀಲಾ' ಚಿತ್ರದ ಕಥೆಯ ಚರ್ಚೆ ಶುರುವಾಯಿತು. ಕಥೆಯ ಮೂಲ ಹಂದರವೊಂದನ್ನು ರಾಮಯ್ಯ ಆದಾಗಲೇ ರೂಪಿಸಿದ್ದರು. ಅದಕ್ಕೂ ಹಿಂದೊಮ್ಮೆ ರಾಮಯ್ಯ ನನಗೆ ಬಂಗಾರಪೇಟೆಯಲ್ಲಿ ಸಿಕ್ಕಿದ್ದಾಗ ಕಥೆಯನ್ನು ವಿವರಿಸಿದ್ದರು. ಎನ್.ಎಂ.ಎಚ್. ಲಾಡ್ಜ್‌ನ ರೂಂ ನಂ. 2 ರಲ್ಲಿ ನಾಗಾಭರಣ, ರಾಮಯ್ಯ, ಎಲ್ಲಿ ನಾಗರಾಜ್, ನಾನು, ಪಿಚ್ಚಳ್ಳಿ ಮತ್ತಿತರರು ದಿನಗಟ್ಟಲೆ ಚರ್ಚೆ ನಡೆಸಿದೆವು. ಕಥೆ ಒಂದು ರೂಪಕ್ಕೆ ಬಂದಿದೆ ಅನಿಸಿದಾಗ ರೀಡಿಂಗ್ ಇಟ್ಟುಕೊಳ್ಳುತ್ತಿದ್ದೆವು. ರೀಡಿಂಗ್ ನಂತರದ ಚರ್ಚೆಯಲ್ಲಿ ಸೋಮಣ್ಣ, ಏಣಗಿ ನಟರಾಜ್, ಛಾಯಾಗ್ರಾಹಕ ಭಾಸ್ಕರ್, ಶ್ರೀಮತಿ ನಾಗಿಣಿ ಭರಣ ಮತ್ತಿತರರು ಭಾಗವಹಿಸುತ್ತಿದ್ದರು.

ಹೆಳವರೆಂಬ ಅರೆ ಅಲೆಮಾರಿ ಪಂಗಡದ ಸಹಜ ಗಾಯಕಿಯೊಬ್ಬಳ ಸುತ್ತ ಹೆಣೆದ ಕಥೆಯದಾಗಿತ್ತು. ಹೆಳವರು ತಮ್ಮ ಪರಂಪರಾಗತ ಪೋಷಕರ ವಂಶವೃಕ್ಷವನ್ನು ತಮ್ಮ ನಾಲಗೆಯ ಮೇಲೆ ನೆನಪಿನಿಂದಲೇ ಕೆತ್ತಿಕೊಂಡಿರುತ್ತಾರೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದೆಂಬುದು ಮೂಲ ಗಾದೆ ಮಾತು. ಈ ಗಾದೆ ಮಾತಿನಂತೆಯೇ ಸಮಾಜದ ವಾಚಕ ವ್ಯವಸ್ಥೆಯ ಪೊಳ್ಳು ದಾಖಲಾತಿಗಳು ಸುಳ್ಳು ಬೊಗಳಿದರೂ ಸತ್ಯವನ್ನೇ ಉಸಿರಾಗಿಸಿಕೊಂಡು ಬದುಕುವ ಹೆಳವರ ನಾಲಗೆ ಎಂದೂ ಸುಳ್ಳಾಡುವುದಿಲ್ಲ. ಅವರು ಕೇವಲ ಬದುಕಲಾರದ ವಂಚಿತ ಹೆಳವರು; ಚರಿತ್ರೆ ತಿರುಚುವ ಧರ್ಮಾಂಧರಂತೆ ಸತ್ಯವನ್ನು ತಿರುಚುವ ಹೆಳವರಿಲ್ಲ. ಈ ಮೂಲ ಕಥೆಯ ಎಳೆಯನ್ನೇ ಸಾಂಸ್ಕೃತಿಕ ಭಿತ್ತಿಯಲ್ಲಿ ಪುನರ್ರೂಪಿಸುವ ಪ್ರಯತ್ನ 'ನೀಲಾ' ಚಿತ್ರದ್ದಾಗಿತ್ತು.



ಚಿತ್ರದ ಕಥೆಯ ಪೂರ್ವಾರ್ಧದ ಚರ್ಚೆ ತಕ್ಕ ಮಟ್ಟಿಗೆ ಇದೇ ಜಾಡಿನಲ್ಲಿಯೇ ಸಾಗಿತು. ಅದು ಇನ್ನಷ್ಟು ಸೂಕ್ಷ್ಮ ಆಯಾಮಗಳನ್ನೂ ಹಾಗೂ ವ್ಯವಸ್ಥೆಯೊಂದರ ವಿರುದ್ಧದ counter part ನ ತಲ್ಲಣ, ಸಾಂಸ್ಕೃತಿಕ ಹೋರಾಟಗಳ ನಿಖರ ಸ್ವರೂಪಗಳನ್ನು ಪಡೆದುಕೊಳ್ಳಬೇಕಿತ್ತು. ಉತ್ತರಾರ್ಧದಲ್ಲಿ ಚರ್ಚೆ ಲಂಬಿಸಿದಂತೆಲ್ಲಾ ಕಥೆಯ ಮೂಲ ಹಂದರ ಜಾಳು ಜಾಳಾಗತೊಡಗಿತು ಎಂಬುದೇ ಇಂದಿಗೂ ನನ್ನ ಅಭಿಪ್ರಾಯ ಈ ಬಗೆಯ ಬಿರುಸಿನ ಚರ್ಚೆ, ವಾಗ್ವಾದಗಳೆಲ್ಲ ಅಲ್ಲಿ ನಡೆದವಾದರೂ, ಈಗ ಅಂತಿಮವಾಗಿ ರೂಪುಗೊಂಡ 'ನೀಲಾ' ಎಲ್ಲರಿಗೂ ಗೊತ್ತಿರುವಂತದ್ದೇ ಇರಲಿ.

ಈ ಮಧ್ಯೆ ಡಾ. ರಾಜ್‌ಕುಮಾರ್‌ರವರ ಅಪಹರಣದಿಂದಾಗಿ ಚಿತ್ರ ಸೆಟ್ಟೇರುವುದು ಕೆಲವು ತಿಂಗಳುಗಳ ಕಾಲ ತಡವಾಗಿ ಕಥೆಯ ಸ್ವರೂಪ ಹಾಗೂ ನಟನಟಿಯರ ಆಯ್ಕೆಗಳಲ್ಲೂ ಅನಿವಾರ್ಯ ಬದಲಾವಣೆಗಳಾದವು. ಸ್ವಲ್ಪ ಮಟ್ಟಿಗೆ ನಟನಟಿಯರ ಬದಲಾವಣೆಯಿಂದಾಗಿ ಕಥೆಯ ಸ್ವರೂಪವೂ ಬದಲಾಯಿತು. ಪಾತ್ರಗಳ ಬೆಳವಣಿಗೆ ಕೂಡ ಈ ಹಿನ್ನೆಲೆಯಲ್ಲಿ ನಿರ್ಧರಿಸಲ್ಪಟ್ಟಂತಾಯಿತು. 'ನೀಲಾ' ಚಿತ್ರದ ಪೂರ್ವಭಾವಿ ತಯಾರಿಗಳಲ್ಲಿ ಇಂತಹ ಮಿತಿಗಳೂ ನಿರ್ಣಾಯಕ ಅಂಶಗಳಾದವೇನೋ ಅನಿಸುತ್ತದೆ. ಅದೇನೇ ಇದ್ದರೂ ನಾವು ಹೆಚ್ಚು ಕಡಿಮೆ ಒಂದು ವರ್ಷ ಕಾಲ ಭರಣರೊಂದಿಗೆ ಕೆಲಸ ಮಾಡುವಂತಾಯಿತು. ಚಿತ್ರ ತಯಾರಿಕೆಯ ಹಿಂದಿನ ಈ ದೀರ್ಘ ಅವಧಿ ನನ್ನ ಮಟ್ಟಿಗಂತೂ ಹೊಸ ಅನುಭವಗಳನ್ನು ನೀಡಿತು. ಈ ಕಾರಣಕ್ಕಾಗಿ ನಾನು ರಾಮಯ್ಯ ಹಾಗೂ ನಾಗಾಭರಣರಿಬ್ಬರಿಗೂ ಎಂದೆಂದಿಗೂ ಕೃತಜ್ಞನಾಗಿಯೇ ಇದ್ದೇನೆ. ಭರಣರ ತಂಡದೊಂದಿಗೆ ವರ್ಷಕಾಲ ನಾನು ಪಡೆದುಕೊಂಡ ವಿಶಿಷ್ಟ ಅನುಭವಗಳೇ ನನಗೆ ಹೆಚ್ಚು ಸಂತೋಷ ತಂದ ಸಂಗತಿಗಳು. ಈ ಸಂತೋಷದ ನೆನಪುಗಳನ್ನು ಮೆಲುಕು ಹಾಕುವುದೇ ಬಹುಶಃ ಭರಣರಿಗೆ ನನ್ನಂತಹವನು ಸಲ್ಲಿಸಬಹುದಾದ ಎದೆಯಾಳದ ಅಭಿನಂದನೆ ಎಂದುಕೊಂಡಿದ್ದೇನೆ.

ನನ್ನ ಅತಿ ದೊಡ್ಡ ಸಂತೋಷವೆಂದರೆ ಕನ್ನಡದ ಹಿರಿಯ ಸಂಗೀತ ನಿರ್ದೇಶಕ ದಿವಂಗತ ವಿಜಯಭಾಸ್ಕರ್‌ರವರ ಸಂಗೀತ ನಿರ್ದೇಶನದಲ್ಲಿ ನಾನು ಹಾಡುಗಳನ್ನು ಬರೆಯುವಂತಾದುದು. ಚಿತ್ರವೊಂದಕ್ಕೆ ಹಾಡುಗಳನ್ನು ಬರೆವ ಈ ಪ್ರಯತ್ನದಲ್ಲಿ ನಾನು ಅನೇಕ ರೀತಿಯ ಉತ್ಕಟ ಅನುಭವಗಳಿಗೆ ಒಳಗಾದೆ. ಈ ಕಾರಣಕ್ಕಾಗಿಯಂತೂ ಭರಣರಿಗೆ ನಾನು ಅಭಾರಿಯಾಗಿದ್ದೇನೆ.

ಅವರ ರಂಗಭೂಮಿಯ ಚಟುವಟಿಕೆಗಳ ಕಾಲದಿಂದಲೂ ನಾನು ಭರಣರನ್ನು ಬಲ್ಲೆ. ಆದರೆ ನಾಗಾಭರಣರಿಗೆ ನನ್ನ ಪರಿಚಯವಿರಲಿಲ್ಲ. ಅವರ ಹಲವಾರು ಚಿತ್ರಗಳನ್ನು ನಾನು ನೋಡಿದ್ದೆ. ನಾನು ನೋಡಿದ್ದ ಚಿತ್ರಗಳ ಪೈಕಿ 'ಅನ್ವೇಷಣೆ', 'ನಾಗಮಂಡಲ' ತರಹದ ಪ್ರಯತ್ನಗಳು ನನಗೆ ಇಷ್ಟವಾಗಿದ್ದವು. 'ಆಕಸ್ಮಿಕ' ಹಾಗೂ 'ಜನುಮದ ಜೋಡಿ'ಯಂತಹ ಚಿತ್ರಗಳು ಬೇರೆ ಕಾರಣಗಳಿಂದಾಗಿ ಇಷ್ಟವಾದಂತಹವು. ಒಂದಷ್ಟು ಕಾಲ ನಾನು ಚಲನಚಿತ್ರ ಪತ್ರಕರ್ತನಾಗಿಯೂ ಕೆಲಸ ಮಾಡಿದ್ದರ ಹಿನ್ನೆಲೆಯಲ್ಲಿ ನಾನು ನನ್ನದೇ ಆದ ರೀತಿಯಲ್ಲಿ ಭರಣರ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಂಡಿದ್ದೆ. ಆದರೆ ಅವರ ಬಗ್ಗೆ ನಾನು ಹೊರಗೆ ಕೇಳುತ್ತಿದ್ದ ಮಾತುಗಳಿಗೂ, ನಂತರ ಅವರ ದೀರ್ಘ ಒಡನಾಟದಲ್ಲಿ ನಾನು ಅರ್ಥ ಮಾಡಿಕೊಂಡ

ಅವರ ವ್ಯಕ್ತಿತ್ವಕ್ಕೂ ಎದ್ದು ಕಾಣುವಂತಹ ವ್ಯತ್ಯಾಸವಿತ್ತು. ಇಪ್ಪತ್ತೈದಕ್ಕೂ ಹೆಚ್ಚಿನ ಚಲನಚಿತ್ರಗಳನ್ನು ನಿರ್ದೇಶಿಸಿದ್ದ ಒಬ್ಬ ವ್ಯಕ್ತಿಯಲ್ಲಿ ಅಷ್ಟೊಂದು ಸಹನೆ ಇರಬಹುದೆಂಬ ಬಗ್ಗೆ ನಾನು ನನ್ನನ್ನೇ ನಂಬಿಸಿಕೊಳ್ಳಬೇಕಾಯಿತು. ಒಳಿತೋ-ಕೆಡುಕೋ, ಆದರೆ ಯಾವುದೇ ಅತಿಗಳಿಲ್ಲದ ವ್ಯಕ್ತಿತ್ವ ಭರಣರದು. ಒಂದು ಸಂಸ್ಥೆಯಂತೆ ಕೆಲಸ ಮಾಡುವ ಭರಣರು ಎಲ್ಲವನ್ನೂ, ಎಲ್ಲರನ್ನೂ ಸರಿದೂಗಿಸುವ ಸಂದರ್ಭದಲ್ಲಿ ಚೂರುಪಾರು ಏರುಪೇರುಗಳಾಗಿದ್ದರೂ ಅವು ವ್ಯಕ್ತಿತ್ವ ಸಹಜ ಗುಣ-ಸ್ವಭಾವಗಳೆಂದೇ ನನಗನಿಸಿದೆ. ಅವರ ಒಡನಾಟದಲ್ಲಿದ್ದಷ್ಟೂ ದಿನ ಭರಣರ ಮುಖದಲ್ಲಿ ಬೇಸರದ ಒಂದೇ ಒಂದು ಗೆರೆಯನ್ನು ನಾನೆಂದೂ ಕೂಡ ಕಾಣಲಿಲ್ಲ. ಅಥವಾ ನಿರಾಸೆಯಿಂದ ಅವರು ಕುಗ್ಗಿದ್ದನ್ನು ಕೂಡ ನಾನೆಂದೂ ನೋಡಲಿಲ್ಲ. ಎಂತಹ ಸಂದಿಗ್ಧತೆಯ ಆಕಾರಕ್ಕೂ ಒಗ್ಗಿಕೊಳ್ಳಬಲ್ಲ ನೀರಿನಂತಹ ಜೀವಂತಿಕೆಯ ಗುಣ ಅವರದು. ಚಿತ್ರರಂಗಕ್ಕೆ ಆತಂಕದಿಂದ ಕಾಲಿಡುವ ಹೊಸಬರಿಗೆ ಭರಣರು ಅಭಯದ ಮಾರ್ಗದರ್ಶಿ.

ಚೀನಾದ 'ತಾವೊ' ವಿರಾಮ ಹಾಗೂ ಅನಗತ್ಯ ಶ್ರಮಗಳ ಕುರಿತು ಮಾತನಾಡುತ್ತ ಭರಣರು ಕೆಲಸದಲ್ಲಿ ತೊಡಗಿದ್ದಾಗಲೂ ವಿರಾಮಭಾವದಲ್ಲೇ ಇರುತ್ತಾರೆ. ಕೆಲಸವನ್ನೆ ಹೀಗೆ ವಿರಾಮವಾಗಿ ಭಾವಿಸಿಕೊಳ್ಳುವ ಪರಿ ನನಗಂತೂ ಖುಷಿಯ ವಿಚಾರ. ಆದರೂ ಕೆಲವೊಮ್ಮೆ ತಾವು ಕೂಡ ಏಕಾಂಗಿ  ಎಂದು ಭರಣರು ಕೊಂಚ ಹತಾಶರಾದದ್ದೂ ಉಂಟು. ಈ ಬಗೆಯ ಹತಾಶೆ ನಿರಂತರವಾದ ಅನಗತ್ಯ ಧಾವಂತ, ಶ್ರಮ ಹಾಗೂ ಉದ್ವೇಗಗಳಿಗೆ ನಮ್ಮನ್ನು ದೂಡಬಲ್ಲದು. ಅದರಲ್ಲೂ ಈ ನಗರ ಸಂಸ್ಕೃತಿ ಮನುಷ್ಯನೊಬ್ಬನನ್ನು ಮನಸ್ಸಿಗೂ ವಿರಾಮ ಕೊಡದಂತೆ chase ಮಾಡುತ್ತಿರುತ್ತದೆ. ಹಳ್ಳಿಯೊಂದರ ವಾತಾವರಣದಲ್ಲಿ ಕಾಲ ಮಂದಾನಿಲದಂತೆ ಚಲಿಸುತ್ತಿದ್ದರೆ ಅದೇ ನಗರದಲ್ಲಿ ಚಂಡಮಾರುತವಾಗಿ ಬೀಸುತ್ತಿರುತ್ತದೆ. ಈ ಚಂಡಮಾರುತದಲ್ಲಿ ಇರುವೊಂದೇ ಬದುಕನ್ನು ತರಗಲೆಯಂತೆ ಹಾರಿಬಿಟ್ಟರೆ ಕಾಲದ ಓಟದಲ್ಲಿ ಕೊನೆಗೆ ನಾನೇ ಕಳೆದುಹೋಗುತ್ತೇವೇನೋ ಎಂಬ ಭಯ ನನ್ನದು. ವಿರಾಮವೂ ನಮ್ಮ ಬದುಕಿನ ಒಂದು ಮುಖ್ಯ ಭಾಗವೆಂದೇ ನಾನಂತೂ ತಿಳಿದಿದ್ದೇನೆ. ವಿರಾಮ ನಮ್ಮನ್ನು ಹೆಚ್ಚು ವಿವೇಕಿಗಳಾಗಿಸಬಲ್ಲದು; ನಿರುದ್ವಿಗ್ನತೆಯಲ್ಲಿಡಬಲ್ಲದು; ಆತ್ಮಾವಲೋಕನದ ಮೂಲಕ ಬದುಕನ್ನು ಮೆಲುಕು ಹಾಕಲು ಅವಕಾಶ ನೀಡಿ ಜೀವಂತವಾಗಿಡಬಲ್ಲದು. ನಿರಂತರ ದುಡಿಮೆಯ ಮೂಲಕ ಒಂಟಿತನವನ್ನು ಮರೆಯುವುದಕ್ಕಿಂತಲೂ ಆಗೀಗಲ ವಿರಾಮದ ಮೂಲಕ ಒಂಟಿತನವನ್ನು ನಿರುಮ್ಮಳ ಭಾವದಲ್ಲಿ ಎದುರುಗೊಳ್ಳುವುದೇ ಹೆಚ್ಚು ಸಂತಸದಾಯಕವಾಗಿರಬಲ್ಲದು. ವಿರಾಮ ಮೂರ್ತಿಯಾದ ಬುದ್ಧನ ಕುರಿತು ಲೋಹಿಯಾ ಆಡಿರುವ ಮಾತುಗಳು ಕೂಡ ಇಂಥವೇ. ಖಿನ್ನತೆ ಎಂತಹವರನ್ನೂ ನಾಶ ಮಾಡಿಬಿಡಬಹುದಲ್ಲವೇ? ವಿರಾಮವೆಂದರೆ ಸೋಮಾರಿತನವಲ್ಲವೆಂಬುದನ್ನು ಇಲ್ಲಿ ಸ್ಪಷ್ಟ ಪಡಿಸಬೇಕಿದೆ.

ಖಿನ್ನತೆಯಿಂದ ಹೊರಬರಲು ಪ್ರಯತ್ನಿಸುವ ನನ್ನ ನಿರಂತರ ಪ್ರಯತ್ನದಲ್ಲಿ ಭರಣರ ಆಳದಲ್ಲಿರಬಹುದಾದ ಈ ಹತಾಶೆಯ ನೆರಳನ್ನು ನಾನು ಕಂಡವನಾದ್ದರಿಂದ ನನ್ನನ್ನೇ ಸಾಂತ್ವನಿಸಿಕೊಳ್ಳುವ ಹಾಗಿನ ಈ ಮಾತುಗಳನ್ನು ಆಡಿದ್ದೇನೆ. ಆದರೆ ಅನೇಕ ಬಾರಿ ನಾನು



ಕಂಡಂತೆ ನಿರುಮ್ಮಳತೆ ಹಾಗೂ ಪುಟಿಯುವ ಉತ್ಸಾಹದ ಜೀವಂತಿಕೆ ಭರಣರ ಅಂತಸ್ಥ ಶಕ್ತಿ ಹಾಗೂ ಸಾಮರ್ಥ್ಯವೆಂಬಂತೆ ಪ್ರಕಟವಾಗುತ್ತಿರುತ್ತದೆ. ಅವರೊಂದಿಗೆ ಕೆಲಸ ಮಾಡುತ್ತ ನಾನು ಹೀಗೆ ನನಗಗತ್ಯವಾದ ಲಾಭದಾಯಕ ಕಲಿಕೆಗಳಿಗೆ ಇಳಿದಿರಬಹುದಾ? ಇದ್ದರೂ ಇರಬಹುದೇನೋ?

ಭರಣ ಎಂಬ ದರ್ಪಣದಲ್ಲಿ ನನ್ನ ಬಿಂಬವನ್ನೇಕೆ ನಾನು ನೋಡಿಕೊಳ್ಳುತ್ತಿದ್ದೇನೋ ತಿಳಿಯುತ್ತಿಲ್ಲ. ನಾನು ಒಟ್ಟಿಗೆ ಎರಡು ಮೂರು ಕೆಲಸಗಳನ್ನು ಕೂಡ ನಿಭಾಯಿಸಲು ಹಿಂಜರಿಯುವವನು. ಅನಿವಾರ್ಯ ಒತ್ತಡಗಳಿದ್ದಾಗ ಉದ್ವೇಗದ ಕತ್ತಿ ವೇದನೆಯ ಮೇಲೇ ನಿಲ್ಲುವವನು. ಅದು ನನ್ನ ಸ್ವಭಾವ. ನನಗೆ ದಾಳಿಂಬೆಯ ಒಂದು ಬೀಜವೇ ಸೌಂದರ್ಯಾತ್ಮಕ ಹುಡುಕಾಟದಲ್ಲಿ ತೊಡಗಿಸಬಲ್ಲದು. ಹಿಡಿದ ಕೆಲಸವೊಂದೇ ನನ್ನ ಧ್ಯಾನ. ಅದು ಮುಗಿದ ನಂತರವೇ ಬೇರೊಂದು ದಿಕ್ಕಿಗೆ ದಿಟ್ಟಿ ನೆಡುವುದು. ಬಹುಶಃ ನನ್ನ ಈ ಸ್ವಭಾವಕ್ಕೆ ನಾಗಾಭರಣರು ತದ್ವಿರುದ್ಧ. ಅವರು ಸಿಪ್ಪೆ ಸುಲಿದ ಇಡೀ ದಾಳಿಂಬೆಯಂತೆ. ಹೊರ-ಒಳಗಿನ ಇರುವೆಲ್ಲಾ ದಿಕ್ಕುಗಳಿಗೂ ಮುಖ ಮಾಡುವ ಅವರ ವ್ಯಕ್ತಿತ್ವ ಸರ್ವ ಸಾಧ್ಯತೆಗಳಿಗೂ ಏಕಕಾಲದಲ್ಲೇ ತೆರೆದುಕೊಳ್ಳುವಂತಹದು. ಹತ್ತಾರು ರೀತಿಯ, ಭಿನ್ನ ಕಾಲಗಳ ಯೋಜನೆಗಳನ್ನು ರೂಪಿಸುತ್ತಾ, ಕಾರ್ಯಗತಗೊಳಿಸುತ್ತ, ಎಲ್ಲವನ್ನೂ ಸಮರ್ಥವಾಗಿಯೂ, ಸಾಮುದಾಯಿಕ ನೆಲೆಯಲ್ಲೂ ನಿರ್ವಹಿಸುವ ಅವರ ಸರಳ ಶಿಸ್ತಿನ ಪರಿಗೆ - ಹೀಗಿಲ್ಲವೇ ಇಲ್ಲದ ನಾನಂತೂ ಚಕಿತನಾಗಿದ್ದೇನೆ. ಒಂದು ಕಡೆ ಎರಡು-ಮೂರು ಚಿತ್ರಗಳ ಬಗ್ಗೆ ಏಕ ಕಾಲಕ್ಕೇ ಚಿಂತನೆ ಮತ್ತು ಕಾರ್ಯಕ್ಷೇತ್ರಕ್ಕಿಳಿಯುತ್ತಾರೆ; ಮತ್ತೊಂದು ಕಡೆ ಬಿಡುವೇ ಇರದ ಕಿರುತೆರೆಯ ಧಾರಾವಾಹಿಗಳು; ಜತೆಗೆ ಮರೆತೇನೆಂದರೂ ಮರೆಯಲು ಬಿಡದ ರಂಗಭೂಮಿಯ ಚಟುವಟಿಕೆಗಳು; ಮತ್ಯಾವುದೋ ಸಾಕ್ಷ್ಯಚಿತ್ರದ ಕೆಲಸ. ಇವು ಸಾಲದೆಂಬಂತೆ ಯಾವು ಯಾವುದೋ ಸಭೆ-ಸಮಾರಂಭಗಳು, ಆಸಕ್ತ ಕ್ಷೇತ್ರದ ಹೊಣೆಗಾರಿಕೆಗಳು, ಟೆಲಿಚಿತ್ರ ಹಾಗೂ ಅಭಿನಯ ಇತ್ಯಾದಿ ಇತ್ಯಾದಿ - ಏನೆಲ್ಲವನ್ನೂ ಏಕ ಸೂತ್ರದಲ್ಲಿ ಹಿಡಿವ, ಅದೇ ಸುಲಿದಿಟ್ಟ ದಾಳಿಂಬೆ ಹಣ್ಣಿನ ಸರ್ವ ಸಾಧ್ಯತೆಗಳ ಹಠ. ಅವರ ಸದಾಕಾಲದ ಸಾಥಿಯಾದ ಬ್ರೀಫ್‌ಕೇಸಿನಲ್ಲಿ ಅವರೆಲ್ಲಾ ಯೋಜನೆಗಳ ನೀಲನಕ್ಷೆಗಳು ತಮ್ಮ ಕಾಲದ ಸರದಿಗಾಗಿ ಕಾಯುತ್ತ ಅಡಗಿ ಕೂತಿರುತ್ತವೆ. ಪ್ರಾಯಶಃ ಈ ವಿಧಾನ ಅವರ ಚಿತ್ರರಂಗದ, ಅಷ್ಟೇಕೆ ಒಟ್ಟು ಬದುಕಿನ ಯಶಸ್ಸಿನ ಸೂತ್ರವಿದ್ದಿರಬಹುದು. ಹಾಗಾಗಿಯೇ ಭರಣ ಎಂಬ ದರ್ಪಣದಲ್ಲಿ ನನಗಗೋಚರವಾದ ಯಶಸ್ಸಿನ ಸೂತ್ರದ missing link ಹುಡುಕುವ ಮನೋವೈಜ್ಞಾನಿಕ ಪ್ರಯತ್ನ ನನ್ನದಾಗಿರಬಹುದು.

ಆದರೂ ಯಶಸ್ವೀ ಭರಣರಿಗೆ ಬೇರೇನೂ ಹೇಳಲೇ ಬೇಕೆಂಬ ಒಳತುಡಿತ ನನ್ನಲ್ಲಿದೆ. ಸುಲಿದ ಇಡೀ ದಾಳಿಂಬೆ ಹಣ್ಣಿನಂತಹ ಭರಣರು ಅದರ ಒಂದು ಬೀಜದ ಅನನ್ಯ ಸ್ವರೂಪವನ್ನು ಗ್ರಹಿಸುವಂತಹ - ತಮ್ಮ ಸ್ವಭಾವಕ್ಕೆ ವಿರುದ್ಧ ನೆಲೆಯಲ್ಲೂ ನಿಲ್ಲಬೇಕೆಂಬುದು ನನ್ನ ಆಸೆ. ಯಾಕೆಂದರೆ ನಾಗಾಭರಣನಂತಹವರು ನಿರ್ವಹಿಸಬೇಕಾದ ಸಣ್ಣ ಪ್ರಮಾಣದ, ಆದರೆ ಮಹತ್ವದ ಇನ್ನಿತರ ಸಾಂಸ್ಕೃತಿಕ ಹೊಣೆಗಾರಿಕೆಗಳಿವೆಯೆಂದೇ ನಾನು ತಿಳಿದಿದ್ದೇನೆ. ಪಶ್ಚಿಮದ

ಯಂತ್ರ ಆವಿಷ್ಕಾರವಾದ ಚಿತ್ರ ಮಾಧ್ಯಮದಲ್ಲಿ ಪೂರ್ವದ ಸ್ವಸ್ಥ ದೇಸೀ ದರ್ಶನಗಳು ಮೈದಾಳಬೇಕಿವೆ. ಇವತ್ತು ಭಾರತವನ್ನೂ ಸೇರಿಕೊಂಡಂತೆ ಇಡೀ ಜಗತ್ತನ್ನೇ ಬರ್ಬರ ರೀತಿಯಲ್ಲಿ ಆಳುತ್ತಿರುವ ಹುಸಿ ಸಂಸ್ಕೃತಿಯನ್ನು ಕಟ್ಟಿಕೊಡಬೇಕಿದೆ. ಇದು ಇಡೀ ಭೂಮಿಯ ಮೇಲಿನ ಯಾವುದೇ ಭಾಗದ ಸಂವೇದನಾಶೀಲರೆಲ್ಲರ ಜೀವತುಡಿತವಾಗಬೇಕೆಂದು ಬಯಸುವುದು ಹೇಗೆ ತಪ್ಪೋ - ನನಗಂತೂ ತಿಳಿಯದು. ಆದರಲ್ಲೂ ಕಲಾವಿದ - ಬರಹಗಾರರು ಹಾಗೂ ಎಲ್ಲ ರೀತಿಯ ಇನ್ನಿತರ ಮಾಧ್ಯಮಗಳ ಜವಾಬ್ದಾರಿ ಹೆಚ್ಚಿದೆಯೆಂದೇ ನಾನು ಭಾವಿಸಿದ್ದೇನೆ. ಕಾಲು ಶತಮಾನದ ಗಾಢ ಅನುಭವಗಳ ಹಿನ್ನೆಲೆಯಿರುವ ನಾಗಾಭರಣರು ಇದಕ್ಕೆ ಹೊರತಲ್ಲವೆಂದು ನನ್ನಂತಹವರು ಭಾವಿಸಬಾರದೇಕೆ? ಐವತ್ತು ವಸಂತಗಳನ್ನು ಕಂಡ ಭರಣರು ಈಗ ಇನ್ನಷ್ಟು ವಿರಾಮವಾಗಲಿ. ಸುತ್ತಲ ಉದ್ವಿಗ್ನತೆಗೆ ನಿರುದ್ವಿಗ್ನತೆಯ ಸತ್ಯ ಕಂಡರಿಸಲಿ. ನನ್ನ ಕಲ್ಪನೆಯ ಭರಣರನ್ನು ನಾನು ಕಾಣುವೆನೇ? ಕಾಣುವಂತಾಗಲಿ.

## 2

ರಂಗಭೂಮಿಯೆಂಬುದೇ ಚಲನಶೀಲಾತ್ಮಕವಾದುದು. ಚಿತ್ರ ಮಾಧ್ಯಮಕ್ಕಿಂತಲೂ ಹೆಚ್ಚು ಜನವಾದಿಯಾಗಿ ಅಥವ ಜೀವಪರವಾಗಿ ನಿಲ್ಲಬಲ್ಲ ಸಾಧ್ಯತೆ ಅದಕ್ಕೆ ಹೆಚ್ಚು ಇದೆ. ರಂಗಭೂಮಿಯೆಂದರೇನೇ ನಿರಂತರ ಚಳವಳಿ. ಹುಡುಕಿದಷ್ಟೂ ಹುಡುಕಬೇಕಾದ್ದೇನನ್ನೋ ಉಳಿಸಿಕೊಂಡೇ ಸವಾಲೊಡ್ಡುವ ಸೃಜನಶೀಲ ಬೆಡಗು. ಕಲೆಯ ನಿಗೂಢ ಅಭಿವ್ಯಕ್ತಿ. ನನಗಂತೂ ರಂಗಭೂಮಿ ಎಲ್ಲಾ ಸೃಜನಶೀಲ ಕಲೆಗಳ ಮಾತೃಕಾಂಡವೆಂದೇ ಅನಿಸುತ್ತದೆ. ಸಾಹಿತ್ಯ, ಸಂಗೀತ, ನೃತ್ಯ, ಚಿತ್ರಕಲೆ, ಶಿಲ್ಪ, ಜಾನಪದ, ವಸ್ತ್ರ ವಿನ್ಯಾಸ, ಪ್ರಸಾದನ, ನಟನೆ, ಕತ್ತಲೆ-ಬೆಳಕು, ಆಚರಣೆಗಳು... ಹೀಗೆ ಸಮಗ್ರ ಬದುಕಿನ ಸೃಜನ ಸಾಧ್ಯತೆಗಳನ್ನೆಲ್ಲ ಒಳಗೊಳ್ಳಬಲ್ಲ ಪ್ರತಿಭಾಸಂಪನ್ನ ಮಾಧ್ಯಮವಾಗಿದೆ. ಎಲ್ಲ ಕಲೆಗಳ super structure ಇದ್ದಂತೆ ಈ ರಂಗಭೂಮಿ.

ಭರಣರು ಇಂತಹ ಫಲವಂತಿಕೆಯ ರಂಗ ಹಿನ್ನೆಲೆ ಹೊಂದಿರುವವರು. ಕನ್ನಡ ರಂಗಭೂಮಿಯ ಹಿರಿಯ ಜೀವಗಳ ಒಡನಾಟದಲ್ಲಿದ್ದವರು. ರಂಗಭೂಮಿಯ ಗುಂಗು ಒಮ್ಮೆ ಹಿಡಿದರೆ ಬಿಡುವಂತದ್ದಲ್ಲ. ಹಾಗೆಯೇ ಇನ್ನಿತರ ರಂಗಭೂಮಿಯೊಂದಿಗಿನ ಸಂಬಂಧಗಳು ಕೂಡ. ಹೀಗಾಗಿ ನಾಗಾಭರಣರು ಸಹಜವಾಗಿಯೇ ಸದಾ ಸಾಹಿತ್ಯ ಮತ್ತು ಸಾಹಿತಿಗಳ ನಿಕಟ ಸಂಪರ್ಕದಲ್ಲೂ ಇರುತ್ತಾರೆ. ಬಹುಶಃ ಈ ಮತ್ತು ಇಂಥವೇ ಕಾರಣಗಳಿಂದಾಗಿಯೇ ಇರಬಹುದು. ಅವರ ಬಹುತೇಕ ಚಲನಚಿತ್ರಗಳ ಹಿಂದೆ ಲೇಖಕರ ಹೆಸರುಗಳು ಸದಾ ಕೇಳಿಬರುತ್ತಿರುತ್ತವೆ. 'ನೀಲಾ' ಚಿತ್ರದಲ್ಲಿ ರಾಮಯ್ಯ ಮತ್ತು ನನ್ನಂತಹವರು ಕೆಲಸ ಮಾಡಲು ಸಾಧ್ಯವಾದದ್ದೂ ಕೂಡ ಬಹುಶಃ ಈ ಹಿನ್ನೆಲೆಯಲ್ಲೇ - ಇಂಥವೇ ಕಾರಣಗಳಿಂದಲೇ ಎಂದು ನಾನು ತಿಳಿದಿದ್ದೇನೆ. ಇದರ ಜತೆಗೆ ರೀಮೇಕ್ ಸಂಸ್ಕೃತಿಯ ಕಡುವಿರೋಧಿಯಾದ ಭರಣರು ಈ ನೆಲದ್ದೇ ಕಥೆಗಳನ್ನು ಹೆಕ್ಕಿ, ಇಲ್ಲಿನದೇ ಹಾಡುಪಾಡುಗಳನ್ನು ಚಿತ್ರಿಸಿದವರಾದ್ದರಿಂದ ಸಹಜವಾಗಿಯೇ ಇಲ್ಲಿನ ಲೇಖಕರನ್ನು ತೊಡಗಿಸಿಕೊಳ್ಳಲು ಸಾಧ್ಯವಾಗಿರಬಹುದು.



'ನೀಲಾ' ಚಿತ್ರದ ಪೂರ್ವಭಾವಿ ತಯಾರಿಗಳ ಹಡಾಉಡಿಗಳ ನಡುವಿನ ವಿರಾಮದ ಕೆಲವು ಸ್ವಾರಸ್ಯಕರ ಮೆಲುಕುಗಳಿವೆ. ಭರಣರ ಅಭಿನಂದನೆಯ ನೆಪದಲ್ಲಿ ಕೆಲವು 'ಪರಸಂಗ' ಗಳನ್ನು ಇಲ್ಲಿ ದಾಖಲಿಸುವುದು ನನಗೆ ಸಂತೋಷದ ಸಂಗತಿಯಾದ್ದರಿಂದ ನೆನಪಿನ ಥೈಲಿ ಬಿಚ್ಚುತ್ತಿದ್ದೇನೆ.

ನಾವಾಗ ಎನ್.ಎಂ.ಎಚ್. ಬಿಟ್ಟು ಸಿಟಿ ಇನ್ಸ್‌ಟಿಟ್ಯೂಟ್‌ನಲ್ಲಿದ್ದೆವು. ಯಥಾಪ್ರಕಾರ ಕಥೆಯ ಚ್ಯೂಯಿಂಗ್‌ಗಮ್ ಚರ್ಚೆ ಮುಂದುವರಿದೇ ಇತ್ತು. ಆದರೂ ಕಥೆಯ ಒಂದು ಅಂದಾಜು ಸ್ವರೂಪ ಆದಾಗಲೇ ಖಚಿತಗೊಂಡಿತ್ತಾಗಿ ಲೊಕೇಷನ್ಸ್ ನೋಡಿಯಾಗಿತ್ತು. ಹಾಡುಗಳ ಸ್ವರಸಂಯೋಜನೆಯೂ ಸಾಗಿತ್ತು. ಕನ್ನಡ ಚಿತ್ರರಂಗಕ್ಕೆ ಚಿತ್ರಗೀತೆಗಳ ಮಾಧುರ್ಯ ಪರಂಪರೆ ನಿರ್ಮಿಸಿಕೊಟ್ಟಿದ್ದ ದಿವಂಗತ ವಿಜಯಭಾಸ್ಕರ್ ನಿಧಾನವಾಗಿ ನಮ್ಮನ್ನು ಆವರಿಸಿಕೊಳ್ಳತೊಡಗಿದ್ದರು. ಪ್ರತಿದಿನ ಬೆಳಗ್ಗೆ 9 ಗಂಟೆಗೆ ಸರಿಯಾಗಿ ವಿಜಯಭಾಸ್ಕರ್ ಅಲ್ಲಿ ಹಾಜರಿರುತ್ತಿದ್ದರು. ಮೂಡಣ ಮನೆಯ ಮುತ್ತಿನ ನೀರಿನ ಎರಕಾವ ಹೊಯ್ಯುವುದರೊಳಗೇ ನಾವೂ ಗಿಡಗಂಟೆಗಳ ಕೊರಳೊಳಗಿನ ಹಕ್ಕಿಗಳ ಹಾಡುಗಳನ್ನು ಹಿಡಿಯಲು ಪರದಾಡುತ್ತಿದ್ದೆವು. ಹೇಳಿ ಕೇಳಿ ಅದು singer ಒಬ್ಬಳದೇ ಕಥೆಯಾಗಿತ್ತು ಬೇರೆ. ಹಾಗಾಗಿಯೇ ವಿಜಯಭಾಸ್ಕರ್. ಇನ್ನು ಹಾಡುಗಳನ್ನು ನಾವು ಸಾಹಿತ್ಯಕ ಶ್ರದ್ಧೆಯಿಂದ ಬರೆಯದಿದ್ದರೆ ಹೇಗೆ?

ಒಂದು ದಿನ ಭರಣರು ಎದುರುಗಡೆಯ ರೂಮಿನಲ್ಲಿ ನನ್ನನ್ನು ಕೂರಿಸಿಕೊಂಡು 'ಒಂದು ನಾನ್‌ವೆಜ್ ಹಾಡು ಬರೆಯಬೇಕಲ್ಲ ಎಲ್ಲಿ' ಅಂದರು. ಚಿತ್ರದ ಕಥೆಯ ಬದಲಾವಣೆಗಳು ನನಗೂ ಗೊತ್ತಿದ್ದುದರಿಂದ ಸಂದರ್ಭ ಯಾವುದೆಂಬುದು ನನಗೆ ತಿಳಿದಿತ್ತು. ಆದರೆ ಅಂತಹ ಹಾಡನ್ನು ಹೇಗೆ ಬರೆಯಲಿ ಅನ್ನುವುದೇ ನನ್ನ ಚಿಂತೆಯಾಗಿತ್ತು. 'ಅಂಥದ್ದನ್ನೆಲ್ಲ ವಿರೋಧಿಸುತ್ತಿದ್ದ ನಾವೇ ಈಗ ಅಂತಹ ಹಾಡು ಬರೆಯುವುದು ಹೇಗೆ ಸಾರ್?' ಅಂದೆ. ಭರಣರು 'ಏ, ಹಾಗೆ cheap ಆಗಿ ಕೆಟ್ಟ ಹಾಡು ಬರೆಯೋ ಅಗತ್ಯವಿಲ್ಲ. ಒಂಚೂರು ನಾನ್‌ವೆಜ್ ಆಗಿರಲಿ, ಅಷ್ಟೆ. ನಿಮ್ಮ ಪದ್ಯಗಳಲ್ಲಿ ಬರೀತೀರಲ್ಲ ಹಾಗೆ ಮುಚ್ಚಿಟ್ಟು ಬರೀರಿ. ನಿಮ್ಮ love experiences ನ ಸ್ವಲ್ಪ ನೆನಪು ಮಾಡ್ಕೊಳ್ಳಿ' ಅಂದ್ರು ನಗುತ್ತ. ನಾನೂ ಸ್ವಲ್ಪ ಚೇಷ್ಟೆ ಮಾಡಿದೆ. 'Love experiencesನಲ್ಲಿ ನನಗಿಂತಲೂ ರಾಮಯ್ಯ ತುಂಬಾ ಸೀನಿಯರ್ರು ಸಾರ್. ಈ ಹಾಡ್ನ ಅವರೇ ಬರ್ದಿದ್ರೆ ಚೆನ್ನಾಗಿರ್ತಿತ್ತು' ಅಂದೆ. ಭರಣರು 'ಏ, ಬೇಡ, ನೀವೇ ಬರೀರಿ' ಅಂದರು. ಬಹುಶಃ ರಾಮಯ್ಯ ನನ್ನ ಕಡೆ ಬೊಟ್ಟು ಮಾಡಿದ್ದರೇನೋ, ಹಾಗಾಗಿ ಭರಣರು ನನ್ನನ್ನೇ ಬರೆಯುವಂತೆ ಹೇಳುತ್ತಿರಬೇಕೇನಿಸಿತು. 'ಆಯ್ತು ಸಾರ್' ಅಂದೆ.

ಒಳ್ಳೇ ನಾನ್‌ವೆಜ್ ಹಾಡು ಅಂತ ಇರುವುದು ಸಾಧ್ಯವಾ? ವಿಕೃತಿಗಳಿಲ್ಲದ ರೀತಿಯಲ್ಲ ಅಶ್ಲೀಲ-ಶೃಂಗಾರದ ಗಡಿ ಬೇಲಿಯ ಮೇಲಿನ ಗೋಸುಂಬೆಯ ಹಾಗೆ ಬೇಕಾದಂತೆ ಬಣ್ಣ ಬದಲಿಸಬಲ್ಲ ಶ್ಲೇಷಾರ್ಥದ ಹಾಡು ಬರೆವುದು ಸದಭಿರುಚಿಯ ಕೇಳುಗರಿಗೆ ಇಷ್ಟವಾಗಬಲ್ಲದೇ ಅಂತ ಯೋಚಿಸಲಾರಂಭಿಸಿದೆ. Sex ಕುರಿತ ಕನ್ನಡ ಕವಿತೆಗಳು ಮತ್ತು ತೆಲುಗು commercial ಚಿತ್ರಗಳಲ್ಲಿನ ಹಾಡಿನ ದೃಶ್ಯಗಳು ಒಟ್ಟೊಟ್ಟಿಗೆ ನನ್ನ ಮನಸ್ಸಲ್ಲಿ ಹಾದು ಹೋಗತೊಡಗಿದವು.

ನನ್ನ ತೊಳಲಾಟ, ಚಡಪಡಿಕೆ ಕಂಡು ಪಿಚ್ಚಳ್ಳಿ ನಾನ್‌ವೆಜ್ ಭಾಷೆಯಲ್ಲೇ ಚುಡಾಯಿಸತೊಡಗಿದ. ಹಾರ್ಮೋನಿಯಂ ಮುಂದೆ ಕೂತಿದ್ದ ವಿಜಯಭಾಸ್ಕರ್‌ರವರು ನಗುತ್ತಿದ್ದರು.

ಹಾಡಿನ ಸಂದರ್ಭ ಹೀಗಿತ್ತು: ಚಿತ್ರದ ಖಳನಾಯಕ ಜಗದೇವರಾಯನ ಹುಟ್ಟಿನ ಮೂಲ ಕುರಿತು ಸಾಕ್ಷಿ ಹೇಳುವುದರ ಮೂಲಕ ಆತನಿಗೆ ಪಾಳೇಗಾರ ಹಿನ್ನೆಲೆಯ ವಂಶದಾಸ್ತಿ ಸಿಗದಂತೆ ಮಾಡಲು ಗಾಯಕಿಯಾದ ಹೆಳವರ ನಾಯಕಿ ಭೂರಹಿತರ ಪರ ನಿಂತಿರುತ್ತಾಳೆ. ಆದರೆ ಅಷ್ಟರಲ್ಲೇ ಆ ನಾಯಕಿ ನೀಲಾ ಗಂಟಲು ಕ್ಯಾನ್ಸರ್‌ಗೆ ತುತ್ತಾಗಿ ಆಸ್ಪತ್ರೆ ಸೇರುತ್ತಾಳೆ. ನೀಲಾ ತನ್ನ ವಿರುದ್ಧ, ಹುಟ್ಟಿನ ನಿಜ ಮೂಲದ ಸಾಕ್ಷಿಯನ್ನು ಕ್ಯಾನ್ಸರ್‌ನಿಂದಾಗಿ ಇನ್ನು ಎಂದೆಂದಿಗೂ ಹೇಳಲು ಸಾಧ್ಯವೇ ಇಲ್ಲವೆಂಬ ಸಂಭ್ರಮದಲ್ಲಿ, ಆಸ್ತಿ ಕೈ ಜಾರದೆಂಬ ಹಾಗೂ ವಂಶ ಪ್ರತಿಷ್ಠೆ ಉಳಿಯಿತೆಂಬ ಖುಷಿಯಲ್ಲಿ ಇತ್ತ ಜಗದೇವರಾಯ ತನ್ನ ತಮ್ಮ ಮಂತ್ರಿಯ ಜೊತೆ ಸೇರಿ ಸಂತೋಷ ಕೂಟ ಏರ್ಪಡಿಸುತ್ತಾನೆ. ಈ ಸಂತೋಷ ಕೂಟದ ಹಾಡದು.

ಗಮ್ಮತ್ತಿನ ದೃಶ್ಯಗಳ ಕಲ್ಪನೆಯಲ್ಲೇ ನಾನು ಹಾಡು ಬರೆದೆ. ವಿಜಯಭಾಸ್ಕರ್‌ರವರಿಗೆ ತೋರಿಸಿದೆ. ಅವರು ಹಾಡನ್ನೊಮ್ಮೆ ಓದಿ ನಗುತ್ತ 'ಏನ್ರೀ, ಏನೂ ಬಿಟ್ಟಿಲ್ವಲ್ರೀ. ಎಲ್ಲಾ ಹೇಳ್ಬಿಟ್ಟಿದ್ದೀರಿ. ಏನೂ ಗೊತ್ತಿಲ್ಲ ಅಂದ್ಕೊಂಡೇ ಹೀಗೆಲ್ಲಾ ಬರೆದಿದ್ದೀರಲ್ಲ?' ಅಂತ ನವಿರಾಗಿ ಚುಡಾಯಿಸಿ ಸಂತೋಷ ಪಡತೊಡಗಿದರು. ಭರಣರು ಓದಿದ ಮೇಲೆ 'ಮುಚ್ಚಿಟ್ಟು ಬರೀರಿ ಅಂದ್ರೆ ಎಲ್ಲಾ ಬಿಟ್ಬಿಟ್ ಬರ್ದಿದ್ದೀರ? ಸ್ವಲ್ಪ ನಾನ್‌ವೆಜ್ ಜಾಸ್ತೀನೇ ಆಯ್ತು. ಇರ್ಲಿಬಿಡಿ' ಅಂದರು. ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಹೇಗೋ ಹಾಡು ಓಕೆ ಆಯ್ತು. ರಸಿಕ ಮನೋಲ್ಲಾಸಕ್ಕೆ ಶ್ರುತಿ ಸೇರಿಸುವಂತೆ ಇಡೀ ಹಾಡು ಶ್ಲೇಷಾರ್ಥಗಳಲ್ಲೇ ಸಾಗುತ್ತೆ. ಕಂಜೂಸುತನವನ್ನು ಬಿಟ್ಟುಕೊಡಲಾಗದ ಪಕ್ಕಾ ಲೆಕ್ಕಾಚಾರದ ಮಾರವಾಡಿಯ ಧೈಲಿಯನ್ನೂ ಬಿಚ್ಚದ, ತನ್ನನ್ನೂ ಬಿಟ್ಟು ಕೊಡಲಾಗದ ಧರ್ಮಸಂಕಟವನ್ನು ಕುರಿತು ಗೇಲಿ ಮಾಡುತ್ತ ನಾಚ್‌ವಾಲಿಯೊಬ್ಬಳು ಹಾಡುವ ಹಾಡದು. ಹಾಡಿನ ಪಲ್ಲವಿ ಪ್ರಾಯಶಃ ಹೀಗಿದೆ:

ಮಾರವಾಡಿ ಮಾವಯ್ಯ
ರಾಂ ರಾಂಜೀ ಸಲಾಮಯ್ಯ ।
ವಯ್ಯಾರ ಒತ್ತೆ ಇಡುವೆ
ಕೈಯ್ಯಾರ ತೂಗು ಒಡವೆ ॥

ಹಾರ್ಮೋನಿಯಂ ಮೂಲಕ ರಾಗ ಸಂಯೋಜಿಸಿ ಸ್ವರ ಪ್ರಸ್ತಾರ ಹಾಕುತ್ತಿದ್ದ ವಿಜಯಭಾಸ್ಕರ್‌ರವರು ಈ ಹಾಡಿನಿಂದ ವಿಚಿತ್ರ ಆನಂದಗಳನ್ನು ಪಡೆಯುತ್ತಿರುವಂತೆಯೇ ನನಗೆ ತೋರಿತು. ಇಂಥವೇ ಕೆಲವು ಉದಾಹರಣೆಗಳನ್ನು ಅವರೂ ಹೇಳಿದ ನೆನಪು ನನಗೆ. ವಾದ್ಯ ಪರಿಕರಗಳ ಬಳಕೆಯಲ್ಲಿ ವಿಶೇಷ ಮುತುವರ್ಜಿಯನ್ನು ವಹಿಸಿದ ವಿಜಯಭಾಸ್ಕರ್ ಈ ಗಮ್ಮತ್ತಿನ ಹಾಡಿಗೆ ಗಮ್ಮತ್ತಿನ ರಾಗವನ್ನೂ ಸಂಯೋಜಿಸಿದರು. ಹಾಡಿನ ಪ್ರಾರಂಭದಲ್ಲಿ ಉತ್ಕಟೋನ್ಮಾದದ ವಿಚಿತ್ರ ಆಲಾಪನೆಯೊಂದನ್ನು ಸೇರಿಸಿ ಗುಜರಾತಿನ ಬಾಂಗಡಾ



ವಾದ್ಯವನ್ನಲ್ಲಿ ಬಳಸಲು ನಿರ್ಧರಿಸಿದರು. ರಾಗ ಸಂಯೋಜನೆಯ ನಂತರ ಪಿಚ್ಚಳ್ಳಿಯಿಂದ ಹಾಡಿಸಿ ಟೇಪ್ ರೆಕಾರ್ಡರ್‌ನಲ್ಲಿ ಧ್ವನಿಮುದ್ರಿಸಿದ ನಂತರ ಕೂತು ಕೇಳಿದೆವು. ಹಾಡು ಪೂರ್ತಿ ಕೇಳಿದ ಮೇಲೆ ವಿಜಯಭಾಸ್ಕರ್ 'ನೋಡ್ತಾ ಇರಿ, ಈ ಹಾಡು ಕೇಳಿದ ಮೇಲೆ ಪ್ರೊಡ್ಯೂಸರ್ರು ನಿಮ್ಮ ಮನೆ ಹತ್ರ ಕ್ಯೂ ನಿಲ್ತಾರೆ' ಅಂದ್ರು. ತಮಾಷೆಗೆ ಅಂದರೋ ಅಥವ ಛೇಡಿಸೋಕ್ಕೇಂತ ಹೇಳಿದರೋ ಗೊತ್ತಿಲ್ಲ. ಆದರೆ ಸಧ್ಯ ಹಾಗಾಗಲಿಲ್ಲ. ಯಾಕೆಂದರೆ ಬದಲಾದ ಕಥೆಗೆ ಅನುಗುಣವಾಗಿ ಈ ಹಾಡಿನ ಸಂದರ್ಭವೂ ಬದಲಾಗಿ, ಹಾಡನ್ನು ಕೊನೆಗೆ ಕೈಬಿಡಬೇಕಾಯಿತು. ಹಾಡನ್ನು ಕೈಬಿಟ್ಟಿದ್ದು ಒಳ್ಳೆಯದೇ ಆಗಿದ್ದರೂ ಯಾಕೋ ಏನೋ ಇಂದಿಗೂ ಮಾರವಾಡಿಯನ್ನು ಗೇಲಿ ಮಾಡುವ ಆ ಹಾಡು ನನ್ನೊಳಗೆ ಗುಂಗಾಡುತ್ತಲೇ ಇದೆ. ಎಲ್ಲಕ್ಕಿಂತಲೂ ಮುಖ್ಯವಾಗಿ ದ್ವಂದ್ವಾರ್ಥದ ಹಾಡು ಬರೆಯುವುದು ಸರಿಯಾ ಅಂದುಕೊಂಡು, ಆ ನೈತಿಕ ಪ್ರಜ್ಞೆಯನ್ನು ಎದುರಿಗಿಟ್ಟುಕೊಂಡೇ ಹಾಡು ಬರೆದು ಮುಗಿಸಿದ ನನ್ನ ಮನಃಸ್ಥಿತಿಯೂ ನನ್ನನ್ನು ಕಾಡುತ್ತಲೇ ಇರುವುದು. ಆದರೂ ಸಮಾಧಾನದ ವಿಷಯವೇನೆಂದರೆ ಹೆಣ್ಣಿನ ಪ್ರೀತಿಯನ್ನೂ ಲೆಕ್ಕಾಚಾರದಲ್ಲಿ ತೂಗಿ ನೋಡುವ ಪ್ರವೃತ್ತಿಯನ್ನು ಗಮ್ಮತ್ತಾದ ಧಾಟಿಯಲ್ಲೇ ಗೇಲಿ ಎಬ್ಬಿಸಿರುವ ಆ ಹಾಡಿನ ಅಂಶ.

ಮತ್ತೊಂದು ಪ್ರಸಂಗ - ಅದೂ 'ನೀಲಾ' ಚಿತ್ರದ ಹಾಡಿಗೆ ಸಂಬಂಧಿಸಿದ್ದೇ. ನಾಯಕಿ ನೀಲಾ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಡಾಕ್ಟರ್‌ರವರ ಮಾತು ಕೇಳಿ ಇನ್ನು ಎಂದೆಂದಿಗೂ ತನ್ನ ಧ್ವನಿ ಸರಿಹೋಗುವುದೇ ಇಲ್ಲವೇನೋ ಎಂಬ ಆತಂಕದಲ್ಲಿದ್ದಾಗ ಈ ಗಾಯಕಿಯ ಅಭಿಮಾನಿಯಾಗಿದ್ದ ಗೀತಾಂಜಲಿಯೆಂಬ ಪುಟ್ಟ ಮಗುವೊಂದು ತಾನೇ ಬರೆದ ಕವಿತೆಗೆ ನೀಲಾಳೇ ರಾಗ ಸಂಯೋಜಿಸಿ ಹಾಡಲೇಬೇಕೆಂದು ಹಠ ಹಿಡಿದಾಗ ನೀಲಾ ಬೇಸರದಿಂದ ಗದರಿ ಕಳಿಸುತ್ತಾಳೆ. ನಂತರ ಆ ಪುಟ್ಟ ಮಗವೂ ಕ್ಯಾನ್ಸ್‌ರ್ ಪೀಡಿತೆ ಎಂಬುದು ತಿಳಿದಾಗ ಪಶ್ಚಾತ್ತಾಪಗೊಂಡು ಆ ಮಗುವಿನ ಕವಿತೆಗೆ ರಾಗ ಸಂಯೋಜಿಸಿ ಕ್ಯಾನ್ಸರ್ ಪೀಡಿತ ಗಂಟಲಿನ ಗೊಗ್ಗರು ದನಿಯಲ್ಲೇ ಹಾಡುತ್ತಾಳೆ. ಈ ಹಾಡಿಗೆ ರಾಗ ಸಂಯೋಜಿಸಿದ ವಿಜಯಭಾಸ್ಕರ್‌ರವರು ನಂತರ ಆ ಹಾಡನ್ನು ನಾನೇ ಕೊಂಚ ಬದಲಿಸಬೇಕೆಂದು ಕೊಂಡಾಗಲೂ ಅವರು ಖಡಾಖಂಡಿತವಾಗಿ ನಿರಾಕರಿಸಿ 'ನಾನು tune ಮಾಡಿದ ಒಳ್ಳೇ ಹಾಡುಗಳಲ್ಲಿ ಇದೂ ಒಂದು. ಇದರಲ್ಲಿ ಒಂದಕ್ಷರಾನೂ change ಮಾಡ್ಬೇಡಿ' ಅಂದರು. ನಂತರ ನಾನು ಆ ಪ್ರಯತ್ನವನ್ನು ಬಿಟ್ಟುಬಿಟ್ಟೆ.

ಈ ಗೀತಾಂಜಲಿ ಹಾಡನ್ನು ಹಾಡಿದವರು ವಾಣಿಜಯರಾಂ. ಹಾಡಿನ ಧ್ವನಿಮುದ್ರಣದ ದಿನ ಸ್ಟುಡಿಯೋದಲ್ಲಿರಬೇಕಿದ್ದ ನಾನು, ನನ್ನ ಮೊದಲ ವಿಮರ್ಶಾ ಸಂಕಲನ 'ಕಾಲು ದಾರಿ'ಯ ಪ್ರಕಟಣೆಯ ಸಿದ್ಧತೆಯಲ್ಲಿದ್ದುದರಿಂದ ಬಸವರಾಜು ಅವರೊಂದಿಗೆ ಡಿಟಿಪಿ ಬಳಿ ಕುಳಿತಿದ್ದೆ. ಟ್ರ್ಯಾಕ್ ಸಿಂಗರ್ ಪಲ್ಲವಿಯ ಧ್ವನಿಯಲ್ಲಿ ಈ ಹಾಡನ್ನು ಕೇಳಿಸಿಕೊಂಡ ವಾಣಿಜಯರಾಂರವರು ಗದ್ಗದಿತರಾಗಿ ಅಳುತ್ತ ಕುಳಿತುಬಿಟ್ಟರಂತೆ. ಸ್ಟುಡಿಯೋದಲ್ಲಿದ್ದ ನಾಗಾಭರಣ ಹಾಗೂ ವಿಜಯಭಾಸ್ಕರ್ ವಾಣಿಜಯರಾಂರನ್ನು ಸಮಾಧಾನಪಡಿಸಿ, ಟೀ ತರಿಸಿಕೊಟ್ಟು ನಂತರ ಹಾಡಿನ ಧ್ವನಿಮುದ್ರಣ ನೆರವೇರಿಸಿದರು. ಚಲನಚಿತ್ರದ ಹಾಡೊಂದಕ್ಕೆ ಪ್ರಖ್ಯಾತ

ಗಾಯಕಿಯೊಬ್ಬರು ಹೀಗೆ ಭಾವಾವೇಶದ ಪ್ರತಿಕ್ರಿಯೆ ನೀಡಿದ್ದು ಹಾಗೂ ವ್ಯಕ್ತಿಗತವಾಗಿ ಸ್ಪಂದಿಸಿದ್ದು ನನಗಂತೂ ಅನಿರೀಕ್ಷಿತ ಹಾಗೂ ಅಚ್ಚರಿಯ ಸಂಗತಿಯಾಗಿತ್ತು. ಸಾಹಿತ್ಯಕ ದೃಷ್ಟಿಯಿಂದ ಸಾಧಾರಣವೆನ್ನಿಸುವಂತಿದ್ದ ಆ ಹಾಡಿಗೆ ಇಂತಹ ಶಕ್ತಿ ದೊರಕಿದ್ದು ವಿಜಯಭಾಸ್ಕರ್‌ರವರ ಭಾವಪೂರ್ಣ ಸಂಗೀತದ ಸ್ಪರ್ಶದಿಂದಲೇ ಎಂದು ನಾನು ತಿಳಿದಿದ್ದೇನೆ. ಆದರೂ ವಾಣಿಜಯರಾಂರವರನ್ನು ಕದಲಿಸಿದ ಹಾಗೆ ಆ ಹಾಡು ಎಲ್ಲ ಕೇಳುಗರನ್ನೂ ಮುಟ್ಟಿದೆ ಎಂದು ಹೇಳುವ ಧೈರ್ಯ ನನಗಿಲ್ಲ. ಒಂದು ವಿಚಿತ್ರ ಸಾಧ್ಯತೆಯೇನೆಂದರೆ ಗದ್ಯಾತ್ಮಕ ಪದಪುಂಜಗಳಿಂದ ಕೂಡಿದ್ದ ಆ ಹಾಡು ಅರ್ಥ, ಲಯ ಹಾಗೂ ಧ್ವನಿಲಾಲಿತ್ಯಕ್ಕಿಂತಲೂ ಸಾಂದರ್ಭಿಕವಾದ ಭಾವ-ಲಾಲಿತ್ಯಕ್ಕೇ ಹೆಚ್ಚು ಒತ್ತು ಕೊಟ್ಟುಕೊಂಡಿದ್ದರಿಂದಾಗಿಯೇ ಪ್ರಾಯಶಃ ಕೆಲವಾದರೂ ಶ್ರೋತೃಗಳನ್ನದು ಮೀಟಬಲ್ಲಂತಿತ್ತು.

ಬಸವವಾಜುರವರಿಂದ ಬೀಳ್ಕೊಂಡು ಸಂಜೆ ವಾಪಸ್ಸಾದ ನಂತರ ಪಿಚ್ಚಳ್ಳಿ ಮತ್ತು ಏಣಗಿ ನಟರಾಜ್‌ರವರು ನಾನು ಅಂದು - ಸ್ಟುಡಿಯೋಗೆ ಬರದೇ ಇದ್ದುದಕ್ಕೆ ತೀವ್ರವಾಗಿ ಆಕ್ಷೇಪಿಸಿದರಲ್ಲದೆ ವಾಣಿಜಯರಾಂರವರು ಹಾಡು ಬರೆದದ್ದು ಯಾರೆಂಬ ಬಗ್ಗೆಯೂ ವಿಚಾರಿಸಿದರೆಂದು ತಿಳಿಸಿದರು. 'ನೀಲಾ' ಚಿತ್ರ ನೋಡಿದವರಿಗೆ ಈ ಹಾಡು ನೆನಪಿಗೆ ಬಂದರೂ ಬರಬಹುದು. ಹಾಡಿನ ಪಲ್ಲವಿ ಹೀಗಿದೆ:

**ಕಣ್ಣನು ಮುಚ್ಚಬಹುದು ಚಂದಮಾಮ ।**
**ಕನಸನು ಬಚ್ಚಿಡಬಹುದೇ ಚಂದಮಾಮ ॥**

ಒಂದು ದಿನ ನಾನು ಮತ್ತು ಪಿಚ್ಚಳ್ಳಿ ಸಿಟಿ ಇನ್‌ಸ್ಟಿಟ್ಯೂಟ್‌ನ ರೂಮಿನಲ್ಲಿದ್ದಾಗ, ಪ್ರಾಯಶಃ ಮುಸ್ಸಂಜೆ ಅಂತ ಕಾಣುತ್ತೆ, ಒಬ್ಬ ವ್ಯಕ್ತಿ ಬಂದು ತಾನು ಚೆನ್ನೈನಿಂದ ಬಂದಿರುವುದಾಗಿಯೂ, ತನ್ನ ಹೆಸರು ದಕ್ಷಿಣಾಮೂರ್ತಿ ಎಂದೂ ಪರಿಚಯಿಸಿಕೊಂಡರು. ಅವರ ಬರುವಿಕೆಯ ನಿರೀಕ್ಷೆಯಲ್ಲಿ ನಾವು ಇದ್ದೆವು. 'ನೀಲಾ' ಚಿತ್ರದ music conduct ಮಾಡಲು ದಕ್ಷಿಣಾಮೂರ್ತಿಯವರನ್ನು ವಿಜಯಭಾಸ್ಕರ್‌ರವರೇ ಕರೆಸಿದ್ದರು. ಅವರಿಗಾಗಿ ಕಾದಿರಿಸಲಾಗಿದ್ದ ರೂಮನ್ನು ತೋರಿಸಿದೆವು.

ಆತ ಆಂಧ್ರವಾಲದವರಾದ್ದರಿಂದ ಇಂಗ್ಲೀಷಿನ ಜತೆ ತೆಲುಗು ಕೂಡು ಮಾತನಾಡುತ್ತಿದ್ದರೆ, ಕೋಲಾರದ ಕಡೆಯವರಾದ ನಮಗಿಬ್ಬರಿಗೂ ಆತನೊಂದಿಗೆ ತೆಲುಗಿನಲ್ಲಿ ವ್ಯವಹರಿಸುವುದು ಸುಲಭವಾಯಿತು. ಹೀಗಾಗಿ ನಮಗೆ ದಕ್ಷಿಣಾಮೂರ್ತಿ ಬಹಳ ಬೇಗ ಹತ್ತಿರವಾದರು.

ದಕ್ಷಿಣಾಮೂರ್ತಿಯವರನ್ನು ಕಂಡಾಗಿನಿಂದಲೂ ನನ್ನ ಮಸಕು ಮಸಕಾದ ನೆನಪಿನ ಬಳ್ಳಿ ಯಾಕೋ, ಎಲ್ಲೋ ಜಗ್ಗುತ್ತಲೇ ಇತ್ತು. ಕೆಲವರನ್ನು ಕಂಡಾಗ ಅದು ನಮಗೆ ತುಂಬಾ ಪರಿಚಯದ ಮುಖವೆಂಬಂತಹ ಅನುಭವ ನನಗಂತೂ ಅನೇಕ ಸಲ ಆಗಿದೆ. ಇದೂ ಹೀಗೆ ಇದ್ದಿರಬಹುದು ಎಂದುಕೊಂಡರೂ ಯೋಚಿಸುವುದು ನಿಲ್ಲಲಿಲ್ಲ. ಒಂದೆರಡು ದಿನಗಳ ನಂತರ ಒಂದೆರಡು ದಿನಗಳ ನಂತರ ನೆನಪಿನ ಬಳ್ಳಿಯ ಮೂಲ ಹಿಡಿದೆ. ಈ ದಕ್ಷಿಣಾಮೂರ್ತಿಯ ತದ್ವತ್ತು ಹೋಲಿಕೆಯಿರುವ ಸದಾಶಿವಯ್ಯ ಎಂಬ ಆಂಧ್ರದವರೇ ಆದ, ಆದರೆ ಕೋಲಾರದಲ್ಲಿ



ನೆಲೆಸಿದ್ದ ವ್ಯಕ್ತಿಯೊಬ್ಬರು ಇಪ್ಪತ್ತೈದು ವರ್ಷಗಳ ಹಿಂದೆ ಸಿ.ಎಸ್. ದ್ವಾರಕಾನಾಥ್ ಮತ್ತು ನಮ್ಮ ಗೆಳೆಯರ ಗುಂಪಿಗೆ ತುಂಬಾ ಆತ್ಮೀಯರಾಗಿದ್ದರು. ಇವರಿಬ್ಬರ ಮಾತೃಭಾಷೆಯೂ ತೆಲುಗೇ ಆಗಿದ್ದಿದ್ದರ ಜತೆಗೆ ಹಾವಭಾವಗಳೂ, ಗುಣಸ್ವಭಾವಗಳೂ ನನಗೆ ಒಂದೇ ರೀತಿ ಕಂಡವು. ಇದೂ ಸಾಲದೆಂಬಂತೆ ದಕ್ಷಿಣಾಮೂರ್ತಿಯವರ ಹಾಗೆಯೇ ಆ ಸದಾಶಿವಯ್ಯನವರಿಗೂ ಸಂಗೀತವೆಂದರೆ ಪ್ರಾಣ. ಇಬ್ಬರ ಹೆಸರುಗಳೂ ಶಿವನ ಪರ್ಯಾಯ ನಾಮಗಳೇ. ಈ ನಾದಪ್ರಿಯ ಸದಾಶಿವಯ್ಯನ ಗಾಯನವನ್ನು ನಾವು ಕೇಳಲು ಸಿದ್ಧವಿದ್ದರೆ ಸಾಕು, ಗಂಟೆಗಟ್ಟಲೆ ಘಂಟಸಾಲರವರ ಹಾಡುಗಳನ್ನು ಹಾಡುತ್ತಿದ್ದರು. ಹಾಳು ಬಿದ್ದೂರಿಗೆ ಉಳಿದ ಗೌಡನಾದ ನಾನೇ ಸದಾಶಿವಯ್ಯನಿಗೆ ತಬಲಸಾಥಿ. ನಾನು ತಬಲ ವಾದಕನೇನಲ್ಲ. ಕಲಿತವನೂ ಅಲ್ಲ. ಆದರೂ ಬಕೀಟು, ಟೇಬಲ್ಲು, ಕಾಲೇಜು ಡೆಸ್ಕುಗಳ ಮೇಲೆ ಸಿನಿಮಾ ಹಾಡುಗಳಿಗೆ ತಬಲಾವಾದನ ಗತಿಗಳನ್ನು ನುಡಿಸೀ, ನುಡಿಸೀ ಅಭ್ಯಾಸವಾಗಿತ್ತು. ಹೀಗೆ ಸಿನಿಮಾ ಹಾಡುಗಳಿಗೆ 'ಬಾರಿಸುತ್ತಿದ್ದ' ವಾದನ ಗತಿಗಳನ್ನೇ ನಾವು ಗೆಳೆಯರೆಲ್ಲ ಆಗ ಸೇರುತ್ತಿದ್ದ ವೇಣುಗೋಪಾಲಸ್ವಾಮಿ ಗುಡಿಯಲ್ಲಿನ ಭಜನೆ ಮಂಡಳಿಯ ತಗಡಾಗಿ ಹೋಗಿದ್ದ ತಬಲಾಗೆ ಯಥಾವತ್ತು ವರ್ಗಾಯಿಸಿ ಗೆಳೆಯರಿಂದ ಸೈ ಅನ್ನಿಸಿಕೊಂಡಿದ್ದೆ. ಸದಾಶಿವಯ್ಯನವರಿಗೂ ನನ್ನ ಈ ತಗಡು ತಬಲಾವಾದನ ಅದು ಹೇಗೋ ಸಹ್ಯವಾಗಿಬಿಟ್ಟಿತ್ತು! ಹೀಗಾಗಿ ಅನೇಕ ಸಲ ಅವರು ಮೈಮರೆತು, ಕಣ್ಮುಚ್ಚಿ ಹಾಡಿದ್ದುಂಟು; ನಾನೂ ನಾದೋನ್ಮಾದದಲ್ಲಿ ಮೈಮರೆತು 'ಬಾರಿಸಿದ್ದುಂಟು!' ನಿಜಕ್ಕೂ ನಮ್ಮಿಬ್ಬರನ್ನೂ ಹೀಗೆ ನಾದ ಬಾಂಧವ್ಯದ ಸೂತ್ರದಲ್ಲಿ ಬಂಧಿಸಿದ್ದುದು ನಮ್ಮ ನಮ್ಮ ಸಂಗೀತಾಸಕ್ತಿಗಳಿಗಿಂತಲೂ ಘಂಟಸಾಲರ ಹಾಡುಗಳೇ ಆಗಿದ್ದವು. ನಮ್ಮಲ್ಲಿ ಘಂಟಸಾಲ ಎಷ್ಟು ಜನಪ್ರಿಯ ಗಾಯಕರಾಗಿದ್ದರೆಂದರೆ ನಮ್ಮ ಹಾಗಿನ ಅವರ ಅಭಿಮಾನಿಯೊಬ್ಬರು ಕೋಲಾರದಲ್ಲಿನ ತಮ್ಮ ಹೊಸಮನೆಗೆ 'ಘಂಟಸಾಲ' ಎಂದೇ ಹೆಸರಿಟ್ಟಿದ್ದರಲ್ಲದೆ, ಪ್ರತಿ ವರ್ಷ ಘಂಟಸಾಲರವರ ಪುಣ್ಯತಿಥಿ ಆಚರಿಸಿ, ಅಂದು ಅವರ all time hit ಹಾಡುಗಳ ಗಾಯನ ಗೋಷ್ಠಿ ಏರ್ಪಡಿಸುತ್ತಿದ್ದರು. ಇಂದಿಗೂ ನಾವೆಲ್ಲ ಹೀಗೇ, ಅಲ್ಪಸ್ವಲ್ಪ, ಘಂಟಸಾಲ ಪರಂಪರೆಗೇ ಸೇರಿದವರಾಗಿದ್ದೇವೆ. ಈ ನೆನಪು ಹಂಚಿಕೊಂಡ ನಂತರ ದಕ್ಷಿಣಾಮೂರ್ತಿ ನನಗೆ ಇನ್ನಷ್ಟು ಆತ್ಮೀಯರಾಗಿದ್ದರು.

ದಕ್ಷಿಣಾಮೂರ್ತಿಯವರಿಗೆ ಕನ್ನಡ ಓದಲು ಬರುತ್ತಿರಲಿಲ್ಲ. ಆದರೆ ಆತನಿಗೆ ವಿಜಯಭಾಸ್ಕರ್‌ರವರು ನಮ್ಮ ಹಾಡುಗಳಿಗೆ ಮಾಡಿಟ್ಟಿರುತ್ತಿದ್ದ music notations ಅನ್ನು ನೀಡಿದರು. ಕೇವಲ ಈ notes ಅನ್ನು ಇಟ್ಟುಕೊಂಡು ದಕ್ಷಿಣಾಮೂರ್ತಿ ಹಾಡಿನ ಸಾಹಿತ್ಯವನ್ನು ಓದದೇ, ಅದರ ರಾಗಾಲಾಪವನ್ನು ಹಾಡಿನ ಮೂಲಕ ಕೇಳದೆಯೇ, ಅದು ಹೇಗೆ ಹಾಡುಗಳಿಗೆ music conduct ಮಾಡುತ್ತಾರೆಂಬುದು ನನಗೆ ಅರ್ಥವಾಗದೆಯೇ ಹೋಯಿತು. ಪಿಚ್ಚಳ್ಳಿ ಎಷ್ಟೋ ಕ್ಯಾಸೆಟ್ಟುಗಳಿಗೆ ಸಂಗೀತ ನಿರ್ದೇಶನ ನೀಡಿದ್ದರೂ ಈ ರಹಸ್ಯ ಕದ ತೆಗೆಯುವ ಕೀಲಿ ಕೈ ಅವನ ಬಳಿಯೂ ಇರಲಿಲ್ಲ. ಪಿಚ್ಚಳ್ಳಿಯ ರಾಗ ಸಂಯೋಜನೆ ಹಾಗೂ ಸಂಗೀತ ನಿರ್ದೇಶನದ ಮೂಲ ಶೈಲಿ ಜಾನಪದದಿಂದ ಬಂದದ್ದಲ್ಲವೇ? ಅಷ್ಟೇಕೆ ಇವತ್ತಿನ ಹಲವಾರು ಸಿನಿಮಾಗಳ ಯಶಸ್ವೀ ಸಂಗೀತ ನಿರ್ದೇಶಕರು ಕೂಡ ಈ ಪದ್ಧತಿಯನ್ನು ಅನುಸರಿಸುತ್ತಿಲ್ಲ.

ನಾನೂ, ಪಿಚ್ಚಳ್ಳಿ ಒಟ್ಟಾಗಿ ನಮ್ಮ ಈ ಅನುಮಾನವನ್ನು ದಕ್ಷಿಣಾಮೂರ್ತಿಯವರ ಮುಂದಿಟ್ಟೆವು. ಆತ ಕೇವಲ ಈ notations ಆಧಾರದ ಮೇಲೆಯೇ ಹಾಡಿನ ರಾಗವನ್ನು ಹಿಡಿಯಬಹುದೆಂದು ತಿಳಿಸಿದರಲ್ಲದೆ ಉದಾಹರಣಾರ್ಥವಾಗಿ ನಾನೇ ಬರೆದಿದ್ದ ಹಾಡಿನ ರಾಗವನ್ನು ಅನುನಾಸಿಕವಾಗಿ ಆಲಾಪಿಸಿದರು. ನಿಜಕ್ಕೂ ನನಗಿದು ಸೋಜಿಗವಾಗಿಯೇ ಕಂಡಿತು. ಶಬ್ದಮಯವಾದ ನಿರ್ದಿಷ್ಟ ರಾಗವೊಂದನ್ನು ಹೀಗೆ ಚಿತ್ರಲಿಪಿಯಂತಹ notationsನಲ್ಲಿ ಅಡಗಿಸಿಡುವುದು ಮತ್ತು ಆ ಚಿತ್ರಲಿಪಿಯ ಶಬ್ದವಿನ್ಯಾಸಗಳನ್ನು ಅರಿಯಬಲ್ಲ ಮತ್ತೊಬ್ಬ ಶಬ್ದಲಿಪಿಬ್ರಹ್ಮ- ಅದರ ರಾಗವನ್ನು ಕೇಳದೆಯೇ, ತದ್ವತ್ತಾಗಿ ಪುನರಾಲಾಪಿಸುವುದು ಸಾಧ್ಯವಾಗುತ್ತದೆನ್ನುವುದೇ ನನಗೆ ಅದ್ಭುತವಾಗಿ ಕಂಡಿತು. ಭಾಷೆ ಮತ್ತು ಲಿಪಿಯ ಸಂಬಂಧವೂ ಹೀಗೆಯೇ. ಆದರೆ ಈ ಸಂಗೀತ ಸ್ವರ ಪ್ರಸ್ತಾರದಲ್ಲಿ ರಾಗವನ್ನು ಯಾವ ಸ್ಥಾಯಿಯಲ್ಲಿ ಹಿಡಿಯಬೇಕು, ಎಲ್ಲಿಯವರೆಗೂ ಅಂದರೆ ಎಷ್ಟು ಅವಧಿಯವರೆಗೂ ರಾಗವನ್ನು ಆಲಾಪಿಸಬೇಕು, ಅದು ಆರೋಹಣವೋ, ಅವರೋಹಣವೋ, ಪುನಃ ಎಲ್ಲಿಂದಾಚೆಗೆ ಆ ರಾಗವನ್ನು ಹೊರಳಿಸಿ ಮತ್ತಾವ ಸ್ಥಾಯಿಯಿಂದ ಎಂತಹ ಭಿನ್ನ ರಾಗಾಲಾಪನೆಯನ್ನು ಎಷ್ಟು ಅವಧಿಯವರೆಗೂ ಮುಂದುವರೆಸಬೇಕು ಎಂಬೆಲ್ಲ ನಾದಾತ್ಮಕ ಇಂಗಿತಗಳನ್ನು ಅರಿಯುವ ನಾದೇಂಗಿತವೂ, ಸ್ವರೇಂಗಿತವೂ ಆದ ಈ ತಿಳಿವಳಿಕೆಯ ಮನಸ್ಸಿನ ನಿಗೂಢ ಒಳದಾರಿಗಳಲ್ಲಿ ನಾನೇ ಕಳೆದುಹೋದಂತಾಯಿತು. ಇನ್ನು ಈ ನಾದಸಾಗರದಲ್ಲೇ ಮುಳುಗಿ ಧ್ಯಾನಸ್ಥರಾಗುವವರ ಪರಿ ಎಂತಹದಿದ್ದೀತು? ನಾದ, ನೃತ್ಯಗಳು ಮಿಥುನ ಕ್ರಿಯೆಯಷ್ಟೇ ಅತ್ಯುತ್ಕಟವಾಗಿ ಸಾಧಕರನ್ನು ಒಳಗು ಮಾಡಿಕೊಳ್ಳುವ ಹಾಗೂ ತುರೀಯಾವಸ್ಥೆಗೆ ಮುಟ್ಟಿಸುವುದೆಂಬ ಶೈವ ಪರಂಪರೆಯ ಅರಿವಿನ ಸಾಕ್ಷಾತ್ಕಾರವಾದಂತಾಗಿ ನಾನು ಕ್ಷಣ ಕಾಲ ತತ್ತರಿಸಿಹೋದೆ. ಆಹಾ! ನಾದಬಿಂದು ತತ್ವವೇ ನಿನಗೆ ನಮೋ.

ಇಂತಹ ಮಾಯಕಾರ ನಾದಲಿಪಿಯನ್ನು ಹೊಂದಿರುವ ಸಂಗೀತ ಭಾಷೆಯನ್ನು ಕೂಡ ತತ್ವವನ್ನೆ ಸಂಗೀತವಾಗಿಸಿದ ಈ ದೇಶದ ಸಂವಿಧಾನ ಇನ್ನೂ ಯಾಕೆ ತನ್ನ ಅಧಿಕೃತ ಭಾಷೆಗಳಲ್ಲೊಂದು ಎಂದು ಪರಿಗಣಿಸಿಲ್ಲವೋ? ಇರಲಿ. ಆದರೆ ನಿಜಕ್ಕೂ ಇದು ಮನಸ್ಸಿನ ಭಾಷೆ. ಸೃಜನಾತ್ಮಕವೂ, ಅಗೋಚರವೂ ಆದ ದಾರಿಗಳನ್ನು ಹಿಡಿಯಬಲ್ಲ ಶಬ್ದ ಚಹರೆ. ವ್ಯಾಕರಣ ಜ್ಞಾನದಾಚೆಗೆ ಎಲ್ಲ ಜೀವಿಗಳ ಹೃದಯವನ್ನೂ ಮಿಡಿದು ಆಳಬಲ್ಲ ಭಾವಭಾಷೆಯಿದು. ಕರಳು ಮತ್ತು ಹೃದಯಗಳ ನಡುವೆ ಓಲಾಡುವ ಸಂಗೀತಕ್ಕೆ ಈ ಸ್ಥಾನಕ್ಕಿಂತಲೂ ಮಿಗಿಲು ಸ್ಥಾನವುಂಟೆ?

ದುಡಿಯುವವರ ಕರುಳಿನ ಮೂಲಾಧಾರದಲ್ಲಿ ಹುಟ್ಟಿ ಭಾವಹೃದಯೀ ಸಂಗೀತಗಾರರ ಇಡಾ, ಪಿಂಗಳ ಹಾಗೂ ಸುಷುಮ್ನ ನಾದ ನಾಳಗಳನ್ನು ದಾಟಿ ಕೇಳುಗರ ನಾದೋನ್ಮತ್ತ ಬ್ರಹ್ಮರಂಧ್ರದಲ್ಲಿ ಸಹಸ್ರಾರ ಕಮಲವಾಗಿ ಅರಳುವ ಸಂಗೀತಾನುಭವವನ್ನು ನಮ್ಮ ಭೌತಿಕ ಅನುಭವದ ಮೂಲಕ ಅಲೌಕಿಕ ಬಯಲಿಗೆ ಹರಿಯಬಿಡದಿದ್ದಲ್ಲಿ ನಮ್ಮ ನಮ್ಮ ಅಂತಸ್ಥ ಜಗದ ಆನಂದಗಳು ಮತ್ತವುಗಳ 'ಪರಿಮಳದ ಹಾದಿಗಳು' ನಮ್ಮ ಪಾಲಿಗೆಂದೆಂದಿಗೂ ಅಗೋಚರ, ಅಪರಿಚಿತ ಹಾಗೂ ಶಾಶ್ವತ ಮುಚ್ಚಿಕೊಂಡಂತೆಯೇ ಉಳಿದುಬಿಡಬಲ್ಲವು. ನಾದತತ್ವ ತೆರೆದು ತೋರುವ ಬಣ್ಣಗಳು ಅನೇಕ ಮತ್ತು ಅಜ್ಞಾತ. ಹಾದಿಗಳ ವೈವಿಧ್ಯಗಳು



ಅತ್ಯದ್ಭುತ. ಕೇವಲ ಕೆಲವು ರೇಖಾಕೃತಿಗಳು ಶಬ್ದಗತಿಯೊಂದರ ನಿಗೂಢನಾದ ಬಾಗಿಲು ತೆರೆವ ಮಾಂತ್ರಿಕ ಕೀಲಿಕೈಯಾಗುವುದು ನನಗೇನು, ಯಾರಿಗಾದರೂ ಸೋಜಿಗವಾಗಿಯೇ ಕಂಡೀತು. ಇಷ್ಟನ್ನು ಅರಿಯ ಬಲ್ಲವರಿಗೆ ಭಾರತದ ಭಕ್ತಿಪಂಥಗಳು ಈ ನೆಲದ ಸಾಮಾಜಿಕ ಕ್ಷುದ್ರತೆಗಳನ್ನು ಹೇಗೆ ನಿರಾಯಾಸವಾಗಿ ಮೀರಿದವು, ನಾದವನ್ನೇ ಯಾಕೆ ತಮ್ಮ ಭಕ್ತಿಯ ಅಭಿವ್ಯಕ್ತಿಯಲ್ಲಿ ಚುಂಬಕ ಮೂಲದ್ರವ್ಯವಾಗಿಸಿಕೊಂಡವು ಎಂಬೆಲ್ಲ ಸತ್ಯಗಳೂ ಎವೆಯಿಕ್ಕುವುದರಲ್ಲಿ ಅರ್ಥವಾಗಬಲ್ಲವು. ಭಾರತವೇನು, ಜಗತ್ತಿನೆಲ್ಲಾ ಭಕ್ತಿ ಪಂಥಗಳ ಉನ್ಮಾದ್ರಾವಸ್ಥೆಗೆ ಅಮೂರ್ತ ರೀತಿಯಲ್ಲಿ ಜೀವಪೋಷಕ ದ್ರವ್ಯವಾಗಿರುವುದು ಈ ನಾದವೇ. ಸಾಫೀ ಪಂಥದಲ್ಲಿನ ದರ್ವೇಷ್‌ಗಳ 'ಸಮಾ' ಮತ್ತು 'ಮವ್ಲವಿ' ಎಂಬ ಗಿರಗಿರ ತಿರುಗುವ ತಿರುಗಣಿ ನೃತ್ಯದ ಪ್ರಾಣಾಧಾರಕವೂ ನಾದವೇ; ಇದೇ ವಿಶ್ವವ್ಯಾಪಿ ಸಂಗೀತವೇ ಆಗಿದೆ. ಭಕ್ತಿಯಲ್ಲಿ ಮೈ ಮರೆಯುವವರೆಲ್ಲರಿಗೂ ನಾದವೇ ಚೈತನ್ಯದ ಮೆಟ್ಟಿಲುಗಳು.

ದಕ್ಷಿಣಾಮೂರ್ತಿಯವರು ಬಂದು ನನ್ನೊಳಗೆ ಎಬ್ಬಿಸಿದ ಈ ನಾದ ಕಲ್ಲೋಲದ ಜೊತೆಜೊತೆಗೇ ಹಾಡುಗಳನ್ನು ಮತ್ತೆ ಬರೆವ, ರಿಪೇರಿ ಮಾಡುವ ಕಾಯಕ ಮುಂದುವರಿದೇ ಇತ್ತು. ಹಾಡು ಬರೆವಾಗಿನ ನನ್ನ ಪಡಿಪಾಟಲುಗಳನ್ನು ಗಮನಿಸಿದ ಅವರು ಆತ್ರೇಯ ಎಂಬ ತೆಲುಗಿನ ಕವಿ ಚಿತ್ರಗೀತೆಗಳನ್ನು ಬರೆಯುವ ಸ್ವಾರಸ್ಯಕರ ಪ್ರಸಂಗ ಹೇಳಿದರು. ಆತ್ರೇಯರನ್ನು ಬಲ್ಲವರೆಲ್ಲರೂ ಕರೆಯುವುದು 'ಮನಸು ಕವಿ' ಎಂದೇ. ಯಾಕೆಂದರೆ ಈತ ಮನಸಿನ ವ್ಯಾಪಾರವನ್ನೇ ಕೇಂದ್ರವಾಗಿಟ್ಟುಕೊಂಡು ಅನೇಕ ತೆಲುಗು ಚಲನಚಿತ್ರ ಗೀತೆಗಳನ್ನು ಬರೆದು, ಆ ಹಾಡುಗಳಿಂದಾಗಿಯೇ ಇಂದು ಖ್ಯಾತನಾಗಿದ್ದಾನೆ.

ಈ ಆತ್ರೇಯ ಎಂಬ ಕವಿಮಹಾಶಯ ಚಿತ್ರಗೀತೆ ಬರೆಯುವ ಮುನ್ನ ನಿರ್ಮಾಪಕರ ಕಣ್ಣಲ್ಲಿ ನೀರು ಬರಿಸುತ್ತಾರಂತೆ. ಚಿತ್ರಗೀತೆ ಬರೆದಾದ ನಂತರ ಚಿತ್ರಗೀತೆ ಕೇಳುವವರ ಹಾಗೂ ಪ್ರೇಕ್ಷಕರ ಕಣ್ಣಲ್ಲಿ ನೀರು ಬರಿಸುತ್ತಾರಂತೆ. ಹೀಗೆ ಇಬ್ಬರ ಕಣ್ಣಲ್ಲೂ ನೀರು ಬರಿಸಿ ದುಡ್ಡು ಮಾಡುವ ಐನಾತಿ ಕವಿಯ ಬಗ್ಗೆ ಇದುವರೆವಿಗೂ ನಾನು ಕೇಳೇ ಇರಲಿಲ್ಲ. ಆತ್ರೇಯರ ಅನೇಕ ಚಿತ್ರಗೀತೆಗಳು ಇಂದಿಗೂ ಕರ್ನಾಟಕಾಂಧ್ರ ಚಿತ್ರಪ್ರೇಮಿಗಳ ನಾಲಗೆಗಳ ಮೇಲೆ ವಿರಹ ಮಹಾಕಾವ್ಯವನ್ನೂ, ಪ್ರೇಮಿಕರ ತಲ್ಲಣಗಳನ್ನೂ, ಹತಾಶ ಪ್ರೇಮಿಗಳ ನಿಟ್ಟುಸಿರ ಶಾಸನಗಳನ್ನೂ ಕೆತ್ತುತ್ತಲೇ ಇವೆ. ಆತನ 'ಮನಸು ಗತಿಯಿಂತೇ... ಮನಿಷಿ ಬ್ರತುಕಿಂತೇ । ಮನಸ್ಸುನ್ನ ಮನಿಷಿಕೀ ಬ್ರತುಕು ಲೇದಂತೇ... ॥' ಎಂಬ ಹಾಡು ನಿನ್ನೆಯ-ಇಂದಿನ, ಎಲ್ಲ ಕಾಲದ ಕೇಳುಗರ ಹೃದಯಗಳನ್ನು ಆರ್ದ್ರಗೊಳಿಸುವಂತಿದೆ.

ಚಿತ್ರವೊಂದರ ಯಶಸ್ಸಿಗೆ ಹಾಡುಗಳು ಕೂಡ ಪೂರಕ ಎಂಬುದು ಈಗ ಸಾಬೀತಾಗಿರುವ ವಾಣಿಜ್ಯಾತ್ಮಕ ವಾಸ್ತವ. ಗೀತೆಗಳ ಜನಪ್ರಿಯತೆಯಿಂದಲೇ ಚಿತ್ರಗಳನೇಕವು ಗೆದ್ದಿರುವ ಉದಾಹರಣೆಗಳೂ ಬೇಕಾದಷ್ಟಿವೆ. ಈ ಹಿನ್ನೆಲೆಯಲ್ಲಿ ಕರುಳ ಬಳ್ಳಿ ಪೊದೆಯನ್ನೇ ಅಲ್ಲಾಡಿಸಿ, ಆ ಮೂಲಕ ಭಾವಶುಶ್ರೂಷೆ ನೀಡುವ ಆತ್ರೇಯರಂತಹ ಗೀತ ರಚನೆಕಾರರ ಅನಿವಾರ್ಯತೆ ನಿರ್ದೇಶಕ ಹಾಗೂ ನಿರ್ಮಾಪಕರಿಬ್ಬರಿಗೂ ಇರುತ್ತದೆ. ಆದರೆ ಆತ್ರೇಯರಂತಹ ಕವಿ-ಗೀತಗಾರುಡಿಗರನ್ನು ಒಲಿಸಿಕೊಂಡು ಹಾಡು ಬರೆಸುವುದು ಅಷ್ಟೇನೂ

ಸುಲಭವಾಗಿರುವುದಿಲ್ಲ. ಚಿತ್ರದ ಚಿತ್ರೀಕರಣವೆಲ್ಲಾ ಮುಗಿದಿದ್ದರೂ ಆತ್ರೇಯರು ಇನ್ನೂ ಹಾಡು ಬರೆಯುವುದು ಪ್ರಾರಂಭವೇ ಆಗಿರುವುದಿಲ್ಲ. ಇನ್ನು ಮಾಡುವುದೇನು? ಪ್ರತೀದಿನ ನಿರ್ಮಾಪಕ ಆತ್ರೇಯರಿಂದ ಹಾಡು ಬರೆಸಿ ತರುವಂತೆ ಒಬ್ಬರನ್ನು ಕಾರಿನಲ್ಲಿ ಅಟ್ಟುತ್ತಾರೆ. ನಿರ್ಮಾಪಕರ ಈ ರಾಯಭಾರಿ ಆತ್ರೇಯರ ಬಳಿಗೆ ಬರಿಗೈಯಲ್ಲಿ ಹೋದನೋ ಆತ ಕಣ್ಣಲ್ಲಿ ನೀರು ಹಾಕುವುದು ಗ್ಯಾರಂಟಿ. ಹೀಗಾಗಿ ಮುನ್ನೆಚ್ಚರಿಕೆ ವಹಿಸಿ 'ಸಕಲ ಸಿದ್ಧತೆ'ಗಳೊಂದಿಗೇ ಹೋಗಬೇಕು. ಈ ಕವಿಯ ಮನಸ್ಸು ಸ್ಫೂರ್ತಿಗೊಂಡರೆ ತಾನೇ ಆತ ಲಕ್ಷಾಂತರ ಮನಸುಗಳ ವೇದನೆಗೆ ಗೀತಾಭಿವ್ಯಕ್ತಿ ನೀಡಲು ಸಾಧ್ಯವಾಗುವುದು! ಮನೆಯ ಬಳಿಗೇ ಬರುವ ನಿರ್ಮಾಪಕರ ಕಾರಿನಲ್ಲಿ ಕೂತ ಆತ್ರೇಯ ತಮಗೆ ಪ್ರಿಯವಾದ ಧೂಮ-ಸೋಮಗಳ ಹೋಮ ನಡೆಸುತ್ತ ಮದ್ರಾಸಿಂದ ಮಹಾಬಲಿಪುರಂವರೆಗೂ ಹಾಡಿನ ಬಗ್ಗೆ ಚಿಂತಿಸುತ್ತಾ ಪ್ರಯಾಣಿಸುತ್ತಾರೆ. ಮಹಾಬಲಿಪುರಂ ಬಂತೋ - ಪುನಃ ಮದ್ರಾಸಿನತ್ತ ಪ್ರಯಾಣ. ಮದ್ರಾಸ್ ಇನ್ನೇನು ಸಮೀಪಿಸುತ್ತಿದೆ ಅನ್ನುವಾಗ ಕಾರು ನಿಲ್ಲಿಸಿ ರಾಗ ಸಂಯೋಜನೆಯ ಕ್ಯಾಸೆಟ್ಟನ್ನು ಕಾರಿನಲ್ಲಿ ಕೂತೇ ತನ್ಮಯತೆಯಿಂದ ಒಮ್ಮೆ ಕೇಳಿ ದಾಖಲಿಸಿಕೊಳ್ಳುತ್ತಾರೆ. ನಂತರ ನಿರ್ಮಾಪಕರ ರಾಯಭಾರಿಗೆ 'ನಾನು ರಾಗವನ್ನು ಮನಸ್ಸಲ್ಲಿ ರೆಕಾರ್ಡ್ ಮಾಡಿಕೊಂಡಿದ್ದೀನಯ್ಯ. ನೀನು ಮತ್ತೆ ನಾಳೆ "ಇವತ್ತು ಬಂದ ಹಾಗೆಯೇ" ಬಂದುಬಿಡು. ಹಾಡು ಬರೆದು ಕೊಟ್ಟುಬಿಡುತ್ತೇನೆ' ಎನ್ನುತ್ತಾರಂತೆ. ಈ ಮದ್ರಾಸ್-ಮಹಾಬಲಿಪುರಂ ಯಾತ್ರೆ ಒಂದಿನಿತೂ ವ್ಯತ್ಯಾಸವಿಲ್ಲದಂತೆ ಅದೆಷ್ಟೋ ಬಾರಿ ಪುನರಾವರ್ತನೆಯಾದ ನಂತರ, ಕಾವು ಪಡೆದ ಕವಿ ಹೃದಯ 'ಮನಸು ಗೀತೆ'ಯೊಂದನ್ನು ಹೆರುತ್ತದೆ. ಅದನ್ನು ಆವಾಹಿಸಿಕೊಳ್ಳುವ ಪ್ರತೀ ಚಿತ್ರಪ್ರೇಮಿಯ ಹೃದಯವೂ ನಂತರ ಎಷ್ಟು ಅಳುತ್ತದೆಂದರೆ, ಅದುವರೆಗೂ ಅತ್ತ ನಿರ್ಮಾಪಕ ತಾನು ಅತ್ತದ್ದನ್ನೇ ಮರೆತು ನಗುವಷ್ಟು! ಇದು ಆತ್ರೇಯ ವರಸೆ!

ದಕ್ಷಿಣಾಮೂರ್ತಿಯವರು ಇಂತಹವೆಷ್ಟೋ ಪ್ರಸಂಗಗಳನ್ನು ಹೇಳಿದರಾದರೂ ನಾನಿಲ್ಲಿ ಕೇವಲ ಒಂದೆರಡನ್ನು ಮಾತ್ರ ದಾಖಲಿಸಲು ಸಾಧ್ಯವಾಗಿದೆ. ಇದರ ಜತೆಗೆ ವಿಜಯಭಾಸ್ಕರ್‌ರವರು ಕೂಡ ಅವರದೇ ಶೈಲಿಯ ತಣ್ಣಗಿನ ಹಾಸ್ಯ ಲೇಪನದೊಂದಿಗೆ ಮದ್ರಾಸಿ ಹಾಸ್ಯ ಪ್ರಸಂಗಗಳನ್ನು ನಮ್ಮ ವಿರಾಮದ ವೇಳೆಯಲ್ಲಿ ವಿವರಿಸುತ್ತಿದ್ದರು.


ನಾವು 'ನೀಲಾ' ಚಿತ್ರಕ್ಕೆ ಹಾಡುಗಳನ್ನು ಬರೆವ ಸಂದರ್ಭದಲ್ಲೇ ನಮ್ಮ ಪಕ್ಕದ ರೂಮಿನಲ್ಲಿ ಕೃಪಾಕರ್ ಸೇನಾನಿಯವರು ತಮ್ಮದೊಂದು ಸಾಕ್ಷ್ಯ ಚಿತ್ರದ ಎಡಿಟಿಂಗ್‌ಗೆಂದು ಬಂದು ಉಳಿದುಕೊಂಡಿದ್ದರು. ಅವರ ಸ್ನೇಹಿತರು ಹಾಡಿದ ನಾಟಕದ ಹಾಡುಗಳು ಹಾಗೂ 'ಸಂಕ್ರಾಂತಿ' ಧಾರಾವಾಹಿಗೆ ಕೆಲಸ ಮಾಡಲೆಂದು ಬಂದಿದ್ದ ಲಂಕೇಶ್ ಪತ್ರಿಕೆಯ 'ಬಯಲು ಸೀಮೆ ಕಟ್ಟೆ ಪುರಾಣ' ಖ್ಯಾತಿಯ ಬಿ. ಚಂದ್ರೇಗೌಡರು ಹಾಡಿದ ಜಯದೇವನ ಗೀತಗೋವಿಂದದ ಹಾಡುಗಳು ನನ್ನ ಜೀವ ಮೂಲವನ್ನು ನಾದದ ಸಹಸ್ರಾರಕ್ಕೊಯ್ದಿದ್ದವು. ಹೀಗೆ ನಾದದ ಎಂದೆಂದಿನದೋ ನೆನಪುಗಳೊಂದಿಗೆ ತಳಕು ಹಾಕಿಕೊಂಡ 'ನೀಲಾ'ದ ವಿಶಿಷ್ಟಾನುಭವಗಳು ನನಗಾದದ್ದು ನಿಜಕ್ಕೂ ನನ್ನ ಮಟ್ಟಿಗೆ ಉಚಿತವಾಗಿ ಕೊಡಲ್ಪಟ್ಟ ಆನಂದಗಳಾಗಿದ್ದವು.

❑ ❖ ❑ ❖ ❑






ರಾವಣರಾಜ್ಯದ ಸಾಂಗ್ ರೆಕಾರ್ಡಿಂಗ್ ಸಂದರ್ಭ ಜೇಸುದಾಸ್‌ರೊಂದಿಗೆ



ರಾವಣರಾಜ್ಯ ರಿಕಾರ್ಡಿಂಗ್ ಸಮಯ




ಸಾಂಗ್ ರಿಕಾರ್ಡಿಂಗ್ ಹಂಸಲೇಖಾ ಜೊತೆ



ಪ್ರೇಮಾಗ್ನಿ ಸಾಂಗ್ ರಿಕಾರ್ಡಿಂಗ್






ಜನುಮದ ಜೋಡಿ ರಿಕಾರ್ಡಿಂಗ್ ಸಂದರ್ಭ ಚಿರಂಜೀವಿ, ಡಾ|| ರಾಜ್‌ರೊಂದಿಗೆ



ನೀಲಾ ಚಿತ್ರದ ಧ್ವನಿಮುದ್ರಣ ಸಂದರ್ಭ ಅಜಯಕುಮಾರ್, ವಿಜಯಭಾಸ್ಕರ್‌ರೊಡನೆ



ಮೈಸೂರು ಮಲ್ಲಿಗೆ ಚಿತ್ರೀಕರಣದ ಸಂದರ್ಭ ಕವಿ ಕೆ.ಎಸ್.ನ. ಜೊತೆ



ಸಿಂಗಾರೆವ್ವ ಸಾಂಗ್ ರಿಕಾರ್ಡಿಂಗ್ ಸಂದರ್ಭ ಪೂರ್ಣ ತಂಡದೊಡನೆ



# ತಲಕಾಡಿನಿಂದ ಸೆಲ್ಯೂಲಾಯ್ಡ್‌ವರೆಗೆ

## ನಡೆದ ಹಾದಿಯತ್ತ ಒಂದು ಹಿನ್ನೋಟ - ನಾಗಾಭರಣ

ನಿರೂಪಣೆ : ಬಾಬೂ ದಿನಕರ

### ರಕ್ತಗತವಾಗಿ ಬಂದ ಕಲೆ

ತಲಕಾಡು ಎಂದಾಕ್ಷಣ ಅತ್ತ ಹಳ್ಳಿಯೂ ಅಲ್ಲದ ಇತ್ತ ಪಟ್ಟಣವೂ ಇಲ್ಲದ ಪುಟ್ಟ ಊರೊಂದು ಮರಳಿನಿಂದ ಆವೃತವಾಗಿರುವ ಚಿತ್ರಣ ಕಣ್ಣ ಮುಂದೆ ಬರುತ್ತದೆ. ಆದರೆ ಇತಿಹಾಸದ ಪುಟಗಳಲ್ಲಿ ತಲಕಾಡು ಈಗಿನಂತಿರಲಿಲ್ಲ. ಕಾವೇರಿ ನದಿಯ ದಡದಲ್ಲಿರುವ ಆ ಊರು ಆಗ ಹಸಿರಿನಿಂದ ಸೊಂಪಾಗಿತ್ತು. ಅದನ್ನು ಗಂಗರಾಜರು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಅಂತಿದ್ದ ಊರು ಮರಳಿನಿಂದ ತುಂಬಿಕೊಂಡದ್ದಾದರೂ ಹೇಗೆ?

ಅದಕ್ಕೊಂದು ಕಥೆ ಇದೆ. ಮೈಸೂರು ಅರಸರು ತಲಕಾಡಿನ ಮೇಲೆ ದಂಡೆತ್ತಿ ಹೋದರು. ಅಲ್ಲಿಯ ರಾಜನನ್ನು ಕೊಂದು ಐಶ್ವರ್ಯವನ್ನೆಲ್ಲಾ ಕೊಳ್ಳೆ ಹೊಡೆದರು. ಆ ಸಮಯದಲ್ಲಿ ತಪ್ಪಿಸಿಕೊಂಡ ರಾಣಿ ಅಲಮೇಲುವನ್ನು ಅಟ್ಟಿಸಿಕೊಂಡು ಹೋದರು. ಶತ್ರುಗಳ ಕೈಗೆ ಸಿಕ್ಕದ ರಾಣಿ ಅಲಮೇಲು 'ಮಾಲಂಗಿ ಮಡುವಾಗಲಿ, ತಲಕಾಡು ಮರಳಾಗಲಿ, ಮೈಸೂರು ಅರಸರಿಗೆ ಮಕ್ಕಳಾಗದಿರಲಿ' ಎಂದು ಶಪಿಸಿ ನದಿಗೆ ಹಾರಿಕೊಂಡಳು. ಆ ನಂತರ ತಲಕಾಡು ಮರಳಾಗಿ ಬಿಟ್ಟಿತು.

ಇದನ್ನೆಲ್ಲಾ ನೆನಪು ಮಾಡಿಕೊಳ್ಳುತ್ತಿರುವುದಾದರೂ ಯಾಕೆಂದರೆ ನಾನು ಹುಟ್ಟಿದ್ದೇ ಆ ತಲಕಾಡಿನಲ್ಲಿ. ಅಲ್ಲಿಯ ಮರಳ ರಾಶಿಯ ಮೇಲೆ ಮಲಗಿ ಕನಸು ಕಾಣುತ್ತಲೇ ಬೆಳೆದವನು ನಾನು.

ನಿಮಗೊಂದು ಸಂಗತಿ ಗೊತ್ತಿದೆಯಲ್ಲವೆ? ತಲಕಾಡಿನಲ್ಲಿ ನಾಲ್ಕೈದು ದೇವಾಲಯಗಳು ಮರಳಿನಲ್ಲಿ ಹೂತುಹೋಗಿರುತ್ತವೆ. ಐದು ವರ್ಷಗಳಿಗೊಮ್ಮೆ ಅವು ಜನರ ದರ್ಶನಕ್ಕೆ ಲಭ್ಯವಾಗುತ್ತವೆ. ನಾನು ಸಣ್ಣವನಿದ್ದಾಗ ಮರಳ ದಿಣ್ಣೆಯ ಮೇಲೆ ಕುಳಿತು ಹೂತು ಹೋಗಿರಬಹುದಾದ ದೇವಾಲಯಗಳನ್ನು ಪತ್ತೆಹಚ್ಚಬೇಕೆಂದು ಪುಟ್ಟ ಕೈಗಳಿಂದ ಮರಳನ್ನು ಅಗೆದು ತೆಗೆಯುತ್ತಿದ್ದೆ. ಹಾಗೆ ಮರಳು ತೆಗೆಯುತ್ತಿದ್ದರೆ ಒಂದಲ್ಲ ಒಂದು ದಿನ ದೇವಾಲಯದ ಶಿಖರ ಸಿಕ್ಕಿಬಿಡುತ್ತದೆ ಎನ್ನುವ ಹಂಬಲ ನನ್ನದು. ಹಾಗೊಂದು ವೇಳೆ ನಾನೇ ದೇವಾಲಯವನ್ನು ಪತ್ತೆ ಹಚ್ಚಿಬಿಟ್ಟರೆ ಕೊಲಂಬಸ್‌ನ ಹಾಗೆ ನನಗೆ ಹೆಸರು ಬಂದುಬಿಡುತ್ತದೆ ಎನ್ನುವ ಹುಚ್ಚಿರಬೇಕು ಅದು.

ಹಾಗೆ ಮರಳಿನ ಮೇಲೆ ಮಲಗಿ ಗೇರುಹಣ್ಣು ತಿನ್ನುತ್ತ ಮೋಡಗಳನ್ನು ದಿಟ್ಟಿಸುತ್ತಿದ್ದೆ. ಆ ಮೋಡಗಳಲ್ಲಿಯೇ ಇದು ರಾಮ, ಇದು ರಾವಣ, ಇದು ಆನೆ, ಇದು ಕುದುರೆ, ಇಲ್ಲಿ ಯುದ್ಧ ನಡೆಯುತ್ತಿದೆ ಎಂದು ಕಲ್ಪಿಸಿಕೊಂಡು ಮೈಮರೆಯುತ್ತಿದ್ದೆ.

ಮನೆಯಲ್ಲಾದರೂ ಸುಮ್ಮನೇ ಇರುತ್ತಿದ್ದೆನೆ ಎಂದರೆ ಅದೂ ಇಲ್ಲ. ನನ್ನ ಅಜ್ಜಿಗೆ ಪುಸ್ತಕಗಳನ್ನು ಓದುವ ಹುಚ್ಚು. 'ಭಾರತ ಕಥಾ ಮಂಜರಿ', 'ಬೇತಾಳನ ಕಥೆಗಳು' ಮುಂತಾದ ಪುಸ್ತಕಗಳನ್ನು ಓದುತ್ತಿದ್ದರು. ಆಕೆ ಅಟ್ಟದ ಮೇಲೆ ಪುಸ್ತಕಗಳನ್ನು ಹುಡುಕಿ, ಕಣ್ಣಿಗೆ ಕನ್ನಡಕ ಹಾಕಿಕೊಂಡು ಪುಸ್ತಕ ಓದುವಾಗ ನಾನು ಪುಸ್ತಕವನ್ನು ಆಕೆಯ ಕೈನಿಂದ ಕಸಿದುಕೊಂಡು ಅದರಲ್ಲೇನಿದೆ ಎಂದು ಓದುತ್ತಿದ್ದೆ, ಇದೆಲ್ಲಾ ಆದದ್ದು ನನ್ನ ಪ್ರೈಮರಿ ಶಾಲೆಯ ದಿನಗಳಲ್ಲಿ.

ಆನಂತರ ನಾನು ಮಿಡ್ಲ್ ಸ್ಕೂಲ್‌ನಲ್ಲಿ ಓದುವಾಗ ನನ್ನ ಇಬ್ಬರೂ ತಾತಂದಿರ ಜೊತೆಗೆ ತಲಕಾಡಿನಿಂದ ಹೊರಗಿನ ಪ್ರಪಂಚಕ್ಕೆ ಬಂದು ಹೋಗುವ ಅವಕಾಶ ಸಿಕ್ಕಿತು. ನನ್ನ ತಾತಂದಿರಾದ ಮದ್ದಲೆ ಗಿರಿಗೌಡ ಮತ್ತು ತಿಪ್ಪೇಗೌಡ ಉತ್ತಮ ಕೃಷಿಕರು. ಜೊತೆಗೆ ಪ್ರಖ್ಯಾತ ಯಕ್ಷಗಾನ ಕಲಾವಿದರು. ಯಕ್ಷಗಾನ ಕಲಾವಿದರು ಎಂದರೆ ನಿಮಗೆ ಆಶ್ಚರ್ಯವಾದೀತು. ಯಕ್ಷಗಾನ ಎಂದಾಕ್ಷಣ ಎಲ್ಲರಿಗೂ ನೆನಪಾಗುವುದು ದಕ್ಷಿಣಕನ್ನಡದ ಯಕ್ಷಗಾನ. ಆ ಯಕ್ಷಗಾನವೆಲ್ಲಿ? ತಲಕಾಡಿನ ಈ ಗೌಡರೆಲ್ಲಿ? ಅನ್ನಿಸೀತು. ಆದರೆ ಆ ದಕ್ಷಿಣ ಕನ್ನಡದ ಯಕ್ಷಗಾನದಂತೆ ಇಲ್ಲಿ ಬಯಲುಸೀಮೆಯಲ್ಲೂ ಯಕ್ಷಗಾನವಿದೆ. ನನ್ನ ತಾತಂದಿರು ಈ ಯಕ್ಷಗಾನವನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿದ್ದರು. ತಾತ ಮದ್ದಲೆ ಗಿರಿಗೌಡರಂತೂ ಹೆಸರಿಗೆ ತಕ್ಕ ಹಾಗೆ ಅದ್ಭುತವಾಗಿ ಮದ್ದಲೆ ಬಾರಿಸುತ್ತಿದ್ದರು. ತಲಕಾಡು ಮಾಯಿಗೌಡರ ಯಕ್ಷಗಾನ ಮೇಳವಂತೂ ನನ್ನ ತಾತ ಇಲ್ಲದೆ ನಡೆಯುತ್ತಿರಲೇ ಇಲ್ಲ ಎಂಬಷ್ಟರ ಮಟ್ಟಿಗೆ ಅವರ ಪಾತ್ರವಿತ್ತು. ಆ ಇಬ್ಬರು ತಾತಂದಿರು ಯಕ್ಷಗಾನ ಪ್ರದರ್ಶನಕ್ಕೆಂದು ಬೇರೆ ಬೇರೆ ಸ್ಥಳಗಳಿಗೆ ಹೋದಾಗ ಅವರೊಟ್ಟಿಗೆ ನಾನೂ ಹೋಗುತ್ತಿದ್ದೆ. ಯಕ್ಷಗಾನದಲ್ಲಿ ಪರದೆ ಎಳೆಯುವುದು, ನೀರು ಕೊಡುವುದು ಮುಂತಾದ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಡುತ್ತಿದ್ದೆ. ಆಗೊಮ್ಮೆ ಅವರೊಟ್ಟಿಗೆ ಬೆಂಗಳೂರಿಗೂ ಬಂದಿದ್ದೆ. ಇಲ್ಲಿನ ಕಬ್ಬನ್ ಪಾರ್ಕಿನಲ್ಲಿ ಕಾರ್ಯಕ್ರಮ ನಡೆದಿತ್ತು. ಅಷ್ಟಾದರೂ ನಾನೆಂದೂ ಮೃದಂಗ, ತಬಲ ಹಿಡಿದವನಲ್ಲ. ಆದರೂ ಆ ತಾತನವರ ಜೀನ್ ನನ್ನಲ್ಲೂ ಇತ್ತೇನೋ, ನಾನು ರಿದಂ ಹಿಡಿಯುವುದನ್ನು ನೋಡಿ ಎಲ್ಲರೂ ಆಶ್ಚರ್ಯ ಪಡುತ್ತಿದ್ದರು.

ಇವೆಲ್ಲಾ ನನ್ನ ಹುಡುಕಾಟವನ್ನು ಪ್ರತಿನಿಧಿಸುತ್ತವೆ. ನಿಜಕ್ಕೂ ನನ್ನದು ಹುಡುಕಾಟದ ಸ್ವಭಾವವೇ. ಏನಾದರೂ ಒಂದು ವಸ್ತು ಸಿಕ್ಕಿದರೆ ಅದು ಏನು? ಎತ್ತ? ಎಂದು ಪೂರ್ಣ ತಿಳಿಯುವ ಮನಸ್ಸು ನನ್ನದು. ಬಾಲ್ಯದಲ್ಲಿ ಕಂಡ ಆ ಕನಸು, ಹುಡುಕಾಟಗಳು ಅಲ್ಲಿ ನನಗೇನನ್ನೂ ದೊರಕಿಸಿ ಕೊಡಲಿಲ್ಲ. ಅದೆಲ್ಲಾ ಸಿಕ್ಕಿದ್ದು ಇಲ್ಲಿ, ಈ ರಂಗಭೂಮಿ, ಬಣ್ಣದ ಭೂಮಿಯಲ್ಲಿ.

ಮತ್ತೆ ಮೃದಂಗ, ತಬಲ ಬಾರಿಸಲೂ ಬರದಿದ್ದ ನಾನು ಇಂದು ಈ ಮಟ್ಟಕ್ಕೆ ಬೆಳೆದುದಾರೂ ಹೇಗೆ ಎನ್ನುವ ಪ್ರಶ್ನೆ ಮೂಡುವುದು ಸಹಜ. ಇಂತಹದ್ದನ್ನು ನಾನು



ಬೆಂಗಳೂರಿನಲ್ಲಿ ಹೈಸ್ಕೂಲಿಗೆ ಸೇರಿದಾಗ ಊಹಿಸಿಯೂ ಇರಲಿಲ್ಲ. ಅದೊಂದು ಸಂದರ್ಭ ನನ್ನನ್ನು ರಂಗಭೂಮಿಯ ಬಾಗಿಲಲ್ಲಿ ನಿಲ್ಲಿಸಿತು.

ನಮ್ಮ ತಂದೆ ಶ್ರೀನಿವಾಸಯ್ಯ ತೋಟಗಾರಿಕೆ ಇಲಾಖೆಯಲ್ಲಿ ಉಪನಿರ್ದೇಶಕರಾಗಿದ್ದರು. ಮಂಡ್ಯ, ಬಳ್ಳಾರಿ ಮುಂತಾದೆಡೆಗಳನ್ನೆಲ್ಲಾ ಸುತ್ತಿ ಬೆಂಗಳೂರಿಗೆ ವರ್ಗವಾದಾಗ ಚಾಮರಾಜಪೇಟೆಯಲ್ಲಿ ಮನೆ ಮಾಡಿದರು. ಆ ವೇಳೆಗೆ ತಲಕಾಡಿನಲ್ಲಿ ಮಿಡ್ಲ್‌ಸ್ಕೂಲ್ ಮುಗಿಸಿದ್ದ ನಾನು ಬೆಂಗಳೂರಿನಲ್ಲಿಯೇ ಇದ್ದು ಕಾರ್ಪೋರೇಷನ್ ಹೈಸ್ಕೂಲಿಗೆ ಸೇರಿದೆ.

ಆ ದಿನಗಳಲ್ಲಿ ನನಗೆ ತುಂಬಾ ಪ್ರಿಯವಾದ ಆಟ ಫುಟ್ಬಾಲ್. ಹಾಗೆ ಕನ್ನಡ ಭಾಷೆ, ಭಾಷಣ ಮುಂತಾದವುಗಳಲ್ಲೂ ಆಸಕ್ತಿ ಇತ್ತು. ಕ್ಲಾಸ್ ಮುಗಿದ ಮೇಲೆ ಮಸೀದಿ ಗ್ರೌಂಡ್‌ನಲ್ಲಿ ಸ್ನೇಹಿತರೊಂದಿಗೆ ಫುಟ್ಬಾಲ್ ಆಡುತ್ತಿದ್ದೆ. ರಾಮಮಂದಿರಕ್ಕೆ ಹೋಗುತ್ತಿದ್ದೆ. ಹಾಗೇ ಕನ್ನಡ ಸಾಹಿತ್ಯ ಪರಿಷತ್ತಿಗೂ ಹೋಗುತ್ತಿದ್ದೆ. ಪರಿಷತ್ತಿನಲ್ಲಿ ನಿತ್ಯ ಏನಾದರೊಂದು ಕಾರ್ಯಕ್ರಮ ನಡೆಯುತ್ತಿತ್ತು. ಸಾಹಿತ್ಯ, ಭಾಷಣ, ನಾಟಕ ಹೀಗೆ ಅಲ್ಲಿ ಏನಾದರೂ ನಡೆಯಲಿ ನಾನು ಆಸಕ್ತಿಯಿಂದ ಅವನ್ನೆಲ್ಲಾ ನೋಡುತ್ತಿದ್ದೆ. ಆ ಅಭ್ಯಾಸವೇ ಒಂದು ದಿನ ನಾನೂ ನಾಟಕದಲ್ಲಿ ಅಭಿನಯಿಸುವ ಅವಕಾಶವನ್ನು ಕಲ್ಪಿಸಿಕೊಟ್ಟಿತು.

ಅದು 'ಟಿಪ್ಪೂ ಸುಲ್ತಾನ್' ನಾಟಕ. ಅದರಲ್ಲಿ ಟಿಪ್ಪು ಮಕ್ಕಳಾಗಿ ಅಭಿನಯಿಸಲು ಇಬ್ಬರು ಹುಡುಗರು ಬೇಕಿತ್ತು. ಒಂದು ಪಾತ್ರದಲ್ಲಿ ನನ್ನನ್ನೇ ನಿಲ್ಲಿಸಿದರು. ಅದೇನೂ ನನ್ನ ಅಭಿನಯವನ್ನು ಗುರುತಿಸುವಂತಹದ್ದೂ ಆಗಿರಲಿಲಲ್ಲ. ನೆನಪಿನಲ್ಲಿ ಉಳಿಯುವಂತಹದ್ದೂ ಆಗಿರಲಿಲ್ಲ. ಹಾಗಾಗಿ ಅದರ ಬಗೆಗೆ ಹೆಚ್ಚೇನೂ ನೆನಪಿಲ್ಲ. ಆದರೂ ನಾಟಕ ಎಂದು ಮೊದಲು ಅಭಿನಯಿಸಿದ್ದು ಆ ನಾಟಕ ಎನ್ನುವ ಮಾತಿಗೆ ಅದನ್ನು ಹೇಳಬೇಕಾಗುತ್ತದೆ.

ಮತ್ತೆ ನನ್ನ ರಂಗಭೂಮಿಯ ಅಧ್ಯಾಯ ಆರಂಭವಾದುದಾದರೂ ಎಲ್ಲಿಂದ? ಅದನ್ನು ಹೇಳಿದರೆ ನಕ್ಕು ಬಿಡುತ್ತೀರಿ, ನಿಜವಾಗಿಯೂ! ಎಂದು ಆಶ್ಚರ್ಯಪಡುತ್ತೀರಿ. ಯಾಕೆಂದರೆ ದಿನಕ್ಕೆ ಎರಡೂವರೆ ರೂಪಾಯಿ ಸ್ಟೈಫಂಡ್ ಸಿಗುತ್ತದೆ ಎನ್ನುವ ಆಸೆಯಿಂದ ನಾಟಕ ತರಬೇತಿಗೆ ಅರ್ಜಿ ಗುಜರಾಯಿಸಿದವನು ನಾನು!

## ರಂಗ ದಿಗ್ಗಜರ ಒಡನಾಟ

ನನ್ನ ಬದುಕಿನ ಪ್ರಮುಖ ಘಟ್ಟಗಳು ಆರಂಭವಾದುದು ನಾನು ಎಸ್.ಎಸ್.ಎಲ್.ಸಿ. ಪಾಸು ಮಾಡಿದ ಮೇಲೆ. ಆನಂತರ ನಾನು ಪಿ.ಯು.ಸಿ. ಸೇರಬೇಕಿತ್ತು. ಆದರೆ ನಾನು ಎಸ್.ಎಸ್.ಎಲ್.ಸಿ. ಪಾಸ್ ಮಾಡಿದ ವರ್ಷ ಹೇಗಿತ್ತು ಅಂದರೆ...

ಅದುವರೆವಿಗೂ ಎಸ್.ಎಸ್.ಎಲ್.ಸಿ. ಮುಗಿದ ಮೇಲೆ ಒಂದು ವರ್ಷ ಪಿ.ಯು.ಸಿ. ಓದುವುದಿತ್ತು. ಆದರೆ ನಾನು ಎಸ್.ಎಸ್.ಎಲ್.ಸಿ. ಮುಗಿಸಿದ ವರ್ಷ (ಬಹುಶಃ 1968-69 ಇರಬೇಕು) ದಿಂದ ಒಂದು ವರ್ಷದ ಪಿ.ಯು.ಸಿ. ತೆಗೆದು ಎರಡು ವರ್ಷದ ಪಿ.ಯು.ಸಿ. ಕೋರ್ಸ್ ಆರಂಭಿಸಿದ್ದರು. ಆದರೆ ಎಸ್.ಎಸ್.ಎಲ್.ಸಿ. ಪಾಸಾದವರಿಗೆ ಹದಿನಾರು ವರ್ಷ ತುಂಬಿದ್ದರೆ ಮಾತ್ರವೇ ಪಿ.ಯು.ಸಿ. ಸೇರಿಸಿಕೊಳ್ಳುತ್ತಿದ್ದರು. ಹಾಗೊಂದು ವೇಳೆ ಹದಿನಾರು

ವರ್ಷ ಆಗಿಲ್ಲವೆಂದರೆ ಅಂತಹವರನ್ನು ಒಂದು ತಂಡ ಮಾಡಿ ಅದನ್ನು ಅಂಡರ್ ಏಜ್ ಗ್ರೂಪ್ ಎಂದು ಕರೆದು ಅವರಿಗೆ ಪ್ರತ್ಯೇಕವಾಗಿ ಕ್ಲಾಸ್ ಮಾಡಿ ಹದಿನಾರು ವರ್ಷ ತುಂಬಿದ ಮೇಲೆ ರೆಗ್ಯುಲರ್ ಕಾಲೇಜಿಗೆ ಹಾಕುತ್ತಿದ್ದರು. ಆ ನಿಯಮದಂತೆ ನನಗೆ ಹದಿನಾರು ವರ್ಷ ತುಂಬಿರಲೇ ಇಲ್ಲ. ಹಾಗಾಗಿ ಅಂಡರ್ ಏಜ್ ಗ್ರೂಪ್‌ನಲ್ಲಿ ನನ್ನನ್ನು ಸೇರಿಸಿ ಸೆಂಟ್ರಲ್ ಕಾಲೇಜಿಗೆ ಹಾಕಿದರು.

ಆಗ ನನ್ನದೊಂದು ಸೈಕಲ್ ಇತ್ತು. ಕಾಲೇಜು ಮುಗಿದ ಮೇಲೆ ಮನೆಗೆ ಹೋಗುವ ಮೊದಲು ಟೌನ್‌ಹಾಲ್, ರವೀಂದ್ರ ಕಲಾಕ್ಷೇತ್ರ, ಕನ್ನಡ ಸಾಹಿತ್ಯ ಪರಿಷತ್ತನ್ನೆಲ್ಲಾ ನೋಡಿಕೊಂಡು ಹೋಗುತ್ತಿದ್ದೆ. ರವೀಂದ್ರ ಕಲಾಕ್ಷೇತ್ರದಲ್ಲಿ ನಿತ್ಯ ಏನಾದರೊಂದು ಕಾರ್ಯಕ್ರಮ ಇದ್ದೇ ಇರುತ್ತಿತ್ತು. ಅದನ್ನು ನೋಡುತ್ತಿದ್ದೆ. ಒಂದು ವೇಳೆ ಒಳಕ್ಕೆ ಬಿಡದಿದ್ದರೆ ಹೊರಗೇ ನಿಂತು ಪೋಸ್ಟರ್ ನೋಡಿಯಾದರೂ ಬರುತ್ತಿದ್ದೆ. ಹಾಗಿದ್ದಾಗ ಒಂದು ದಿನ ರವೀಂದ್ರ ಕಲಾಕ್ಷೇತ್ರಕ್ಕೆ ಹೋಗಿದ್ದವನು ಅಲ್ಲಿ ಹಾಕಿದ್ದ ಒಂದು ನೋಟೀಸ್ ನೋಡಿದೆ.

ಅದು ಸಂಗೀತ-ನಾಟಕ ಅಕಾಡೆಮಿಯ ನೋಟೀಸ್. ಅದುವರೆಗೆ ಕೇವಲ ಶಿಕ್ಷಕರಿಗಷ್ಟೇ ನೀಡಲಾಗುತ್ತಿದ್ದ ನಾಟಕ ತರಬೇತಿಯನ್ನು ಆಗಿನ ಅಕಾಡೆಮಿ ಅಧ್ಯಕ್ಷರಾಗಿದ್ದ ಆದ್ಯ ರಂಗಾಚಾರ್ (ಶ್ರೀರಂಗ) ಆ ವರ್ಷದಿಂದ ಆಸಕ್ತಿ ಇರುವ ಎಲ್ಲರಿಗೂ ನೀಡಲು ಆರಂಭಿಸಿದ್ದರು. ಅದು ಮೂರು ತಿಂಗಳ ಡ್ರಾಮಾ ಟ್ರೈನಿಂಗ್ ಕೋರ್ಸ್. ಆಯ್ಕೆಯಾದ ಅಭ್ಯರ್ಥಿಗಳಿಗೆ ದಿನಕ್ಕೆ 2.50 ರೂ. ಸ್ಟೈಫಂಡ್ ನೀಡುವುದಾಗಿ ತಿಳಿಸಿದ್ದರು. ನನಗೆ ಅಭಿನಯದಲ್ಲಿ ಆಸಕ್ತಿಯೇ ಇರಲಿಲ್ಲ. ಆದರೆ ಸ್ಟೈಫಂಡ್ ಕೊಡುತ್ತಾರಲ್ಲಾ ಎನ್ನುವ ಒಂದೇ ಆಸೆಯಿಂದ ಕೋರ್ಸಿಗೆ ಅರ್ಜಿ ಹಾಕಿದೆ. ಅರ್ಜಿ ಹಾಕಿದ ಮೇಲೆ ಸಂದರ್ಶನಕ್ಕೂ ಕರೆ ಬಂದಿತು. ಸಂದರ್ಶನದಲ್ಲಿ ಏನೇನು ಕೇಳಬಹುದು ಎನ್ನುವ ಐಡಿಯಾನೇ ಇರಲಿಲ್ಲ. ಆದರೂ ಅದರ ಬಗೆಗೆ ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ. ಸೀಟು ಸಿಕ್ಕಿದರೆ ಸ್ಟೈಫಂಡ್ ಸಿಗುತ್ತದೆ ಎನ್ನುವ ಆಸೆಯನ್ನೇ ತುಂಬಿಕೊಂಡು ಸಂದರ್ಶನಕ್ಕೆ ಹಾಜರಾದೆ.

ಸಂದರ್ಶನ ಕೊಠಡಿಯಲ್ಲಿ ಸ್ವತಃ ರಂಗಾಚಾರ್ ಅವರೇ ಇದ್ದರು. ಅವರೊಂದಿಗೆ ಬಿ.ವಿ. ಕಾರಂತ್ ಇದ್ದರು. ಆ ದಿಗ್ಗಜಗಳ ಮುಂದೆ ನಿಲ್ಲುವುದು ಹೇಗೆ ಎಂದು ಮನಸ್ಸು ಒಂದು ಕ್ಷಣ ಅಳುಕಿತು. ಆದರೂ ಅದನ್ನು ತೋರಿಸಿಕೊಳ್ಳಲಿಲ್ಲ. ಅವರ ಎದುರು ಧೈರ್ಯದಿಂದಲೇ ನಿಂತೆ.

ಅವರೊಂದು ಪ್ರಶ್ನೆ ಕೇಳಿದರು- "ನೀನು ಯಾಕೆ ರಂಗಭೂಮಿ ತರಬೇತಿಗೆ ಬರುತ್ತೀಯಾ?" ಎಂದು.

ನಾನು ಏನೆಂದು ಉತ್ತರಿಸಲಿ? ನನಗೆ ಅಭಿನಯದಲ್ಲಿ ಆಸಕ್ತಿಯೇ ಇರಲಿಲ್ಲ. ಅರ್ಜಿ ಹಾಕಿದ್ದುದೇ ದಿನಕ್ಕೆ 2.50 ರೂ. ಸ್ಟೈಫಂಡ್ ಸಿಗುತ್ತದೆ ಎನ್ನುವ ಆಸೆಯಿಂದ. ಹಾಗೆಂದು ಅದನ್ನೇ ಹೇಳಲು ಆದೀತೆ? ಅಭಿನಯದಲ್ಲಿ ಆಸಕ್ತಿ ಇದೆ ಎಂದು ಹೇಳೋಣ ಎಂದರೆ ಅದಕ್ಕೂ ಮನಸ್ಸಾಗಲಿಲ್ಲ. ಹೇಗೂ ಹಿಂದೆಲ್ಲಾ ತಾತನವರೊಂದಿಗೆ ಯಕ್ಷಗಾನ ಪ್ರದರ್ಶನಗಳಿಗೆ



ಹೋಗಿ ಪರದೆ ಎಳೆಯುವುದು, ಇನ್ನಿತರ ಸಣ್ಣಪುಟ್ಟ ಕೆಲಸಗಳನ್ನು ಆಸಕ್ತಿಯಿಂದ ಮಾಡುತ್ತಿದ್ದೆನಲ್ಲವೇ? ಅದನ್ನೇ ಹೇಳೋಣವೆಂದುಕೊಂಡು "ನನಗೆ ಇಲ್ಲಿ ಪರದೆ ಕಟ್ಟೋದು ಇಷ್ಟ. ಲೈಟಿಂಗ್ ಮಾಡೋದು ಇಷ್ಟ" ಎಂದೆ.

ನಿಜಕ್ಕೂ ನನಗೆ ಆ ಕೆಲಸಗಳಲ್ಲಿ ಇಷ್ಟವಿತ್ತು. ಮುಂದೆ ಕಾರಂತರು ಎಷ್ಟೋ ಸಾರಿ ನನ್ನನ್ನು 'ಬ್ಯಾಕ್ ಸ್ಟೇಜ್' ಎಂದೇ ಕರೆಯುತ್ತಿದ್ದುಂಟು. ಅದು ಒಂದು ರೀತಿಯಲ್ಲಿ ನನಗೆ ಒಳ್ಳೆಯದೇ ಆಯಿತು. ಯಾವಾಗ ನನಗೆ ಬ್ಯಾಕ್ ಸ್ಟೇಜಿನ ಎಲ್ಲ ಕೆಲಸಗಳೂ ತಿಳಿಯುತ್ತ ಹೋದವೋ, ಇಂದು ನಾನೊಬ್ಬ ಟೆಕ್ನಿಷಿಯನ್ ಆಗಿ ನಿಲ್ಲಲು ಅದೇ ಫೌಂಡೇಷನ್ ಆಯಿತು.

ಇಂಟರ್‌ವ್ಯೂನಲ್ಲಿ ನನ್ನ ಉತ್ತರ ಕೇಳಿ ಅವರಿಗೆ ಆಶ್ಚರ್ಯವಾಗಿತ್ತು. ಅವರೆಗೆ ಯಾರೂ ನನ್ನ ಹಾಗೆ ಉತ್ತರಿಸಿರಲಿಲ್ಲ. ಎಲ್ಲರೂ ತಮಗೆ ಅಭಿನಯದಲ್ಲಿ ಆಸಕ್ತಿ ಎಂದೇ ಹೇಳುತ್ತಿದ್ದರು. ಹಾಗಾಗಿ ನನ್ನ ಉತ್ತರದಿಂದ ಅವರಿಗೆ ಸಂತೋಷವೂ ಆಗಿತ್ತು. ಕೋರ್ಸಿಗೆ ನಾನು ಸೆಲೆಕ್ಟ್ ಆದೆ. ಟ್ರೈನಿಂಗ್ ನಿತ್ಯ ಎರಡು ಅವಧಿಯಲ್ಲಿ ಆಗುತ್ತಿತ್ತು; ಬೆಳಿಗ್ಗೆ 8 ರಿಂದ 11 ರವರೆಗೆ, ಸಂಜೆ 4 ರಿಂದ 10 ರವರೆಗೆ. ಆ ಮಧ್ಯೆ ಕಾಲೇಜಿಗೂ ಹೋಗುತ್ತಿದ್ದೆ.

ತರಬೇತಿ ತಂಡದಲ್ಲಿ ನನ್ನೊಂದಿಗೆ ಬಿ. ಜಯಶ್ರೀ, ಮೇಕಪ್ ರಾಮಕೃಷ್ಣ ಈಗ ಬೆಂಗಳೂರು ದೂರದರ್ಶನದಲ್ಲಿರುವ ಎಂ.ಕೆ. ಮೋಹನ್‌ರಾಯ್, ಗೌಹಾತಿ ದೂರದರ್ಶನದಲ್ಲಿರುವ ಸೂರಿ ಅವರುಗಳಿದ್ದರು. ಜೆ. ಲೋಕೇಶ್, ಚಂದ್ರಕುಮಾರ್ ಸಿಂಗ್ ಮುಂತಾದವರೂ ಇದ್ದರು.

ಆ ಮೂರು ತಿಂಗಳ ಟ್ರೈನಿಂಗ್ ಕೋರ್ಸ್‌ನ ಅನುಭವವಿದೆಯಲ್ಲಾ, ಸೂಪರ್! ಆ ಪೀರಿಯಡ್‌ನಲ್ಲಿ ಎಂತೆಂತಹ ಒಳ್ಳೆಯ ಟೀಚರ್ಸ್ ಇದ್ದರು ಅಂದರೆ ಸ್ವತಃ ಆದ್ಯ ರಂಗಾಚಾರ್ ಅವರೇ ಒಳ್ಳೆಯ ಟೀಚರ್ ಆಗಿದ್ದರು. ಅವರೊಂದಿಗೆ ಬಿ.ವಿ. ಕಾರಂತ್, ಪ್ರೇಮಾ ಕಾರಂತ್, ಎನ್.ಎಸ್. ವೆಂಕಟರಾಮ್, ವಿ. ರಾಮಮೂರ್ತಿ, ವಿ.ಎಂ. ಷಾ, ಸಾಯಿ ಪರಾಂಜಪೆ ಇವರೆಲ್ಲರ ಸಮ್ಮಿಲನ ಅಲ್ಲಾಗಿತ್ತು.

ತಮಾಷೆ ಅಂದರೆ ನಾನು ರಂಗಭೂಮಿಯ ತರಬೇತಿಗೆ ಹೋಗಿದ್ದುದು ಸ್ಟೈಫಂಡ್ ಸಿಗುತ್ತದೆ ಎನ್ನುವ ಒಂದೇ ಕಾರಣಕ್ಕಾಗಿ. ಆದರೆ ಆದದ್ದೇ ಬೇರೆ. ನನ್ನೊಳಗೆ ನಾಟಕದ ಜೀನ್ಸ್ ಇತ್ತಲ್ಲ, ಅದು ತನಗೆ ತಾನೇ ನನ್ನನ್ನು ನಾಟಕದೊಳಗೆ ತೊಡಗಿಕೊಳ್ಳುವಂತೆ ಮಾಡಿತ್ತು. ತರಬೇತಿಯಲ್ಲಿ ನಾಟಕದ ಎಲ್ಲ ಪರಿಭಾಷೆಗಳನ್ನೂ ನಾನು ಅರ್ಥ ಮಾಡಿಕೊಂಡಿದ್ದೆ. ನಾಟಕ ಅಂದರೆ ಏನೋ ಅಲ್ಲ. ಅದರಲ್ಲಿ ಕಳಕಳಿಯ ಸೀರಿಯಸ್ ಅಟೆಂಪ್ಟ್ ಇದೆ ಎನ್ನುವ ಅರಿವಾಯಿತು. ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಪಿ. ಲಂಕೇಶ್ ಮುಂತಾದ ಹಿರಿಯರ ಒಡನಾಟ ನನಗೆ ಸಿಕ್ಕಿತು. ಮೂರು ತಿಂಗಳು ದಾಟಿ ನಾನು ಹೊರಗೆ ಬಂದಾಗ ಪೂರ್ಣವಾಗಿ ಥಿಯೇಟರ್ ಮ್ಯಾನ್ ಆಗಿಬಿಟ್ಟಿದ್ದೆ. ಸ್ಟೈಫಂಡ್ ಆಸೆ ಯಾವಾಗಲೋ ಇಂಗಿಹೋಗಿತ್ತು. ನಾನು ಮಾತ್ರವೇ ಅಲ್ಲ, ಆ ಪೀರಿಯಡ್‌ನಲ್ಲಿ ತರಬೇತಿ ಪಡೆದಿದ್ದ ನಾವು ಸುಮಾರು ಹದಿನೈದು ಮಂದಿ ಆ ಸ್ಟೈಫಂಡ್ ಮೊತ್ತವನ್ನು ಥಿಯೇಟರ್‌ಗೇ ಸಮರ್ಪಿಸಿಬಿಟ್ಟೆವು.

ನನಗಿನ್ನೂ ಚೆನ್ನಾಗಿ ನೆನಪಿದೆ, ಡ್ರಾಮಾ ಟ್ರೈನಿಂಗ್ ಕೋರ್ಸ್ ಮುಗಿಸಿದ ನಮಗೆ ಗುಬ್ಬಿವೀರಣ್ಣನವರು ಸರ್ಟಿಫಿಕೇಟ್ ಕೊಟ್ಟಿದ್ದರು. ಅವರ ಮೊಮ್ಮಗಳೇ ಆದ ಬಿ. ಜಯಶ್ರೀ ಮತ್ತು ನಾನು ಅವರ ಕೈನಿಂದಲೇ ಸರ್ಟಿಫಿಕೇಟ್ ಪಡೆದುಕೊಂಡಿದ್ದೆವು. ಹಾಗೆ ಹೊರಬಂದ ದಿನಗಳಿವೆಯಲ್ಲಾ. ಅವು ನಿಜಕ್ಕೂ ನಮ್ಮನ್ನು ನಾವು ರೂಪಿಸಿಕೊಂಡ ದಿನಗಳು ಎನ್ನಬಹುದು. ನಾವು ಮಾಡಿದ ಮೊದಲ ಕೆಲಸವೆಂದರೆ 'ಶತಶೈಲೂಷರು' (ಆ್ಯಕ್ಟರ್ಸ್ ಆಫ್ ದಿ ಸೆಂಚುರಿ) ಎನ್ನುವ ತಂಡವೊಂದನ್ನು ಕಟ್ಟಿಕೊಂಡೆವು. ಅದು ನಮ್ಮ ಮೊದಲ ತಂಡ. ಆ ನಂತರದಲ್ಲಿ ಹುಟ್ಟಿಕೊಂಡವು 'ರಂಗಸಂಪದ', 'ಬೆನಕ' ನಾಟಕ ತಂಡಗಳು.

ಈ ಮಧ್ಯೆ ಅಂಡರ್ ಏಜ್ ಗ್ರೂಪ್‌ನಲ್ಲಿ ಸೆಂಟ್ರಲ್ ಕಾಲೇಜಿನಲ್ಲಿದ್ದ ನನ್ನನ್ನು ನ್ಯಾಷನಲ್ ಕಾಲೇಜಿಗೆ ಹಾಕಿದರು. ಅಲ್ಲಿಂದ ಒಕ್ಕಲಿಗರ ಸಂಘ ಕಾಲೇಜಿಗೆ ಹಾಕಿದರು. ಅಲ್ಲಿಯೇ ನಾನು ಪಿ.ಯು.ಸಿ ಮುಗಿಸಿದ್ದು. ನಂತರ ಬಿ.ಎಸ್ಸಿ. ಓದಲು ಜಗದ್ಗುರು ರೇಣುಕಾಚಾರ್ಯ ಕಾಲೇಜಿಗೆ ಬಂದೆ.

## 'ಗ್ರಹಣಕ್ಕೆ' ನಿರ್ದೇಶಕನಾದೆ

ನಾನು ಕಾಲೇಜು ವಿದ್ಯಾಭ್ಯಾಸವನ್ನು ಉದಾಸೀನ ಮಾಡುವಂತಿರಲಿಲ್ಲ. ಯಾಕೆಂದರೆ ನನ್ನ ವಿದ್ಯಾಭ್ಯಾಸದಲ್ಲಿ ನನ್ನ ತಂದೆ ತುಂಬಾ ಭರವಸೆ ಇಟ್ಟಿದ್ದರೂ. ಅದಕ್ಕೂ ಒಂದು ಕಾರಣವಿತ್ತು. ಆಗ ತಲಕಾಡಿನಲ್ಲಿ ಡಾಕ್ಟರ್, ಇಂಜಿನಿಯರ್, ಡಬ್ಬಲ್ ಡಿಗ್ರಿ ಎಂದು ಹೆಚ್ಚು ಓದಿದವರು ತುಂಬಾ ಜನ ಇರಲಿಲ್ಲ. ಆರೇಳು ಜನ ಇದ್ದರೇನೋ ಅಷ್ಟೆ. ಆ ಪೈಕಿ ನಮ್ಮ ತಂದೆಯೂ ಒಬ್ಬರು ಎನ್ನಿ. ಹಾಗಾಗಿ ನಾವೂ ಚೆನ್ನಾಗಿ ಓದಬೇಕು ಎಂಬುದು ಅವರ ಮಹತ್ವಾಕಾಂಕ್ಷೆಯಾಗಿತ್ತು. ಅವರ ಮುಂದೆ ನಾಟಕ-ಸಿನಿಮಾ ಎನ್ನುವಂತಿರಲಿಲ್ಲ ನಾವು. ಅದರಿಂದ ನಾವು ಹಾಳಾಗುತ್ತೀವಿ ಎನ್ನುವ ಭಯವಿರದಿದ್ದರೂ ನಮ್ಮ ಎಜುಕೇಷನ್ ಡೈವರ್ಟ್ ಆಗುತ್ತದೆ ಎನ್ನುವ ಅನಿಸಿಕೆ ಅವರದ್ದು.

ಹಾಗಿದ್ದೂ ನಾನು ಮೂರು ತಿಂಗಳ ಡ್ರಾಮಾ ಟ್ರೈನಿಂಗ್ ಕೋರ್ಸ್ ಮುಗಿಸಿ ಹೊರಬಂದ ಮೇಲೆ ಆ ಕಡೆ ನಮ್ಮ ಮನೆ, ಈ ಕಡೆ ಕಾಲೇಜು ಬಿಟ್ಟರೆ ಕಲಾಕ್ಷೇತ್ರದಲ್ಲಿಯೇ ಹೆಚ್ಚಿನ ಸಮಯ ಕಳೆಯತೊಡಗಿದೆ. ಬ್ಯಾಕ್‌ಸ್ಟೇಜಿನ ಕೆಲಸಗಳು ನನಗೆ ತುಂಬಾ ಪ್ರಿಯವಾಗಿದ್ದವು. ಆ ದಿನಗಳಲ್ಲಿ ಬೆಂಗಳೂರಿಗೆ ಆಗಾಗ್ಗೆ ರಷ್ಯನ್ ಬ್ಯಾಲೆ ತಂಡ ಬರುತ್ತಿತ್ತು. ಒಂದು ವಾರ ಅದರ ಪ್ರದರ್ಶನ ನಡೆಯುತ್ತಿತ್ತು. ಆ ಪ್ರದರ್ಶನದ ಪೂರ್ಣ ಜವಾಬ್ದಾರಿಯನ್ನು ವಾರ್ತಾ ಇಲಾಖೆಯ ಆರ್. ನಾಗೇಶ್ ವಹಿಸಿಕೊಳ್ಳುತ್ತಿದ್ದರು. (ಈಗವರು ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದಾರೆ). ಆತ ತುಂಬಾ ಕೋಪಿಷ್ಟ. ಎಂದಿಷ್ಟು ತಪ್ಪಾದರೂ ಕೆನ್ನೆಗೆ ಹೊಡೆದುಬಿಡುತ್ತಿದ್ದರು. ಅಂತಹವರ ಕೈಕೆಳಗೆ ನಾನು ಮತ್ತು ನನ್ನ ಕೆಲ ಮಿತ್ರರು ಬ್ಯಾಕ್‌ಸ್ಟೇಜ್ ಕೆಲಸಗಳನ್ನು ಮಾಡುತ್ತಿದ್ದೆವು. ಆತ ಕೋಪಿಷ್ಟ ಎನ್ನುವುದಕ್ಕಿಂತ ನಮಗೇ ಆಸಕ್ತಿಯಿದ್ದು ಕೆಲಸ ಮಾಡುತ್ತಿದ್ದುದರಿಂದ ಲೈಟಿಂಗ್ ಅಂದರೆ ಏನು, ಸೆಟ್ ಡಿಸೈನ್ ಅಂದರೆ ಏನು, ಸೆಟ್ ಎರೆಕ್ಟ್ ಹೇಗಾಗುತ್ತದೆ, ಎಂತಹ ನಾಟಕಕ್ಕೆ ಯಾವ ರೀತಿಯ ಸೆಟ್ ಹಾಕಬೇಕು ಎಂಬುದೆಲ್ಲಾ ಪ್ರಾಕ್ಟಿಕಲ್ ಆಗಿ ಗೊತ್ತಾಯಿತು.



ಹಾಗೆ ನೋಡಿದರೆ ಅವು ರಂಗಚಳವಳಿಯ ವರ್ಷಗಳು ಎನ್ನಬಹುದು. ಒಂದೆಡೆ ಬಿ.ವಿ. ಕಾರಂತರ ರಂಗಭೂಮಿ ಚಟುವಟಿಕೆಗಳು ಜೋರಾಗಿದ್ದವು. ಇನ್ನೊಂದೆಡೆ ನಮ್ಮ 'ಶತಶೈಲೂಷರು' ತಂಡ ಚುರುಕಾಗಿತ್ತು. ಅದೇ ಸಮಯಕ್ಕೆ 'ರಂಗ ಸಂಪದ', 'ನಟರಂಗ'ದಂತಹ ತಂಡಗಳು ಹುಟ್ಟಿಕೊಂಡಿದ್ದವು. ಆದರೆ ನಾವು ಯಾವ ತಂಡ, ಯಾವ ನಾಟಕ ಎಂದು ಚಿಂತಿಸದೆ ಎಲ್ಲದರಲ್ಲೂ ಬ್ಯಾಕ್‌ಸ್ಟೇಜ್ ಕೆಲಸಗಳನ್ನು ಮಾಡುತ್ತಿದ್ದೆವು. ಆ ಕೆಲಸಗಳನ್ನು 'ಕತ್ತೆ ಕೆಲಸ' ಎಂದು ಯಾರೂ ಇಷ್ಟಪಡದಿದ್ದಾಗ ನಾವು ಆಸಕ್ತಿಯಿಂದ ಮಾಡುತ್ತಿದ್ದುದರಿಂದ ನಮಗೆ ತುಂಬಾ ಬೇಡಿಕೆ ಇರುತ್ತಿತ್ತು.

ಕಾರಂತರ ರಂಗಮಂದಿರ ಚಟುವಟಿಕೆಗಳಲ್ಲಿ 'ಸ್ವರ್ಗಕ್ಕೆ ಮೂರೇ ಬಾಗಿಲು', 'ಸಂಧ್ಯಾಕಾಲ'ದಂತಹ ದೊಡ್ಡ ನಾಟಕಗಳು ಬಂದಿದ್ದವು. ಹೊಸ ಹೊಸ ನಾಟಕಗಳ ಆವಿಷ್ಕಾರವಾಗುತ್ತಿತ್ತು. ಕಾರಂತರು ಒಂದು ನಾಟಕಕ್ಕೆ ನನ್ನನ್ನೇ ಸ್ಟೇಜ್ ಮೇನೇಜರ್ ಮಾಡಿದರು. ಆವರೆಗೆ ರಂಗಭೂಮಿಯಲ್ಲಿ ಸ್ಟೇಜ್ ಮೇನೇಜರ್ ಎನ್ನುವ ಕಲ್ಪನೆಯೇ ಇರಲಿಲ್ಲ. ಆ ಕಲ್ಪನೆಯಲ್ಲಿ ನಾನೇ ಮೊದಲು ಆ ಜವಾಬ್ದಾರಿ ಹೊತ್ತದ್ದು. ಅದು ಸುಲಭದ ಕೆಲಸವಲ್ಲ. ಥಿಯೇಟರಿನಲ್ಲಿ ಕಸಗುಡಿಸುವುದರಿಂದ ಮೊದಲ್ಗೊಂಡು ನಾಟಕದ ಎಲ್ಲ ವ್ಯವಸ್ಥೆಗಳನ್ನೂ ನೋಡಿಕೊಳ್ಳಬೇಕಿತ್ತು. ಆಗ ಜೆರಾಕ್ಸ್ ಸೌಲಭ್ಯ ಇರದಿದ್ದುದರಿಂದ ನಾಟಕವನ್ನು ನಾನೇ ಕೈನಲ್ಲಿ ಬರೆದು ಐದಾರು ಪ್ರತಿ ಮಾಡಿ ಕೊಡುತ್ತಿದ್ದೆ. ಅಷ್ಟರಲ್ಲಿ ಇಡೀ ನಾಟಕ ನನಗೆ ಬಾಯಿಪಾಠವಾಗಿ ಬಿಡುತ್ತಿತ್ತು. ಅದರಿಂದ ನಾನೇ ನಟಿಸಬೇಕಾದ ಪರಿಸ್ಥಿತಿಯೂ ಬಂದುಬಿಟ್ಟಿತು.

ಆಗೊಮ್ಮೆ ತುಮಕೂರಿನಲ್ಲಿ ನಡೆಯುತ್ತಿದ್ದ ಎಂ. ಶಂಕರಪ್ಪನವರ ನಾಟಕಕ್ಕೆ ನಾನು ಸ್ಟೇಜ್ ಮೇನೇಜರ್ ಆಗಿ ಹೋಗಿದ್ದೆ. (ಈಗ ಆ ನಾಟಕದ ಹೆಸರು ನೆನಪಾಗುತ್ತಿಲ್ಲ) ಅದೊಂದು ದಿನ ಪಾತ್ರಧಾರಿಯೊಬ್ಬರು ಬರಲಿಲ್ಲ. ಆ ಪಾತ್ರದಲ್ಲಿ ಒಂದು ಹಾಡೂ ಇತ್ತು. ತಕ್ಷಣ ಬದಲಿ ವ್ಯವಸ್ಥೆ ಮಾಡಬೇಕಾಗಿ ಬಂದಾಗ ಶಂಕರಪ್ಪನವರು ನನಗೇ "ಹೇಗೂ ಎಲ್ಲ ಕೆಲಸಗಳೂ ಬರುತ್ತವೆ. ಈ ಪಾತ್ರದಲ್ಲಿ ನಟಿಸಿಬಿಡು" ಎಂದರು. ನಾನು ಹಿಂಜರಿಯಲಿಲ್ಲ. ನಟಿಸಿದೆ. ಅಭಿನಯ ಚೆನ್ನಾಗಿಯೇ ಬಂದಿತು. ಅಂತೂ ಅದೇ ನನ್ನ ಅಭಿನಯದ ಮೊದಲ ನಾಟಕವಾಯಿತು.

ಆ ವೇಳೆಗೆ ಗಿರೀಶ್ ಕಾರ್ನಾಡ್ ಮತ್ತು ಬಿ.ವಿ. ಕಾರಂತರು ಒಟ್ಟಾಗಿ 'ವಂಶವೃಕ್ಷ' ಸಿನಿಮಾ ನಿರ್ದೇಶನಕ್ಕೆ ನಿಂತರು. ಕಾರಂತರೂ ಇದ್ದರೆನ್ನುವ ಕಾರಣಕ್ಕೆ ನಾನು ಕೆಲದಿನಗಳ ಮಟ್ಟಿಗೆ ಚಿತ್ರೀಕರಣ ನಡೆಯುತ್ತಿದ್ದಲ್ಲಿಗೆ ಹೋಗಿದ್ದೆ. ಅಷ್ಟು ಬಿಟ್ಟರೆ ಆ ಚಿತ್ರದಲ್ಲಿ ನನ್ನ ಪಾತ್ರವೇನೂ ಇರಲಿಲ್ಲ. ನನ್ನ ಪಾತ್ರ ಶುರುವಾದದ್ದು 'ಪೂಜೆ' ಎನ್ನುವ ಚಿತ್ರದಿಂದ. ಟಿ.ಆರ್. ಶಾಮಣ್ಣನವರ ಮಗ ಟಿ.ಎಸ್. ರಂಗಾ ನನಗಿಂತಲೂ ಸೀನಿಯರ್. ಅದಾಗಲೇ ಪುಟ್ಟಣ್ಣ ಕಣಗಾಲ್ ಅವರಲ್ಲಿ ಕೆಲಸ ಮಾಡುತ್ತಿದ್ದ. ಆತ ನನಗೆ ತುಂಬಾ ಆತ್ಮೀಯನಾಗಿದ್ದ. ಆತನೇ ನಿರ್ದೇಶಕನಾಗಿ 'ಪೂಜೆ' ಆರಂಭಿಸಿದ್ದು. ಅದು ಎಂ. ವ್ಯಾಸರ ಕಾದಂಬರಿ. ಈಗ ರೈಟರ್ ಆಗಿರುವ ಶ್ರೀವತ್ಸರಂಗನಾಥ್ ಅವರ ತಂದೆ ಹೆಚ್.ಎಸ್. ರಂಗನಾಥ್ ಆ ಚಿತ್ರದ ನಿರ್ಮಾಪಕರು. ಎಸ್. ರಾಮಚಂದ್ರ ಛಾಯಾಗ್ರಾಹಕರಾದರೆ ನಾನು ಸಹಾಯಕ ನಿರ್ದೇಶಕ.

ಬಸವನಗುಡಿಯ ಗಣಪತಿ ದೇವಸ್ಥಾನದಲ್ಲಿ 'ಪೂಜೆ' ಚಿತ್ರೀಕರಣ ಮುಹೂರ್ತ ನಡೆಯಿತು. ಆದರೆ ಸ್ವಲ್ಪೇ ದಿನ ಚಿತ್ರೀಕರಣ ನಡೆದದ್ದು. ಆಮೇಲೆ ನಿಂತುಹೋಯಿತು. ಟಿ.ಎಸ್. ರಂಗಾ ಜೊತೆಗೆ ನಾನೂ ಆ ಚಿತ್ರದಿಂದ ಹೊರಬಂದೆ. ಮುಂದೆ ಯಾವಾಗಲೋ ಸ್ವತಃ ರಂಗನಾಥ್ ಅವರೇ ಆ ಚಿತ್ರವನ್ನು ಪೂರೈಸಿದರು. ಆ ಮಾತು ಬೇರೆ. ಆದರೆ ನನ್ನ ಪ್ರಥಮ ಹೆಜ್ಜೆಯೇ ವಿಫಲವಾಗಿತ್ತು.

ಹಾಗಿದ್ದರೆ ನನ್ನ ಮೊದಲ ಚಿತ್ರ ಯಾವುದು ಎಂದಾಗ 'ಕಾಡು' ನೆನಪಾಗುತ್ತದೆ. ಗಿರೀಶ್ ಕಾರ್ನಾಡ್ ನಿರ್ದೇಶನದಲ್ಲಿ 'ಕಾಡು' ಆರಂಭವಾದಾಗ ವಸ್ತ್ರ ವಿನ್ಯಾಸ ಮತ್ತು ಕಲಾ ನಿರ್ದೇಶನದ ಜವಾಬ್ದಾರಿಯನ್ನು ಬಿ.ವಿ. ಕಾರಂತ್ ವಹಿಸಿಕೊಂಡಿದ್ದರು. ಆಗ ಕಾರಂತರಿಗೆ ಸಹಾಯಕನಾಗಿ ನಾನು ಹೋಗಿದ್ದೆ. ಆದರೆ ನಾನು ಎಷ್ಟು ಚುರುಕಾಗಿ ಕೆಲಸ ಮಾಡಿದೆನೆಂದರೆ ಕೇವಲ ಕಾರಂತರಿಗೆ ಸಹಾಯಕನಾಗಿ ಹೋಗಿದ್ದ ನಾನು, ಸಿನಿಮಾ ಮುಗಿಯುವಷ್ಟರಲ್ಲಿ ಇಡೀ ಚಿತ್ರಕ್ಕೇ ಸಹ ನಿರ್ದೇಶಕನಾಗಿದ್ದೆ. ಹಾಗೆಂದೇ ಟೈಟಲ್ ಕಾರ್ಡ್‌ನಲ್ಲಿ ನನ್ನ ಹೆಸರು ಬಂದಿತು. ಆಗ ನನಗೊಂದು ಅಭ್ಯಾಸವಿತ್ತು. ಅದು ಕೆಟ್ಟ ಅಭ್ಯಾಸವೋ, ಒಳ್ಳೆಯ ಅಭ್ಯಾಸವೋ ತಿಳಿಯದು. ಅವರುಗಳು ಚಿತ್ರಕಥೆಯ ಚರ್ಚೆಗೆ ಕುಳಿತಿದ್ದಾಗ ಅವರ ಬಳಿ ನಿಂತಿರುತ್ತಿದ್ದ ನಾನು ಮುಖ್ಯ ಸಂಗತಿಗಳನ್ನು ನೋಟ್ಸ್ ಮಾಡಿಕೊಳ್ಳುತ್ತಿದ್ದೆ. ಮುಂದೆ ಚಿತ್ರೀಕರಣ ಸಮಯದಲ್ಲಿ ಅವರು ಮರೆತರೂ ನಾನು ನೆನಪು ಮಾಡುತ್ತಿದ್ದೆ. ಇದು ಅವರಿಗೆ ಇಷ್ಟವಾಯಿತು. ಅದರಿಂದ ತಮಗೇ ಸಹಾಯವಾಗುತ್ತದೆ ಎನಿಸಿ ಆನಂತರ ತಾವೇ ನನ್ನನ್ನು ಕರೆದು ನಿಲ್ಲಿಸಿಕೊಳ್ಳುತ್ತಿದ್ದರು. ಹಾಗಾಗಿ ನಾನು ಕ್ಲರ್ಕ್ ಆಗಿಬಿಡುತ್ತಿದ್ದೆ.

ಈ ಮಧ್ಯೆ ನಾನು ಬೆಂಗಳೂರಿನ ಬಾಲಭವನದಲ್ಲೂ ಸ್ಟೇಜ್ ಹ್ಯಾಂಡ್ ಆಗಿ ಎರಡು ವರ್ಷ ಕೆಲಸ ಮಾಡಿದೆ. ಕಾಲೇಜಿನಲ್ಲಿ ವಿದ್ಯಾರ್ಥಿ ಸಂಘದಲ್ಲೂ ಇದ್ದೆ. ಕಾಲೇಜಿನ ವಿಶೇಷ ಅಂದರೆ ಇಂಟರ್ ಕಾಲೇಜ್ ಉಲ್ಲಾಳ್ ಷೀಲ್ಡ್ ಕಾಂಪಿಟೇಷನ್‌ನಲ್ಲಿ ಪಾಲ್ಗೊಂಡಿದ್ದು. ಆಗ ಅದೇ ಒಂದು ದೊಡ್ಡ ಸ್ಪರ್ಧೆ. ನಮ್ಮ ಕಾಲೇಜಿನಲ್ಲಿ ಎಂ.ಎಸ್. ನಾಗರಾಜ್ ಎಂಬ ಅಧ್ಯಾಪಕರು ನಾಟಕಗಳನ್ನು ಮಾಡಿಸುತ್ತಿದ್ದರು. ಸ್ಪರ್ಧೆಗಾಗಿ ಮಾಡಿದ ನಾಟಕಗಳಲ್ಲಿ ನಾನೂ ಅಭಿನಯಿಸಿದ್ದೆ. (ಆಗ ನಮಗೆ ಆ ಷೀಲ್ಡ್ ಬರದಿದ್ದರೂ ಮುಂದೆ ನಾನು ಅದೇ ಕಾಲೇಜಿನಲ್ಲಿ 'ಲಾ' ಓದುವಾಗ ನನ್ನ ನಿರ್ದೇಶನದಿಂದಲೇ ಎರಡು ಬಾರಿ ಉಲ್ಲಾಳ್ ಷೀಲ್ಡ್ ತಂದುಕೊಟ್ಟೆ).

ಹಾಗೆ ಬಿ.ಎಸ್ಸಿ. ಮುಗಿಸುವಷ್ಟರಲ್ಲಿ ನನಗೇ ಫಿಲಂ ಡೈರೆಕ್ಟರ್ ಆಗುವ ಆಫರ್ ಬಂದಿತು. ಚಿತ್ರ 'ಗ್ರಹಣ'. ಆ ಚಿತ್ರ ನಿರ್ದೇಶನದ ಹೊಣೆ ಬಂದದ್ದು ಆಕಸ್ಮಿಕವಾದರೂ ಚಿತ್ರ ಮುಗಿಸಿದ ಕಷ್ಟಗಳ ಸರಮಾಲೆ ಮಾತ್ರ ನಿರೀಕ್ಷಿತವಾದುದು.

## 'ಕಾಡು' ಚಿತ್ರದ ಸಂಭಾವನೆಯಿಂದ ಕೊಂಡ ಬೈಕ್!

ನನ್ನ ಸಿನಿಮಾ ಬದುಕು ಆರಂಭವಾಗುವ ಮುನ್ನ ನಾನು ಎಂತಹ ಪರಿಸರದಲ್ಲಿ ಬೆಳೆದಿದ್ದೆ ಎನ್ನುವ ಕುರಿತೂ ಹೇಳಬೇಕು ಅನ್ನಿಸುತ್ತದೆ. ಪಿ.ಯು.ಸಿ. ಓದುತ್ತಿದ್ದುದರ ಜೊತೆಗೇ ಡ್ರಾಮಾ ಕೋರ್ಸ್ ಮುಗಿಸಿಕೊಂಡು ರಂಗಭೂಮಿಯಲ್ಲಿ ಕೆಲಸ ಮಾಡುತ್ತಿದ್ದೆ. ರಂಗಭೂಮಿಯ



ಸ್ನೇಹಿತರೊಂದಿಗೆ 'ಸಂಸ್ಕಾರ' ಚಿತ್ರದ ಚಿತ್ರೀಕರಣ ನೋಡಲು ಹೋಗಿದ್ದೆ. ಆ ಸಮಯದಲ್ಲಿ ಆಗ ಕ್ಯಾಮೆರಾಮನ್ ಟಾಮ್ಕೋವನ್ ಬಗೆಗೆ ತಿಳಿಯುವ ಅವಕಾಶ ಸಿಕ್ಕಿತ್ತು. ಹಾಗೇ ನಟಿ ಸ್ನೇಹಲತಾ ರೆಡ್ಡಿ ಅವರ ಪರಿಚಯವೂ ಆಗಿತ್ತು. ಆಕೆಯ ಮನೆ ಇದ್ದದ್ದು ಗಾಂಧಿಬಜಾರಿನ ಇಂಡಿಯಾ ಗ್ಯಾರೇಜ್ ಬಳಿ. ಅಲ್ಲೇ ಸಮೀಪ ಬಾ.ಕಿ.ನಾ. ಅವರ ಲಿಪಿ ಮುದ್ರಣಾಲಯವಿತ್ತು. ಅಲ್ಲಿಗೆ ವೈ.ಎನ್.ಕೆ. ಗೋಪಾಲಕೃಷ್ಣ ಅಡಿಗ, ಎಸ್. ದಿವಾಕರ್, ಸುಮತೀಂದ್ರ ನಾಡಿಗ್ ಮುಂತಾದವರೆಲ್ಲಾ ಬರುತ್ತಿದ್ದರು. ಆಗಲೇ ನನಗೆ ನವ್ಯ ಪರಂಪರೆಯ ಬರಹಗಾರರೆಲ್ಲಾ ಪರಿಚಯವಾದುದು. ಅವರುಗಳೆಲ್ಲಾ ಸೇರಿ ಮಾತುಕತೆ ಆಡುವ ಸಮಯಕ್ಕೆ ನಾನೂ ಅಲ್ಲಿರುತ್ತಿದ್ದೆ. ಅವರಿಗೆ ಕಾಫಿ ತಂದುಕೊಡುವುದು, ಮತ್ತೇನಾದರೂ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಡುತ್ತ ಅಲ್ಲೇ ನಿಂತು ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದೆ. ಅದರಿಂದಾಗಿ ನನಗೊಂದು ಹೊಸಾ ದಿಕ್ಕು ಕಾಣತೊಡಗಿತ್ತು. ಜೊತೆಗೆ ಗಿರೀಶ್ ಕಾರ್ನಾಡ್ ಮತ್ತು ಬಿ.ವಿ. ಕಾರಂತರು 'ವಂಶವೃಕ್ಷ' ಚಿತ್ರ ಆರಂಭಿಸಿದಾಗ ಒಂದಷ್ಟು ದಿನ ಚಿತ್ರೀಕರಣ ನೋಡಲು ಹೋಗಿದ್ದೆನಲ್ಲಾ, ಜೊತೆಗೆ ಕಾರ್ನಾಡ್, ಕಾರಂತರ ಪರಿಚಯವೂ ನನಗೆ ಚೆನ್ನಾಗಿ ಗೊತ್ತಾಗಿತ್ತು.

ನಾನು ಪಿ.ಯು.ಸಿ. ಮುಗಿಸಿ ರೇಣುಕಾಚಾರ್ಯ ಕಾಲೇಜಿನಲ್ಲಿ ಬಿ.ಎಸ್ಸಿ. ಓದುವಾಗ ನಮ್ಮ ತಂದೆ ಚಾಮರಾಜಪೇಟೆಯಲ್ಲಿದ್ದ ಮನೆಯನ್ನು ಬಿಟ್ಟು ಗಾಂಧಿಬಜಾರಿನಲ್ಲಿ ಮನೆ ಮಾಡಿದ್ದರು. ಆಗಲೇ ನನ್ನ ವಿದ್ಯಾಭ್ಯಾಸದ ಜೊತೆಗೆ ಒಂದೆಡೆ ರಂಗಭೂಮಿ ಮತ್ತು ಇನ್ನೊಂದೆಡೆ ಸಿನಿಮಾ ಬದುಕು ನಡೆಯುತ್ತಿದ್ದುದು.

ಕಾಲೇಜಿನಲ್ಲಿ ಅಧ್ಯಾಪಕ ಎಂ.ಎಸ್. ನಾಗರಾಜ್ ನಾಟಕ ಕಲಿಸುತ್ತಿದ್ದ ಗುರುಗಳಾದರೆ ಹೊರಗೆ ನಾನು ನಿಜವಾಗಿಯೂ ರಂಗಭೂಮಿಯ ಕೆಲಸಗಳನ್ನು ಕಲಿತಿದ್ದು ಬಿ.ವಿ. ಕಾಂರತರಿಂದ. ಅದೂ ಆಗ ಕನ್ನಡ ರಂಗಭೂಮಿಗೆ ಒಳ್ಳೆಯ ಟೇಕ್ ಆಫ್ ಸಿಗುತ್ತಿದ್ದ ಸಮಯ.

ಬಿ.ವಿ. ಕಾರಂತರು ಥಿಯೇಟರ್ ಒಳಗಿನ ನಾಟಕವನ್ನು ಹೊರಗೆ ತರುವ ಕನಸು ಕಂಡು ಬಯಲು ರಂಗಭೂಮಿಯ ಕೆಲಸವನ್ನು ಆರಂಭಿಸಿದರು. ಆರಂಭದ ಪ್ರಯೋಗಗಳು ರವೀಂದ್ರ ಕಲಾಕ್ಷೇತ್ರದ ಹೊರಗೇ ನಡೆದವು. ಚಂದ್ರಶೇಖರ ಕಂಬಾರರ 'ಜೋಕುಮಾರ ಸ್ವಾಮಿ', ಪಿ. ಲಂಕೇಶರ 'ಸಂಕ್ರಾಂತಿ', ಗಿರೀಶ್ ಕಾರ್ನಾಡರ (ಲಂಕೇಶ್ ಕನ್ನಡಕ್ಕೆ ತರ್ಜುಮೆ ಮಾಡಿದ್ದು) 'ಈಡಿಪಸ್' ನಾಟಕಗಳು ಪ್ರದರ್ಶನ ಕಂಡವು. ಕಾರಂತರು ನನ್ನನ್ನು 'ಜೋಕುಮಾರ ಸ್ವಾಮಿ' ನಾಟಕದ ಸ್ಟೇಜ್ ಮೇನೇಜರ್ ಆಗಿ, ನಾಗೇಶ್‌ನನ್ನು 'ಸಂಕ್ರಾಂತಿ' ನಾಟಕದ, ಪ್ರಸನ್ನನನ್ನು 'ಈಡಿಪಸ್' ನಾಟಕದ ಸ್ಟೇಜ್ ಮೇನೇಜರ್ ಆಗಿ ಮಾಡಿದರು.

ಆಗಿನ ಒಂದು ಮಹತ್ತರ ಬದಲಾವಣೆ ಅಂದರೆ ನಾಟಕದ ಟಿಕೇಟು ಮಾರುವ ಪದ್ಧತಿ. ಅವರೆಗೆ ನಮ್ಮ ನಾಟಕದ ಟಿಕೇಟುಗಳನ್ನು ನಾವೇ ಮಾರುವ ವ್ಯವಸ್ಥೆ ಇತ್ತು. ಬಯಲು ರಂಗಮಂದಿರದಲ್ಲಿ ನಾಟಕ ಪ್ರದರ್ಶನ ಆರಂಭವಾದ ಮೇಲೆ ಟಿಕೇಟ್ಟು ಮಾರುವ ಆ ಪದ್ಧತಿ ಕೈಬಿಟ್ಟು ನಾಟಕ ನಡೆಯುವಲ್ಲಿಯೇ ಟಿಕೇಟು ಮಾರುವ ವ್ಯವಸ್ಥೆಯಾಯಿತು. ಜೊತೆಗೆ ನಾಟಕ ಆರಂಭವಾಗುವ ಅರ್ಧ ತಾಸು ಮೊದಲೇ ನಾಟಕಕ್ಕೆ ಬರಬೇಕು, ನಾಟಕ ಆರಂಭವಾದ ಮೇಲೆ ಪ್ರವೇಶವಿಲ್ಲ ಎನ್ನುವ ನಿಯಮಗಳೂ ಆದವು. ನಮ್ಮಲ್ಲೂ ಶಿಸ್ತಿನ ಸಂಗತಿಗಳು

ಜಾರಿಯಾದವು. ಸಂಜೆ 6-30ಕ್ಕೆ ನಾಟಕ ಅಂದರೆ 6-30ಕ್ಕೇ ಆರಂಭವಾಗಬೇಕು, 7ಕ್ಕೆ ಆರಂಭವಾಗುವುದಲ್ಲ. ನಾಟಕ ನಡೆಯುವಾಗ ಯಾವುದೇ ಕಾರಣಕ್ಕೂ ಬೇರೆಯವರನ್ನು ಮಾತನಾಡಿಸಬಾರದು. ಅದಕ್ಕೆ ಕಾರಣ ನಾಟಕದ ಮೂಡ್ ಹಾಳಾಗುತ್ತದೆ ಎಂದು. ಆಶ್ಚರ್ಯ ಎಂದರೆ ಈ ಹೊಸ ಪದ್ಧತಿಯಲ್ಲಿ ಜನ ಕ್ಯೂ ನಿಂತು ಟಿಕೇಟ್ ಕೊಂಡು ನಾಟಕ ನೋಡಿದರು. ಕ್ಯೂ ಎಂದರೆ ಎಷ್ಟೆನ್ನುತ್ತೀರಾ? ಕಲಾಕ್ಷೇತ್ರದಿಂದ ಟೌನ್‌ಹಾಲ್‌ವರೆಗೆ ಜನ ಕ್ಯೂ ನಿಂತಿರುತ್ತಿದ್ದುದನ್ನು ನಾನೇ ನೋಡಿದ್ದೇನೆ.

ಆಗಿನ ನಮ್ಮ ರಂಗಭೂಮಿಯ ಬದುಕಾದರೂ ಹೇಗಿತ್ತಾ ಗೊತ್ತಾ? ರಾತ್ರಿ 12 ಗಂಟೆ, 12-30 ರವರೆಗೂ ಕೆಲಸ ಮಾಡುತ್ತಿದ್ದೇವು. ಪರದೆ ಬಿಚ್ಚುವುದು, ಲೈಟಿಂಗ್ ತೆಗೆಯುವುದು ಮುಂತಾದ್ದನ್ನೆಲ್ಲಾ ಮಾಡಿ ಅಲ್ಲೇ ಕರ್ಟನ್‌ಗಳನ್ನು ಹಾಕಿಸಿಕೊಂಡು ಅದನ್ನೇ ಹೊದ್ದುಕೊಂಡು ಮಲಗುತ್ತಿದ್ದೆವು. ಬೆಳಿಗ್ಗೆ ಎದ್ದು ಮುಖ ತೊಳೆದು ಮತ್ತೆ 7-30ರ ಹೊತ್ತಿಗೆ ರಿಹರ್ಸಲ್‌ಗೆಂದು ಸಿದ್ಧರಾಗುತ್ತಿದ್ದೆವು. ಅಲ್ಲಿ ನಾವು ಎರಡು ಜನರೇಷನ್ ಕಲಾವಿದರಿದ್ದೆವು. ಸಿ.ಆರ್. ಸಿಂಹ, ಲೋಕೇಶ್, ನಾಗೇಶ್ ಮುಂತಾದವರೊಂದ್ದೊಂದು ಜನರೇಷನ್. ನಾನು, ಟಿ.ಎಸ್. ರಂಗಾ, ಪ್ರಸನ್ನ, ರಮೇಶ್ ಭಟ್, ಸುಂದರರಾಜ್ ಮುಂತಾದವರೊಂದ್ದೊಂದು ಜನರೇಷನ್. ನಮ್ಮನ್ನೆಲ್ಲಾ ನೋಡುತ್ತಿದ್ದ ವೈ.ಎನ್.ಕೆ. ಬೆಂಗಳೂರಿನ ರಂಗಕರ್ಮಿಗಳೆಲ್ಲಾ ಇಲ್ಲೇ ಇದ್ದಾರೆ ಎನ್ನುವ ಮಾತುಗಳನ್ನಾಡುತ್ತಿದ್ದರು. ನಾನಂತೂ ಆಗ ಎಲ್ಲ ನಿರ್ದೇಶಕರಲ್ಲಿಯೂ ಕೆಲಸ ಮಾಡಿದೆ, ಎಲ್ಲ ನಾಟಕಗಳಲ್ಲಿಯೂ ಕೆಲಸ ಮಾಡಿದೆ. ಸ್ಟೇಜ್ ಮೇಲಿನ, ಸ್ಟೇಜ್ ಹಿಂದಿನ ಕೆಲಸವನ್ನೆಲ್ಲಾ ಮಾಡಿದೆ. ಆ ಸಮಯದಲ್ಲಿಯೇ 'ಕಾಡು' ಚಿತ್ರಕ್ಕೆ ಕೆಲಸ ಮಾಡಲು ನಾನೂ ಹೋಗಿದ್ದುದು. ಆಗ ನನಗೆ 2,500 ರೂ.ಗಳನ್ನು ಸಂಭಾವನೆಯಾಗಿ ಕೊಟ್ಟರು. ಆ ಹಣದಲ್ಲಿ ಒಂದು ಬೈಕ್ ತೆಗೆದುಕೊಳ್ಳಬೇಕೆಂದು ಯೋಚಿಸಿದೆ. ಅದಕ್ಕೆ ಸರಿಯಾಗಿ 'ರಂಗಸಂಪದ' ಕಾರ್ಯದರ್ಶಿಯಾಗಿದ್ದ ನನ್ನ ಸ್ನೇಹಿತ ಲೋಕೇಶ್ ತನ್ನಲ್ಲಿದ್ದ ರಾಜ್‌ದೂತ್ ಮೋಟಾರ್ ಬೈಕನ್ನು ಮಾರುವುದಾಗಿ ತಿಳಿಸಿದ. ನಾನು 2,500 ರೂ.ಗಳನ್ನು ಕೊಟ್ಟು ಅವನಿಂದ ಬೈಕ್ ತೆಗೆದುಕೊಂಡೆ. ಮುಂದೆ 'ಗ್ರಹಣ'ದ ಕಾಲಕ್ಕೆ ನಾನು ಲೋಕೇಷನ್ನ ಹುಡುಕಿದ್ದೆಲ್ಲಾ ಆ ಬೈಕ್‌ನಲ್ಲಿ ಓಡಾಡಿಯೇ.

'ಗ್ರಹಣ'ಕ್ಕೆ ಮೊದಲು ಇನ್ನೂ ಒಂದು ಸಂಗತಿ ಹೇಳಬೇಕು. ಗಾಂಧಿಬಜಾರಿನಲ್ಲಿ ರಮೇಶ್ ಭಟ್ ಬೇಕರಿಯಂತಹ ಅಂಗಡಿಯೊಂದನ್ನು ಇಟ್ಟುಕೊಂಡಿದ್ದ 'ಜ್ಯೋತಿ ಪ್ರಕಾಶ್ ಸ್ಟೋರ್ಸ್' ಎಂದು ಆ ಅಂಗಡಿಯ ಹೆಸರು. ನಾನು ನಾಟಕ ಇಲ್ಲದ ದಿನಗಳಲ್ಲಿ ನಾಟಕದ ರಿಹರ್ಸಲ್ ಮುಗಿಸಿ ಸಂಜೆಯಿಂದ ರಾತ್ರಿಯವರೆಗೆ ಇರುತ್ತಿದ್ದುದೇ ಆ ಅಂಗಡಿ ಬಳಿ. ರಮೇಶ್ ಭಟ್ ಕೂಡ ಆಗಷ್ಟೇ ರಂಗಭೂಮಿಗೆ ಬಂದಿದ್ದವ.

ಟಿ.ಎಸ್. ರಂಗಾ ಎನ್.ಆರ್. ಕಾಲೋನಿಯಿಂದ ಆ ಅಂಗಡಿ ಬಳಿಗೆ ಬರುತ್ತಿದ್ದ. ಬಿ.ವಿ. ಕಾರಂತರು 'ಹಯವದನ' ನಾಟಕಕ್ಕೆ ಒಬ್ಬ ನಟ ಬೇಕು ಎಂದಾಗ ರಂಗಾ, ರಮೇಶ್ ಭಟ್‌ನ್ನು ಕರೆದೊಯ್ದು ಸೇರಿಸಿದ್ದ. ಆ ನಾಟಕಕ್ಕೆ ನನ್ನದೇ ಬ್ಯಾಕ್ ಸ್ಟೇಜ್ ಕೆಲಸ. ಹಾಗಾಗಿ ರಮೇಶ್ ಭಟ್ ನನಗೂ ಪರಿಚಯ. ಅಲ್ಲೇ ಇನ್ನೊಂದು ಹೋಟೆಲ್ ಕೂಡಾ ಇತ್ತು.



ಮಾಸ್ತಿಯವರು ಅತ್ತ ವಾಕಿಂಗ್ ಬರುತ್ತಿದ್ದರು. ಪಿ. ಲಂಕೇಶ್, ಚಂದ್ರಶೇಖರ ಕಂಬಾರ ಮುಂತಾದ ಅನೇಕರಿಗೆ ಅದು ಅಡ್ಡೆಯಾಗಿತ್ತು. ಆ ಹೋಟೆಲ್‌ನಲ್ಲಿ ಕಾಫಿ ಕುಡಿಯುತ್ತ ರಮೇಶ್ ಭಟ್ ಅಂಗಡಿಯಲ್ಲಿ ಬಾದಾಮಿ ಹಾಲು ಕುಡಿಯುತ್ತ ಮಾತಿನಲ್ಲಿ ಸಮಯ ಕಳೆಯುತ್ತಿದ್ದೆವು. ಇದನ್ನೆಲ್ಲಾ ನಾನು ಯಾಕೆ ಹೇಳಿದೆನೆಂದರೆ ಆ ಅಡ್ಡೆಯಲ್ಲಿಯೇ ನಾನು 'ಗ್ರಹಣ' ಚಿತ್ರ ನಿರ್ದೇಶಿಸುವ ಮಾತು ಪ್ರಸ್ತಾಪವಾದದ್ದು.

### ವಿದ್ಯಾರ್ಥಿಯಾಗಿದ್ದಾಗಲೇ ನಿರ್ದೇಶಕನಾದೆ!

ಗಿರೀಶ್ ಕಾರ್ನಾಡರ 'ಹಯವದನ' ನಾಟಕದ ದಿನಗಳಲ್ಲಿ ನನಗೆ ರಮೇಶ್ ಭಟ್ ಪರಿಚಯ ಆದಂತೆ ಗಿರೀಶ್ ಕಾಸರವಳ್ಳಿಯವರ ಪರಿಚಯವೂ ಆಗಿತ್ತು. ಆತ ಆಗಷ್ಟೇ ಶಿವಮೊಗ್ಗಾದಿಂದ ಬೆಂಗಳೂರಿಗೆ ಬಂದಿದ್ದರು. ನಾವೆಲ್ಲಾ ರಮೇಶ್ ಭಟ್ ಅಂಗಡಿ ಬಳಿ ಸೇರುತ್ತಿದ್ದುದರ ಬಗೆಗೆ ಹೇಳಿದೆನಲ್ಲಾ, ಆಗೊಂದು ದಿನ ಮಿತ್ರರು ಏನೋ ಮಾತಿನಲ್ಲಿದ್ದಾಗ ನಾವುಗಳೇ ಯಾಕೆ ಒಂದು ಸಿನಿಮಾ ಮಾಡಬಾರದು ಎನ್ನುವ ಮಾತು ಬಂದಿತು. 'ಅದಕ್ಕೊಂದು ಕಥೆ ಬೇಕು' ಎಂದಾಗ ಸ್ನೇಹಿತರೊಬ್ಬರು, 'ಕುಣಿಗಲ್ ಬಳಿಯ ಉಜನಿಯಲ್ಲಿ ಜಾತ್ರೆ ನಡೆಯುತ್ತದೆ, ಅದೇ ಒಂದು ಸಬ್ಜೆಕ್ಟ್ ಆಗುತ್ತದೆ' ಅಂದರು.

ನಿಜಕ್ಕೂ ಅದು ಕುತೂಹಲಕಾರಿ ವಸ್ತುವೇ. ಉಜನಿ ಜಾತ್ರೆಯ ಹತ್ತು ದಿನಗಳ ಮೊದಲು, ಅಲ್ಲಿನ ಆರು ಜನ ಹರಿಜನರು ಜನಿವಾರ ಹಾಕಿಕೊಂಡು ಮಡಿ ಉಟ್ಟು ಬ್ರಾಹ್ಮಣರಾಗಿ ಬಿಡುತ್ತಾರೆ. ಆ ಹತ್ತೂದಿನ ವಿದ್ಯಾರ್ಥಿಯಾಗಿದ್ದಾಗಲೇ ನಿರ್ದೇಶಕನಾದೆ! ಅವರು ತಾವು ಹರಿಜನರು ಎಂಬುದನ್ನೇ ಮರೆತು ಬ್ರಾಹ್ಮಣರಂತೆಯೇ ಬದುಕುತ್ತಾರೆ. ಜಾತ್ರೆಗೆ ಸಂಬಂಧಿಸಿದ ವಿಧಿ ವಿಧಾನಗಳೆಲ್ಲವನ್ನೂ ಪೂರೈಸುತ್ತಾರೆ. ಅವರ ನೇತೃತ್ವದಲ್ಲಿ ಜಾತ್ರೆ ಸಾಂಗೋಪಾಂಗವಾಗಿ ನಡೆಯುತ್ತದೆ. ಜಾತ್ರೆ ಮುಗಿದ ಮಾರನೆಯ ದಿನ ಆ ಆರೂ ಜನ ಮಡಿ, ಜನಿವಾರವನ್ನು ತೆಗೆದು ಮತ್ತೆ ಹರಿಜನರಾಗಿಬಿಡುತ್ತಾರೆ.

ಅದನ್ನೆಲ್ಲಾ ಆ ವರ್ಷದ ಜಾತ್ರೆಯಲ್ಲಿ ಕಣ್ಣಾರೆ ಕಂಡ ನಾವು ಇದೊಂದು ರೀತಿಯ ಪೆಕ್ಯುಲಿಯರ್ ಎಂದು ಆಶ್ಚರ್ಯಪಟ್ಟೆವು. ಅದನ್ನು ಒಂದು ಸಾಕ್ಷ್ಯಚಿತ್ರ ಮಾಡಿ ಜಗತ್ತಿಗೆ ತಿಳಿಸಬೇಕು ಎನ್ನಿಸಿತು. ಮಿತ್ರರೂ ಒಪ್ಪಿದರು. ಆದರೆ ಕಥೆಯನ್ನು ಬೆಳೆಸಿದರೆ ಒಂದು ಚಲನಚಿತ್ರವನ್ನೇ ಮಾಡಬಹುದಲ್ಲಾ ಎಂದು ಎಲ್ಲರೂ ಯೋಚಿಸಿ ಕೊನೆಗೆ ಅದೇ ಸರಿ ಎನ್ನಿಸಿತು. ಆದರೆ ನಿರ್ಮಾಪಕರಾಗಿ ಹಣ ಒದಗಿಸುವವರು ಯಾರು? ನಿರ್ದೇಶಕನ ಜವಾಬ್ದಾರಿ ಹೊರುವುದು ಯಾರು? ಎನ್ನುವ ಪ್ರಶ್ನೆ ಮೂಡಿತು. ನಮ್ಮ ಜೊತೆಗಿದ್ದ ಕೋಡಿಹಳ್ಳಿ ಶಿವರಾಂ ತಾನು ಹಣ ಒದಗಿಸುವುದಾಗಿ ಹೇಳಿ "ನೀವೇ ನಿರ್ದೇಶಕರಾಗಿ ಬಿಡಿ" ಎಂದು ನನಗೇ ಹೇಳಿದ. ಆತನ ಮಾತಿನಿಂದ ನನಗೊಂದು ಕ್ಷಣ ಭಯವಾಯಿತು. ನನ್ನ ಸುತ್ತ ನನಗಿಂತಲೂ ಸೀನಿಯರ್ ಆಗಿದ್ದ ಟಿ.ಎಸ್. ರಂಗಾ ಇದ್ದ, ಗಿರೀಶ್ ಕಾರ್ನಾಡ್, ಬಿ.ವಿ. ಕಾರಂತ್ ಇದ್ದರು. ಅವರನ್ನೆಲ್ಲಾ ಬಿಟ್ಟು ನನಗೇ ಈ ಜವಾಬ್ದಾರಿ ಹೊರಿಸುತ್ತಿದ್ದಾನಲ್ಲಾ ಎಂದು ಗಾಬರಿಯಾಯಿತು. ಆದರೂ ಆ ಭಯ ಬಹಳ ಹೊತ್ತು ಇರಲಿಲ್ಲ. ಎಲ್ಲರೂ ಬೆನ್ನು ತಟ್ಟಿದರು,

ನನಗೂ ಅದು ಗೊತ್ತಿದ್ದ ಪರಿಸರವೇ ಆಗಿದ್ದರಿಂದ ಒಪ್ಪಿಬಿಟ್ಟೆ. ಮತ್ತೊಂದು ವಿಶೇಷ ಅಂದರೆ ನಾನಿನ್ನೂ ತೃತೀಯ ಬಿ.ಎಸ್ಸಿ. ಓದುತ್ತಿದ್ದ ವಿದ್ಯಾರ್ಥಿ. ಆಗಲೇ ಚಲನಚಿತ್ರ ನಿರ್ದೇಶಕನಾಗಿಬಿಟ್ಟೆ.

ಅಲ್ಲಿಂದ 'ಗ್ರಹಣ' ಚಿತ್ರ ನಿರ್ಮಾಣಕ್ಕೆ ಚಾಲನೆ ಸಿಕ್ಕಿತು. ಚಿತ್ರಕ್ಕೆ ಎಸ್. ರಾಮಚಂದ್ರ ಛಾಯಾಗ್ರಾಹಕರಾದರು, ಟಿ.ಎಸ್. ರಂಗಾ ಸ್ಕ್ರಿಪ್ಟ್ ಕೆಲಸ ಹಿಡಿದರು, ಎಂ.ಕೆ. ರಾಮಕೃಷ್ಣ ಮೇಕಪ್‌ಗೆ ನಿಂತರು, ಎಸ್. ದಿವಾಕರ್ ಕಲಾ ನಿರ್ದೇಶಕರಾದರು. ಜೊತೆಗೆ ಸಿಂಹ ಕೊಳ್ಳೇಗಾಲ ಕೂಡಾ ಕೆಲಸ ಮಾಡಲು ಒಪ್ಪಿದರು. ಜಿ.ಕೆ. ಗೋವಿಂದರಾವ್, ರುದ್ರಮೂರ್ತಿ, ಸತ್ಯೇಂದ್ರ, ಶೋಭಾ ಜೋಶಿ ಮುಂತಾದ ನಟ, ನಟಿಯರು ನೇಮಕಗೊಂಡರು. ನನ್ನ ರಂಗಭೂಮಿಯ ಮಿತ್ರರಿಗೆಲ್ಲಾ ಪಾತ್ರ ಕೊಟ್ಟೆ.

ಆದರೆ ಆ ನಂತರ ನಾನು 'ಗ್ರಹಣ' ಚಿತ್ರಕ್ಕಾಗಿ ಎಣಗಿದ್ದೆದೆಯಲ್ಲಾ, ಅತ್ಯದ್ಭುತವಾದ ಅನುಭವ ಅದು. ಮೂರು ವರ್ಷಗಳ ಸಮಸ್ಯೆ, ಆತಂಕ, ಶ್ರಮ ಮುಂತಾದ ತಿರುವುಗಳ ಸಾಹಸಯಾತ್ರೆಯೇ ಆಯಿತು ಅದು. ಸಿನಿಮಾ ಬದುಕಿನ ಕಷ್ಟವನ್ನೆಲ್ಲಾ ಆ ಮೊದಲ ಚಿತ್ರದಲ್ಲಿಯೇ ಅನುಭವಿಸಿಬಿಟ್ಟೆ. ಅದು ಆರಂಭವಾದುದು ಹೀಗೆ-

ನಮ್ಮ ತಾಯಿಯವರು ಹುಟ್ಟಿದ್ದು ಹೊಂಗನೂರು ಎಂಬ ಗ್ರಾಮದಲ್ಲಿ, ಅದು ಯಳಂದೂರಿಗೆ ನಾಲ್ಕೈದು ಕಿ.ಮೀ. ದೂರದಲ್ಲಿದೆ. ಆ ಗ್ರಾಮದಲ್ಲಿಯೇ 'ಗ್ರಹಣ' ಚಿತ್ರೀಕರಣ ಆರಂಭಿಸಬೇಕು, ಅಲ್ಲಷ್ಟು ದಿನ ಚಿತ್ರೀಕರಣ ನಡೆಸಬೇಕು ಎನ್ನುವ ನಿರ್ಧಾರವಾಯಿತು. ಅದರಂತೆ ಚಿತ್ರೀಕರಣ ಮುಹೂರ್ತ ಅಲ್ಲಿಯೇ ನಡೆಯಿತು. ಆಗ ಚಿತ್ರೀಕರಣಕ್ಕೆ ಆರಂಭ ಫಲಕ ತೋರಿಸಿದ್ದು ಕವಿ ಗೋಪಾಲಕೃಷ್ಣ ಅಡಿಗ ಚಿತ್ರೀಕರಣ ಆರಂಭವಾದುದು 1975ರಲ್ಲಿ. ಮುಗಿದದ್ದು 1979ರ ಹೊತ್ತಿಗೆ. ಉಜನಿ ಜಾತ್ರೆಯನ್ನೇ ವಸ್ತುವನ್ನಾಗಿ ತೆಗೆದುಕೊಂಡಿದ್ದರಿಂದ ಎರಡು ವರ್ಷ ಜಾತ್ರೆಯಲ್ಲಿ ಚಿತ್ರೀಕರಣ ನಡೆಸಿದೆವು. ಅಷ್ಟು ಮಾತ್ರವಲ್ಲ ಇಡೀ ಚಿತ್ರೀಕರಣ ಕುಂಟುತ್ತಲೇ ಆದದ್ದು. ಆ ನಡುವಿನ ತಿರುವುಗಳು ಒಂದೆರಡಲ್ಲ.

ನಾವು ಸಿನಿಮಾ ಮಾಡುವ ಮೊದಲು ಉಜನಿ ಜಾತ್ರೆಯನ್ನು ನೋಡಿದ್ದೆವಲ್ಲಾ, ಚಿತ್ರಕಥೆ ಸಿದ್ಧವಾಗಿ ಚಿತ್ರೀಕರಣ ಆರಂಭವಾಗುವಷ್ಟರಲ್ಲಿ ಇನ್ನೊಂದು ವರ್ಷದ ಜಾತ್ರೆಯೂ ಬಂದುಬಿಟ್ಟಿತು. ಮೊದಲ ಷೆಡ್ಯೂಲ್‌ನಲ್ಲಿ ಕೆಲದಿನ ಆ ಜಾತ್ರೆಯ ಚಿತ್ರೀಕರಣ ನಡೆಯಿತು. ಹದಿನೈದು ದಿನಗಳಾಗಿತ್ತೇನೋ ಚಿತ್ರೀಕರಣ ಆರಂಭವಾಗಿ, ಆಗ ಗಿರೀಶ್ ಕಾಸರವಳ್ಳಿಯವರು ಪೂನಾ ಫಿಲಂ ಇನ್‌ಸ್ಟಿಟ್ಯೂಟ್‌ಗೆ ಹೋಗಿಬಿಟ್ಟರು. ಆಗ ಅವರು ನನ್ನ 'ಗ್ರಹಣ' ಚಿತ್ರಕ್ಕೆ ಮಾತ್ರವೇ ಅಸೋಸಿಯೇಟ್ ಆಗಿರಲಿಲ್ಲ; ಬಿ.ವಿ. ಕಾರಂತರ 'ಚೋಮನ ದುಡಿ' ಚಿತ್ರಕ್ಕೂ ಅಸೋಸಿಯೇಟ್ ಆಗಿದ್ದರು.

ಅನಂತರ ಚಿತ್ರಕಥೆಯನ್ನು ನಾನೇ ಒಂದಿಷ್ಟು ಬದಲಾವಣೆ ಮಾಡಿದೆ. ಆದರಿಂದ ಟಿ.ಎಸ್. ರಂಗಾ ನನ್ನ ಮೇಲೆ ಸಿಟ್ಟಾಗಿಬಿಟ್ಟ. ತನಗೂ, ಈ 'ಗ್ರಹಣ'ಕ್ಕೂ ಏನೂ ಸಂಬಂಧವಿಲ್ಲ ಎಂದು ರೇಗಾಡಿ ದೂರವಾಗಿಬಿಟ್ಟ. ಆಷ್ಟಾದರೂ ನಾನು ಎದೆಗುಂದಲಿಲ್ಲ. ಚಿತ್ರವನ್ನು ಮುಂದುವರಿಸಿದೆ. ಆದರೆ ಕೋಡಿಹಳ್ಳಿ ಶಿವರಾಮನೇ ಕೈಕೊಡತೊಡಗಿದ. ಚಿತ್ರೀಕರಣಕ್ಕೆ



ಬೇಕಾಗುವಷ್ಟು ಹಣವನ್ನು ಕಾಲಕಾಲಕ್ಕೆ ಹೊಂದಿಸಲು ಆತನಿಂದ ಆಗುತ್ತಿರಲಿಲ್ಲ. ನಡೆಯುತ್ತಿದ್ದ ಚಿತ್ರೀಕರಣ ದಿಢೀರ್ ನಿಂತು ಹೋಗುತ್ತಿತ್ತು. ಎಲ್ಲಾದರೂ ನಾಲ್ಕೈದು ಸಾವಿರ ರೂ. ಸಿಕ್ಕಿದರೆ ಮತ್ತೆ ಚಿತ್ರೀಕರಣ ಆರಂಭಿಸುತ್ತಿದ್ದೆವು. ಆ ಸ್ಥಿತಿ ಯಾಕೆ ಕೇಳುತ್ತೀರಿ?

ಹೊಂಗನೂರಿನಲ್ಲಿ ಚಿತ್ರೀಕರಣ ನಡೆಯುತ್ತಿದ್ದಾಗ ಶಿವರಾಮ್ ಹಣ ತರಲೆಂದು ಬೆಂಗಳೂರಿಗೆ ಬರುತ್ತಿದ್ದ. ಆದರೆ ವಾರವಾದರೂ ಹೊಂಗನೂರಿಗೆ ಹಿಂದಿರುಗುತ್ತಿರಲಿಲ್ಲ. ಅಂತಹ ಸ್ಥಿತಿಯಲ್ಲಿ ನಾನಾದರೂ ಏನು ಮಾಡಬೇಕು? ಯೂನಿಟ್ ಜನಕ್ಕೆ ಕೊನೇಪಕ್ಷ ಊಟಕ್ಕಾದರೂ ವ್ಯವಸ್ಥೆ ಮಾಡಬೇಕಿತ್ತಲ್ಲಾ! ನಮ್ಮ ತಾತನ ಮನೆಯಿಂದ ಒಂದು ಮೂಟೆ ಅಕ್ಕಿ ತರುವುದು, ಅದರ ಜೊತೆಗೆ ಒಂದಷ್ಟು ತರಕಾರಿ ಹೊಂದಿಸಿ ಊಟದ ವ್ಯವಸ್ಥೆ ಮಾಡುವುದು, ಸಂಜೆ 7-7-30ರವರೆಗೆ ಚಿತ್ರೀಕರಣ ಮಾಡುವುದು, ಅನಂತರ ಹೊಂಗನೂರಿನಿಂದ ಯಳಂದೂರಿಗೆ ನಡೆದುಕೊಂಡು ಹೋಗಿ ಬೆಂಗಳೂರಿಗೆ ಫೋನ್ ಮಾಡುವುದು. ಆದರೆ ಶಿವರಾಮ್ ಸಿಗುತ್ತಿರಲಿಲ್ಲ. ಮಧ್ಯರಾತ್ರಿಯವರೆಗೆ ಪ್ರಯತ್ನ ಮಾಡಿ ಕೊನೆಗೆ ನಿರಾಸೆಯಿಂದ ಮತ್ತೆ ಹೊಂಗನೂರಿಗೆ ನಡೆದುಕೊಂಡೇ ಹಿಂದಿರುಗುವುದು, ಬೆಳಗಿನ ಜಾವ ಹೊಂಗನೂರು ತಲುಪಿ, ಬೆಳಿಗ್ಗೆಯೇ ಎಲ್ಲರೂ ಚಿತ್ರೀಕರಣಕ್ಕೆ ರೆಡಿಯಾಗುವಷ್ಟರಲ್ಲಿ ನಾನೂ ರೆಡಿಯಾಗಿ ಬಿಡುವುದು. ಹಾಗೇ ಎಷ್ಟು ದಿನ ನಡೆದೀತು? ಕೊನೆಗೆ ಶಿವರಾಮ್ ತನ್ನಿಂದ ದುಡ್ಡುತರಲು ಆಗುವುದಿಲ್ಲ ಎಂದುಬಿಟ್ಟ. ನಾನು ಮತ್ತೊಬ್ಬ ನಿರ್ಮಾಪಕರನ್ನು ಹುಡುಕಬೇಕಾಯಿತು. ಆ ಸಮಯಕ್ಕೆ ಶಿವರಾಮ್ ಅಣ್ಣ ನನ್ನ ಜೊತೆಯಾದರು. ಅವರೂ ಒಂದಷ್ಟು ದಿನ ಚಿತ್ರೀಕರಣಕ್ಕೆ ಹಣ ಒದಗಿಸಿದರು. ಒಂದು ದಿನ ಅವರೂ ತಮ್ಮಿಂದ ಇನ್ನು ಹಣ ಹೊಂದಿಸಲು ಆಗುವುದಿಲ್ಲ ಎಂದು ಕೈ ಆಡಿಸಿಬಿಟ್ಟರು. ಮತ್ತೆ ನಿರ್ಮಾಪಕರ ಚಿಂತೆ ಎದುರಾಯಿತು, ಆಗ ಸಿಕ್ಕಿದವರು ಮಾಯಪ್ಪ. ಅವರಿಂದಾಗಿ ಮತ್ತೂ ಕೆಲದಿನ ಚಿತ್ರೀಕರಣ ಮುಂದುವರಿಯಿತು. ನನ್ನ ದುರಾದೃಷ್ಟ. ಸ್ವಲ್ಪ ದಿನ ಕಳೆಯುತ್ತಲೂ ಅವರೂ ತನ್ನಿಂದ ಇನ್ನು ದುಡ್ಡುಕೊಡಲು ಸಾಧ್ಯವಿಲ್ಲ ಎಂದುಬಿಟ್ಟರು. ಅವರೆಲ್ಲಾ ಬಿಟ್ಟರು ಎಂದು ನಾನೂ ಚಿತ್ರವನ್ನು ಅರ್ಧಕ್ಕೇ ನಿಲ್ಲಿಸಲು ಆದೀತೆ?

## 'ಖಾಲಿ ಜೇಬಿನಲ್ಲಿ ಬಸ್ ಹತ್ತಿದಾಗ...'

'ಗ್ರಹಣ' ಚಿತ್ರ ನಿರ್ಮಾಣ ಕಾರ್ಯ ನನ್ನ ಪಾಲಿಗೆ ಚೊಚ್ಚಲ ಹೆರಿಗೆಯಂತಾಗಿತ್ತು. ಮೂವರು ನಿರ್ಮಾಪಕರು ಬಂದು ಹೋಗಿದ್ದರು. ಟಿ.ಎಸ್. ರಂಗಾನೂ ನನ್ನಿಂದ ದೂರ ಆಗಿ ಚಿತ್ರೀಕರಣ ನಿಂತು, ನಿಂತು ನಡೆಯುತ್ತಿದ್ದುದರಿಂದ ಒಬ್ಬೊಬ್ಬರೂ ಕಳಚಿಕೊಳ್ಳತೊಡಗಿದ್ದರು. ಹಾಗೆಂದು ನಾನೂ ಹತಾಶನಾಗಿ ಕೂಡು ವಂತಿರಲಿಲ್ಲ. ನನ್ನ ಮೊದಲ ಚಿತ್ರ ಯಾವುದೇ ಕಾರಣಕ್ಕೂ ನಿಂತು ಹೋಗಬಾರದು, ಅದೇನಾದರೂ ಆಗಲಿ, ದುಡ್ಡು, ಕಾಸನ್ನೂ ಮೀರಿದ ಪ್ರಾಬ್ಲಂಗಳನ್ನು ಎದುರಿಸಿ ಚಿತ್ರ ಮುಗಿಸಲೇಬೇಕು ಎನ್ನುವ ದೃಢತೆ ನನ್ನಲ್ಲಿತ್ತು. ಮತ್ತಾರನ್ನೂ ಹಣಕ್ಕಾಗಿ ಕಾಯುವುದೇ ಬೇಡ. ನಾನೇ ಹಣ ಹೊಂದಿಸಿಕೊಂಡು ಸಿನಿಮಾ ಮುಗಿಸಬೇಕು ಎಂದು ನಿಶ್ಚಯಿಸಿದೆ.

ಚಲನಚಿತ್ರಕ್ಕೆ ಅದರದ್ದೇ ಆದ ಒಂದು ಶಕ್ತಿಯಿದೆ. ಏನೇ ಪ್ರಾಬ್ಲಂ ಆದರೂ ಅದರ ಕೆಲಸವನ್ನು ಅದು ಮಾಡಿಸಿಕೊಂಡು ಪೂರ್ಣವಾಗುತ್ತೆ. ಮಾಡುವ ಮನಸ್ಸಿರಬೇಕು ಅಷ್ಟೆ. ನನ್ನ ಪುಣ್ಯಕ್ಕೆ ನಾನು 'ಗ್ರಹಣ' ಚಿತ್ರದ ನಿರ್ದೇಶಕನಾಗಿದ್ದರೂ ಬೇರೆ ನಿರ್ದೇಶಕರ ಚಿತ್ರಗಳಿಗೂ ಕೆಲಸ ಮಾಡುತ್ತಿದ್ದೆ. 'ಚೋಮನ ದುಡಿ' ಚಿತ್ರದಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಆಗಿದ್ದ ನಾನು ಗಿರೀಶ್ ಕಾಸರವಳ್ಳಿ ಪೂನಾಗೆ ಹೋದ ಮೇಲೆ ಅಸೋಸಿಯೇಟ್ ಆಗಿ ಕೆಲಸ ಮಾಡಿದೆ, ಡಾ: ಚಿಟಗೋಪಿಯವರ (ಕಲಾವಿದೆ ವೈಶಾಲಿ ಕಾಸರವಳ್ಳಿಯವರ ತಂದೆ) 'ಪರಿವರ್ತನೆ', ಪಿ. ಲಂಕೇಶರ 'ಪಲ್ಲವಿ' ಚಿತ್ರಗಳಿಗೆ ದುಡಿದೆ. ಕಾರ್ನಾಡ್, ಕಾರಂತರ 'ತಬ್ಬಲಿಯು ನೀನಾದೆ ಮಗನೆ' ಚಿತ್ರಕ್ಕೆ ಸ್ಕ್ರಿಪ್ಟ್ ವರ್ಕ್ ಮಾಡಿಕೊಟ್ಟೆ. ಆ ವೇಳೆಗಾಗಲೇ 'ಗರಂಹವಾ'ದಂತಹ ಚಿತ್ರಗಳನ್ನು ಮಾಡಿದ್ದ ಎಂ.ಎಸ್. ಸತ್ಯು ಅವರನ್ನು ನಮ್ಮ ಸತ್ಯಜಿತ್ ರೇ ಎನ್ನುತ್ತಿದ್ದೆವು. ಅವರು ಮಾಡಿದ 'ಕನ್ನೇಶ್ವರ ರಾಮ' ಚಿತ್ರಕ್ಕೆ ಪ್ರೊಡಕ್ಷನ್ ಮೇನೇಜರ್ ಆಗಿ ಕೆಲಸ ಮಾಡಿದೆ. ಆ ವೇಳೆಗೆ ಪೂನಾಕ್ಕೆ ಹೋಗಿದ್ದ ಗಿರೀಶ್‌ಕಾಸರವಳ್ಳಿ ಬೆಂಗಳೂರಿಗೆ ಹಿಂದಿರುಗಿ 'ಘಟಶ್ರಾದ್ಧ' ಆರಂಭಿಸಿದ್ದರು. ಆ ಚಿತ್ರಕ್ಕೂ ನಾನೇ ಪ್ರೊಡಕ್ಷನ್ ಮೇನೇಜರ್ ಆಗಿ ಕೆಲಸ ಮಾಡಿದೆ. ಆ ಕೆಲಸಗಳಿಂದ ಬರುತ್ತಿದ್ದ ಸಂಭಾವನೆಯನ್ನು 'ಗ್ರಹಣ' ಚಿತ್ರಕ್ಕೆ ಹಾಕಿದೆ. 'ಗ್ರಹಣ' ಕಪ್ಪು ಬಿಳುಪು ಚಿತ್ರ. ಆಗ 400 ರೂ.ಗಳಿಗೆ ಫಿಲ್ಮ್ ಸಿಗುತ್ತಿತ್ತು. ಹಣ ಸಿಕ್ಕಿದಂತೆ ಫಿಲ್ಮ್ ತಂದು ಚಿತ್ರ ಮುಗಿಸತೊಡಗಿದೆ.

ಆ ಮಧ್ಯೆ ನನ್ನ ಬಿ.ಎಸ್ಸಿ. ಮುಗಿದು ಡಿಗ್ರಿ ತೆಗೆದುಕೊಂಡಿದ್ದೆ. ಹಾಗೆಂದು ಅಷ್ಟಕ್ಕೇ ವಿದ್ಯಾಭ್ಯಾಸವನ್ನು ನಿಲ್ಲಿಸುವಂತಿರಲಿಲ್ಲ. ನಾನು ಡಬ್ಬಲ್ ಡಿಗ್ರಿ ತೆಗೆದುಕೊಳ್ಳಬೇಕೆಂದು ನನ್ನ ತಂದೆ ಆಸೆಪಡುತ್ತಿದ್ದರು. ಹಾಗೆಂದು ನಾನೂ ಅವರಿಗೆ ಭರವಸೆ ಕೊಟ್ಟಿದ್ದೆ. ಬಿ.ಎಸ್ಸಿ.ಯ ನಂತರ ಅದೇ ರೇಣುಕಾಚಾರ್ಯ ಕಾಲೇಜಿನಲ್ಲಿ ಎಲ್‌ಎಲ್.ಬಿ.ಗೆ ಸೇರಿದೆ. ಅಲ್ಲಿನನಗಾದ ಒಂದು ಅನುಕೂಲ ಎಂದರೆ ಕಾಲೇಜು ಬೆಳಿಗ್ಗೆಯೇ ಮುಗಿದುಹೋಗುತ್ತಿತ್ತು. ಜೊತೆಗೆ ಕ್ಲಾಸಿಗೆ ಹಾಜರಾಗಲೇಬೇಕು ಎನ್ನುವ ನಿಯಮವೂ ಇರಲಿಲ್ಲ. ಕ್ಲಾಸಿಗೆ ಹೋಗಲಿ, ಬಿಡಲಿ ಓದುವುದಂತೂ ನಮ್ಮ ಜವಾಬ್ದಾರಿ. ಆ ವ್ಯವಸ್ಥೆಯಿಂದಾಗಿ ನಾನು ಹೆಚ್ಚಿನ ಸಮಯವನ್ನು ಸಿನಿಮಾ ಮತ್ತು ನಾಟಕಗಳಿಗೆ ಕೊಡುವುದು ಸಾಧ್ಯವಾಗಿತ್ತು.

ಬಿ.ಎಸ್ಸಿ. ಓದುವಾಗ ಉಲ್ಲಾಳ್ ಷೀಲ್ಡ್ ಸ್ಪರ್ಧೆಯ ಡ್ರಾಮಾಗಳಲ್ಲಿ ನಾನೂ ಅಭಿನಯಿಸುತ್ತಿದ್ದೆನಷ್ಟೆ. ಷೀಲ್ಡ್ ಅಂತೂ ಬಂದಿರಲಿಲ್ಲ. ಆದರೆ ಲಾ ಕಾಲೇಜಿನಲ್ಲಿ ಉಲ್ಲಾಳ್ ಷೀಲ್ಡ್ ಕಾಂಪಿಟೇಷನ್‌ಗಾಗಿ ನಾನೇ ಎರಡು ನಾಟಕಗಳನ್ನು ನಿರ್ದೇಶಿಸಿದೆ. ಕುವೆಂಪು ಅವರ 'ಚಂದ್ರಹಾಸ' ಮತ್ತು ಬಾದಲ್ ಸರ್ಕಾರ್ ಅವರ 'ಏವಂ ಇಂದ್ರಜಿತ್' ಎಂಬ ಆ ನಾಟಕಗಳು ಕಾಲೇಜಿಗೆ ಉಲ್ಲಾಳ್ ಷೀಲ್ಡ್ ತಂದು ಕೊಟ್ಟವು. ಅದು ನನ್ನ ಆಗಿನ ಸಾಧನೆಯೇ ಸರಿ.

ಆ ನಾಟಕಗಳು ಮಾತ್ರವೇ ಅಲ್ಲ, ಎಂ.ಎಸ್.ಕೆ. ಪ್ರಭು ಅವರ 'ಬಕ', 'ಲೋರ್ಕಾನ 'ಬ್ಲಡ್ ವೆಡ್ಡಿಂಗ್', ವಸಂತ ಸೇನೆ ಆಧಾರಿತ 'ಶಕಾರನ ಸಾರೋಟು ಸಂಸ್ಥಾನಕ ಪ್ರಕರಣ' ಮುಂತಾದ ನಾಟಕಗಳನ್ನೂ ನಿರ್ದೇಶಿಸಿದೆ. ಆ ದಿನಗಳಲ್ಲಿಯೇ ಬಿ.ವಿ. ಕಾರಂತರ 'ಶಾಕುಂತಲ' ಸಂಸ್ಕೃತ ನಾಟಕದಲ್ಲಿಯೂ ಅಭಿನಯಿಸಿದೆ. ಆ ನಾಟಕದ ವಿಶೇಷವನ್ನು ಇಲ್ಲಿ ಹೇಳಲೇಬೇಕು.



ಯಾಕೆಂದರೆ ಅದೊಂದು ಅದ್ಭುತವಾದ ರಂಗ ಪ್ರಯೋಗ. ಅಂತಹದ್ದೊಂದು ಯೋಚನೆಯನ್ನು ಮಾಡಿದ್ದು ಆದ್ಯರಂಗಾಚಾರ್ಯರು. ವರ ಉಸ್ತುವಾರಿಯ ಆ ನಾಟಕದ ನಿರ್ದೇಶಕರು ಬಿ.ವಿ. ಕಾರಂತ್. ಅದು ಪ್ರದರ್ಶನ ಕಂಡದ್ದು ಭೂಪಾಲ್‌ನ ಉಜ್ಜಯಿನಿಯಲ್ಲಿ. ಸಂಸ್ಕೃತ ನಾಟಕ ಎನ್ನುವ ಅಂಜಿಕೆ ನಮಗಿರಲಿಲ್ಲ, ಹಾಗೇ ನಮ್ಮಿಂದ ಈ ನಾಟಕ ಆಗುತ್ತದೆ ಎನ್ನುವ ವಿಶ್ವಾಸ ಆದ್ಯರಿಗೂ ಇತ್ತು. ಕಾರಂತರಿಗೂ ಇತ್ತು. ಬೆಂಗಳೂರಿನಲ್ಲಿ ಸಾಕಷ್ಟು ರಿಹರ್ಸಲ್ ಮಾಡಿಕೊಂಡು ಉಜ್ಜಯಿನಿಗೆ ಹೋದೆವು. ಅತ್ಯುತ್ಸಾಹದಿಂದ ನಾಟಕ ಮಾಡಿದೆವು. ನಮ್ಮ ನಿರೀಕ್ಷೆಗಿಂತಲೂ ಚೆನ್ನಾಗಿಯೇ ಆಯಿತು ಆ ನಾಟಕ. ಇನ್ನೂ ಒಂದು ವಿಷಯ, ಶಾಕುಂತಲ ಪಾತ್ರದಲ್ಲಿದ್ದ ಹುಡುಗಿಯಂತೂ ಅದ್ಭುತವಾಗಿ ಅಭಿನಯಿಸಿದ್ದಳು. ಆಕೆಯ ಹೆಸರು ನೆನಪಾಗುತ್ತಿಲ್ಲ. (ಆಕೆ ಮುಂದೆ ರಾಜ್‌ಕುಮಾರ್ ಜೊತೆ ಸಿನಿಮಾದಲ್ಲೂ ಅಭಿನಯಿಸಿದಳು. ಮೂರ್‍ನಾಲ್ಕು ಚಿತ್ರಗಳಲ್ಲಿ ನಟಿಸಿದಳು ಎನ್ನಿಸುತ್ತೆ) ಅಂತೂ 'ಶಾಕುಂತಲ' ಒಂದು ಒಳ್ಳೆಯ ರಂಗ ಪ್ರಯೋಗ ಅನ್ನಿಸಿಕೊಂಡಿತು.

ಈ ಮಧ್ಯೆ 'ಗ್ರಹಣ'ದ ಕೆಲಸಗಳೂ ಆಗುತ್ತಿದ್ದವಲ್ಲಾ, ಅದು ಇನ್ನೇನು ಸಂಪೂರ್ಣವಾಗಿಬೇಕು ಎನ್ನುವ ಹೊತ್ತಿಗೆ ಮತ್ತೆ ಕೋಡಿಹಳ್ಳಿ ಶಿವರಾಮ್ ನನ್ನ ಜೊತೆಯಾದ. ಮತ್ತೆ ಹಣ ಹೊಂದಿಸತೊಡಗಿದ. ಎಸ್. ರಾಮಚಂದ್ರ ಅವರಂತೂ ಎಂತಹದ್ದೇ ಸಮಸ್ಯೆಯಲ್ಲೂ ನನ್ನ ಜೊತೆಗಿದ್ದು ಧೈರ್ಯ ತುಂಬುತ್ತಿದ್ದರು, ಅದಕ್ಕೆ ಸರಿಯಾಗಿ ನಟ, ನಟಿಯರೂ ದೈಹಿಕವಾಗಿ ದಪ್ಪಗಾಗಿರಲಿ, ಸಣ್ಣಗಾಗಿರಲಿ ಆಸಕ್ತಿಯಿಂದ ಅಭಿನಯಿಸಿ ಸಹಕರಿಸಿದರು. ಅಂತೂ ಒಂದು ದಿನ ಚಿತ್ರೀಕರಣ ಮುಗಿದೇಬಿಟ್ಟಿತು. ಆ ದಿನವನ್ನಂತೂ ನಾನು ಎಂದೂ ಮರೆಯಲು ಆಗದು. ಆಗ ನಡೆದ ಒಂದು ಪ್ರಸಂಗವನ್ನಂತೂ ನಿಮಗೆ ಹೇಳಬೇಕು.

'ಗ್ರಹಣ' ಕೊನೆಯ ಹಂತದ ಚಿತ್ರೀಕರಣ ನಡೆದದ್ದು ಚನ್ನಪಟ್ಟಣ ಸಮೀಪದ ದೊಡ್ಡಮಳೂರು ಗ್ರಾಮದಲ್ಲಿ. ಅಲ್ಲೇ ಕುಂಬಳಕಾಯಿ ಒಡೆದದ್ದು. ಆ ದಿನ ಸಂಜೆ ಎಲ್ಲರೂ ಏನೋ ಸಾಧನೆಯೊಂದನ್ನು ಮಾಡಿ ಗೆದ್ದಂತೆ ಸಮಾಧಾನದ ನಿಟ್ಟುಸಿರು ಬಿಟ್ಟಿದ್ದರು. ಸಂಭ್ರಮದಿಂದ ಪರಸ್ಪರ ಬೀಳ್ಕೊಂಡು ಬೆಂಗಳೂರಿಗೆ ಹಿಂದಿರುಗಿದರು. ಎಲ್ಲರನ್ನೂ ಕಳುಹಿಸಿಕೊಡುವ ಜವಾಬ್ದಾರಿ ನನ್ನ ಮೇಲಿತ್ತು. ನನ್ನ ಜೊತೆ ಅಸಿಸ್ಟೆಂಟ್ ಆಗಿದ್ದ ಕತ್ತೆ ರಾಜು ಇದ್ದ. (ಮುಂದೆ ಆ ಕತ್ತೆ ರಾಜು ಕೂಡಾ ನಿರ್ಮಾಪಕನಾಗಿ ಪ್ರಭಾಕರ್ ಜೊತೆ ಸೇರಿ ಒಂದೆರಡು ಚಿತ್ರಗಳನ್ನು ಮಾಡಿದ) ಎಲ್ಲರೂ ಹೊರಟ ಮೇಲೆ ಉಳಿದದ್ದು ನಾನು ಮತ್ತು ಅವನು.

ನಮ್ಮಿಬ್ಬರಿಗೆ ಯಾವುದೇ ವಾಹನವಿರಲಿಲ್ಲ. ಬಸ್ಸಿನಲ್ಲಿ ಬೆಂಗಳೂರಿಗೆ ಬರಬೇಕಿತ್ತು. ಆದರೆ ನನ್ನ ಜೇಬಿನಲ್ಲಿ ನಮ್ಮಿಬ್ಬರಿಗೂ ಟಿಕೆಟು ತೆಗೆದುಕೊಳ್ಳುವಷ್ಟೂ ಹಣವಿರಲಿಲ್ಲೇ. ಅದನ್ನು ಅವನಿಗೇನು ಹೇಳುವುದು, ಅವನಲ್ಲಿ ಹಣ ಇರುತ್ತದಲ್ಲಾ ಎಂದು ಸುಮ್ಮನಾಗಿಬಿಟ್ಟೆ. ಇಬ್ಬರೂ ಖಾಸಗಿ ಬಸ್ಸೊಂದನ್ನು ಹತ್ತಿದೆವು. ಬಸ್ಸು ಹತ್ತಿದ ಮೇಲೆ ನಾನು "ನನ್ನಲ್ಲಿ ಹಣವಿಲ್ಲ, ಇಬ್ಬರಿಗೂ ನೀನೇ ಟಿಕೆಟ್ ತೆಗೆದುಕೋ" ಎಂದು ರಾಜೂಗೆ ಹೇಳಿದೆ. ಆದರೆ ಅವನೂ "ನನ್ನಲ್ಲೂ ಹಣ ಇಲ್ಲಾ ಸಾರ್, ನಿಮ್ಮಲ್ಲಿ ಇರುತ್ತದಲ್ಲಾ ಎಂದುಕೊಂಡೆ" ಅಂದ. ಆ ಕ್ಷಣ ಇಬ್ಬರೂ

ಗಾಬರಿಯಾದೆವು. ಟಿಕೆಟ್ ತೆಗೆದುಕೊಳ್ಳಲೂ ದುಡ್ಡಿಲ್ಲದೆ ಬೆಂಗಳೂರಿಗೆ ಹೋಗಲು ಆಗುತ್ತದೆಯೇ? ಅದಕ್ಕೆ ಬದಲು ಇಳಿದು ಬಿಡೋದು, ವಾಪಸ್ ಹಳ್ಳಿಗೇ ಹೋಗಿ ಪಟೇಲರಿಂದಲೋ, ಮತ್ತಾರಿಂದಲೋ ಹಣ ತೆಗೆದುಕೊಂಡು ಬೆಂಗಳೂರಿಗೆ ಹೋದರಾಯಿತು ಅಂದುಕೊಂಡೆ. ಅದನ್ನು ರಾಜೂಗೆ ಹೇಳಿದೆ ಕೂಡ. ಆ ವೇಳೆಗೆ ಬಸ್ಸು ಸ್ವಲ್ಪ ದೂರ ಹೋಗಿತ್ತು. ಇಳಿಯುವುದೇನೋ ಸರಿ, ಆದರೆ ಕಂಡಕ್ಟರ್‌ಗೆ ಏನೆಂದು ಹೇಳಿ ಇಳಿಯುವುದು? ಎನ್ನುವ ಪ್ರಶ್ನೆ ಎದುರಾಯಿತು. ಯಾಕೆಂದರೆ ನಮ್ಮಲ್ಲಿ ಟಿಕೇಟಿಗೂ ದುಡ್ಡಿಲ್ಲ ಎಂದು ಕಂಡಕ್ಟರ್‌ಗೆ ಹೇಳುವುದೇ? ಅದು ಅವಮಾನವಲ್ಲವೆ ಎನ್ನುವ ಅಂಜಿಕೆ ಕಾಡತೊಡಗಿತು. ಇನ್ನೇನು ಕಂಡಕ್ಟರ್ ನಮ್ಮ ಬಳಿ ಬರುತ್ತಾನೆ, ಟಿಕೇಟ್ ಕೇಳುತ್ತಾನೆ, ಏನು ಹೇಳೋದು? ಎಂದು ಯೋಚಿಸುತ್ತಿದ್ದೆವು. ನಿರೀಕ್ಷೆಯಂತೆಯೇ ಕಂಡಕ್ಟರ್ ನಮ್ಮ ಬಳಿ ಬಂದ.

ಇಲ್ಲೊಂದು ಮಾತು ಹೇಳಬೇಕು. ಈ ನಾಟಕ, ಸಿನಿಮಾ ಜನರಿದ್ದಾರಲ್ಲಾ, ಇವರಿಗೆ ಆರ್ಥಿಕ ತೊಂದರೆ ಎಷ್ಟೇ ಇದ್ದರೂ ಅದೃಷ್ಟ ಎಂಬುದು ಇವರನ್ನು ಹೇಗೋ ಕಾಪಾಡಿಬಿಡುತ್ತದೆ. ಯಾರೋ ಊಟ, ತಿಂಡಿ ವ್ಯವಸ್ಥೆ ಮಾಡಿಕೊಡುತ್ತಾರೆ, ಮತ್ಯಾರೋ ಉಳಿಯಲು ವ್ಯವಸ್ಥೆ ಮಾಡುತ್ತಾರೆ. ನಮಗೂ ಹಾಗೇ ಆಯಿತು. ಬಸ್‌ನಲ್ಲಿ ನಾನು ಟಿಕೆಟ್ ತೆಗೆದುಕೊಳ್ಳಲು ದುಡ್ಡಿಲ್ಲವಲ್ಲ ಎಂದು ಪೇಚಾಡಿಕೊಳ್ಳುತ್ತಿದ್ದರೆ ಕಂಡಕ್ಟರ್‌ಗೆ ನಾವು ಸಿನಿಮಾದವರು ಎಂದು ಗೊತ್ತಾದ ಮೇಲೆ ನಮ್ಮೊಂದಿಗೆ ಮಾತನಾಡುವ ಆಸೆ. ಸಂತೋಷದಿಂದ ಏನೇನೋ ಮಾತನಾಡುತ್ತಲೇ ಇದ್ದ. ಮಧ್ಯೆ ಮಧ್ಯೆ ಮತ್ತಾರಿಗೋ ಟಿಕೆಟ್ ಕೊಡಲು ಅತ್ತ ಹೋದರೂ ಮತ್ತೆ ನಮ್ಮತ್ತ ಬಂದು ಮಾತನಾಡುತ್ತಿದ್ದ. ನಮಗೋ ಟಿಕೆಟ್ ತೆಗೆದುಕೊಂಡಿಲ್ಲವಲ್ಲಾ ಎನ್ನುವ ಅಳುಕು. ಆ ಅಳುಕಿನಲ್ಲಿಯೂ ಬೆಂಗಳೂರಿಗೆ ಎರಡು ಟಿಕೆಟ್ ಕೊಡಿ ಎಂತಲೋ, ಟಿಕೆಟ್‌ಗೆ ಎಷ್ಟು ದುಡ್ಡು ಎಂತಲೋ ಕೇಳುವ ಯತ್ನ ಮಾಡುತ್ತಿದ್ದೆವು. ಆದರೆ ಆತ ಟಿಕೆಟ್ ವಿಷಯ ಬದಲಿಸಿ ಮತ್ತೇನೋ ಮಾತನಾಡುತ್ತಿದ್ದ. ಹಾಗೇ ಬೆಂಗಳೂರು ಮುಟ್ಟಿಬಿಟ್ಟೆವು. ಬಸ್ಸು ಮೈಸೂರು ಸರ್ಕಲ್ಲಿಗೆ ಬರುವ ಹೊತ್ತಿಗೆ ನಾನು ಬಸ್‌ಸ್ಟ್ಯಾಂಡ್‌ವರೆಗೂ ಹೋಗುವುದೇ ಬೇಡ ಎಂದುಕೊಂಡು ಇಳಿದುಬಿಟ್ಟೆ. ನಾನು ಇಳಿದ ಮೇಲೆ ರಾಜು ಇರುತ್ತಾನೆಯೆ? ಅವನೂ ಇಳಿದುಬಿಟ್ಟ. ಅಬ್ಬಾ! ದೊಡ್ಡದೊಂದು ಸಂಕಷ್ಟದಿಂದ ಪಾರಾದಂತಾಯಿತು ಎಂದು ನಿಟ್ಟುಸಿರು ಬಿಟ್ಟು ಮನೆ ತಲುಪಿದೆವು.

### ‘ಕಾಡು’ ಚಿತ್ರಕ್ಕೆ ಕೆಲಸ

ಹೀಗೆ ಪಡಬಾರದ ಪಾಡುಗಳನ್ನೆಲ್ಲಾ ಪಟ್ಟು ‘ಗ್ರಹಣ’ ಚಿತ್ರೀಕರಣ ಮುಗಿಸಿದೆ. ಗಿರೀಶ್ ಕಾರ್ನಾಡರಲ್ಲಿ ಕಲಿತದ್ದನ್ನು ನನ್ನ ಚೊಚ್ಚಲ ಚಿತ್ರದಲ್ಲಿ ಪ್ರಯೋಗಿಸಿದ್ದೆ. ಚಿತ್ರದುದ್ದಕ್ಕೂ ಛಾಯಾಗ್ರಾಹಕ ಎಸ್. ರಾಮಚಂದ್ರ ಸಲಹೆ ಕೊಡುತ್ತ ಸಹಕರಿಸಿದರು. ಅದೆಲ್ಲಾ ವ್ಯರ್ಥವಾಗಲಿಲ್ಲ. ಆ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಬಂದಿತು. ಹಿಂದೆಯೇ ಐದಾರೂ ಪ್ರಶಸ್ತಿಗಳು ಬಂದು, ಚಿತ್ರ ಪನೋರಮಾ ಪ್ರದರ್ಶನಕ್ಕೂ ಆಯ್ಕೆಯಾಯಿತು. ಅಷ್ಟಾದರೂ ನನ್ನ ಪರಿಸ್ಥಿತಿ ಸುಧಾರಿಸಲಿಲ್ಲ. ನಿಮಗೆ ಗೊತ್ತಲ್ಲಾ, ‘ಗ್ರಹಣ’ ಮುಗಿಸಿದಾಗಲೂ ನಾನು ಎಲ್.ಎಲ್.ಬಿ.ಯಲ್ಲಿಯೇ ಇದ್ದೆ. ಕಾಲೇಜಿಗೆ ಫೀಸ್ ಕಟ್ಟಲೂ ಪರದಾಡುತ್ತಿದ್ದೆ. ಆ ನಂತರದ



ಎರಡು ವರ್ಷದಲ್ಲೂ ನನಗೆ ಬೇರೆ ಚಿತ್ರಗಳ ನಿರ್ದೇಶನದ ಅವಕಾಶ ಸಿಗಲಿಲ್ಲ. ಆಗೆಲ್ಲಾ ನಾನು ಬದುಕಿದ್ದು ನಾಟಕಗಳಿಂದ. ಕಾರ್ನಾಡ್, ಕಾರಂತ್, ಜಿ.ವಿ. ಅಯ್ಯರ್ ಮುಂತಾದವರ ಚಿತ್ರಗಳಿಂದ. ಆಗಷ್ಟೇ ‘ಕಾಡು’ ಚಿತ್ರೀಕರಣ ಮುಗಿದಿತ್ತು. ಚಿತ್ರದ ಎಡಿಟಿಂಗ್ ಕೆಲಸ ಮದ್ರಾಸಿನಲ್ಲಿ ಆಗಬೇಕಿತ್ತು. ಮದ್ರಾಸಿನಲ್ಲಿದ್ದ ಸಂಕಲನಕಾರ ಪಿ. ಭಕ್ತವತ್ಸಲಂ ಬೆಂಗಳೂರಿನಿಂದ ಫಿಲಂರೋಲ್ ಜೊತೆಗೆ ಯಾರಾದರೊಬ್ಬರನ್ನು ಮದ್ರಾಸಿಗೆ ಕಳುಹಿಸುವಂತೆ ಕಾರ್ನಾಡರಿಗೆ ಹೇಳಿದ್ದರು. ಕಾರ್ನಾಡರು ಮದ್ರಾಸಿಗೆ ಹೋಗುವಂತೆ ನನಗೇ ಹೇಳಬೇಕೆ?

ನನಗೆ ತಮಿಳು ಬರುತ್ತಿರಲಿಲ್ಲ, ಅದಕ್ಕೂ ಮೊದಲು ನಾಟಕ ಪ್ರವಾಸದಲ್ಲಿ ಮದ್ರಾಸಿಗೆ ಹೋಗಿದ್ದೆನಾದರೂ ತಂಡದಲ್ಲಿರುತ್ತಿದ್ದುದರಿಂದ ಭಾಷೆಯ ಸಮಸ್ಯೆ ಕಾಡಿರಲಿಲ್ಲ. ಆದರೆ ನಾನೊಬ್ಬನೇ ಮದ್ರಾಸಿಗೆ ಹೋಗುವ ಮಾತು ಬಂದಾಗ ಸ್ವಲ್ಪ ಮಟ್ಟಿಗೆ ಭಯವೇ ಆಯಿತು. ಹಾಗೆಂದು ಆ ಜವಾಬ್ದಾರಿಯಿಂದ ನುಣುಚಿಕೊಳ್ಳುವಂತೆಯೂ ಇರಲಿಲ್ಲ. ಹೋಗಲು ಸಿದ್ಧನಾದೆ.

ಎಸ್.ಆರ್.ಎಸ್. ಬಸ್‌ನಲ್ಲಿ ನನಗೊಂದು ಸೀಟ್ ರಿಸರ್ವೇಶನ್ ಆಯಿತು. ಮದ್ರಾಸಿನ ರಾಯ್‌ಪೇಟೆಯಲ್ಲಿ ಹೋಟೆಲ್ ಸ್ವಾಗತ್ ಇದೆ. ಅಲ್ಲಿ ಉಳಿದುಕೊಳ್ಳಬೇಕು. ಅಲ್ಲಿಂದ ಜೆಮಿನಿ ಸ್ಟುಡಿಯೋಗೆ ಹೋಗಬೇಕು, ಅಲ್ಲಿ ಭಕ್ತವತ್ಸಲಂ ಅವರನ್ನು ಭೇಟಿಯಾಗಬೇಕು ಎಂದೆಲ್ಲಾ ಹೇಳಿ ಕಾರ್ನಾಡ್ ನನ್ನ ಕೈಗೆ ಒಂದಷ್ಟು ದುಡ್ಡು ಕೊಟ್ಟರು. ಆ ಹಣದಲ್ಲಿಯೇ ಭಕ್ತವತ್ಸಲಂ ಅವರಿಗೂ ಕೊಡಬೇಕು ಎಂದಿದ್ದುದರಿಂದ ಹಣವನ್ನು ಜೋಪಾನವಾಗಿಟ್ಟುಕೊಂಡೆ. ಸಿನಿಮಾ ಪ್ರಿಂಟ್‌ನ ಎರಡು ಕ್ಯಾನ್ ಮತ್ತು ನನ್ನ ಬ್ಯಾಗ್‌ನೊಂದಿಗೆ ಬಸ್ಸು ಹತ್ತಿದೆ.

ಬೆಳಿಗ್ಗೆ ಮದ್ರಾಸಿನಲ್ಲಿಳಿದು ಆಟೋ ಹತ್ತಿದೆ. ತಮಿಳು ಬರದಿದ್ದುದರಿಂದ ಆಟೋದವನಿಗೆ “ರಾಯ್‌ಪೇಟ್, ಹೋಟೆಲ್ ಸ್ವಾಗತ್” ಎಂದಷ್ಟೇ ಹೇಳಿದೆ. ಆಟೋ ಹೋಗುವಾಗ ನಾನು ಮದ್ರಾಸಿನ ರಸ್ತೆ, ಕಟ್ಟಡಗಳನ್ನು ಬೆರಗುಗಣ್ಣುಗಳಿಂದ ನೋಡುತ್ತ ಕುಳಿತಿದ್ದೆ. ಬಸ್ ನಿಲ್ದಾಣದಿಂದ ಹೋಟೆಲ್ ಸ್ವಾಗತ್ ಸ್ವಲ್ಪ ದೂರವೇ. ಆಟೋದವನು ಸುತ್ತಿ ಬಳಸಿ ಹೋಗಿ ನನಗೆ ಮೋಸ ಮಾಡಬಹುದೇನೋ ಎನ್ನುವ ಭಯವಿತ್ತು. ಆದರೆ ಹಾಗೇನೂ ಆಗಲಿಲ್ಲ. ಸೀದಾ ಹೋಟೆಲ್ ಸ್ವಾಗತ್ ಬಳಿ ಬಿಟ್ಟ.

ಹೋಟೆಲ್ ಸ್ವಾಗತ್‌ನ ಕೌಂಡರ್ ಬಳಿ ಹೋದಾಗ ನನಗೊಂದು ಆಶ್ಚರ್ಯ ಕಾದಿತ್ತು. ಅಲ್ಲಿ ಕನ್ನಡದ ಹುಡುಗರೇ ಇದ್ದರು, ಅವರನ್ನು ನೋಡುತ್ತ ಸದ್ಯ! ಅರ್ಧ ಸಮಸ್ಯೆ ಬಗೆಹರಿಯಿತು ಎಂದುಕೊಳ್ಳುತ್ತ ರೂಂ ಬುಕ್ ಮಾಡಿದೆ. ನನಗಿನ್ನೂ ಚೆನ್ನಾಗಿ ನೆನಪಿದೆ. ಅಲ್ಲಿ ನಾನಿದ್ದದ್ದು ಐದನೇ ಅಂತಸ್ತಿನ 54ನೇ ನಂಬರ್ ರೂಂನಲ್ಲಿ. ಅಲ್ಲಿ ಸ್ನಾನ ಮುಗಿಸಿದೆ. ಟಿಫನ್ ಮಾಡಲು ಕೆಳಕ್ಕೇ ಬರಬೇಕಿತ್ತು. ಇಳಿದು ರೆಸ್ಟೋರೆಂಟ್‌ನಲ್ಲಿ ಕುಳಿತೆ. ಕನ್ನಡದವರಿದ್ದುದರಿಂದ ಭಾಷಾ ಸಮಸ್ಯೆಯೇನೂ ಇರಲಿಲ್ಲ. ಅಲ್ಲಿ ಪೊಂಗಲ್, ಉದ್ದಿನವಡೆ ಫೇಮಸ್ ಎಂದು ಗೊತ್ತಾಯಿತು. ತರಿಸಿ ತಿಂದು ಕಾಫಿ ಕುಡಿದೆ, ಎದ್ದು ಹೊರಬಂದು ಬಾಗಿಲ ಬಳಿಯೇ ನಿಂತೂ ಸುತ್ತಲೂ ನೋಡಿದೆ. ಆಗ ಆಶ್ಚರ್ಯ! ಆ ದಿನಗಳಲ್ಲಿ ನಾವು ಚಿತ್ರರಂಗದ ಘಟಾನುಘಟಿಗಳು ಎಂದು ಭಾವಿಸಿದ್ದವರೆಲ್ಲಾ ಅಲ್ಲೇ ಓಡಾಡುತ್ತಿದ್ದರು. ಚಿ. ಉದಯಶಂಕರ್, ವಿ. ಸೋಮಶೇಖರ್,

ಜಿ.ಕೆ. ವೆಂಕಟೇಶ್... ಹೀಗೆ ಒಬ್ಬೊಬ್ಬರೇ ಕಾಣಿಸಿಕೊಳ್ಳತೊಡಗಿದರು. ಅವರನ್ನೆಲ್ಲಾ ನೋಡಿ ನನಗೆ ಅತೀವ ಸಂತೋಷ. ಮದ್ರಾಸಿನಲ್ಲಿದ್ದೇನೆ ಎಂಬುದೇ ಮರೆತು ಹೋಗಿ ಬೆಂಗಳೂರಿನಲ್ಲೇ ಇದ್ದೇನೆ ಅನ್ನಿಸಿತು.

ಅವರನ್ನೆಲ್ಲಾ ನೋಡುತ್ತ ಸಂಭ್ರಮಿಸುವಾಗಲೇ ನನಗೆ ಪರಿಚಿತರ್‍ಯಾರಾದರೂ ಕಾಣುತ್ತಾರಾ ಎಂದು ನಿರೀಕ್ಷಿಸುತ್ತಿದ್ದೆ. ಆಗ ಸೋಮು ಎಂಬಾತ ಕಣ್ಣಿಗೆ ಬಿದ್ದ. ಆತ ಬೆಂಗಳೂರಿನ ಶ್ರೀರಾಂಪುರದವನು, ನನಗೆ ಗೊತ್ತಿದ್ದವನೇ. ಆತನನ್ನು ಮಾತನಾಡಿಸಿ ಜೆಮಿನಿ ಸ್ಟುಡಿಯೋಗೆ ಹೇಗೆ ಹೋಗಬೇಕೆಂದು ವಿಚಾರಿಸಿದೆ. ಆಟೋದಲ್ಲಿ ಹೋದರೆ ಸುಮ್ಮನೆ ದುಡ್ಡು ಖರ್ಚಾಗಿ ಬಿಡುತ್ತದಲ್ಲಾ ಎನ್ನುವ ಕಾರಣಕ್ಕೆ ನಾನು ನಡೆದೇ ಹೋಗಲು ನಿಶ್ಚಯಿಸಿದ್ದೆ. ಸೋಮು ಯಾವ ರಸ್ತೆಯಲ್ಲಿ ಹೋಗಬೇಕೆಂದು ಹೇಳಿದ. ನಾನು ಕ್ಯಾನ್‌ಗಳನ್ನು ತೆಗೆದುಕೊಂಡು ಜೆಮಿನಿಯತ್ತ ಕಾಲು ಹಾಕಿದೆ. ಸ್ವಲ್ಪ ದೂರದವರೆಗೆ ಸೋಮು ಹೇಳಿದ್ದು ನೆನಪಿತ್ತು. ಮುಂದೆ ತಿಳಿಯದೇ ಹೋದಾಗ ರಸ್ತೆಯಲ್ಲಿ ಎದುರಾದವರನ್ನೇ "ಜೆಮಿನಿ ಸ್ಟುಡಿಯೋ...?" ಎಂದಷ್ಟೇ ಕೇಳುತ್ತ ಅವರು ತೋರಿಸಿದ ರಸ್ತೆಯಲ್ಲಿ ನಡೆಯುತ್ತಿದ್ದೆ. ಅದು ಫೇಮಸ್ ಸ್ಟುಡಿಯೋ ಆಗಿದ್ದುದರಿಂದ ವಿಚಾರಿಸಲು ಕಷ್ಟವಾಗಲಿಲ್ಲ. ಅಂತೂ ಅರ್ಧ ಗಂಟೆ ನಡೆದು ಜೆಮಿನಿ ಸ್ಟುಡಿಯೋ ತಲುಪಿದೆ. ಆದರೆ ಅಲ್ಲಿ ಮತ್ತೊಂದು ಸಮಸ್ಯೆ ಎದುರಾಯಿತು.

ಅಲ್ಲಿಯ ಸೆಕ್ಯುರಿಟಿಯವನು ತಡೆದು "ಯಾರು ನೀನು? ಯಾರನ್ನು ನೋಡಬೇಕು?" ಎಂದು ಏನೇನೋ ಕೇಳುತ್ತಿದ್ದ.

ನನಗೆ ತಮಿಳು ಬಾರದೆ 'ಕಾಡು, ಭಕ್ತವತ್ಸಲಂ' ಎನ್ನುತ್ತಿದ್ದೆ. ನಾನು 'ಕಾಡು' ಎಂದದ್ದು ಅವನಿಗೆ ವಿಚಿತ್ರವಾಗಿತ್ತು. ಒಳಕ್ಕೆ ಬಿಡಲು ಒಪ್ಪಲೇ ಇಲ್ಲ. ರೇಗಾಡಿ ದೂರ ಕಳುಹಿಸುತ್ತಿದ್ದ. ನನಗೆ ಅಸಾಧ್ಯ ಕೋಪ. ಆದರೆ ಮಾಡುವುದಾದರೂ ಏನು? ಮತ್ತೆ ಯಾರಾದರೂ ಗುರುತಿನವರು ಸಿಗುತ್ತಾರಾ ಎಂದು ಆಸೆಯ ಕಣ್ಣುಗಳಿಂದ ಅಲ್ಲಿ ಓಡಾಡುತ್ತಿದ್ದವರನ್ನು ಗಮನಿಸುತ್ತ ನಿಂತೆ. ನನ್ನ ಪುಣ್ಯ, ಭಕ್ತವತ್ಸಲಂ ಅವರಲ್ಲಿ ಸಹಾಯಕನಾಗಿದ್ದ ಸ್ಟ್ಯಾನ್ಲೆ ಎಂಬಾತ ಕಣ್ಣಿಗೆ ಬಿದ್ದ. ಅವನನ್ನು ನೋಡಿದಾಕ್ಷಣ ನನಗೆ ಹೋದ ಜೀವ ಬಂದಂತಾಯಿತು. ಅವನನ್ನು ಕೂಡಿ ಮಾತನಾಡಿಸಿ ವಿಷಯ ತಿಳಿಸಿದೆ. ಆತ ಸೆಕ್ಯೂರಿಟಿಯವನಿಗೆ ಹೇಳಿ ನನ್ನನ್ನು ಒಳಕ್ಕೆ ಕರೆದೊಯ್ದ.

ಸಂಕಲನಕಾರ ಭಕ್ತವತ್ಸಲಂ ಅವರಿಗೆ 'ಕಾಡು' ಪ್ರಿಂಟ್ ಕೊಟ್ಟು ಹಣವನ್ನೂ ಕೊಟ್ಟೆ. ನಂತರ ಮದ್ರಾಸಿನಲ್ಲಿ ನನಗಾಗುವ ತೊಂದರೆಯನ್ನು ಹೇಳಿಕೊಂಡೆ. ಅವರು ನಗುತ್ತ ನನ್ನ ಸಹಾಯಕ್ಕೆಂದು ಒಬ್ಬ ಹುಡುಗನನ್ನು ಕೊಟ್ಟರು. ಆ ಹುಡುಗ ನನಗೆ ಮಾರ್ಗದರ್ಶಕನಾದ. ಎಲ್ಲಿಂದ ಎಲ್ಲಿಗೆ? ಯಾವ ರಸ್ತೆ? ಯಾವ ಬಸ್? ಯಾವ ಹೋಟೆಲ್? ಎಂಬುದನ್ನೆಲ್ಲಾ ತೋರಿಸಿಕೊಟ್ಟ.

ಹೀಗೆ ಭಾಷಾ ಸಮಸ್ಯೆಯ ನಡುವೆಯೂ ನಾನು ಮದ್ರಾಸಿನಲ್ಲಿದ್ದೆ. 'ಕಾಡು' ಚಿತ್ರದ ಕೆಲಸಗಳು ಮುಗಿಯುವಷ್ಟರಲ್ಲಿ ನಾನು ಭಕ್ತವತ್ಸಲಂ ಅವರ ಎಡಿಟಿಂಗ್ ಸ್ಟೈಲ್‌ಗೆ ಮಾರು ಹೋಗಿದ್ದೆ. ಮುಂದೆ ನಾನೂ ಎಡಿಟಿಂಗ್ ಮಾಡುವುದರ ನಾಂದಿಯೇ ಆಯಿತು ಅದು. ಭಕ್ತವತ್ಸಲಂ ಅವರ ಎಡಿಟಿಂಗ್ ರೂಂ ನನಗೆ ವಿದ್ಯಾಪೀಠವೇ ಆಯಿತು.



## ಕಲಾವಿದರ ಸೂಟ್‌ಕೇಸ್ ಹೊರುವ ಕೆಲಸ

'ಚೋಮನ ದುಡಿ', 'ಕಾಡು'ಗಳಂತಹ ಚಿತ್ರಗಳಿಗೆ ಕೆಸಲ ಮಾಡಿದ್ದ ಭಕ್ತವತ್ಸಲಂ 'ಶಂಕರ್ ಗುರು'ದಂತಹ ಕಮರ್ಷಿಯಲ್ ಚಿತ್ರಗಳಿಗೂ ಕೆಲಸ ಮಾಡಲು ಆರಂಭಿಸಿದರು. ಅವರಿಂದ ಎಡಿಟಿಂಗ್ ವಿದ್ಯೆ ಕಲಿಯಬೇಕು ಎನ್ನುವ ಆಸಕ್ತಿಯಿಂದ ಮತ್ತೆ ಮದ್ರಾಸಿಗೇ ಹೋಗಿ ಅವರೊಂದಿಗೆ ಸುಮಾರು ಒಂದು ವರ್ಷವಿದ್ದೆ. ಮುಂದೆ ಆಸೀಮಾದವರ ಸ್ಪರ್ಧೆಯೊಂದರಲ್ಲಿ ಪಾಲ್ಗೊಂಡ ನಾನು 16 ಎಂ.ಎಂ. ಸಿನಿಮಾವೊಂದನ್ನು ಮಾಡಿ, ಎಡಿಟಿಂಗ್ ಕೆಲಸ ಪೂರ್ತಿ ನಾನೇ ಮಾಡಿದೆ. ತಮಾಷೆ ಅಂದರೆ ಸೌಂಡ್ ಫಿಲಂ ಒಟ್ಟಿಗೇ ರೆಕಾರ್ಡ್ ಆಗಿಬಿಟ್ಟಿತ್ತು. ಅದನ್ನು ಪ್ರತ್ಯೇಕ ಮಾಡಲು ತುಂಬಾ ಹೆಣಗಾಡಿದೆ.

ಇದೆಲ್ಲಾ ಮದ್ರಾಸಿನ ಅನುಭವ, ಹೀಗೆ ಭಾಷೆ ಬರದೆ ಇನ್ನೊಮ್ಮೆ ಪರದಾಡಿದ್ದು ಮುಂಬೈನಲ್ಲಿ. ನಾನು ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಕೆಲಸ ಮಾಡಿದ್ದ 'ಚೋಮನ ದುಡಿ' ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಆಯ್ಕೆಯಾಯಿತು. ಆ ಕಾರಣಕ್ಕಾಗಿ ಆ ಚಿತ್ರ ಪ್ರದರ್ಶನಗೊಳ್ಳಲು ಚಿತ್ರಕ್ಕೆ ಸಬ್‌ಟೈಟಲ್ ಮಾಡಿಸಬೇಕಾಗಿತ್ತು. ಆಗ ಸಬ್‌ಟೈಟಲ್ ಮಾಡುತ್ತಿದ್ದವರೆಂದರೆ ಮುಂಬೈನ ರಾವ್ ಅಂಡ್ ಕೋ ಮಾತ್ರ. ಅವರನ್ನು ಬಿಟ್ಟರೆ ಇಡೀ ಇಂಡಿಯಾದಲ್ಲಿ ಮತ್ತಾರೂ ಸಬ್‌ಟೈಟಲ್ ಮಾಡುತ್ತಿರಲಿಲ್ಲ. ರಾವ್ ಕನ್ನಡಿಗರೇ. ಮಂಗಳೂರಿನಿಂದ ಮುಂಬೈಗೆ ಹೋಗಿ ನೆಲೆಸಿದ್ದರು. ತುಂಬಾ ಶ್ರದ್ಧೆಯಿಂದ ಸಬ್‌ಟೈಟಲ್ ಕೆಲಸ ಮಾಡುತ್ತಿದ್ದರು.

ಸಬ್‌ಟೈಟಲ್ ಎಂದರೆ ಗೊತ್ತಲ್ಲಾ? ಪರಭಾಷಾ ಚಿತ್ರಗಳ ಮೇಲೆ ಆ ಚಿತ್ರದ ಸಂಭಾಷಣೆಯನ್ನು ನಮ್ಮ ಭಾಷೆಯಲ್ಲಿ ಬರೆಯುವುದು. 'ಚೋಮನ ದುಡಿ' ಕನ್ನಡ ಚಿತ್ರ. ಚಿತ್ರೋತ್ಸವಕ್ಕೆ ಆಯ್ಕೆಯಾಗಿದ್ದುದರಿಂದ ಅದಕ್ಕೆ ಇಂಗ್ಲಿಷ್ ಸಬ್‌ಟೈಟಲ್ ಮಾಡಿಸಬೇಕಿತ್ತು. ಅದು ಸುಲಭದ ಕೆಲಸವಲ್ಲ. ನಮ್ಮಲ್ಲಿ ಪ್ರಿಂಟಿಗ್‌ಪ್ರೆಸ್‌ನಲ್ಲಿ ಬಳಸುವ ಅಕ್ಷರಗಳ ಮೊಳೆಗಳಿರುತ್ತವಲ್ಲಾ, ಅಂತಹದ್ದೇ ಮತ್ತೂ ಆಧುನಿಕ ಮೊಳೆಗಳು, ಅವನ್ನು ಕಾಯಿಸಿ ಸಿನಿಮಾ ಪ್ರಿಂಟ್ ಮೇಲೆ ಒತ್ತುತ್ತಿದ್ದರು, ಹಾಗೆ ಒತ್ತುವಾಗ ಕೆಲವು ನಿಯಮಗಳನ್ನೂ ಅನುಸರಿಸಬೇಕಿತ್ತು. 24 ಪದಗಳಿರಬೇಕು, ಅವು ಎರಡೇ ಲೈನ್‌ನಲ್ಲಿರಬೇಕು. ಆದರೆ ವಾಕ್ಯದ ಅರ್ಥ ಕೆಡಬಾರದಿತ್ತು. ಅದರ ಪ್ರಾಥಮಿಕ ಕೆಲಸಗಳನ್ನು ಬೆಂಗಳೂರಿನಲ್ಲೇ ಮಾಡಿದ್ದ ಬಿ.ವಿ. ಕಾರಂತರು ಪ್ರಿಂಟ್ ತೆಗೆದುಕೊಂಡು ಮುಂಬೈಗೆ ಹೋಗುವಂತೆ ನನಗೇ ಹೇಳಿದರು. ನನ್ನ ಜೊತೆಗೆ ಟಿ.ಎಸ್. ರಂಗಾ ಕೂಡ ಬರುವುದೆಂದಾಯಿತು.

ಅದುವರೆಗೆ ನಾನು ಬಾಂಬೆಗೆ ಹೋಗಿರಲಿಲ್ಲ. ನಾನೂ ಹಿಂದಿಯಲ್ಲಿ ರಾಷ್ಟ್ರಭಾಷಾ ಮಾಡಿದ್ದೆ. ಹಿಂದಿಯನ್ನು ಓದುತ್ತಿದ್ದೆ. ಹೇಳಿದರೆ ಅರ್ಥವೂ ಆಗುತ್ತಿತ್ತು. ಆದರೆ ಸಲೀಸಾಗಿ ಮಾತನಾಡಲು ಬರುತ್ತಿರಲಿಲ್ಲ. ಟಿ.ಎಸ್. ರಂಗನಿಗಾದರೆ ಹಿಂದಿ ಮಾತನಾಡಲು ಬರುತ್ತಿತ್ತು.

ಹಲವಾರು ಸಾರಿ ಬಾಂಬೆಗೂ ಹೋಗಿ ಬಂದಿದ್ದ. ಅಲ್ಲಿ ಅವನಿಗೆ ಸ್ನೇಹಿತರೂ ಇದ್ದರು. ಆ ಕಾರಣಕ್ಕೆ ನಾನು ಬಾಂಬೆಗೆ ಹೋಗುವಾಗ ನನ್ನ ಸಮಸ್ಯೆಗಳನ್ನು ಹೇಳಿಕೊಂಡು ಬಾಂಬೆಯಲ್ಲಿ ನನ್ನೊಬ್ಬನನ್ನೇ ಬಿಟ್ಟು ಎಲ್ಲೂ ಹೋಗಬೇಡ ಎಂದು ಹಲವಾರು ಸಾರಿ ಮನವಿ ಮಾಡಿಕೊಂಡೆ. ಆಯಿತು ಎಂದು ಅವನೂ ಒಪ್ಪಿದ. ಆದರೆ ಬಾಂಬೆ ತಲುಪಿದ ಮೇಲೆ ಆದದ್ದೇ ಬೇರೆ.

ಆಗ ಪತ್ರಕರ್ತ ಸಂತೋಷ್ ಕುಮಾರ್ ಗುಲ್ವಾಡಿಯವರು ಬಾಂಬೆಯಲ್ಲಿದ್ದರು. 'ಚೋಮನ ದುಡಿ' ಚಿತ್ರದ ಬಗೆಗೆ ಅವರ ಸಹಕಾರವೂ ಇತ್ತು. ಹಾಗಾಗಿ ನಾನು ಮತ್ತು ರಂಗಾ ಅವರ ಮನೆಯಲ್ಲಿಯೇ ಉಳಿಯುವುದೆಂದಾಗಿತ್ತು. ಬಾಂಬೆಯಲ್ಲಿ ಗುಲ್ವಾಡಿಯವರಿದ್ದದ್ದು ಮೂರು ಕೋಣೆಗಳ ಒಂದು ಪುಟ್ಟ ಮನೆ. ಆದರೆ ತುಂಬಾ ಅಚ್ಚುಕಟ್ಟಾಗಿತ್ತು. ಅದಕ್ಕೊಂದು ಉದಾಹರಣೆ ಎಂದರೆ ಗೋಡೆಯ ಬದಿಯಲ್ಲಿ ಬೆಂಚು. ಹಗಲೆಲ್ಲಾ ಅದು ಬೆಂಚು. ರಾತ್ರಿ ಅದನ್ನೇ ಸ್ವಲ್ಪ ಮುಂದಕ್ಕೆ ಎಳೆದರೆ ಅದೇ ಮಂಚ. ಮಲಗಿ ಎದ್ದ ಮೇಲೆ ಗೋಡೆಯೊಳಕ್ಕೆ ನೂಕಿದರೆ ಮತ್ತೆ ಬೆಂಚ್. ಅದಕ್ಕೂ ಮಿಗಿಲಾಗಿ ಗುಲ್ವಾಡಿ ಮತ್ತು ಮನೆಯವರು ನಮ್ಮನ್ನು ತುಂಬಾ ಆತ್ಮೀಯವಾಗಿ ನೋಡಿಕೊಂಡರು. ಅಲ್ಲಿಗೆ ಹೋಗುವವರರೆಗೆ ನನ್ನ ಜೊತೆಗೇ ಬಾಂಬೆಯಲ್ಲೂ ಜೊತೆಗೇ ಇರುತ್ತೇನೆ ಎಂದಿದ್ದ ರಂಗ ಅಲ್ಲಿ ನನ್ನೊಬ್ಬನನ್ನೇ ಬಿಟ್ಟು ಹೋದ ನನಗೆ ಹಿಂದಿ ಬರದು, ಬಾಂಬೆ ಗೊತ್ತಿಲ್ಲ ಎಂದು ಗುಲ್ವಾಡಿಯವರಲ್ಲಿಗೆ ಹೇಳಿಕೊಂಡೆ. ಅವರು ನಾನು ಯಾವ ಬಸ್‌ನಲ್ಲಿ ಓಡಾಡಬೇಕು? ಏನು ಎತ್ತ? ಮುಂತಾದ ಮಾಹಿತಿಗಳನ್ನೆಲ್ಲಾ ಕೊಟ್ಟರು. ಅದೇ ನನಗೆ ಸಹಾಯವಾದದ್ದು. ನಾನೂ ಧೈರ್ಯ ಮಾಡಿ ಓಡಾಡತೊಡಗಿದೆ. ಆದರೂ ಹಳ್ಳಿಯಲ್ಲಿ ಹುಟ್ಟಿ ಬೆಳೆದು ಬೆಂಗಳೂರನ್ನೇ ದೊಡ್ಡದೆಂದು ಭಾವಿಸಿದ್ದ ನಾನು ಬಾಂಬೆಯಲ್ಲಿ ಓಡಾಡುವಾಗ ಬೆಕ್ಕಸಬೇರಗಾಗಿದ್ದೆ. ಅಲ್ಲಿಯ ಗದ್ದಲ, ಜನಜಂಗುಳಿ, ಬಸ್ಸು, ರೈಲು, ಗಗನ ಚುಂಬಿ ಕಟ್ಟಡಗಳು, ಗಿಜಿಗುಡುವ ರಸ್ತೆ ಇವನ್ನೆಲ್ಲಾ ನೋಡುವಾಗ ನಾನೆಲ್ಲಿಯಾದರೂ ಕಳೆದು ಹೋಗುತ್ತೇನೆ ಎನಿಸಿಬಿಡುತ್ತಿತ್ತು.

ಅಂತೂ ಗುಲ್ವಾಡಿಯವರ ಮನೆಯಿಂದ ರಾವ್ ಅಂಡ್ ಕಂಪನಿಗೆ ಹೋಗುವುದು. ಅಲ್ಲಿ ಸಬ್‌ಟೈಟಲ್ ಕೆಲಸ ಮಾಡಿಸುವುದು, ಇನ್ನೊಂದೆಡೆ 'ಚೋಮನ ದುಡಿ' ಸಂಭಾಷಣೆಯನ್ನು ಬೆಂಗಳೂರಿನಲ್ಲಿಯೇ ಕನ್ನಡದಿಂದ ಇಂಗ್ಲಿಷಿಗೆ ತರ್ಜುಮೆ ಮಾಡಿಸಿದ್ದುದನ್ನು ಟೈಪ್ ಮಾಡಿಸುವುದು, ಇದನ್ನೆಲ್ಲಾ ಕೂತು ಮಾಡಿಸಿದೆ. ಜೊತೆಗೆ ಆ ಕೆಲಸವನ್ನು ಆಸಕ್ತಿಯಿಂದ ಗಮನಿಸುತ್ತಿದ್ದೆ ಕೂಡಾ.

ನನ್ನ ಸ್ವಭಾವವೇ ಅಂತಹದ್ದು. ಎಲ್ಲ ಕೆಲಸವನ್ನೂ ಕಲಿಯಬೇಕು. ಆಸಕ್ತಿಯಿಂದ ಮಾಡಬೇಕು ಎನ್ನುವ ಮನಃಸ್ಥಿತಿಯುಳ್ಳವನಾಗಿದ್ದೆ. ಹಾಗೇ ಮಾಡುತ್ತಿದ್ದೆ ಕೂಡಾ. ಅದರಿಂದಾಗಿ ಬ್ಲಾಕ್ ಸ್ಟೇಜ್ ಕೆಲಸಗಳಿಗೆ ನಾವೇ ಅನಿವಾರ್ಯವಾಗಿದ್ದುದು. ಈ ಅನಿವಾರ್ಯ ಎಂದಾಗಿ ನನಗೆ ಇನ್ನೊಂದು ಪ್ರಕರಣ ನೆನಪಾಗುತ್ತದೆ.

ಬಿ.ವಿ. ಕಾರಂತರು ಬೆಂಗಳೂರಿನಲ್ಲಿ 'ಹಯವದನ' ನಾಟಕವನ್ನು ಯಶಸ್ವಿಯಾಗಿ ನಡೆಸಿದ ಮೇಲೆ ರಾಜ್ಯದ ವಿವಿಧೆಡೆಯೂ ಪ್ರದರ್ಶನವಾಯಿತು. ಸ್ವಲ್ಪ ದಿನಗಳಾದ ಮೇಲೆ 'ಹಯವದನ' ನಾಟಕದ ಜೊತೆಗೆ ಮತ್ತೂ ಮೂರ್‍ನಾಲ್ಕು ನಾಟಕಗಳೊಂದಿಗೆ ನಾವು ಉತ್ತರ



ಭಾರತದಲ್ಲಿ ಪ್ರವಾಸ ಮಾಡಿದೆವು. ಬಹಳಷ್ಟು ಕಡೆ ಯಶಸ್ವೀ ಪ್ರದರ್ಶನ ಕೊಟ್ಟು ಹೈದರಾಬಾದಿಗೆ ಬಂದಿದ್ದೆವು. ಅಲ್ಲೊಂದು ಹೊಸ ವಿವಾದ ಹುಟ್ಟಿಕೊಂಡಿತು.

ರಮೇಶ್ ಭಟ್, ಸುಂದರ್ ರಾಜ್ ಮುಂತಾದ ನಟರು ತಾವು ಕಲಾವಿದರು, ಅಭಿನಯವಷ್ಟೇ ತಮ್ಮ ಕೆಲಸ ಎಂದು ಭಾವಿಸಿದ್ದರು. ಎಲ್ಲಾದರೂ ಹೋಗಬೇಕೆಂದರೆ ನಾಟಕದ ಪರಿಕರಗಳಿರಲಿ ಅವರ ಸೂಟ್‌ಕೇಸ್ ಬ್ರೀಫ್‌ಕೇಸ್‌ಗಳನ್ನೂ ನಾವೇ ಹೊರಬೇಕಿತ್ತು. 'ನಾವು ಆಗೊಲ್ಲ' ಎಂದಾಗ ಬಿ.ವಿ. ಕಾರಂತರೂ 'ಅದೆಲ್ಲಾ ನಿಮ್ಮದೇ ಕೆಲಸ' ಎಂದು ಬಿಡುವುದೆ?

ಮೂಲತಃ ನಾನು ಕೆಲಸಗಾರ. ಹಾಗಾಗಿ ಯಾವುದೇ ತರಹದ ಇಗೋ ನನಗಿರಲಿಲ್ಲ. ಬ್ಯಾಕ್‌ಸ್ಟೇಜ್ ಕೆಲಸವಷ್ಟೇ ನನ್ನ ಜವಾಬ್ದಾರಿ ಎನ್ನದೆ ತಂಡದಲ್ಲಿ ಎಲ್ಲ ಕೆಲಸಕ್ಕೂ, ಎಲ್ಲರಿಗೂ ನೆರವಾಗುತ್ತಿದ್ದೆ. ಆದರೆ ನಾಟಕದ ಪ್ರಮುಖ ಪಾತ್ರಧಾರಿಗಳು ಹಾಗಿರಲಿಲ್ಲ. ಆಗಲೇ ಅವರಿಗೆ ಹಿರೋ ಇಗೋ ಕಾಡುತ್ತಿತ್ತು. ತಮ್ಮ ಸೂಟ್‌ಕೇಸ್‌ಗಳನ್ನು ಬಸ್ಸಿಗೆ ಎತ್ತಿಡುವುದು, ಇಳಿಸಿಕೊಳ್ಳುವುದು, ಹೋಟೆಲ್ ರೂಮಿಗೆ ಒಯ್ಯುವುದು ಮುಂತಾದ ಕೆಲಸಗಳನ್ನೂ ಅವರು ಮಾಡಿಕೊಳ್ಳುತ್ತಿರಲಿಲ್ಲ. ಅಂತಹದ್ದನ್ನೂ ಬ್ಯಾಕ್ ಸ್ಟೇಜ್ ಹುಡುಗರು ಮಾಡಬೇಕಿತ್ತು. ಇದರಿಂದ ಆ ಹುಡುಗರು ಆಗಾಗ್ಗೆ ತಮ್ಮ ಬೇಸರವನ್ನು ವ್ಯಕ್ತಪಡಿಸುತ್ತಿದ್ದರು. ಇದು ವಿಪರೀತಕ್ಕೆ ಹೋದದ್ದು ಒಂದೂವರೆ ತಿಂಗಳ ಪ್ರವಾಸದ ನಡುವೆ ಹೈದರಾಬಾದ್‌ನಲ್ಲಿದ್ದಾಗ.

ನಟರ ಸೂಟ್‌ಕೇಸ್‌ಗಳನ್ನು ಬಸ್ಸಿನಿಂದ ರೂಮಿಗೆ ಒಯ್ಯುತ್ತಿದ್ದ ಹುಡುಗರು "ಸ್ವಲ್ಪ ಸಹಾಯ ಮಾಡಿ" ಎಂದು ಅವರನ್ನೇ ಕರೆದರು. ಆದರೆ ಅವರು ಸಹಯ ಮಾಡಲು ನಿರಾಕರಿಸಿದರು. ಅದರಿಂದ ತೀವ್ರ ಬೇಸರಗೊಂಡ ಹುಡುಗರು 'ಅದು ತಮ್ಮ ಕೆಲಸವಲ್ಲ, ತಾವೇಕೆ ಮಾಡಬೇಕು' ಎಂದುಬಿಟ್ಟರು. ಆ ವಿಚಾರ ಬಿ.ವಿ. ಕಾರಂತರವರೆಗೆ ಹೋಯಿತು. ನಾನೂ ಹುಡುಗರ ಪರವಾಗಿ ಮಾತನಾಡಿ ತಂಡದಲ್ಲಿ ನಾವೆಲ್ಲಾ ಒಂದು ಎಂದ ಮೇಲೆಎಲ್ಲರೂ ಎಲ್ಲ ಕೆಲಸಗಳಿಗೂ ನೆರವಾಗಬೇಕು ಎಂದೇ ಸಮರ್ಥಿಸಿಕೊಂಡೆ. ಆಗ ಸ್ವಲ್ಪ ಸಿಟ್ಟಾದ ಕಾರಂತರು 'ನಾಟಕಕ್ಕೆ ನಟರೇ ಮುಖ್ಯ. ಸ್ಟೇಜ್ ಇಲ್ಲದಿದ್ದರೂ ನಾಟಕ ಆಗುತ್ತದೆ' ಎಂಬಂತೆ ನಮ್ಮ ಮೇಲೆ ಜೋರು ಮಾಡಿಬಿಟ್ಟರು. ಅವರ ಮಾತುಗಳಿಂದ ನಮಗೂ ಬೇಸರವಾಗಿ "ಸರಿ ನಾವು ಇಲ್ಲದಿದ್ದರೂ ಆಗುತ್ತದಲ್ಲವಾ? ನೀವೇ ಮಾಡಿಕೊಳ್ಳಿ" ಎಂದು ಹೊರಗೆ ಹೋಗಿಬಿಟ್ಟೆವು.

ಹಾಗೆ ಹೊರಗೆ ಬಂದ ಮೇಲೆ ಏನು ಮಾಡಬೇಕು? ಸದ್ಯಕ್ಕೆ ಯಾವುದಾದರೂ ಸಿನಿಮಾ ನೋಡೋಣ ಎನ್ನಿಸಿತು. ನನ್ನೊಂದಿಗೆ ಮತ್ತೂ ನಾಲ್ಕು ಜನರಿದ್ದರು. ಐವರೂ ಹತ್ತಿರದಲ್ಲೇ ಇದ್ದ ಒಂದು ಚಿತ್ರಮಂದಿರಕ್ಕೆ ಹೋಗಿ ಕುಳಿತುಬಿಟ್ಟೆವು. ಸಿನಿಮಾ ಆರಂಭವೂ ಆಯಿತು. ಅರ್ಧ ಆಟವೂ ಮುಗಿಯಿತು. ಅತ್ತ ನಾಟಕದ ಥಿಯೇಟರಿನಲ್ಲಿ ಏನಾಗುತ್ತಿರಬಹುದು? ಸಂಜೆ ನಾಟಕ ನಡೆಯಬೇಕು, ಸ್ಟೇಜ್ ಕೆಲಸಗಳೇ ಆಗದೆ ನಾಟಕ ಹೇಗೆ ಆಗುತ್ತದೆ? ಎಂದು ಯೋಚಿಸುತ್ತಿದ್ದೆವು.

ಆದರೂ ಥಿಯೇಟರಿಗೆ ಹಿಂದಿರುಗುವ ಮನಸ್ಸಿರಲಿಲ್ಲ. ಕೂತದ್ದೇ ಕೂತುಬಿಟ್ಟೆವು. ಮತ್ತೆ ಸಿನಿಮಾ ಆರಂಭವಾಯಿತು. ಹತ್ತು ನಿಮಿಷ ಕಳೆದಿರಬೇಕಷ್ಟೇ. ಯಾರೋ ಟಾರ್ಚ್

ಬೆಳಕಿನಲ್ಲಿ ಎಲ್ಲರ ಮುಖ ನೋಡುತ್ತಾ ಬಂದರು. ಹಾಗೇ ನಮ್ಮ ಬಳಿಗೂ ಬಂದರು. ಅವರು ಬಿ.ವಿ. ಕಾರಂತ್! ನನ್ನನ್ನು ನೋಡಿದವರೇ "ನಾಗಾಭರಣ! ಏ ಬಾಪ್ಪಾ" ಅಂದರು. ಅಲ್ಲೇ ಯಾಕೆ ಮಾತನಾಡಬೇಕು ಎಂದುಕೊಂಡು ಹೊರಕ್ಕೆ ಬಂದೆವು. ಕಾರಂತರು ನನಗೆ "ನಾಗಾಭರಣ ಹೀಗಾ ಮಾಡುವುದು? ಜವಾಬ್ದಾರಿ ಇಲ್ಲಾ? ಅಲ್ಲಿ ಸ್ಟೇಜ್ ರೆಡಿಯಾಗಬೇಕು, ಯಾರು ಮಾಡ್ತಾರೆ?" ಎಂದು ಕೇಳಿದರು.

'ಯಾರು ಮಾಡ್ತಾರೆ ಅಂದ್ರೆ? ನೀವೇ ತಾನೆ ಹೇಳಿದ್ದು, ನನಗೆ ನಟರೇ ಮುಖ್ಯ. ಸ್ಟೇಜ್ ಇಲ್ಲದಿದ್ರೂ ಆಗುತ್ತೆ ಅಂತ. ಸರಿಬಿಡಿ ಈಗ ಯಾಕೆ ಕೇಳ್ತೀರಿ?' ಎಂದೆ. ತಕ್ಷಣ ಅವರು ಮೃದುವಾದ ದನಿಯಲ್ಲಿ "ನಾನು ಹೇಳಿದ್ದು ಹಾಗಲ್ಲ, ಏನಿಲ್ಲದಿದ್ದರೂ ಆಗುತ್ತೆ, ನಟ ಇಲ್ಲದಿದ್ದರೆ ಆಗೊಲ್ಲ ಎನ್ನುವ ಅರ್ಥದಲ್ಲಿ ಹೇಳಿದ್ದು, ಅಷ್ಟಕ್ಕೇ ಸಿಟ್ಟಾಗಿ ಬಿಡುವುದಾ? ಬಾ... ಬಾ..." ಅಂದರು. ಆದರೆ ನಾನು "ಇಲ್ಲ ಬರೊಲ್ಲ. ಹುಡುಗರ ಕೆಲಸದಲ್ಲಿ ನಟರೂ ಸಹಾಯ ಮಾಡುವಂತಿದ್ದರೆ ಮಾತ್ರವೇ ಬರುವುದು" ಎಂದೆ. ಆಗವರು "ಸರಿಯಪ್ಪಾ ಬಾ, ನಾನು ಸರಿ ಮಾಡುತ್ತೇನೆ" ಎಂದು ನಮ್ಮನ್ನು ಕರೆದೊಯ್ದರು.

ಆನಂತರದ ಪರಿಸ್ಥಿತಿಯೇ ಬೇರೆಯಾಯಿತು. ಎಲ್ಲರೂ ಎಲ್ಲ ಕೆಲಸಗಳನ್ನೂ ಮಾಡಬೇಕು ಎಂದು ಕಾರಂತರು ಹೇಳಿದರು. ಅದನ್ನು ಎಲ್ಲರೂ ಒಪ್ಪಿದರು. ಅಲ್ಲಿಂದ ನಾವು ಬಾಸ್‌ಗಳಾಗಿಬಿಟ್ಟೆವು. ಕೆಲವೊಮ್ಮೆ ನಾವು ಕುಳಿತು ಅವರಿಂದ ಕೆಲಸ ಮಾಡಿಸುತ್ತಿದ್ದೆವು. ಸ್ವಲ್ಪ ಶ್ರಮದ ಕೆಲಸ ಮಾಡುವಾಗ ಅವರು ಒದ್ದಾಡುವುದನ್ನು ಕಂಡು ನಾವು ರೇಗಿಸುತ್ತಿದ್ದೆವು.

## ನಾಗಿಣಿಯೊಂದಿಗೆ ಮದುವೆ

ಆ ದಿನಗಳಲ್ಲಿಯೇ ನನ್ನ ಮತ್ತು ನಾಗಿಣಿಯ ನಡುವೆ ಪ್ರೀತಿ ಬೆಳೆದದ್ದು. ಆಕೆಯ ಪರಿಚಯ ಬೆಂಗಳೂರಿನಲ್ಲಿ 'ಹಯವದನ' ನಾಟಕ ಪ್ರಯೋಗವಾದಾಗಲೇ ಆಗಿದ್ದು. ಆ ನಾಟಕದ ಕೂಸ್ಟ್ಯೂಮ್ ಜವಾಬ್ದಾರಿಯನ್ನು ಹೊತ್ತಿದ್ದ ಆಶಾ ಮತ್ತು ರೇವತಿಗೆ ಸಹಾಯಕಳಾಗಿ ನಾಗಿಣಿ ಬಂದಿದ್ದಳೂ. ಆನಂತರ ಪ್ರತಿ ನಾಟಕದಲ್ಲೂ ನಾವು ಒಟ್ಟೊಟ್ಟಿಗೇ ಕೆಲಸ ಮಾಡಿಕೊಂಡು ಬಂದೆವು. ಪ್ರವಾಸದ ಸಮಯದಲ್ಲಿ ನಾನು ಎಲ್ಲರ ಸಹಾಯಕ್ಕೂ ನಿಲ್ಲುತ್ತಿದ್ದೆ. ನಾಗಿಣಿಯ ಕಷ್ಟ-ಸುಖಗಳಲ್ಲಿ ಭಾಗಿಯಾಗುತ್ತಿದ್ದೆ. ಹಾಗಾಗಿ ಪ್ರವಾಸ ಮುಗಿಯುವಷ್ಟರಲ್ಲಿ ನಾವು ಪ್ರೇಮಿಗಳಾಗಿದ್ದೆವು.

ಆದರೂ ಆಗ ನನ್ನ ವಿದ್ಯಾಭ್ಯಾಸ ಪೂರ್ಣ ಆಗಿರಲಿಲ್ಲ. 'ಗ್ರಹಣ' ಕೂಡಾ ಮುಗಿದಿರಲಿಲ್ಲ. ನಾಟಕ ಬಿಟ್ಟರೆ ಮತ್ತಾವ ಉದ್ಯೋಗವೂ ನನಗಿರಲಿಲ್ಲ. ಆಗಿನ್ನೂ ನಾನು ಏನಾಗಬೇಕು ಎನ್ನುವ ಹುಡುಕಾಟದಲ್ಲಿಯೇ ಇದ್ದವನು. ಹಾಗಾಗಿ ಆಗಲೇ ಮದುವೆಯ ಯೋಚನೆ ಮಾಡುವಂತಿರಲಿಲ್ಲ. ನನ್ನ ಎಲ್.ಎಲ್.ಬಿ. ಮುಗಿದು, 'ಗ್ರಹಣ'ವೂ ಪೂರ್ಣವಾಗುವ ಹೊತ್ತಿಗೆ ನಮ್ಮ ಪ್ರೀತಿ ಮತ್ತಷ್ಟು ಗಟ್ಟಿಗೊಂಡಿತು. ಆ ಪ್ರೀತಿಗೆ ನಮ್ಮಿಬ್ಬರ ಮನೆಯಲ್ಲೂ ವಿರೋಧವಿರಲಿಲ್ಲ. ಎರಡೂ ಮನೆಯವರು ಸೇರಿಯೇ ನಮ್ಮ ಮದುವೆ ಮಾಡಿದರು. ಮದುವೆ ಆದದ್ದು 1979ರ ಡಿಸೆಂಬರ್ 10 ರಂದು.



ಮದುವೆಯಾಗುವವರೆಗೆ ಸ್ನೇಹಿತರಂತೆ ನಾಟಕದ ಚಟುವಟಿಕೆಗಳಲ್ಲಿದ್ದ ನಾವು ಮದುವೆಯ ನಂತರ ಒಟ್ಟಾಗಿ ಕೆಲಸ ಮಾಡತೊಡಗಿದೆವು. ಆ ಮಧ್ಯೆ 'ಗ್ರಹಣ' ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಬಂದಿತು. ಪ್ರಶಸ್ತಿಯನ್ನು ತೆಗೆದುಕೊಳ್ಳಲು ನಾವು ದೆಹಲಿಗೆ ಒಟ್ಟಾಗಿಯೇ ಹೋಗಿದ್ದೆವು. ಆಗಿನ ತಮಾಷೆ ಪ್ರಸಂಗವೊಂದನ್ನು ನಿಮಗೆ ಹೇಳುತ್ತೇನೆ.

ಅದು 1980ರ ಮೇ ತಿಂಗಳು. ದೆಹಲಿಯ ವಿಜ್ಞಾನ ಭವನದಲ್ಲಿ ಪ್ರಶಸ್ತಿ ವಿತರಣಾ ಸಮಾರಂಭ ನಡೆಯಿತು. ಮೃಣಾಲ್‌ಸೇನ್, ಮುಜಾಫರ್ ಹುಸೇನ್‌ರಂತಹ ಹೆಸರಾಂತ ನಿರ್ದೇಶಕರೊಂದಿಗೆ ಏನೇನೂ ಆಗಿರದಿದ್ದ ನಾನು ರಾಷ್ಟ್ರ ಪ್ರಶಸ್ತಿ ಪಡೆಯುತ್ತಿದ್ದೆ ಎಂಬುದು ಸಣ್ಣ ಸಂಗತಿಯೇ? ನಾನು ಸಂತೋಷದ ಮೂಟೆಯಾಗಿ ನಾಗಿಣಿಯನ್ನೂ ಕರೆದುಕೊಂಡು ವಿಜ್ಞಾನ ಭವನಕ್ಕೆ ಹೋದೆ. ಆದರೆ ಅಲ್ಲಿಗೆ ಹೋಗಲು ತಕ್ಕುದಾದ ಉಡುಪೂ ನನ್ನಲ್ಲಿರಲಿಲ್ಲ. ಮಾಮೂಲಿಯಾದ ಜುಬ್ಬಾ, ಪೈಜಾಮ ಧರಿಸಿ ಹೆಗಲಿನ ಮೇಲೆ ಕೆಂಪು ಶಾಲು ಹೊದ್ದಿದ್ದೆ. ವಯಸ್ಸಿನಲ್ಲೂ ನಾನು ಹಿರಿಯನೇನಲ್ಲ. ಹಾಗಾಗಿ ನಾನು ರಾಷ್ಟ್ರ ಪ್ರಶಸ್ತಿ ಪಡೆಯುತ್ತಿರುವ ನಿರ್ದೇಶಕ ಅಂದರೆ ಯಾರೇ ಆಗಲಿ ಸ್ವಲ್ಪ ಅನುಮಾನಿಸುತ್ತಿದ್ದರು. ಆದರೆ ನಾನು ಆ ಯಾವ ಹಿಂಜರಿಕೆಯೂ ಇಲ್ಲದೆ ವಿಜ್ಞಾನ ಭವನಕ್ಕೆ ಹೋದೆ. ನನ್ನ ಮನಸ್ಸಿನಲ್ಲಿ ಹೆಸರಾಂತ ನಿರ್ದೇಶಕರ ಜೊತೆಗೆ ಕೂಡುತ್ತೇನೆ, ರಾಷ್ಟ್ರಪತಿಯವರಿಂದ ಪ್ರಶಸ್ತಿ ಪಡೆಯುತ್ತೇನೆ ಎನ್ನುವ ಸಂಭ್ರಮವೇ ತುಂಬಿತ್ತು. ಆದರೆ ನಾಗಿಣಿಯೊಂದಿಗೆ ವಿಜ್ಞಾನ ಭವನದ ಬಾಗಿಲಿಗೆ ಹೋದಾಗ ಸೆಕ್ಯುರಿಟಿಯವನು ನನ್ನನ್ನು ತಡೆದುಬಿಟ್ಟ. ಬರುತ್ತಿದ್ದ ಅಷ್ಟಿಷ್ಟು ಹಿಂದಿನಯಲ್ಲಿಯೇ ನಾನು ನನ್ನ ಪರಿಚಯ ಹೇಳಿಕೊಂಡು ಆಹ್ವಾನಪತ್ರಿಕೆ ತೋರಿಸಿದರೂ ಆತ ನನ್ನನ್ನು ಒಳಕ್ಕೆ ಬಿಡಲು ಒಪ್ಪಲಿಲ್ಲ.

## ವಿದೇಶ ಪ್ರವಾಸಕ್ಕೆ ಅರಸು ತೋರಿದ ಹಸಿರು ನಿಶಾನೆ

ನವದೆಹಲಿಯ ವಿಜ್ಞಾನ ಭವನದ ಒಳಗೆ ರಾಷ್ಟ್ರ ಪ್ರಶಸ್ತಿ ವಿತರಣಾ ಸಮಾರಂಭದ ಸಂಭ್ರಮ. ಬರುತ್ತಿದ್ದ ಆಹ್ವಾನಿತರೆಲ್ಲಾ ಸಲೀಸಾಗಿ ಒಳಕ್ಕೆ ಹೋಗುತ್ತಿದ್ದಾರೆ. ಆದರೆ ನಾನು ಪ್ರಶಸ್ತಿ ವಿಜೇತನಾಗಿದ್ದೂ ಒಳಗೆ ಹೋಗಲಾರದೆ ಹೊರಗೇ ತಡೆಯಲ್ಪಟ್ಟಿದ್ದೇನೆ. ಆ ಕ್ಷಣ ನನ್ನ ಮನಸ್ಸು ಅವಮಾನದಿಂದ ಕುಗ್ಗಿಹೋಯಿತು. ನಾಗಿಣಿ "ಏನ್ರೀ ಇದು, ಇವನು ನಿಮ್ಮನ್ನೇ ಬಿಡೊಲ್ಲ ಅಂತಾನೆ. ಈಗ ಒಳಕ್ಕೆ ಹೋಗೋದು ಹೇಗೆ?" ಎಂದು ಆತಂಕದಿಂದ ಕೇಳಿದಳು. ಆದರೆ ನಾನಾದರೂ ಏನು ಮಾಡಲಿ? ಗೊತ್ತಿಲ್ಲದ ಈ ಜಾಗದಲ್ಲಿ ನನಗೆ ಪರಿಚಿತರು ತಾನೇ ಯಾರು ಸಿಗುತ್ತಾರೆ? ಏನು ಮಾಡಲೂ ತೋಚದೆ ಬಾಗಿಲ ಪಕ್ಕ ನಿಂತು ಯೋಚಿಸುತ್ತಿದ್ದೆ. ಅಷ್ಟರಲ್ಲಿ ಅಲ್ಲಿಗೆ ಬಂದ ಒಬ್ಬರು ನನ್ನನ್ನು ಗುರುತಿಸಿದರು. ಅವರು ನನಗೇ ಪರಿಚಯವಿರಲಿಲ್ಲ. ಆದರೆ ಅವರು ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿದ್ದವರು. ಪ್ರಶಸ್ತಿ ಆಯ್ಕೆಯ ಸಮಯದಲ್ಲಿ ನನ್ನ ಫೋಟೋ ನೋಡಿದ್ದ ಅವರು ಕೇವಲ ಅದೊಂದೇ ನೆನಪಿನಿಂದ ನನ್ನನ್ನು ಗುರುತಿಸಿದರು. ಆಗಿದ್ದ ಗೊಂದಲಕ್ಕೆ ವಿಷಾದ ವ್ಯಕ್ತಪಡಿಸಿ ನಮ್ಮನ್ನು ಒಳಗೆ ಕರೊದೊಯ್ದರು. ಆಮೇಲೆ ಏನೂ ತೊಂದರೆಯಾಗಲಿಲ್ಲ. ಎಲ್ಲರೂ ನನ್ನನ್ನು ನೋಡಿ ಇನ್ನೂ ಹುಡುಗ, ಈತ ರಾಷ್ಟ್ರ ಪ್ರಶಸ್ತಿ ಪಡೆಯುತ್ತಿದ್ದಾನಲ್ಲಾ ಎಂದು ಆಶ್ಚರ್ಯ ಪಡುವವರೇ. ಅಂತೂ ನನ್ನ ಪ್ರಥಮ ಚಿತ್ರಕ್ಕೇ

ರಾಷ್ಟ್ರಪತಿ ನೀಲಂ ಸಂಜೀವರೆಡ್ಡಿಯವರಿಂದ ಪ್ರಶಸ್ತಿಯನ್ನು ಪಡೆದೆ. ಸಂತೋಷದಿಂದ ಬೆಂಗಳೂರಿಗೆ ಬಂದೆ.

ಅದಾಗುತ್ತಲೂ 'ಗ್ರಹಣ' ಪಶ್ಚಿಮ ಜರ್ಮನಿಯ ಮ್ಯಾನ್‌ಹ್ಯಾಮ್ ಫಿಲಂ ಫೆಸ್ಟಿವಲ್‌ಗೂ ಆಯ್ಕೆಯಾಯಿತು. ಆ ಚಿತ್ರೋತ್ಸವದಲ್ಲಿ ಪಾಲ್ಗೊಳ್ಳಲು ನಿರ್ದೇಶಕನಾದ ನನಗೆ ಮಾತ್ರವೇ ಆಹ್ವಾನ ಬಂದಿತು. ಇದು ಕೋಡಿಹಳ್ಳಿ ಶಿವರಾಂಗೆ ಇಷ್ಟವಾಗಲಿಲ್ಲ. ಹಾಗಾಗಿ ಆತ ನನಗೆ ಎಂತಹ ತೊಂದರೆ ಕೊಟ್ಟ ಗೊತ್ತೆ?

'ಗ್ರಹಣ'ದ ಪ್ರಿಂಟ್ ಅವನ ವಶದಲ್ಲಿತ್ತು. ನಾನು ಜರ್ಮನಿಗೆ ಹೋಗಲು ಆ ಪ್ರಿಂಟ್ ಬೇಕಿತ್ತು. ಕೊಡುವಂತೆ ಅವನನ್ನು ಕೇಳಿದೆ. ಆದರೆ ಹೊಟ್ಟೆಕಿಚ್ಚಿನಲ್ಲಿದ್ದ ಅವನು ಪ್ರಿಂಟ್ ಕೊಡಲು ಒಪ್ಪಲಿಲ್ಲ. 'ಇದೊಂದು ಒಳ್ಳೆಯ ಅವಕಾಶ, ದಯವಿಟ್ಟು ಪ್ರಿಂಟ್ ಕೊಡು' ಎಂದು ವಿಧವಿಧವಾಗಿ ಅಂಗಲಾಚಿದೆ. ನನ್ನ ಸ್ನೇಹಿತರೆಲ್ಲಾ ಹೇಳಿದರು, ಕೊನೆಗೆ ಆತನ ಅಣ್ಣ ವೆಂಕಟೇಶ್ ಕೂಡಾ ಸಾಕಷ್ಟು ಹೇಳಿದ. ಏನೇ ಆದರೂ ಆತ ಪ್ರಿಂಟ್ ಕೊಡಲು ಒಪ್ಪಲಿಲ್ಲ.

ನೀವು ನಂಬುತ್ತೀರೋ ಇಲ್ಲವೋ ಅದೊಂದು ರಾತ್ರಿ ಶಿವರಾಮನಿಗೆ, 'ನೀನು ಪ್ರಿಂಟ್ ಕೊಡುವವರೆಗೆ ಇಲ್ಲಿಂದ ಹೋಗೊಲ್ಲ' ಎಂದು ಹೇಳಿ ಅವನ ಮನೆಯ ಮುಂದೆಯೇ ನಿಂತುಬಿಟ್ಟೆ. ಸ್ವಲ್ಪ ಹೊತ್ತು ಕಾದು ಹಿಂದಿರುಗುತ್ತಾನೆ ಎಂದು ಅವನು ಭಾವಿಸಿದ್ದನೇನೋ. ಆದರೆ ಇಡೀ ರಾತ್ರಿ ನಾನು ಆ ಜಾಗ ಬಿಟ್ಟು ಕದಲಲಿಲ್ಲ. ಬೆಳಿಗ್ಗೆ ಶಿವರಾಮನ ತಾಯಿ ಮನೆಯಿಂದ ಹೊರಕ್ಕೆ ಬಂದು ನನ್ನನ್ನು ನೋಡಿ ಪೆಚ್ಚಾಗಿ ಬಿಟ್ಟರು. ಮಗನ ಮೇಲೆ ಸಿಟ್ಟಾಗಿ ಒಂದಷ್ಟು ಬೈದರು. ಆನಂತರವೇ ಅವನು ಪ್ರಿಂಟ್ ಕೊಡಲು ಒಪ್ಪಿದ್ದು. ಹಾಗೆ ಪ್ರಿಂಟನ್ನೇನೋ ಪಡೆದುಕೊಂಡೆ. ಆದರೆ ಜರ್ಮನಿಗೆ ಹೋಗಲು ನನ್ನಲ್ಲಿ ಹಣವೇ ಇರಲಿಲ್ಲ.

ಪ್ರೈವೇಟ್ ಟ್ರಾವಲ್ಸ್ ಏಜೆನ್ಸಿಯೊಂದರಲ್ಲಿ ನನಗೆ ವಿಮಾನಯಾನದ ಟಿಕೆಟ್ ರೆಡಿಯಾಗಿತ್ತು. ಆದರೆ ಪ್ರಯಾಣಕ್ಕೆ ಮೊದಲು ಹಣ ಕೊಟ್ಟು ಟಿಕೆಟ್ ಪಡೆಯಬೇಕಾಗಿತ್ತು. ರಂಗಭೂಮಿಯ ಮಿತ್ರರನೇಕರು ದುಡ್ಡು ಸಂಗ್ರಹಿಸುವ ಪ್ರಯತ್ನ ಮಾಡಿದರೂ ಅದು ಸಾಕಾಗುತ್ತಿರಲಿಲ್ಲ. ಅಂತಹ ಸ್ಥಿತಿಯಲ್ಲಿ ನಾನೇನು ಮಾಡಬೇಕು?

ಆಗ ಮುಖ್ಯಮಂತ್ರಿಯವರ ನಿಧಿಯಿಂದ ಸಹಾಯ ಪಡೆಯಬಾರದೇಕೆ ಎನ್ನುವ ಸಲಹೆ ಬಂದಿತು. ಆ ಸಲಹೆಯನ್ನು ನಾನು ನಿರ್ಲಕ್ಷ್ಯ ಮಾಡಲಿಲ್ಲ. ಮಾರನೆಯ ದಿನವೇ ನಾನು ಜರ್ಮನಿಗೆ ಹೊರಡಬೇಕಿತ್ತು. ಇನ್ನು ತಡ ಮಾಡಬಾರದೆಂದು ಯೋಚಿಸಿ ಮುಖ್ಯಮಂತ್ರಿಯವರ ಭೇಟಿಗೆ ಮುಂದಾದೆ. ಆಗ ಡಿ. ದೇವರಾಜ ಅರಸ್ ಮುಖ್ಯಮಂತ್ರಿಯಾಗಿದ್ದರು. ಅವರು ಬಾಲಬ್ರೂಯಿಯಲ್ಲಿ ಸಿಗುತ್ತಾರೆ ಎನ್ನುವ ಸುದ್ದಿ ತಿಳಿದು ಅಲ್ಲಿಗೆ ಹೋದೆ. ನಾನೇನು ಸೀದು ಮುಖ್ಯಮಂತ್ರಿಯವರ ಮುಂದೆ ನಿಲ್ಲುವಂತಹ ದೊಡ್ಡ ಮನುಷ್ಯನಲ್ಲವಲ್ಲ. ಅವರ ಸಹಾಯಕರನ್ನು ಕಂಡು ನನ್ನ ಪರಿಸ್ಥಿತಿಯನ್ನು ಅವರಿಗೆ ಮನವರಿಕೆ ಮಾಡಿಕೊಟ್ಟೆ ಅವರು 'ಮೊದಲು ವಾರ್ತಾ ಸಚಿವರನ್ನು ಒಪ್ಪಿಸಿ' ಅಂದರು. ನಾನು ತಕ್ಷಣ ವಾರ್ತಾ ಸಚಿವ ಕೆ.ಹೆಚ್. ಶ್ರೀನಿವಾಸ್ ಅವರನ್ನು ಕಂಡು ನನಗೆ ಸಹಾಯ ಮಾಡಬೇಕೆಂದು ಮನವಿ ಮಾಡಿದೆ. ಸಹಾಯ ಮಾಡಲು ಅವರೂ ಒಪ್ಪಿದರು. ಅವರ ಸಹಾಯದಿಂದಲೇ



ಅರಸು ಅವರನ್ನು ಭೇಟಿಯಾಗಿ ವೆಸ್ಟ್ ಜರ್ಮನಿಯಿಂದ ಬಂದಿದ್ದ ಆಹ್ವಾನ ಪತ್ರಿಕೆಯನ್ನು ತೋರಿಸಿ ಹೋಗಲು ಹಣವಿಲ್ಲವೆಂದೆ. ಆ ಕ್ಷಣದಲ್ಲಿ ಮನಸ್ಸಿನಲ್ಲಿ ಒಂದು ವೇಳೆ ಅವರು ಸಹಾಯ ಮಾಡಲು ನಿರಾಕರಿಸಿದರೆ ಎನ್ನುವ ಅಳುಕಿತ್ತು. ಆದರೆ ಅರಸು ಅವರು ಒಂದೆರಡು ನಿಮಿಷ ಯೋಚಿಸಿ ತಮ್ಮ ಸಹಾಯಕರಿಗೆ ನನ್ನನ್ನು ತೋರಿಸಿ "ಈ ಹುಡುಗ ಹೋಗಲಿ" ಎಂದರು.

ಅಬ್ಬಾ! ಮುಖ್ಯಮಂತ್ರಿಯವರೇ ಒಪ್ಪಿದರು ಅಂದ ಮೇಲೆ ಮತ್ತೇನು? ತಕ್ಷಣ ಸರ್ಕಾರದಿಂದ ಚೆಕ್ ರೆಡಿಯಾಯಿತು. ಆದರೆ ಅದು ಕ್ಯಾಷ್ ಆಗುವುದು ಯಾವಾಗ? ಆದರೂ ಅದೂ ಸರ್ಕಾರದ ಚೆಕ್, ಇಂದಲ್ಲ ನಾಳೆ ಹಣ ಸಿಗುತ್ತದೆ ಎನ್ನುವ ಒಂದೇ ಧೈರ್ಯದಿಂದ ನನ್ನನ್ನು ಜರ್ಮನಿಗೆ ಕಳುಹಿಸಿಕೊಡುತ್ತಿದ್ದ ಟ್ರಾವಲ್ಸ್ ಏಜೆನ್ಸಿಯವರಿಗೇ ದುಂಬಾಲು ಬಿದ್ದು, 'ನನಗೆ ಟಿಕೆಟ್ ಕೊಡಿ, ಈ ಚೆಕ್ ಕ್ಯಾಷ್ ಮಾಡಿಕೊಳ್ಳಿ. ಹಾಗೊಂದು ವೇಳೆ ಕ್ಯಾಷ್ ಆಗದಿದ್ದರೂ ನಾನು ಬೆಂಗಳೂರಿಗೆ ಹಿಂದಿರುಗಿ ಬಂದ ಮೇಲೆ ಹಣದ ವ್ಯವಸ್ಥೆ ಮಾಡಿಕೊಡುತ್ತೇನೆ' ಎಂದು ಮನವಿ ಮಾಡಿಕೊಂಡೆ. ಅವರೂ ಒಪ್ಪಿದರು. ನಾನು ಜರ್ಮನಿಗೆ ಹೊರಟೇಬಿಟ್ಟೆ. ಆಗಲೂ ನನ್ನ ಉಡುಪು ಸುಧಾರಿಸಿರಲಿಲ್ಲ. ಅದೇ ಜುಬ್ಬಾ, ಪೈಜಾಮ, ಕೆಂಪು ಶಾಲು. ಆದರೆ ಜರ್ಮನಿಯ ಪ್ರವಾಸ ಒಂದು ಸುಂದರವಾದ, ಎಂದೂ ಮರೆಯಲು ಆಗದಂತಹ ಅನುಭವ.

ನಾನು ಹೋಗಿ ಇಳಿದದ್ದು ವೆಸ್ಟ್ ಜರ್ಮನಿಯ ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣದಲ್ಲಿ. ಅಲ್ಲಿಯ ಯೂಬಾನ್ ಟ್ರೈನ್‌ನಲ್ಲಿ ಮ್ಯಾನ್‌ಹ್ಯಾಮ್‌ಗೆ ಹೋಗಬೇಕಿತ್ತು. ವಿಶೇಷ ಅಂದರೆ ಫ್ರಾಂಕ್‌ಫರ್ಟ್‌ನಿಂದ ಹೊರಟ ವಿಮಾನ ಯೂಬಾನ್ ಟ್ರೈನ್ ಮ್ಯಾನ್‌ಹ್ಯಾಮ್ ತಲುಪುವುದು ಪಶ್ಚಿಮ ಜರ್ಮನಿ ಮುಖಾಂತರವೇ. ಹಾಗಾಗಿ ಗಡಿಗಳಲ್ಲಿ ಇನ್ನಿಲ್ಲದ ಶೋಧನೆಯಾಗಿಬಿಡುತ್ತದೆ. ನನಗೆ ಜರ್ಮನ್ ಭಾಷೆ ಗೊತ್ತಿರಲಿಲ್ಲವಾದ್ದರಿಂದ ಹೆಚ್ಚಿನ ಮಾತಿಲ್ಲದೆ ಹೋಗಬೇಕಿರುವ ಸ್ಥಳಗಳನ್ನಷ್ಟೇ ಉಚ್ಚರಿಸುತ್ತ ಹೊರಟಿದ್ದೆ.

ಮ್ಯಾನ್‌ಹ್ಯಾಮ್‌ನಲ್ಲಿ ಟ್ರೈನ್‌ನಿಂದ ಇಳಿದಾಗ ಒಬ್ಬ ದಪ್ಪಗಿನ ಮನುಷ್ಯ ಬಂದು ನನ್ನನ್ನು ಪರಿಚಯ ಮಾಡಿಕೊಂಡ. ಆತ ಟ್ಯಾಕ್ಸಿ ಡ್ರೈವರ್. ನನ್ನನ್ನು ಕರೆದೊಯ್ಯಲೆಂದೇ ಬಂದಿದ್ದ. ನನ್ನನ್ನು ಒಂದು ಹೋಟೆಲಿಗೆ ಕರೆದೊಯ್ದ. ಅಲ್ಲಿಯವರೆಗೆ ಒಂಟಿಯಾಗಿ ಪ್ರಯಾಣ ಮಾಡಿದ್ದವನು ನಾನು. ಹೋಟೆಲಿನಲ್ಲಿ ಮೃಣಾಲ್‌ಸೇನ್, ಮುಜಾಫರ್‌ಹುಸೇನ್ ಅವರುಗಳೂ ಇದ್ದರು. ಆನಂತರ ಅಲ್ಲಿ ಯಾವ ತೊಡಕೂ ನನಗಾಗಲಿಲ್ಲ.

ವೆಸ್ಟ್ ಜರ್ಮನಿಯಲ್ಲಿ ಸಮಾರಂಭ ಮುಗಿಸಿ ಯೂರೋಪ್ ಪ್ರವಾಸಕ್ಕೆ ಹೊರಡುವ ಹೊತ್ತಿಗೆ ಹತ್ತು ದಿನಗಳಾಗಿದ್ದವು. ಯೂರೋಪ್ ಪ್ರವಾಸದಲ್ಲಿ ಪ್ಯಾರಿಸ್‌ಗೆ ಭೇಟಿ ಕೊಟ್ಟಾಗ ಅಲ್ಲಿದ್ದ ಗಿರೀಶ್ ಕಾರ್ನಾಡರ ಸ್ನೇಹಿತ ಕೃಷ್ಣ ಬಸ್ರೂರ್ ನನ್ನನ್ನು ಒಂದು ವಾರ ತಮ್ಮ ಮನೆಯಲ್ಲಿಯೇ ಇರಿಸಿಕೊಂಡಿದ್ದರು. ನಾನು ಬೆಂಗಳೂರಿಗೆ ಹಿಂದಿರುಗುವಾಗ ಸಿನಿಮಾ ಬಗೆಗಿನ ಕೆಲವು ಪುಸ್ತಕಗಳನ್ನು ನನಗೆ ಕೊಟ್ಟು ಆತ್ಮೀಯವಾಗಿ ಬೀಳ್ಕೊಟ್ಟರು. ನಾನು ಮುಂದೆ ಯಾವ ಸಿನಿಮಾ ನನಗೆ ಸಿಗಬಹುದು ಎನ್ನುವ ಯೋಚನೆಯ ಜೊತೆಗೆ ಬೆಂಗಳೂರಿನಲ್ಲಿ ಚೆಕ್

ಕ್ಯಾಷ್ ಆಗಿದೆಯೋ ಇಲ್ಲವೋ ಎಂದುಕೊಂಡೇ ಬಂದೆ. ನನ್ನ ಪುಣ್ಯಕ್ಕೆ ಚೆಕ್ ಡ್ರಾ ಆಗಿತ್ತು. ಇದು ನನ್ನ ವೃತ್ತಿ ಬದುಕಿನ ಕೆಲವು ಅನುಭವಗಳು ಮಾತ್ರ. ಮುಂದೆ ನಾನು ಚಿತ್ರರಂಗದಲ್ಲಿ ಸಕ್ರಿಯವಾದೆ. ವಾಣಿಜ್ಯಾತ್ಮಕ ಹಾಗೂ ಕಲಾತ್ಮಕ ಚಿತ್ರಗಳನ್ನು ನಿರ್ದೇಶಿಸಿದೆ. ಕವಿ ಕೆ.ಎಸ್. ನರಸಿಂಹಸ್ವಾಮಿಯವರ ಜನಪ್ರಿಯ ಕವನ ಸಂಕಲನ 'ಮೈಸೂರ ಮಲ್ಲಿಗೆ'ಯ ಆಧಾರದ ಮೇಲೆ ಒಂದು ಚಿತ್ರ ತಯಾರಿಸಿದೆ. ಈ ಚಿತ್ರವೂ ರಾಷ್ಟ್ರ ಪ್ರಶಸ್ತಿ ಪಡೆಯಿತು. 'ಸಂತ ಶಿಶುನಾಳ ಶರೀಫ' ಚಿತ್ರವೂ ರಾಷ್ಟ್ರ ಪ್ರಶಸ್ತಿ ಗಳಿಸಿತು.

(ಕೃಪೆ : 'ಮಂಗಳಾ' ಪತ್ರಿಕೆ)

❑ ❖ ❑ ❖ ❑



# ಭರಣ - ನನಗಾಭರಣ

ನಾಗಿಣಿಭರಣ

ಪರಿಚಯದವರೆಲ್ಲರೂ ಹೇಳುತ್ತಾರೆ ನಾಗಾಭರಣ - ನಾಗಿಣಿ ಹೆಸರೇ ಅಪರೂಪದ ಸಾಂಗತ್ಯ ಎಂದು. ನಮ್ಮ ಸಂಬಂಧವೂ ಹಾಗೆಯೇ ನಾನು ಭರಣರನ್ನು ಕಂಡಿದ್ದು ಸುಮಾರು ಮೂರು ದಶಕಗಳ ಹಿಂದೆ. ಭೇಟಿಯ ನೆಲೆಯೂ ರಂಗಭೂಮಿಯೇ. 1976ರ ಸಮಯ ಆಗ ನಾವೆಲ್ಲ ಸೇರಿ ನಾಟಕಗಳನ್ನು ಮಾಡುತ್ತಿದ್ದೆವು. ಕಾರಂತರು ಏಳು ದಿನಗಳ ನಾಟಕೋತ್ಸವದ ಕಾರ್ಯಕ್ರಮ ಹಾಕಿಕೊಂಡು ಕರ್ನಾಟಕದಾದ್ಯಂತ ನಮ್ಮ ತಂಡವನ್ನು ಕರೆದುಕೊಂಡು ಹೋಗಿ ನಾಟಕ ಆಡಿಸಿದ್ದರು. ನಂತರ ತಂಡ ಮುಂಬೈಗೆ ಹೋಯಿತು. ಒಂದು ತಿಂಗಳ ಕಾಲ ಮುಂಬೈ, ಹೈದರಾಬಾದ್, ಶಿವಮೊಗ್ಗ, ಹೆಗ್ಗೋಡು ಅಂತ ತಿರುಗಿದೆವು. ಬಹಳ ಉತ್ಸಾಹದ ದಿನಗಳು ಅವು. ತಂಡದಲ್ಲಿ ನಾಗಾಭರಣರೂ ಇದ್ದರು. ರಂಗಭೂಮಿಯ ಕೆಲಸಗಳಲ್ಲಿ ಅವರು ತಮ್ಮನ್ನು ತೊಡಗಿಸಿಕೊಳ್ಳುವ ತಾದಾತ್ಮ್ಯತೆಯನ್ನು ಕಂಡು ನಾನು ಮೊದಲ ಬಾರಿಗೆ ಆಕರ್ಷಿತಳಾದೆ. ಪ್ರತೀ ಸಲ ನಾವು ಭೇಟಿಯಾದಾಗಲೂ ಇಬ್ಬರೂ ಹತ್ತಿರ ಹತ್ತಿರವಾಗುತ್ತಾ ಬಂದು ಆತ್ಮೀಯತೆ ಬೆಳೆಯಿತು. ಕ್ರಮೇಣ ಆಕರ್ಷಣೆ ಪ್ರೀತಿಯಾಗಿ ಬದಲಾಯಿತು. ನಾಗಾಭರಣ 'ಅನ್ವೇಷಣೆ' ಚಿತ್ರ ಮಾಡುವಾಗ ಅದರಲ್ಲಿ ಸಣ್ಣ ಪಾತ್ರ ಅಭಿನಯಿಸಿದೆ. ಜೊತೆಗೆ ಕಾಸ್ಟ್ಯೂಮ್ ಕೂಡ ವಿನ್ಯಾಸ ಮಾಡಿದೆ. ಸ್ಮಿತಾ ಪಾಟೀಲ್ ಜೊತೆಯ ಅನುಭವಗಳು ನನಗೆ ಬಹಳ ಕಲಿಸಿದವು. ಅಷ್ಟು ಹೆಸರಾಂತ ನಟಿ ನನ್ನ ಜೊತೆ ಸರಳವಾಗಿ ಬೆರೆತ ರೀತಿ, ಕಾಸ್ಟ್ಯೂಮ್‌ಗಳ ಬಗ್ಗೆ ಹೇಳಿಕೊಟ್ಟ ಟಿಪ್ಸ್‌ಗಳು ನನಗೆ ಬಹಳ ಹಿಡಿಸಿದವು. ನಾನು ನಾಟಕದ ಹಿನ್ನೆಲೆಯಿಂದ ಬಂದಿದ್ದರಿಂದ ಸ್ಮಿತಾಗೂ ನನ್ನ ಬಗ್ಗೆ ಆತ್ಮೀಯತೆ ಇತ್ತು. ಒಂದು ಸಲ ಹೊಸಾ ಸೀರೆಯನ್ನು ಹಳೇದು ಮಾಡಿ ಕೊಡು ಅಂತ ನಾಗಾಭರಣ ಹೇಳಿದಾಗ ನಾನು ಅದನ್ನು ಬರೀ ನೀರಿನಲ್ಲಿ ಅದ್ದಿ ಒಣಗಿಸಿದೆ. ಆದರೆ ಸೀರೆ ಹೊಸದಾಗಿಯೇ ಕಾಣುತ್ತಿತ್ತು. ಸ್ಮಿತಾ ಆಗ ಸೀರೆಯನ್ನು ಟೀ ಡಿಕಾಕ್ಷನ್‌ನಲ್ಲಿ ಅದ್ದಿ ತೆಗಿ, ಡಲ್ ಆಗುತ್ತೆ ಅಂತ ಹೇಳಿಕೊಟ್ರು.

'ಅನ್ವೇಷಣೆ'ಯಲ್ಲಿ ನನ್ನ ಕೆಲಸದ ಬಗ್ಗೆ ಭರಣ ಆಗ ಏನೂ ಹೇಳಲಿಲ್ಲ.

ಆಮೇಲೆ ಭರಣ 'ತಬ್ಬಲಿಯ ನೀನಾದೆ ಮಗನೆ' ಚಿತ್ರದ ಶೂಟಿಂಗಿಗೆ ಹೋಗಿದ್ದಾಗ ನಾನು ಇಲ್ಲೇ ಉಳಿದೆ. ಆಗ ನನಗೆ ತುಂಬಾ ಜ್ವರ. ಸ್ವಲ್ಪ ದಿನ ಕಳೆದ ಮೇಲೆ ಭರಣ ನಂಗೆ ಒಂದು ಗ್ರೀಟಿಂಗ್ ಕಾರ್ಡ್ ಕಳಿಸಿದರು. ಅದನ್ನು ಮೊದಲು ತೆಗೆದು ನೋಡಿದ್ದು ಅಮ್ಮ. ಗ್ರೀಟಿಂಗ್ಸ್ ನೋಡಿದ ತಕ್ಷಣ ಅಮ್ಮನಿಗೆ ಭರಣ ಮತ್ತು ನಾನು ಆತ್ಮೀಯತೆಯಿಂದ ಇರುವ ಸುದ್ದಿ ತಿಳಿದು ತುಂಬಾ ಅಪ್‌ಸೆಟ್ ಆದರು. ಕಾಲೇಜಿಗೂ ಹೋಗಬೇಡಾ, ಎಲ್ಲಿಗೂ ಹೋಗಬೇಡಾ ಅಂತ ಮನೆಯಲ್ಲೇ ಇಟ್ಟುಕೊಂಡು ಬೇರೆ ಗಂಡು ಹುಡುಕತೊಡಗಿದರು. ನಮ್ಮದು ದೇವಸ್ಥಾನದ ಜೊತೆ ನಿಕಟ ಸಂಬಂಧ ಇಟ್ಟುಕೊಂಡ ಮನೆತನ. ನೀನು ಮಾಡೋ

ಕೆಲಸದಿಂದ ವಂಶಕ್ಕೇ ಕೆಟ್ಟ ಹೆಸರು ಅಂತ ಬೈದರು. ನಾಲ್ಕು ತಿಂಗಳು ಅಮ್ಮ ನನ್ನ ಜೊತೆ ಮಾತೇ ಆಡಲಿಲ್ಲ. ಒಂದು ಗಂಡು ನೋಡಿ ಒಪ್ಪಿ ಅಪ್ಪ ಮಾರನೇ ದಿನ ಅವರನ್ನು ಮನೆಗೆ ಕರೆದಿದ್ದರು. ಹಿಂದಿನ ದಿನ ರಾತ್ರಿ ಹನ್ನೊಂದು ಗಂಟೆಗೆ ಅಡಿಗೆ ಮನೆಯಲ್ಲಿ ನನ್ನನ್ನು ನಿಲ್ಲಿಸಿ ಅಪ್ಪ ನೇರವಾಗಿ ಕೇಳಿದರು. ಆಗ ನಾನೂ ಧೈರ್ಯಮಾಡಿ ನಾನು ಮದುವೆ ಆದರೆ ಭರಣನ್ನ ಮಾತ್ರ ಅಂತ ಹೇಳಿಬಿಟ್ಟೆ. ರಾತ್ರೋರಾತ್ರಿ ಅಪ್ಪ ಗಂಡಿನ ಮನೆಗೆ ಫೋನ್ ಮಾಡಿ ಅವರು ಬರೋದು ಬೇಡಾ ಅಂತ ಹೇಳಿದರು. ಅಣ್ಣನ್ನ ಕರೆದು ರಂಗನ ಜೊತೆ ಮಾಡಿ ಭರಣನ ಮನೆಗೆ ಕಳಿಸಿ ಕರೆಸಿದರು. ಮದುವೆಗೆ ಒಪ್ಪಿ ತಾವೇ ಮುಂದೆ ನಿಂತು ಮದುವೆ ಮಾಡಿಸಿದರು. ಆಮೇಲೆ ಎಲ್ಲರೂ ನಮ್ಮನ್ನ ಸಂತೋಷವಾಗಿಯೇ ಒಪ್ಪಿಕೊಂಡರು.

ಮದುವೆಯಾದ ಮೇಲೆ ಭರಣ ಕಮರ್ಷಿಯಲ್ ಚಿತ್ರಕ್ಕೆ ಕಾಲಿಟ್ಟರು. 'ಬಂಗಾರದ ಜಿಂಕೆ' ಮೂಲಕ. ಆಗ ಭರಣನೇ ಇನ್ನೂ ಸ್ಥಾನ ಭದ್ರ ಮಾಡಿಕೊಳ್ಳಬೇಕಾಗಿದ್ದರಿಂದ ನಾನು ಆಗ ಅವರ ಕೆಲಸದಲ್ಲಿ ಒಳಗೊಳ್ಳಲಿಲ್ಲ. ಆಗಿನ್ನೂ ಭರಣ ಪ್ರಾರಂಭದ ಹೆಜ್ಜೆ ಇಡುತ್ತಾ ಪ್ರತಿಭಾವಂತ, ಪ್ರಶಸ್ತಿ ವಿಜೇತ ದಿಗ್ಗಜರ ಜೊತೆ ಪೈಪೋಟಿ ಮಾಡಬೇಕಾಗಿತ್ತು. ಸ್ನೇಹಮಯವಾಗಿಯೇ ಈ ಸವಾಲನ್ನು ಎದುರಿಸಿ ಚಿತ್ರರಂಗಕ್ಕೆ ಧುಮುಕಿದರು. ಭರಣರ ಕಾರ್ಯತತ್ಪರತೆಯ ಬಗ್ಗೆ ಯಾವುದೇ ಅನುಮಾನವಿಲ್ಲದ ನಾನು ಅವರ ಪ್ರತಿಭೆಯೇ ಅವರಿಗೆ ಮಾರ್ಗದರ್ಶನ ತೋರಿಸುತ್ತದೆ ಎಂದು ನಂಬಿದ್ದೆ. ಅದು ನಿಜವಾಯಿತು. ಹಂತ ಹಂತವಾಗಿ ಮೇಲೇರುತ್ತಾ ಭರಣ ಪರಿಪೂರ್ಣತೆಯತ್ತ ನಡೆದರು. ಜೊತೆಗೇ ತಮ್ಮೊಡನೆ ಅನೇಕ ಹೊಸ ಪ್ರತಿಭೆಗಳನ್ನು ಗುರುತಿಸಿ ಕರೆದುಕೊಂಡು ಹೋದರು. ಅವರ ಈ ಎದೆಗಾರಿಕೆಯನ್ನು ನಾನು ಅತ್ಯಂತ ಹತ್ತಿರದಿಂದ ನೋಡುತ್ತಾ ಬಂದಿದ್ದೇನೆ. ಅವರಿಗೇ ಹೊಳೆಯುವ ಆ intuition ಅವರನ್ನು ಕಾಪಾಡಿದೆ.

ಆಗಿನ್ನೂ ಬೆಂಗಳೂರಿನಲ್ಲಿ ರೆಕಾರ್ಡಿಂಗ್, ಡಬ್ಬಿಂಗ್, ಮಿಕ್ಸಿಂಗ್ ಸೌಕರ್ಯಗಳಿರಲಿಲ್ಲ. ಮದ್ರಾಸಿಗೆ ಹೋದರೆ ತಿಂಗಳಾನುಗಟ್ಟಲೆ ಕೆಲಸ ಮುಗಿಯುವವರೆಗೂ ಅಲ್ಲೇ ಇರುತ್ತಿದ್ದರು. ನಮ್ಮದು ಒಟ್ಟು ಕುಟುಂಬವಾದ್ದರಿಂದ ನಾನು ಹೇಗೋ ಇದ್ದುಬಿಡುತ್ತಿದ್ದೆ. ಆಮೇಲೆ 'ನಮ್ಮ ನಮ್ಮಲ್ಲಿ', 'ಶ್ರೀಸಾಮಾನ್ಯ', 'ತಿರುಗುಬಾಣ', 'ಆಫೀಸಾಯಣ'ಗಳನ್ನು ಮಾಡುವಾಗ ನಾನೂ ಅದರಲ್ಲಿ ಒಳಗೊಂಡಿದ್ದೆ.

ಅದಾಗಿ ಮಕ್ಕಳು ಹುಟ್ಟಿದರು. ಅವರ ಲಾಲನೆ ಪಾಲನೆಯಲ್ಲಿ ನನಗೆ ಹೊರಗಿನ ಕೆಲಸಗಳನ್ನು ಹೆಚ್ಚು ತೊಡಗಿಕೊಳ್ಳುವುದು ಸಾಧ್ಯವಾಗಲಿಲ್ಲ.

ಭರಣ 'ಮುಸ್ಸಂಜೆ' ಮಾಡುತ್ತಿದ್ದಾಗ ಒಂದು ದಿನ ತುರ್ತಾಗಿ ಎಲ್ಲಿಗೋ ಹೋಗಬೇಕಾಗಿತ್ತು. ಶಾಟ್ ಡಿವೈಡ್ ಮಾಡಿಕೊಟ್ಟು 'ನೀನು ಮಾಡ್ತೀಯ' ಅಂತ ಹೇಳಿ ಹೋದರು. ಸಂಜೆ ಬಂದು ನನ್ನ ಕೆಲಸ ನೋಡಿ ಖುಷಿಪಟ್ಟರು. ಇನ್ನೊಂದು ದಿನ ಮ್ಯೂಸಿಕ್ ಮಾಡುತ್ತಿದ್ದಾಗ ಫೋನ್ ಬಂತು. ಭರಣ ಹೋಗಲೇಬೇಕಾಯಿತು. ಅದೊಂದು ಸಾವಿನ ದೃಶ್ಯ. ಅದಕ್ಕೆ ಹಿನ್ನಲೆ ಸಂಗೀತ ಹಾಕಬೇಕಾಗಿತ್ತು. ನಾನು ಕ್ಯಾಸೆಟ್ ಹಾಕ್ಕೊಂಡು ನೋಡಿ ದೃಶ್ಯಕ್ಕೆ ತಕ್ಕಾದ ಸಂಗೀತ ಆರಿಸಿ ಹಾಕಿದೆ. ರಾತ್ರಿ ಬಂದು ನೋಡಿ ಚೆನ್ನಾಗಿವೆ ಅಂದ್ರು.



ಹೀಗೇ ಕಲೀತಾ ಬಂದೆ. ಆಮೇಲೆ 'Stone boy'ಗೆ ಕೆಲಸ ಮಾಡಿದೆ. ತಂಡದ ಜೊತೆ ಮಾರಿಷಸ್‌ಗೆ ಹೋದೆ. ಅಲ್ಲಿಂದ ಮುಂದೆ 'ಮೈಸೂರು ಮಲ್ಲಿಗೆ', 'ಚಿನ್ನಾರಿ ಮುತ್ತ' ಆಯಿತು. 'ನಾಗಮಂಡಲ' ಚಿತ್ರಕ್ಕೆ ಮೊದಲು ಬಿ. ಜಯಶ್ರೀ ಕಾಸ್ಟ್ಯೂಮ್ ಮಾಡೋದು ಅಂತ ನಿರ್ಧಾರವಾಗಿತ್ತು. ಆದರೆ ಜಯಶ್ರೀಗೆ ಬೇರೆ ಕೆಲಸ ಬಂದಿದ್ದರಿಂದ ಅಥವಾ ಬೇರೆ ದೇಶಕ್ಕೆ ಹೋಗಬೇಕಾಗಿದ್ದರಿಂದ ಕೊನೇಗಳಿಗೆಯಲ್ಲಿ ಆಗಲ್ಲ ಅಂತ ಹೇಳಿದರು. ಶೂಟಿಂಗ್ ಶುರು ಆಗಕ್ಕೆ 6 ದಿನ ಇದೆ ಅಂದಾಗ ಬಂದು ನೀನೇ ಕಾಸ್ಟ್ಯೂಮ್ ಮಾಡು ಅಂದುಬಿಟ್ಟರು. 'ನಾನಾ!' ಅಂತ ನಾನು ಗಾಭರಿಯಿಂದ ಕೇಳಿದಾಗ 'ನೀನು ನಿಭಾಯಿಸುತ್ತೀಯ ಅನ್ನೋ ಧೈರ್ಯ ನನಗಿದೆ' ಅಂದ್ರು. ಅದೇ ಮೊದಲ ಸಲ ಅವರು ಸ್ಪಷ್ಟವಾಗಿ ನನ್ನ ಕೆಲಸದ ಬಗ್ಗೆ ಮೆಚ್ಚಿ ಮಾತಾಡಿದ್ದು. ಅದಕ್ಕೆ ಮೊದಲು 'ಮೈಸೂರು ಮಲ್ಲಿಗೆ'ಯಲ್ಲಿ ಸ್ವಾತಂತ್ರ್ಯಪೂರ್ವದ ಫೋಟೋ ಎಲ್ಲ ಸಂಗ್ರಹಿಸಿ ಸ್ಟಡಿ ಮಾಡಿ ಕಾಸ್ಟ್ಯೂಮ್ ಮಾಡಿದ್ದೆ. ಮಿಕ್ಕವರೆಲ್ಲ ಚೆನ್ನಾಗಿದೆ ಅಂದ್ರು. ಆದರೆ ಭರಣ ಮಾತ್ರ ಏನೂ ಹೇಳಿರಲಿಲ್ಲ. 'ನಾಗಮಂಡಲ' ಮಾಡಿದ ಮೇಲೆ ನಂಗೆ ಇನ್ನಷ್ಟು ಆತ್ಮವಿಶ್ವಾಸ ಬಂತು. ಹಗಲು ರಾತ್ರಿ ಕೆಲಸ ಮಾಡಿ ಬೆಳಿಗ್ಗೆ ಶಾಟ್‌ಗೆ ಬೇಕಾದ ಕಾಸ್ಟ್ಯೂಮ್ ರೆಡಿ ಮಾಡಿಕೊಡ್ತಿದ್ದೆ. ಆಮೇಲೆ 'ಸಿಂಗಾರವ್ವ'ದಲ್ಲಿ ಕಾಸ್ಟ್ಯೂಮ್ ಜೊತೆಗೆ ನೃತ್ಯ ನಿರ್ದೇಶನವನ್ನೂ ಮಾಡ್ದೆ.

ಮದುವೆಗೆ ಮೊದಲೇ ನಾನು ಡ್ಯಾನ್ಸ್ ಕಲಿತಿದ್ದೆ. ಮದುವೆಯ ನಂತರ ಮಕ್ಕಳು ಬೆಳೆಯುವಾಗ ಎಲ್ಲ ತಪ್ಪಿಹೋಗಿತ್ತು. ಭರಣ ನನ್ನ ಆಸಕ್ತಿಯನ್ನು, ಪರಿಶ್ರಮವನ್ನು ಗುರುತಿಸಿ ತಮ್ಮ ಜೊತೆಜೊತೆಗೇ ನನ್ನನ್ನೂ ಬೆಳೆಸಿಕೊಂಡು ಹೋದರು. ಇದು ಭರಣನ ವಿಶೇಷ ಗುಣ ಅಂತ ನನ್ನ ಭಾವನೆ.

ಕೆಲವರು ಕೇಳ್ತಾರೆ ಜನಪ್ರಿಯ ವ್ಯಕ್ತಿ ಗಂಡನಾದಾಗ ಸಾಮಾನ್ಯವಾಗಿ ಹೆಂಡತಿಗೆ ಒಂದು ರೀತಿಯ ಅಭದ್ರತೆ ಇರುತ್ತೆ, ನಿಮಗೂ ಇದೆಯಾ ಅಂತ. ಅಭದ್ರತೆ ನನಗೆ ಎಂದಿಗೂ ಇರಲಿಲ್ಲ. ಮುಂದೆ ಖಂಡಿತಾ ಬರೋದಿಲ್ಲ. ಭರಣ ಸದಾ ತಮ್ಮ ಕೆಲಸದಲ್ಲೇ ಮುಳುಗಿ ಮನೆಕಡೆ ಗಮನ ಕೊಡೋದಿಲ್ಲ ಅಂತ ಮೊದಮೊದಲು ನಂಗೆ ಕೋಪ ಬರ್ತಾ ಇತ್ತು. ಸ್ವಲ್ಪ ಕೂಡಾ ಜವಾಬ್ದಾರಿ ತಗೋಳಲ್ಲ ಅಂತ ರೇಗುತ್ತಿದ್ದೆ. ನಾಟಕ ಸಿನಿಮಾ ಇದ್ದುಬಿಟ್ರೆ ಬೇರೆ ಯಾವುದೂ ಅವರ ತಲೇಗೇ ಹೋಗಲ್ಲ. ಒಂದೊಂದು ಸಲ ಕೇಳೂ ಬಿಡ್ತಿದ್ದೆ. 'ಸಿನಿಮಾದಲ್ಲಿ ಅಷ್ಟೆಲ್ಲಾ ರೋಮಾನ್ಸ್ ತೋರಿಸ್ತೀರಲ್ಲಾ. ನಿಜ ಜೀವನದಲ್ಲಿ ಒಂದು ಮೊಳ ಹೂ ತಂದುಕೊಟ್ಟಿದ್ದೀರೇನ್ರೀ?' ಅಂತ. ಹೆಣ್ಣಾಗಿ ನಂಗೆ ಆ ನಿರೀಕ್ಷೆಗಳೆಲ್ಲಾ ಇತ್ತು. ಆದರೆ ಹೆಂಡತಿ ತಾನೇ ಅನ್ನೋ ಸಲಿಗೆಯ ಭಾವನೆ ಅವರಿಗಿರಬಹುದು. ಅದೇ ರೀತಿ ಅವರು ನಂಗೆ ಸಂಪೂರ್ಣ ಸ್ವಾತಂತ್ರ್ಯನೂ ಕೊಟ್ಟಿದ್ದಾರೆ. ಯಾವುದೇ ರೀತಿಯ ನಿರ್ಬಂಧ ಹಾಕದೇ ಮುಕ್ತವಾಗಿರಲು ಬಿಟ್ಟಿದ್ದಾರೆ. ಆಮೇಲೆ ಬರಬರ್ತಾ ನಂಗೆ ಒಂದು ವಿಷಯ ಗೊತ್ತಾಯಿತು. ಅವರು ಹೊರಗೆ ಕೆಲಸ ಮಾಡ್ತಿರೋವಾಗ ಡೈರೆಕ್ಟರ್. ಮನೆಯೊಳಗೆ ಬಂದ ನಂತರ ಮಾತ್ರ ನನ್ನ ಗಂಡ. ಈ ಸರಳ ಸಿದ್ಧಾಂತಾನ ನಾನು ರೂಢಿಸಿಕೊಂಡ ಮೇಲೆ ಎಲ್ಲ ಸುಲಭ ಆಯ್ತು. ಒಂದರ್ಥದಲ್ಲಿ ನಾನು ಅವರಿಗೆ ತಾಯಿ, ಮಂತ್ರಿ, ಗೆಳತಿ ಎಲ್ಲಾ ಆಗಿದ್ದೀನಿ ಅಂತ ಸಮಾಧಾನವೇ ಇದೆ.

ಅವರ ಜೊತೆ ಕೆಲಸ ಮಾಡುವಾಗ ನಾನು ತಂಡದ ಇತರರ ರೀತಿಯಲ್ಲೇ ಇರ್ತೀನಿ. ಹೆಂಡತಿ ಅಂತ ಹೆಚ್ಚುಗಟ್ಟಲೆ ಮಾಡಲ್ಲ. ಅವರೂ ಅಷ್ಟೇ. ಸೆಟ್‌ನಲ್ಲಿ ನನ್ನನ್ನ ತುಂಬ ಪ್ರೊಫೆಶನಲ್ ಆಗೇ ನಡೆಸಿಕೊಳ್ತಾರೆ.

ಆದರೆ ನಾನು ಸಹಿಸಿಕೊಳ್ಳಲು ಸಾಧ್ಯವಾಗದೇ ತುಂಬ ನೋವು ತಿಂದ ಸಂದರ್ಭಗಳು ಬೇರೆಯವರಿಂದ ಆಗಿದೆ. ಮಾಧ್ಯಮಗಳಲ್ಲಿ ಏನೇನೋ ಸುಳ್ಳು ಸುಳ್ಳು ಬರೆದು ಬಿಟ್ಟಾಗ ನಂಗೆ ಅದನ್ನ ತಡಕೊಳ್ಳಕ್ಕೆ ಸಾಧ್ಯವೇ ಆಗ್ತಿರಲಿಲ್ಲ. 'ಯಾಕ್ರೀ ಹೀಗೆಲ್ಲಾ ಸುಳ್ಳು ಬರೀತಾರೆ' ಅಂತ ಕೇಳ್ತಿದ್ದೆ. 'ಹೋಗ್ಲಿ ಬಿಡೇ ಬರಕೊಳ್ಳಲಿ, ಸುಮ್ನನೆ ನಮ್ಮ ಪಾಡಿಗೆ ನಾವು ಕೆಲಸ ಮಾಡಬೇಕು' ಅಂತ ಹೇಳಿ ಅವರು ಮರೆತುಬಿಡ್ತಾರೆ. ಪ್ರಶಸ್ತಿಗಳು ಬಂದಾಗ ಅಟ್ಟಕ್ಕೇರಲಿಲ್ಲ. ಟೀಕೆಗಳು ಬಂದಾಗ ಕೆಳಕ್ಕೆ ಇಳೀಲಿಲ್ಲ. ತಾಳ್ಮೆ ಅನ್ನೋದನ್ನ ತಾನು ಕಲಿತಿದ್ದೇ ಭರಣರಿಂದ. 'ದಳವಾಯಿ ಮುದ್ದಣ್ಣ'ದ ಪ್ರಸಂಗದಲ್ಲಿ ನಾವು ಫೋಟೋ ಶೂಟ್‌ಗೆ ನಮ್ಮ ಕೈಯಿಂದಾನೇ ಖರ್ಚು ಮಾಡಿ ಪ್ರಭಾತ್‌ನಿಂದ ಸೆಟ್ ತರಿಸಿ ಹಾಕಿಸಿ ಪ್ರಕಾಶ್ ರೈಗೆ ಕಾಸ್ಟ್ಯೂಮ್ ಮಾಡಿಸಿ ಫೋಟೋ ಶೂಟ್ ಮಾಡಿದೆವು. ಆದರೆ ಪ್ರೊಡ್ಯೂಸರ್ 20 ಸಾವಿರ ರೂಪಾಯಿ ಕೊಟ್ಟುಬಿಟ್ಟು ಆಮೇಲೆ ಪ್ರೆಸ್‌ನಲ್ಲಿ ಒಂದೂಕಾಲು ಲಕ್ಷ ಕೊಟ್ವಿ ಅಂತ ಹೇಳಿಕೆ ಕೊಟ್ಟರು. ಆಗಲೂ ಭರಣ ತಾಳ್ಮೆಗೆಡಲಿಲ್ಲ. ಆದರೆ ತಡೆಯಲಾರದೇ ನಾನೇ ಪ್ರೆಸ್‌ನವರನ್ನು ಕರೆದು ತೋರಿಸಿ 20 ಸಾವಿರ ಚೆಕ್‌ನ ಪ್ರೊಡ್ಯೂಸರ್‌ಗೆ ವಾಪಸ್ಸು ಕೊಟ್ಟೆ. ಅವರು ಚೆಕ್ ಸ್ವೀಕರಿಸಿದರು. ಆದರೆ ತಾವು ಹೇಳಿದ್ದು ತಪ್ಪು ಅಂತ ಹೇಳಲಿಲ್ಲ. ಇಂತಹ ಪ್ರಸಂಗಗಳು ಬಂದಾಗ ನಾನು ತಾಳ್ಮೆಗೆಡದೇ ಇರುವಂತೆ ಕಲಿತಿದ್ದು ಭರಣರನ್ನು ನೋಡಿ.

ಸಿನಿಮಾ ಕ್ಷೇತ್ರದಲ್ಲಿ ನಿರ್ದೇಶಕರು, ನಟರು ಹೊರಗೆ ಬೇರೆ ಅಫೇರ್ ಇಟ್ಟುಕೊಳ್ತಾರೆ. ಭರಣರ ಬಗ್ಗೆ ನಿಮಗೆ ಅನುಮಾನ ಇಲ್ಲವಾ ಅಂತ ಎಷ್ಟೋ ಜನ ನನ್ನನ್ನ ಕೇಳಿದ್ರು. ಖಂಡಿತಾ ಇಲ್ಲ. ಮನೆಯಿಂದ ಹೊರಗೆ ಅವರು ಸಾರ್ವಜನಿಕ ವ್ಯಕ್ತಿ. ಮನೆಯೊಳಗೆ ನನ್ನ ಸ್ವಂತ. ಅಕಸ್ಮಾತ್ ಭರಣ ಹಾಗೆ ಯಾರ ಬಗ್ಗೆಯಾದರೂ ಹೆಚ್ಚಿನ ಆಸಕ್ತಿ ತೋರಿಸಿದರೂ ನಂಗೆ ಖಂಡಿತಾ ಅಭದ್ರತೆ ಕಾಡಲ್ಲ. ಯಾಕೆಂದರೆ ಭರಣ ನಂಗೆ ಯಾವ ರೀತಿಯಲ್ಲೂ ಕೊರತೆ ಮಾಡಿಲ್ಲ. ಇರೋ ನಾಲ್ಕು ದಿನಗಳನ್ನ ನಾವು ಖುಷಿಯಿಂದ ಕಳೀಬೇಕು ಹೊರತು ಸಿಟ್ಟು ಜಗಳದಲ್ಲಿ ಸಮಯ ವ್ಯರ್ಥಮಾಡಬಾರದು. ಹೆಣ್ಣು ಗಂಡಿನ ಸಂಬಂಧ ವೀಣೆಯ ತಂತಿ ಹಾಗೆ. ನಾಲ್ಕು ತಂತಿಗಳು ಪರಸ್ಪರ ಸ್ಪಂದಿಸಿದಾಗ ಝೇಂಕಾರ ಮೂಡುತ್ತೆ. ಒಂದೇ ತಂತಿ ಆದರೆ ಅದು ಏಕನಾದ. ಬೇಂದ್ರೆಯವರು 'ನಾನು ನೀನು ಆನೂ ತಾನು ನಾಕು ನಾಕೇ ತಂತಿ' ಅಂತ ಹೇಳಿದ್ದು ಅದಕ್ಕೇ. ಬೇರೆ ಬೇರೆ ಮಟ್ಟಗಳಲ್ಲಿ ಮಾನವ ಸಂಬಂಧಗಳು ಮಿಡಿಯುತ್ತಿರುತ್ತದೆ. ಅಷ್ಟು ಅರ್ಥ ಮಾಡಿಕೊಂಡರೆ ಸಾಕು. ಯಾವ ದ್ವಂದ್ವಗಳೂ ಇರಲ್ಲ.

ಒಂದೊಂದು ಸಲ ನನಗನ್ನಿಸುತ್ತೆ ಭರಣರಿಗೆ ಸಿಗಬೇಕಾದಷ್ಟು ಮನ್ನಣೆ ಸಿಕ್ಕಿಲ್ಲ ಅಂತ. ಅಂದರೆ ಪ್ರಶಸ್ತಿಗಳು, ಸನ್ಮಾನಗಳು ಸಿಕ್ಕಿವೆ. ಆದರೆ ಬೇರೆ ಭಾಷೆಗಳಲ್ಲಿ ಇಷ್ಟು ಸಾಧನೆ ಮಾಡಿದವರಿಗೆ ಸಿಗೋ ಮನ್ನಣೆ ನೋಡಿದರೆ... ತಮಿಳಿನ ಬಾಲಚಂದರ್ ಯಾವಾಗಲೂ ಹೇಳ್ತಿರ್ತಾರೆ 'ಭರಣ ನೀನು ಮದ್ರಾಸಿನಲ್ಲಿರಬೇಕಾಗಿತ್ತು' ಅಂತ. 'ಜನ್ನಲ್' ತಮಿಳ್



ಸೀರಿಯಲ್‌ನ ಭರಣ, ಬಾಲಚಂದರ್ ಜೊತೆ ಸೇರಿ ಮಾಡಿದಾಗ ಅದಕ್ಕೆ ಪ್ರಶಸ್ತಿ ಬಂತು. ಇನ್ನೂ ಬೇಕಾದಷ್ಟು ಆಫರ್‌ಗಳು ಬಂದವು. ಆದರೆ ಭರಣರ ಕನ್ನಡದ ಪ್ರೀತಿ ಅವರು ಇಲ್ಲೇ ನೆಲೆಸುವ ಹಾಗೆ ಮಾಡಿತು. ಅದಕ್ಕೆ ಅತ್ಯುತ್ತಮ ಉದಾಹರಣೆ ಅಂದರೆ ಕಾಳಿಂಗರಾಯರ ಜೀವನ ಆಧರಿಸಿ ಭರಣ ಸಿದ್ಧಪಡಿಸಿದ ಕಥೆ. ಎಷ್ಟು ಕಾದರೂ ಅದನ್ನ ನಿರ್ಮಿಸಲು ಯಾವ ನಿರ್ಮಾಪಕರೂ ಸಿಗಲಿಲ್ಲ. ಒಂದು ದಿನ ಬಾಲಚಂದರ್‌ಗೆ ಆ ಕತೆ ಹೇಳಿದಾಗ ಅವರು ಒತ್ತಾಯ ಮಾಡಿ ಅದನ್ನು ತಗೊಂಡು 'ಸಿಂಧು ಭೈರವಿ' ಮಾಡಿದರು. ಅದು ಸೂಪರ್‌ಹಿಟ್ ಆಯಿತು. ಚಿತ್ರದ ಮೊದಲ ಕಾರ್ಡಿನಲ್ಲಿ ಬರುತ್ತೆ. 'ನಾಗಾಭರಣರಿಗೆ ಥ್ಯಾಂಕ್ಸ್' ಅಂತ.

ನಮ್ಮದು ಭಿನ್ನ ಸಂಸ್ಕೃತಿಯ ಹಿನ್ನೆಲೆಯಾದರೂ ನಮ್ಮಲ್ಲಿ ಯಾವ ರೀತಿಯ ಘರ್ಷಣೆಯೂ ಆಗದೇ ಇರಲು ಕಾರಣ ಭರಣ ಯಾವ ಒಂದು ಸಂಸ್ಕೃತಿಗೂ ಕಟ್ಟುಬಿದ್ದವರಲ್ಲ. ಪೂಜೆ ಪುರಸ್ಕಾರಕ್ಕೆ ಅಲ್ಲೂ ಬರಲ್ಲ, ಇಲ್ಲೂ ಬರಲ್ಲ. ಯಾವ ಬಂಧನಕ್ಕೂ ಸಿಕ್ಕಿ ಹಾಕಿಕೊಳ್ಳಲಲ್ಲ. ಸದಾ ತಮ್ಮ ಕೆಲಸದಲ್ಲಿ ಮಗ್ನರಾಗಿದ್ದು, ಕರೆದಾಗ ಸುಮ್ನನೆ ಬಂದು ನಮಸ್ಕಾರ ಹಾಕಿ ಹೋಗ್ತಾರೆ. ಅದೂ ಇದೂ ಅಂತ ತಕರಾರು ಮಾಡಲ್ಲ. ನೀನ್ಯಾಕೆ ಇದನ್ನೆಲ್ಲ ಮಾಡ್ತೀಯಾ ಅಂತ ಪ್ರಶ್ನಿಸಲ್ಲ.

ನನ್ನ ಕೈ ಅಡಿಗೆ ಅಂದರೆ ಭರಣರಿಗೆ ತುಂಬಾ ಇಷ್ಟ. ಎಷ್ಟು ಹೊತ್ತಿಗೆ ಬಂದರೂ ಮನೆಯಲ್ಲೇ ಊಟ ಮಾಡೋದು. ಅವರಿಗೆ ಮಾಂಸಾಹಾರ ಇಷ್ಟ. ಆದರೆ ನಾನು ಮನೇಲಿ ಮಾಡಲ್ಲ. ಮಾಡು ಅಂತ ಯಾವತ್ತೂ ಹೇಳಿಲ್ಲ. ಹಾಗಂತ ಹೋಟೆಲಿಗೆ ಹೋಗಲ್ಲ. ಗೆಳೆಯರು, ನೆಂಟರಿಷ್ಟರು ಕರೆದರೆ ಹೋಗುತ್ತಾರೆ ಹೊರತು, ಊಟವನ್ನೇ ಹುಡುಕಿಕೊಂಡು ಹೋಗಲ್ಲ.


ಮೂವತ್ತು ವರ್ಷಗಳಲ್ಲಿ ನಮ್ಮ ಸಂಬಂಧ ಬೆಳೆದಿದೆ, ಗಟ್ಟಿಗೊಂಡಿದೆ, ಸ್ಥಿರವಾಗಿದೆ. ಹಿಂದೆ ತಿರುಗಿ ನೋಡಿದರೆ ನಾವು ನಡೆದು ಬಂದ ದಾರಿಯಲ್ಲಿ ಕಷ್ಟ ಸುಖವನ್ನು ಸಮಚಿತ್ತವಾಗಿ ಸ್ವೀಕರಿಸುತ್ತಾ ಬಂದಿದ್ದರೆ ಅದಕ್ಕೆ ಕಾರಣ ಭರಣರೇ. ನನ್ನಣ್ಣ 'ರಂಗ'ನ ಅಕಾಲಿಕ ಸಾವಿನ ಆಘಾತದ ಸಮಯದಲ್ಲಿ ಇದರ ಪ್ರಾಯೋಗಿಕ ಅನುಭವ ನನಗಾಯಿತು. ಅವರ ಏಳುಬೀಳಿನ ಸಮಯದಲ್ಲಿ ಸಾಥ್ ನೀಡಿದ, ಅವರ ಆತ್ಮವಿಶ್ವಾಸಕ್ಕೆ ಪೂರಕವಾಗಿ, ಹೊಸ ಅನ್ವೇಷಣೆಗೆ ಜೊತೆಯಾಗಿ ನಿಂತ ಸಮಾಧಾನ ನನಗಿದೆ. ಆಸಕ್ತಿ, ಅಭಿರುಚಿಗಳ ನಡುವೆ ಪರಸ್ಪರ ಸ್ವಾತಂತ್ರ್ಯಕ್ಕೆ, ಮುಕ್ತತೆಗೆ ಎಂದಿಗೂ ಅಡ್ಡಿಪಡಿಸಲಿಲ್ಲ ನಾವು. ಸದಾ ತುಡಿಯುವ ಅವರ ಮನಸ್ಸಿಗೆ ದಣಿವೇ ಇಲ್ಲ. 'ತುಂಗೆಯ ತಟದ ಮೇಲೆ ತಂಗಾಳಿ ಬೀಸುವ ವೇಳೆ ಅತ್ತಿತ್ತ ಓಡುತ್ತಾ ಹುಡುಕುತ್ತ ಕುಣಿಯುತ್ತ ಎತ್ತಲಿಂದಲೋ ಬರುತ್ತಿತ್ತು ರಾಣಿಗೆ ಭರಣನ ಚಿತ್ತ' ಅಂತ ಹಿಂದೆಂದೋ ಹಾಡಿದ್ದೆ. ಈಗಲೂ ಅದು ಮಾಸಿಲ್ಲ.

'ಮೈಸೂರು ಮಲ್ಲಿಗೆ'ಯಿಂದ ಹಿಡಿದು 'ಸಿಂಗಾರವ್ವ'ನವರೆಗೆ ದಾಂಪತ್ಯದ ಸೊಗಡಿನ, ಹೊಳಹಿನ ಬೆಡಗು ಕಟ್ಟಿಕೊಡುವ ಭರಣ ನಮ್ಮ ಜೀವನದಲ್ಲೂ ಅದನ್ನು ಸಾಕಾರಗೊಳಿಸುವ ಪರಿ ಆಶ್ಚರ್ಯ ತರುತ್ತದೆ. ಈಗ ಅವರು ಮಾಗಿದ್ದಾರೆ. ಮಕ್ಕಳಿಗೆ ಒಳ್ಳೆಯ ತಂದೆಯಾಗಿದ್ದಾರೆ. ನಮ್ಮ ಬದುಕಿನಲ್ಲಿ ರಂಗಭೂಮಿಯ ನಂಟಿದೆ. ಸಿನಿಮಾದ ಆವರಣವಿದೆ, ನೃತ್ಯಕಲೆಯ ವಿನ್ಯಾಸದ ಆಯಾಮವಿದೆ. ಇದಕ್ಕೆಲ್ಲ ಮೆರುಗು ನೀಡುವ ಪರಸ್ಪರ ವಿಶ್ವಾಸ, ಸ್ಪಂದನದ

ಭಾವನಾತ್ಮಕತೆ ಬೇರೂರಿದೆ. ನಮ್ಮಲ್ಲಿ ಥಳುಕು ಬಳುಕಿಲ್ಲ. ಜಾತಿ ಭೇದ ಇಲ್ಲ. ಸೋಗಿನ ಮುಖವಾಡ ಇಲ್ಲ. ಹಿರಿಯರಲ್ಲಿ ಗೌರವ, ಕಿರಿಯರಲ್ಲಿ ಪ್ರೀತಿ, ಬದುಕಿನಲ್ಲಿ ಸರಳತೆ. ಇದೇ ನಮಗೆ ದಾರಿದೀಪ. ಅದಕ್ಕೇ ಭರಣ ನನಗೆ ಆಭರಣ.

❑ ❖ ❑ ❖ ❑






ಬಾಲ ಭರಣ




ಎನ್.ಸಿ.ಸಿ. ಸೀನಿಯರ್ ಅಂಡರ್
ಆಫೀಸರ್ ಆಗಿ ನಾಗಾಭರಣ




ಎನ್.ಸಿ.ಸಿ. ದಿರಿಸಿನಲ್ಲಿ





ಕಾಲೇಜಿನ ವೃಂದಗಾಯನದಲ್ಲಿ ಭರಣ



ನಾಗಾಭರಣ B.Sc. ಪದವಿ ಪಡೆದ ಸಂದರ್ಭ




ಎಡಿಟರ್ ಆಗಿ ಭರಣ



ಮಾತಾಪಿತೃಗಳೊಂದಿಗೆ ಮದುವೆ ಆರತಕ್ಷತೆಯಲ್ಲಿ






ಮದುವೆ ಆರತಕ್ಷತೆ



ತೆನಾಲಿರಾಮ ಚಿತ್ರದಲ್ಲಿ ಭರಣ



ಯುಎಸ್‌ಎಯ ಗೋಲ್ಡನ್ ಗೇಟ್ ಬಳಿ






ಚಿತ್ರೀಕರಣದ ಸಂದರ್ಭದಲ್ಲಿ




ಯೂನಿವರ್ಸಲ್ ಸ್ಟುಡಿಯೋ ಬಳಿ



ಮಡದಿಯೊಂದಿಗೆ ಭರಣ



ಮಗಳ ಮದುವೆಯ ಸಂದರ್ಭದಲ್ಲಿ



# ನನಸಾದ ನಾಗಣ್ಣನ ಕನಸು

ಟಿ.ಎಸ್. ವಿಶ್ವನಾಥ್

ನನಗೆ ನಗೆಯೋ ನಗೆ!

ನಮ್ಮ ನಾಗಣ್ಣ - (ನಾಗಾಭರಣ) - ಮತ್ತು ನಾನು ಅಂದು ಎಲ್ಲಿಗೋ ನಡೆದುಕೊಂಡು ಹೊರಟಿದ್ದೆವು. ದಾರಿಯಲ್ಲಿ ಒಂದು ಆಟೋ ಹೋಗುತ್ತಿತ್ತು. ಅದರ ಬೆನ್ನಿನ ಮೇಲೆ ಡಾ|| ರಾಜ್‌ಕುಮಾರ್ ಮತ್ತು ಭಾರತಿ ಜೋಡಿಯಾಗಿ ನಟಿಸಿದ ಚಿತ್ರವೊಂದರ ಪೋಸ್ಟರ್ ಇತ್ತು. ಅಂದಿನ ದಿನಗಳ ಅತ್ಯಂತ ಜನಪ್ರಿಯ ಜೋಡಿಯ ಹೊಸ ಚಿತ್ರ ಅದೇ ಆಗ ಬಿಡುಗಡೆಯಾಗಿತ್ತು. ಆ ಪೋಸ್ಟರನ್ನು ತೋರಿಸುತ್ತಾ ನಾಗಣ್ಣ ಹೇಳಿದ್ದ -

“ನೋಡ್ತಾ ಇರು, ಮುಂದೆ ನಾನು ಕೂಡಾ ಆ ಜನಪ್ರಿಯ ಕಲಾವಿದರನ್ನ ಹಾಕಿಕೊಂಡು ಸಿನಿಮಾ ತೆಗೀತೀನಿ.”

ಆ ಮಾತು ಕೇಳಿ ನನಗೆ ನಗು ಬಂದಿತ್ತು. ಎಲ್ಲಿಯ ರಾಜ್-ಭಾರತಿ - ಎಲ್ಲಿಯ ನಾಗಣ್ಣ?

ಕೂಡಲೇ ಭಯದ ಎಳೆ ಮನದಲ್ಲಿ ಮೂಡಿತ್ತು. ನಾಗಣ್ಣ ನನ್ನ ಪ್ರೀತಿಯ ಅಣ್ಣ. ನಮ್ಮ ಬಾಲ್ಯದ ದಿನಗಳಲ್ಲಿ ನಾವು ಸ್ಥಿತಿವಂತರೇನೂ ಅಲ್ಲ. ಆಗ ಏನೇ ತರಲಿ (ಪೆನ್ನು ಇತ್ಯಾದಿ) ಅವುಗಳಲ್ಲಿ ಉತ್ತಮವಾದುದನ್ನು ಅಣ್ಣ ನನಗೆ ಕೊಡುತ್ತಿದ್ದ. ಹೋಟೆಲ್‌ಗೆ ಒಟ್ಟಿಗೆ ಹೋದಾಗ ನನಗೆ ಬೇಕಾದುದನ್ನು ಕೊಡಿಸಿ, ಜೇಬಿನಲ್ಲಿ ಹಣ ಉಳಿದಿದ್ದರೆ ಮಾತ್ರ ನಾಗಣ್ಣ ತನಗಾಗಿ ತಿಂಡಿ ತರಿಸುತ್ತಿದ್ದ. ಅಂಥ ನಾಗಣ್ಣನ ಮಾತಿಗೆ ನಾನು ಜೋರಾಗಿ ನಕ್ಕು ಬಿಟ್ಟಿದ್ದೆ! ಅದು ನಡೆದಿದ್ದು ಬಹುಶಃ 1970ರಲ್ಲಿ ಎಂದು ಕಾಣುತ್ತದೆ.

1980-81ರಲ್ಲಿ ಭಾರತಿಯವರು ನಾಯಕಿಯಾಗಿ ನಟಿಸಿದ ‘ಬಂಗಾರದ ಜಿಂಕೆ’ ಬಿಡುಗಡೆಯಾಯ್ತು - ಅದರ ನಂತರ ಮುಂದೆ 1992-93ರಲ್ಲಿ ಡಾ|| ರಾಜ್ ನಟಿಸಿದ ‘ಆಕಸ್ಮಿಕ’ ಬಿಡುಗಡೆ ಆಯ್ತು. ಎರಡರ ನಿರ್ದೇಶಕನೂ ನನ್ನ ಪ್ರೀತಿಯ ನಾಗಣ್ಣ!!

ಆತನ ಕನಸು ನನಸಾಗಿತ್ತು.

ಬಾಲ್ಯದಲ್ಲಿ ನಮ್ಮ ತಂದೆ ನಮಗೆಲ್ಲ ಹೇಳುತ್ತಿದ್ದರು -

“ಯಾವದೇ ಕಾರಣಕ್ಕೆ ಸರ್ಕಾರೀ ಉದ್ಯೋಗಕ್ಕೆ ಸೇರಬೇಡಿ, ಕಷ್ಟಪಟ್ಟು ದುಡಿದು ನಿಮ್ಮ ಕಾಲ ಮೇಲೆ ನೀವು ನಿಲ್ಲಿರಿ” ಎಂದು. ತುಂಬ ಶ್ರಮಜೀವಿ ನನ್ನಣ್ಣ. ಬೆಳಿಗ್ಗೆ ಐದು-ಐದೂವರೆಗೆ ಮನೆಯಿಂದ ಹೊರಟರೆ ಮನೆಗೆ ವಾಪಸ್ಸು ಬರುವಾಗ ಮಧ್ಯರಾತ್ರಿ ಆಗಿರುತ್ತಿತ್ತು. ಆಗ ಎಲ್.ಎಲ್.ಬಿ. ಓದುತ್ತಿದ್ದ ಅಣ್ಣ ಬಾಲಭವನದಲ್ಲಿ ಕ್ಲರ್ಕ್ ಆಗಿ

ದುಡಿಯುತ್ತಿದ್ದ. ಜೊತೆಗೆ ರಂಗ ಚಟುವಟಿಕೆ! ದಿನದಲ್ಲಿ 18-19 ಗಂಟೆ ಮನೆಯಿಂದ ಹೊರಗೆ ಇರಬೇಕಾಗುತ್ತಿತ್ತು.

ಮೂವತ್ತು ವರ್ಷಗಳ ಹಿಂದಿನ ಮಾತು. ನಾಗಣ್ಣ ಶ್ರೀ ಬಿ.ವಿ. ಕಾರಂತರ ಶಿಷ್ಯನಾಗಿ ನಾಟಕ ರಂಗ ಪ್ರವೇಶಿಸಿದಾಗ ಬಂಧು-ಮಿತ್ರರನೇಕರು -

"ನಿಮ್ ಹುಡುಗ ಹಾಳಾಗಿ ಹೋಗ್ತಾನೆ, ನಾಟಕದವರ ಜೊತೆ ಸೇರಿ" ಎಂದು ನಮ್ಮ ತಂದೆಗೆ ಹೇಳಿದ್ದರು.

"ಕೆಡುವವರು ಎಲ್ಲಿದ್ದರೂ ಕೆಡುತ್ತಾರೆ" ಎಂಬುದು ಅಪ್ಪನ ಅಭಿಪ್ರಾಯವಾಗಿತ್ತು. ಅಣ್ಣನನ್ನು ಅವರು ತಡೆಯಲಿಲ್ಲ. ತಮ್ಮ ಮಕ್ಕಳಲ್ಲಿ ಅಪ್ಪನಿಗೆ ಅಷ್ಟು ಭರವಸೆ.

ಸಾಮಾನ್ಯವಾಗಿ ನನಗೂ ಅಣ್ಣನಿಗೂ ಗೊತ್ತಿರುವ ಮಂದಿ ಕೇಳುವ ಪ್ರಶ್ನೆ- ನಾಗಾಭರಣ ಎನ್ನುವ ಹೆಸರು ಸಿನಿಮಾಕ್ಕೆ ಸೇರಿದ ಮೇಲೆ ಇಟ್ಟುಕೊಂಡ ಹೆಸರಾ? ಅಂತ. ಆಗ ಇಲ್ಲ ಇದು ನಮ್ಮ ತಂದೆ ಇಟ್ಟ ಹೆಸರು ಎಂದು ಹೇಳಿದರೆ ಅವರಿಗೆ ಆಶ್ಚರ್ಯವಾಗುತ್ತದೆ. ನಮ್ಮಪ್ಪನಿಗೆ ಇದೇನಿದು ಸಾಮಾನ್ಯ ಹೆಸರಲ್ಲವಲ್ಲ ಅಂದರೆ, ಹೌದು ಅವನು ಸಾಮಾನ್ಯನಲ್ಲ ಅಂತ ಅವರ ಸ್ನೇಹಿತರಿಗೆ ಹೇಳುತ್ತಿದ್ದರಂತೆ. ನಂತರ ನಮ್ಮಣ್ಣನ ಸಾಧನೆ ನೋಡಿ ಅದೇ ಸ್ನೇಹಿತರು ಅಭಿನಂದಿಸಿದಾಗ "ಇಷ್ಟು ದಿನ ಶ್ರೀನಿವಾಸಯ್ಯ ಎನ್ನುತ್ತಿದ್ದರು. ಈಗ ನಾಗಾಭರಣನ ತಂದೆ ಎನ್ನುತ್ತಿದ್ದಾರೆ" ಎಂದು ಅತೀವ ಹೆಮ್ಮೆ ಪಡುತ್ತಿದ್ದರು.

ನಮ್ಮ ತಂದೆಗೆ ತನ್ನ ಮಕ್ಕಳು ಓದಿನ ಜೊತೆಗೆ ಕಲೆಯಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕೆಂದು ಹಂಬಲವಿತ್ತು. ಅವರು ಸ್ವತಃ ಕವಿತೆಗಳನ್ನು ರಚಿಸುತ್ತಿದ್ದರು. ಸಾಹಿತ್ಯದಲ್ಲಿ ಅಪಾರ ಆಸಕ್ತಿ ಇದ್ದುದರಿಂದ ನಮ್ಮ ಮನೆಯಲ್ಲಿ ಒಂದು ಸಣ್ಣ ಗ್ರಂಥಾಲಯವನ್ನೇ ಇಟ್ಟಿದ್ದರು ಮತ್ತು ಪುಸ್ತಕ ಓದುವ ಹವ್ಯಾಸವನ್ನು ನಮ್ಮಲ್ಲಿ ಬೆಳೆಸಿದರು. ಇದು ನಮ್ಮಣ್ಣನಲ್ಲಿ ಎಂತಹ ಪುಸ್ತಕ ಪ್ರೇಮವನ್ನು ಬೆಳೆಸಿತೆಂದರೆ ಈಗಲೂ ಕೆಲಸ ಮುಗಿಯುವುದು ರಾತ್ರಿ ಹನ್ನೆರಡಾದರೂ ಒಂದು ಘಂಟೆ ಓದದೆ ಮಲಗುವುದಿಲ್ಲ.

ಇನ್ನೊಂದು ಪ್ರಶ್ನೆ - ನಮ್ಮಣ್ಣನಿಗೆ ಇಂತಹ ಸಾಧನೆಗೆ ಪ್ರೇರಣೆ ಬಂದದ್ದಾದರೂ ಎಲ್ಲಿಂದ? ಎನ್ನುವುದು. ನಮ್ಮಣ್ಣನಲ್ಲಿ ಮನೆ ಮಾಡಿರುವ ಜೀವನ ಪ್ರೀತಿ, ಬದ್ಧತೆ ಮತ್ತು ಕನ್ನಡ ಭಾಷೆ ಮತ್ತು ನಾಡಿನ ಬಗೆಗಿನ ಅಪಾರ ನಿಷ್ಠೆ ಇದಕ್ಕೆಲ್ಲಾ ಕಾರಣ ನಮ್ಮಪ್ಪ ನಮಗೆ ಚಿಕ್ಕಂದಿನಲ್ಲಿ ನೀಡಿದ ಸುಸಂಸ್ಕೃತ ವಾತಾವರಣ ಅನಿಸುತ್ತದೆ. ನಮ್ಮಪ್ಪನಿಗೆ ಹಿರಿದಾದುದನ್ನು ಸಾಧಿಸಬೇಕೆಂಬ ಹಂಬಲವಿದ್ದರೂ ಬಡ ರೈತ ಕುಟುಂಬವೊಂದರ ಮೊದಲ ವೃತ್ತಿಪರ ಪದವಿ ಪಡೆದ ಮತ್ತು ಹಿರಿಯ ಅಧಿಕಾರಿಯಾಗಿ ಸಂಪೂರ್ಣ ಕುಟುಂಬ ಜವಾಬ್ದಾರಿಯಿಂದಾಗಿ ಅವರು ಅಂದುಕೊಂಡದ್ದನ್ನು ಮಾಡಲಾಗದೆ ಅದನ್ನು ನಾವು ಸಾಧಿಸಬೇಕೆಂಬ ತೀವ್ರ ಹಂಬಲ ಅವರಿಗಿದ್ದುದರಿಂದ ಅಂತಹ ಆಸಕ್ತಿ ಮತ್ತು ಬದ್ಧತೆಗಳನ್ನು ನಮ್ಮಲ್ಲಿ ಮೂಡುವಂತೆ ನೋಡಿಕೊಂಡರು. ಚಿಕ್ಕಂದಿನಲ್ಲಿಯೇ ಕುವೆಂಪು, ಶಿವರಾಮ ಕಾರಂತರ ಸಾಹಿತ್ಯಗಳನ್ನು ನಮಗೆ ಪರಿಚಯಿಸಿ ಅರಿವನ್ನು ವಿಸ್ತಾರಗೊಳಿಸಿದರು. ಸಂಕುಚಿತ ಭಾವನೆಗಳು ನಮ್ಮಲ್ಲಿ



ಮೂಡದಂತೆ ನೋಡಿಕೊಂಡರು. ಇವೆಲ್ಲಾ ನಮ್ಮಣ್ಣನ ಇಂದಿನ ಸಾಧನೆಗೆ ಮೂಲಗಳೆಂದು ನನಗೆ ಅನಿಸುತ್ತದೆ. ನಮ್ಮಣ್ಣನಿಗಿರುವ ಅಪಾರ ಆಸಕ್ತಿ ಮತ್ತು ಅವನ ಚುರುಕು ಬುದ್ಧಿ ಶಕ್ತಿಯಿಂದಾಗಿ ಅವನು ಸಣ್ಣ ವಯಸ್ಸಿನಲ್ಲಿ ಗುಣ ಗ್ರಹಣ ಶಕ್ತಿಯನ್ನು ಅಪಾರವಾಗಿ ವೃದ್ಧಿಸಿಕೊಂಡ ಎನಿಸುತ್ತದೆ. ಅವನ ಚಿತ್ರಗಳಲ್ಲಿನ ಜನಪರ ಕಾಳಜಿ, ಸಾಮಾಜಿಕ ನ್ಯಾಯ ಮತ್ತು ನಾಡಿನ ಸಂಸ್ಕೃತಿಯ ಮನಮುಟ್ಟುವ ಅಭಿವ್ಯಕ್ತಿಗಳನ್ನು ಕಂಡಾಗ ನನ್ನ ಗಂಟಲುಬ್ಬಿ, ಎದೆಯುಬ್ಬಿ ಭಾವಾತಿರೇಕಕ್ಕೆ ಒಳಗಾಗುತ್ತೇನೆ.

ನಾನು ಅಣ್ಣನಿಗಿಂತ 6 ವರ್ಷ ಚಿಕ್ಕವನಾದರೂ ಅವನಿಗಿಂತ ಮೊದಲೇ ಸ್ಕೂಟರ್, ಮೋಟರ್ ಬೈಕ್ ಓಡಿಸಲು ಕಲಿತಿದ್ದೆ. ಆಗೆಲ್ಲ ನಾಗಣ್ಣ "ಅದ್ಯಾಕೋ ಫ್ರೆಂಡ್ಸ್ ಗಾಡಿಗಳನ್ನು ಓಡಿಸಿ ಕಲೀತೀಯಾ? ಸ್ವಂತ ಗಾಡಿ ತಗೊಂಡ ಮೇಲೆ ಕಲಿಯೋ" ಎಂದು ಹೇಳುತ್ತಿದ್ದ. ಮುಂದೆ ನಾಗಣ್ಣ ವಾಹನ ಚಾಲನೆ ಕಲಿತಿದ್ದು ಸ್ವಂತ ಗಾಡಿ ಕೊಂಡ ಮೇಲೆಯೇ - ಅದು ಕಿರಿಯನಾದ ನನ್ನಿಂದ!

ಮೂರು ವರ್ಷಗಳ ಹಿಂದೆ ಪ್ರಕಟವಾದ ನನ್ನ ಪುಸ್ತಕ 'ಸೋಪಾನ'ದಲ್ಲಿ (ಮೂರು ವರ್ಷಗಳಲ್ಲಿ ನಾಲ್ಕು ಮುದ್ರಣ ಕಂಡು ನನಗೆ ಹೆಸರು ತಂದ ಕೃತಿ) ಅಣ್ಣನ ಬಗ್ಗೆ ನಾನು ಬರೆದಿರುವುದನ್ನು ಇಲ್ಲಿ ಉದ್ಧರಿಸಿದರೆ ತಪ್ಪಿಲ್ಲವೆಂದು ಭಾವಿಸುತ್ತೇನೆ.

> ದೃಢ ನಿಷ್ಠೆಯ ವ್ಯಕ್ತಿ
>
> ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ವಿಜೇತ, ಖ್ಯಾತ ಚಲನಚಿತ್ರ ನಿರ್ದೇಶಕ ಶ್ರೀ ಟಿ.ಎಸ್. ನಾಗಾಭರಣ ಅವರು ನನ್ನ ಅಣ್ಣನಾದುದರಿಂದ ಅವರನ್ನು ಹತ್ತಿರದಿಂದ ಗಮನಿಸಿದ್ದೇನೆ. ಅವರು ಈಗಾಗಲೇ ಸಾಧಿಸಿರುವುದು ಅಪಾರ. ಅವರು ಚಲನಚಿತ್ರರಂಗಕ್ಕೆ ಮತ್ತು ಕನ್ನಡ ನಾಡು-ನುಡಿಗೆ ಉತ್ತಮ ಕೊಡುಗೆ ನೀಡಿದ್ದಾರೆ. ಅವರೊಡನೆ ಒಮ್ಮೆ ನಾನು ಪ್ರಯಾಣ ಮಾಡುತ್ತಿದ್ದಾಗ ತಮ್ಮ ಸಾಧನೆಯ ಕೆಲವು ರಹಸ್ಯಗಳನ್ನು ಅವರು ತಿಳಿಸಿದರು. ಅವರ ಸ್ಪಷ್ಟ ಮಾತುಗಳು ಹೀಗಿವೆ : "ಕಟ್ಟುಪಾಡಿನ ಜೀವನ ನಡೆಸುವ ಧೈರ್ಯ ನನಗಿದ್ದುದರಿಂದ ನನ್ನ ಇಡೀ ಜೀವನವನ್ನು ಉನ್ನತ ಮಟ್ಟದ ಜೀವನದ ಪ್ರಯೋಗಾಲಯವನ್ನಾಗಿ ಮಾಡಲು ನಿರ್ಧರಿಸಿದೆ." ಅವರ ಯಶಸ್ಸಿನ ಇನ್ನೊಂದು ಗುಟ್ಟೆಂದರೆ 'ಉದಾತ್ತ ಜೀವನಕ್ಕೆ ಸಂಪೂರ್ಣ ಬದ್ಧತೆ ಹಾಗೂ ಗುಣಗ್ರಹಣದ ಹೃದಯವಂತಿಕೆ' ಎಂದು ಹೇಳಬಹುದು.

10-12 ವರ್ಷದವನಿದ್ದಾಗ ಡಿಫ್ತೀರಿಯಾದಂತಹ ತೀವ್ರ ಖಾಯಿಲೆಯಿಂದ ನರಳುತ್ತಿದ್ದ ನಮ್ಮಣ್ಣ ನಂತರದ ನಾಟಕ ಸಿನಿಮಾ ಸೇರುವ ದಿನಗಳಲ್ಲಿ ಪಡುತ್ತಿದ್ದ ಶ್ರಮ, ಅನುಭವಿಸಿರುವ ಸಂಕಷ್ಟಗಳನ್ನು ನೋಡಿರುವ ನನಗೆ ತನ್ನೆಲ್ಲಾ ಅಮೋಘ ಸಾಧನೆಗಳಿಂದ ಅಣ್ಣನಿಗೆ ಅದೆಷ್ಟು ಸಂತೋಷವಾಗಿದೆಯೋ ಅದಕ್ಕಿಂತ ಹತ್ತು ಪಟ್ಟು ಸಂತೋಷ, ಹೆಮ್ಮೆ ನನಗಾಗಿದೆ.

❑ ❖ ❑ ❖ ❑

# ಸಂಭ್ರಮದ ಐವತ್ತು, ನೂರನ್ನೂ ದಾಟಲಿ ಈ ಜೋಡಿಗೆ

ಎಸ್. ಮಾಲತಿ, ಸಾಗರ

ನಾಗಾಭರಣ-ನಾಗಿಣಿ-ಹೆಸರುಗಳಲ್ಲಿರುವ ಸಾಂಗತ್ಯ ಜೀವನದುದ್ದಕ್ಕೂ ಹರಿದು ಬರುತ್ತಿರುವಂತೆ ಕಾಣುತ್ತಿರುವ ಅಪರೂಪದ ಜೋಡಿಯಿದು. ನಾಗಾಭರಣರ ಎಲ್ಲ ಯಶಸ್ಸುಗಳಿಗಿಂತ ಸೃಷ್ಟಿಶೀಲ ಬದುಕಿನಲ್ಲಿ ಒಟ್ಟಾಗಿ ದುಡಿಯಬಲ್ಲ ಈ ಜೋಡಿಯ ಸಾಮರಸ್ಯದ ಬದುಕೇ ನನಗೆ ಎಲ್ಲದ್ದಕ್ಕಿಂತ ಮಹತ್ವದ್ದಾಗಿ ಕಾಣುವುದು.

ಇದಕ್ಕಾಗಿಯೇ 50 ತುಂಬಿದ ನಾಗಾಭರಣ ಅವರನ್ನು ನಾನು ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ.

ಅಂದು ... 70-80ರ ದಶಕದಲ್ಲಿ ... 'ಸಮುದಾಯ' ಸಂಘಟನೆಯಲ್ಲಿ ನಾನು ಎಡೆಬಿಡದ ದುಡಿಮೆಯಲ್ಲಿ ತೊಡಗಿದ ದಿನಗಳಲ್ಲಿ, ಈ ನಗು ಮುಖದ ನಾಗಾಭರಣ ಅವರನ್ನು ಕಂಡಿದ್ದೇನೆ. ಆದರೆ, ಎದುರಿಗೆ ಸಿಕ್ಕಾಗ ಒಂದು ನಗೆಯ ಹೊರತು ಹೆಚ್ಚು ಮಾತನಾಡಿಲ್ಲ... ಹಾಗಿತ್ತು ನನ್ನ ರಂಗಭೂಮಿಯ ಆದರ್ಶಗಳ ಮತ್ತೇರಿದ ದಿನಗಳ ದುಡಿತ!

ಬಿ.ವಿ. ಕಾರಂತರ ಗರಡಿಯಲ್ಲಿ ಪಳಗಿದ ನಾಗಾಭರಣ ಕಲಿತದ್ದು ಅಪಾರ... ನಟನೆ-ಹಾಡುಗಾರಿಕೆ-ನಿರ್ದೇಶನ. 'ಜೋಕುಮಾರ ಸ್ವಾಮಿ'ಯಲ್ಲಿ ಇವರ ಅದ್ಭುತ ಅಭಿನಯ ಇಂದಿಗೂ ನೆನಪಿನಲ್ಲಿದೆ.

ಆನಂತರ ನಾಗಾಭರಣ ಬಗ್ಗೆ ಚಿಂತನೆಗೆ ಹಚ್ಚಿದ್ದು - ಅವರ - 'ಆಸ್ಫೋಟ', 'ಆಕಸ್ಮಿಕ', 'ಜನುಮದ ಜೋಡಿ', 'ಬಂಗಾರದ ಜಿಂಕೆ', 'ನಾಗಮಂಡಲ', 'ಸಿಂಗಾರೆವ್ವ ಮತ್ತು ಅರಮನೆ', 'ಚಿಗುರಿದ ಕನಸು' ಮತ್ತು 'ನೀಲಾ' ಚಲನಚಿತ್ರಗಳು. ಹಾಗೆಯೇ, ಅವರ 'ಶ್ರೀಮಾನ್ ಶ್ರೀ ಸಾಮಾನ್ಯ', 'ತೆನ್ನಾಲಿ ರಾಮ', 'ಸ್ಟೋನ್ ಬಾಯ್', 'ಕಣ್ಣುಗಳು', 'ಓ ನನ್ನ ಬೆಳಕೇ', 'ಜೋಕು ಜೋಕೇ', 'ಸಂಕ್ರಾಂತಿ', 'ಗೆಳತಿ', 'ಜೀವನ್ಮುಖಿ', 'ದೂರ ತೀರ ಯಾನ' ಧಾರಾವಾಹಿಗಳು ಕಿರುತೆರೆಯಲ್ಲಿ ಪ್ರಸಾರವಾಗಿ ಜನರ ಮೆಚ್ಚುಗೆ ಗಳಿಸಿವೆ.

ಮೊನ್ನೆ, ಬಿ.ವಿ. ಕಾರಂತ ರಂಗ ಪ್ರತಿಷ್ಠಾನದ ನಾಟಕೋತ್ಸವದ ಸಂದರ್ಭದಲ್ಲಿ ಈ ಜೋಡಿ, ಜೊತೆಯಾಗಿ ಹಾಡಿದರು - ಮಾತನಾಡಿದರು - ಸಂಭ್ರಮದಿಂದ ಓಡಾಡಿದರು. ಇದನ್ನು ನೋಡಿದ ನನಗೆ ಒಂದು ರೀತಿಯ ಸಮಾಧಾನ ಮೆಚ್ಚುಗೆ ಮೂಡಿತು. ಇದೇ ತಿಂಗಳು ತಮ್ಮ ಮದುವೆಯ ಬೆಳ್ಳಿ ಹಬ್ಬ ಹಾಗೂ ತಮ್ಮ ಮಗಳು ಶ್ರುತಾಳ ಮದುವೆಯನ್ನು ನಡೆಸಿದ ಸಂದರ್ಭದಲ್ಲಿರುವ ನಾಗಾಭರಣರಿಗೆ - ನಾಗಿಣಿಯವರಿಗೆ ಬದುಕು ಸುಖಮಯವಾಗಿರಲಿ.



ಜನವರಿ ತಿಂಗಳ ಮೊದಲ ವಾರದಲ್ಲಿ ಪ್ರಸಾರವಾಗಲಿರುವ 'ಮಹಾಮಾಯಿ' ಧಾರಾವಾಹಿ ಜನರ ಮೆಚ್ಚುಗೆ ಪಡೆಯಲಿ ಎಂದು ಹಾರೈಸುತ್ತೇನೆ. ಕಟುತ್ವವಿರದ ಮಧ್ಯಮ ಮಾರ್ಗವನ್ನು ತಮ್ಮ ಸೃಷ್ಟ್ಯಾತ್ಮಕ ಬದುಕಿನಲ್ಲಿ ಅನುಸರಿಸುತ್ತಿರುವ ನಾಗಾಭರಣ ಅವರು, ಸಾಹಿತ್ಯ ಮತ್ತು ದೃಶ್ಯ ಮಾಧ್ಯಮವನ್ನು ಬೆಸೆಯುವ ಒಂದು ಸುವರ್ಣ ಮಾಧ್ಯಮದ ದಾರಿ ಅನುಸರಿಸುತ್ತಿದ್ದಾರೆ. 'ಮಹಾಮಾಯಿ'ಯಲ್ಲಿ ನಾಗಿಣಿಯವರ ವಸ್ತ್ರಾಲಂಕಾರ, ಸಂಕಲನ, ನಿರ್ದೇಶನ ಇರುವುದು ನಾಗಾಭರಣರ ಅದ್ಭುತ ಸಾಧನೆ. ಸ್ತ್ರೀ ಪುರುಷರ ಸಮಾನತೆಯ ಬಗ್ಗೆ ಭಾಷಣಗಳನ್ನು ಬಿಗಿಯುವುದಕ್ಕಿಂತ ಹೆಚ್ಚು ಬೆಲೆಯುಳ್ಳ ಸಹಜೀವನ ಇದು!

ನಾಗಾಭರಣರಿಗೆ ಐವತ್ತು ತುಂಬಿದೆ - ಅಭಿನಂದನೆ.

ನಾಗಿಣಿಗೆ ಎಷ್ಟು ವಯಸ್ಸೋ...? ಹೆಂಗಸರ ವಯಸ್ಸು ಕೇಳಬಾರದು, ಕೇಳಿದರೆ ಅವರು ಹೇಳುವುದೂ ಇಲ್ಲ...

ನಾಗಿಣಿ, ನಿಮಗೆ ಎಷ್ಟೇ ವಯಸ್ಸಾಗಿರಲಿ - ಚಿರ ಯೌವನೆಯಾಗಿರಿ - ನಿಮಗೆ ನನ್ನ ಅಭಿನಂದನೆ.

ನಿಮಗಿಬ್ಬರಿಗೂ ನನ್ನ ಮತ್ತು ಪುರುಷೋತ್ತಮ ತಲವಾಟ ಅವರ ಮೆಚ್ಚುಗೆಯ ಅಭಿನಂದನೆಗಳು.

❑ ❖ ❑ ❖ ❑

# ಭರಣ-ಸದಭಿರುಚಿಯ ಹೂರಣ

ವಿ. ಮನೋಹರ್

ನಮ್ಮಲ್ಲಿ ಒಬ್ಬ ಪುಟ್ಟಣ್ಣ ಇದ್ರು, ಚಿತ್ರೋತ್ಸವ ಮಾಡುವಷ್ಟು ಒಳ್ಳೊಳ್ಳೆ ಸಿನಿಮಾಗಳನ್ನು ಚಿತ್ರರಂಗಕ್ಕೆ ಕೊಟ್ರು, ಸರಿ, ಆಮೇಲೆ? ಅಂದಾಗ ನಮ್ಮ ಹತ್ರ ಇರೋ ಅಮೂಲ್ಯ ಆಭರಣವೇ-ನಾಗಾಭರಣ.

ಭರಣ, ಹತ್ತು ಆದ್ಮೇಲೆ ಹನ್ನೊಂದು ಆಗಲಿಲ್ಲ. ಅವರ ವೈಶಿಷ್ಟ್ಯವೇ ಬೇರೆ. ಚಿತ್ರರಂಗದ ರಂಗೋಲಿಗೆ ಚುಕ್ಕೆ ಇಡುವ ಬದಲು ನಕ್ಷತ್ರಗಳನ್ನೇ ಇಟ್ಟವರು ಭರಣ.

'ಗ್ರಹಣ' ದಿಂದ 'ಚಿಗುರಿದ ಕನಸು' ತನಕ ಹಲವು ಧನ ಕನಕಗಳೇ, ರತ್ನಗಳೇ! ಆರ್ಟ್ ಫಿಲ್ಮ್ ಎಂಬ ಬಟಾಬೋರ್ ಸಿನಿಮಾ ಮಾಡದೇ ಜನಮನರಂಜನೀಯ ಚಿತ್ರಗಳಲ್ಲೇ ಕಲಾತ್ಮಕತೆ ತುಂಬಿದವರು. ಭಾರತದ ಕೆಲವೇ ಸದಭಿರುಚಿಯ ನಿರ್ದೇಶಕರ ಸಾಲಲ್ಲಿ ಸುಲಭವಾಗಿ ಗುರುತಿಸಲ್ಪಡುವವರು.

ನಂಗೆ ನನ್ನ ಬಗ್ಗೇನೇ ಹೆಮ್ಮೆ ಅನ್ಸುತ್ತೆ, ಅಂಥ ವ್ಯಕ್ತಿ ನಮ್ಮ ಸ್ನೇಹಿತರು ಅಂತ. ಅವರ ಬಳಗವೇ ದೊಡ್ಡದು. ಅಶ್ವಥ್, ಸಿಂಹ, ಕಾರ್ನಾಡ್ ಮುಂತಾದ ಘಟಾನುಘಟಿಗಳು - ಹಾಗೇ ಅವರ ಆಕಾಂಕ್ಷೆಯೂ ದೊಡ್ಡದು.

ಭರಣ ರೀಮೇಕ್ ಮಾಡಲು ಅವಕಾಶ ಬಂದಾಗಲೆಲ್ಲ ನಯವಾಗಿ ತಿರಸ್ಕರಿಸಿದ್ದಾರೆ. ಅಷ್ಟೇ ಅಲ್ಲ, ಕನ್ನಡದಲ್ಲೇ ಒಳ್ಳೊಳ್ಳೆ ಕಥೆಗಳಿವೆ ಅನ್ನೋದನ್ನೂ ತೋರಿಸಿಕೊಟ್ಟಿದ್ದಾರೆ. ರೀಮೇಕ್ ಅಂದಾಗ ಅದರ ಕುರಿತು ಒಂದೆರಡು ಮಾತು ಹೇಳ್ಳೇ ಬೇಕು. ರೀಮೇಕ್ ಮಾಡಿದರೆ ಏನೀಗ? (1) ಆ ಚಿತ್ರವನ್ನು ಬೇರೆ ಭಾಷೆಯವರು ತಮ್ಮ ಭಾಷೆಗೆ ರೀಮೇಕ್ ಮಾಡಲಾರರು, ಯಾಕಂದ್ರೆ ಆದಾಗಲೇ ಅವರಲ್ಲಿ ಬಂದಿರುತ್ತೆ. (2) ನಮ್ಮಲ್ಲಿ ಕಥೆ ಇಲ್ಲ, ನಮ್ಗೆ ಸ್ವಂತ ಸಿನಿಮಾ ಮಾಡಕ್ಕೆ ಬರಲ್ಲ ಅಂತ ತಮಿಳರು, ತೆಲುಗರು, ಹಿಂದಿಯೋರು ಆಡ್ಕೊಳ್ಳಕ್ಕೆ ಚೆನ್ನಾಗಿರುತ್ತೆ. (3) ಇಷ್ಟಕ್ಕೂ ರೀಮೇಕ್ ಮಾಡಿದಾಗ ಮೂಲ ಚಿತ್ರ ನೋಡಿರೊ ನಮ್ಮೋರೇ ಒರಿಜಿನಲ್‌ನಷ್ಟು ಚೆನ್ನಾಗಿಲ್ಲ ಅನ್ನೋದು ಬೇರೆ. ನಮ್ಮತನವನ್ನು ನಾಶ ಮಾಡುವಂಥ, ನಮ್ಮ ದಡ್ಡತನವನ್ನು ಪ್ರದರ್ಶಿಸುವಂಥ, ನಮ್ಮ ಅಸಹಾಯಕತೆಯನ್ನು ತೋರಿಸಿ ಕನ್ನಡದೋರಿಗೆ ಒರಿಜಿನಲ್ ಸಿನಿಮಾ ಮಾಡಕ್ಕೆ ಏನೂ ಹೊಳಿಯಲ್ಲ, ಇಲ್ಲಿ ಬುದ್ಧಿವಂತ್ರಿಲ್ಲ ಎಂಬಿತ್ಯಾದಿ ಮಾತುಗಳಿಗೆ ಆಸ್ಪದ ಕೊಡಲು ಕಾರಣವಾಗುವ ರೀಮೇಕ್ ಸಂಸ್ಕೃತಿಯನ್ನು ಭರಣ ಧೈರ್ಯವಾಗಿ ವಿರೋಧಿಸಿದ್ದಾರೆ.

ಕನ್ನಡಾಭಿಮಾನದ ಬಗ್ಗೆ ಸುಮ್‌ಸುಮ್ನೆ ಯಾವ ಭಾಷಣವನ್ನೂ ಮಾಡದೆ ಕೃತಿಯಲ್ಲೇ ಈ ರೀತಿ ತೋರಿಸಿಕೊಟ್ಟೋರು ಭರಣ. ಹೀಗಾಗಿ ನಂಗೆ ಅವ್ರ ಬಗ್ಗೆ ಅಪಾರ ಹೆಮ್ಮೆ ಇದೆ.



ನಾನು ಸಂಗೀತ ನೀಡಿದ ಚಿತ್ರಗಳ ಕೆಲವು ನಿರ್ದೇಶಕರು ಎಂಥೋರ್ನ ತಮ್ಮ ಸುತ್ತ ಇಟ್ಕೊಂಡಿದಾರೆ ಅನ್ನೋದನ್ನ ಕಂಡಿದ್ದೀನಿ. ಸಿಗರೇಟ್ ತಂದ್ಕೊಡೋಕೆ, ಗುಂಡು ತಂದ್ಕೊಡೋಕೆ ತಮ್ಮನ್ನು ಹೊಗಳಿಸಿಕೊಳ್ಳೋಕೆ ಅಂತ ಮಂಕುದಿಣ್ಣೆಗಳನ್ನೆ ಇಟ್ಕಂಡಿರ್ತಾರೆ.

ಆದರೆ ಭರಣರವರು ಸುಸಂಸ್ಕೃತರನ್ನೆ, ಸೃಜನಶೀಲ ಹುಡುಗರನ್ನೇ ತಮ್ಮ ಸಹಾಯಕರನ್ನಾಗಿ ಇಟ್ಕೊಂಡು ಬೆಳೆಸಿದವರು. ನಿರ್ದೇಶಕನ ಸ್ಥಾನ ಮೂರ್ಖರ ಆಸ್ಥಾನ ಅಲ್ಲ ಅನ್ನೋದನ್ನ ತೋರಿಸಿದೋರು.

ನನ್ನನ್ನು ಭರಣರ ಹತ್ರ ಕರ್ಕೊಂಡು ಹೋದೋರು ಛಾಯಾಗ್ರಾಹಕ ಗೌರಿಶಂಕರ್, ಅದು, 'ಸಾಗರದೀಪ' ಚಿತ್ರಕ್ಕೆ ಹಾಡು ಬರೆಸೋಕೆ. ಅಗ್ಲೇ ಭರಣರ ಜತೆ ಮುಖಾಮುಖಿ ಭೇಟಿ - ಅದಾದ್ಮೇಲೆ "ಜನುಮದ ಜೋಡಿ"ಗೆ ಸಂಗೀತ ನಿರ್ದೇಶನ ಮಾಡೋಕೆ ನನ್ನನ್ನ ಭರಣ ಕರೆಸಿ ಕಥೆ ಹೇಳಿ ಕಂಸಾಳೆ ಶೈಲಿಯಲ್ಲಿ ಹಾಡು ಮಾಡಿ ಅಂದರು. ಅದಕ್ಕೆ ಬೇಕಾದ ಮೂಲ ಕಂಸಾಳೆ ಹಾಡುಗಳ ಧ್ವನಿ ಸುರುಳಿಗಳನ್ನ ನಂಗೆ ಒದಗಿಸಿದರು, ಮುಂದಿಂದು ಇತಿಹಾಸ. ಜನುಮದ ಜೋಡಿಯಿಂದಾಗಿ ನಾನು ಚಿತ್ರರಂಗದ ಇತಿಹಾಸದಲ್ಲಿ ಶಾಶ್ವತ ಉಳಿವಂತೆ ಮಾಡಿದ ಕೀರ್ತಿ ಭರಣರಿಗೇ ಸಲ್ಲಬೇಕು ಮತ್ತು ಅದಕ್ಕಾಗಿ ನಾನು ಅವರಿಗೆ ಚಿರಋಣಿ.

ಅವರ ಚಿತ್ರಗಳಿಗೆ ರಾಗ ಸಂಯೋಜನೆ ಮಾಡಲು ನಂಗೆ ಕಷ್ಟವಾಗಲಿಲ್ಲ - ಯಾಕಂದ್ರೆ, ಸನ್ನಿವೇಶಕ್ಕೆ ತಕ್ಕ ಹಾಗೆ ಎಂಥಾ ಧಾಟಿ ಇರಬೇಕು, ವಸ್ತು, ವಿಚಾರ ಯಾವ ರೀತಿ ಇರಬೇಕು ಅನ್ನೋದನ್ನ ವಿವರವಾಗಿ, ಸ್ಪಷ್ಟವಾಗಿ ಅರ್ಥವಾಗೋ ರೀತಿ ತಿಳಿಸಿ ಹೇಳ್ತಾರೆ. ಹೀಗಾಗಿಯೋ ಏನೋ ಭರಣರ ಚಿತ್ರಗಳಿಗೆ ಯಾರೇ ಸಂಗೀತ ನೀಡಲಿ, ಒಳ್ಳೊಳ್ಳೆ ಹಾಡುಗಳೇ ಆಗಿರುತ್ತವೆ. ಭರಣ ಹೆಚ್ಚಾಗಿ ಇಷ್ಟಪಡೋದು ಜಾನಪದ ಸೊಗಡಿರುವ ಹಾಡುಗಳು ಅಥವಾ ಸರಳ ಸುಂದರ ಗೀತೆಗಳು. ಸಾಧ್ಯವಾದಷ್ಟು, ಪ್ರತಿ ಚಿತ್ರದಲ್ಲೂ ಕರ್ನಾಟಕದ ಜಾನಪದ ಗೀತೆಗಳಲ್ಲಿ ಒಂದೊಂದು ಹಾಡನ್ನಾದರೂ ಜನರಿಗೆ ಪರಿಚಯಿಸುವ ಆಶಯ ಅವರದು.

ಒಂದು ಕತೆಯನ್ನ ಸಿನಿಮಾ ಮಾಡ್ಬೇಕಾದ್ರೆ ಅದರ ಸೂಕ್ಷ್ಮಗಳೇನು ಪರಿಸರವೇನು, ಭಾಷೆಯ ಶೈಲಿಯೇನು, ಆಚಾರ ವಿಚಾರಗಳೇನು, ಪಾತ್ರಗಳು ಹೇಗೆ ಇತ್ಯಾದಿ ಕೂಲಂಕುಷವಾಗಿ ತಿಳಿದು ಪಟ್ಟಿ ಮಾಡಿ ಕತೆಗೆ ಅಪಚಾರವಾಗದಂತೆ ನಿಷ್ಠೆಯಿಂದ ಸಿನಿಮಾ ಮಾಡೋರ್ನ ಭರಣ ಬಿಟ್ರೆ ಇನ್ನ್ಯಾರನ್ನೂ ನಾನು ಕಂಡಿಲ್ಲ ಎಂದು ಧೈರ್ಯವಾಗಿ ಹೇಳ್ತೀನಿ. ಅವರು ಕೆಲಸ ಮಾಡೋ ರೀತಿಯನ್ನ ಕಣ್ಣಾರೆ ಕಂಡೋನು ನಾನು. ಕನ್ನಡ ನಾಡಿಗೆ, ಭಾಷೆಗೆ ಘನತೆ, ಗೌರವ ತರುವಂಥ ಸಿನಿಮಾಗಳನ್ನೆ ಮಾಡಿದ ಭರಣರ ಉತ್ಸಾಹ ಹೀಗೇ ಚಿರವಾಗಿರಲಿ, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಅಮೂಲ್ಯ ಚಿತ್ರರತ್ನಗಳನ್ನು ನೀಡಲು ಎಲ್ಲಾ ರೀತಿಯ ಅನುಕೂಲಗಳು ನಿರಾಳವಾಗಿ ಅವರಿಗೆ ಲಭಿಸಲಿ ಅಂತ ಹೃತ್ಪೂರ್ವಕ ಹಾರೈಸ್ತೀನಿ.

# ನಿರ್ದೇಶಕನ ಜಾಣ್ಮೆ ನಟನೆಯ ಹಿರಿಮೆ

ಸುಧಾರಾಣಿ

ಮಂಜುನಾಥ ಜೈಲಿನಿಂದ ಹೊರಬಂದು "ರಾಯರು ಬಂದರು ಮಾವನ ಮನೆಗೆ" ಹಾಡಿನ ಹಿನ್ನೆಲೆಯಲ್ಲಿ ಮನೆ ಪ್ರವೇಶಿಸಿಸುವರು. ಅನೇಕ ದಿನಗಳ ವಿರಹದ ನಂತರ ಮುದ್ದು ಮಡದಿಯನ್ನು ನೂತನ ವಧುವಿನಂತೆ ನೋಡುವ ಕಾತರ-ತವಕದಿಂದ ಕೂಡಿದ ತುಂಬು ನಗುವಿನೊಂದಿಗೆ ಇರುವರು. ದಂಪತಿಗಳಲ್ಲಿ ವರ್ಣಿಸಲದಳವಾದ ಸಂತಸ, ನಗೆಹೊನಲಿನಲ್ಲಿ ಮುಳುಗಿದ ಹೇಳುವ-ಹೇಳಲಾಗದ ಭಾವನೆಗಳಿಂದ ನಿಬಿಡವಾದ ಮನೋಲ್ಲಸಿತ ವಾತಾವರಣ. ಗಿರೀಶ್ ಕಾರ್ನಾಡರ ಪ್ರವೇಶದಿಂದ ಮಾವ-ಅಳಿಯರ ನಡುವಿದ್ದ ಮನದಾಳದ ಆಂದೋಳನದ ಪರಿಣಾಮವಾಗಿ ಇದ್ದಕ್ಕಿದ್ದಂತೆ ಗಂಭೀರ ವಾತಾವರಣವಾಗಿ ಪರಿಣಮಿಸಿಬಿಡುತ್ತದೆ. ಸಿಟ್ಟು-ಸೆಡಾಕು ತೋರ್ಪಡಿಸದೆ ನಿಕೃಷ್ಟ ಭಾವನೆಗಳಿಂದ ಮಾವ ಅಳಿಯನ ಪೆಟ್ಟಿಗೆಯನ್ನು ಎತ್ತಿ ಎಸೆದುಬಿಡುವರು. ಪೆಟ್ಟಿಗೆಯೊಳಗಿದ್ದ ಪದಾರ್ಥಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಚದುರಿ ಬೀಳುತ್ತವೆ. ಮಂಜುನಾಥ ಕುದಿಯುವ ಮನಸ್ಸಿನಿಂದ ಹೊರಟುಬಿಡುವನಿದ್ದಾಗ ಪದ್ಮ ತಡೆದು ಹೋಗಬೇಡ ಎನ್ನುತ್ತಾಳೆ. ಮಂಜುನಾಥ ಇಲ್ಲಿರಲಾರೆ ಎಂದು ಹೊರಡಲನುವಾಗುವನು. ಯುವ ದಂಪತಿಗಳ ಮಧ್ಯೆ ಇರುವ ಪ್ರೀತಿ, ಪರಸ್ಪರ ಸೆಳೆತ, ಒಟ್ಟಿಗಿರುವ ತವಕ, ಒಟ್ಟಿಗಿರಲಾಗದ ವಾಸ್ತವದಿಂದ ಉಂಟಾಗುವ ಸಹಿಸಲಾಗದ ವಿರಹ ಇವನ್ನೆಲ್ಲಾ ಪದ್ಮ ಮತ್ತು ಮಂಜುನಾಥ ಇಬ್ಬರೂ ನಾಲ್ಕೈದು ಕ್ಲೋಸ್ ಅಪ್ ಶಾಟ್‌ಗಳಲ್ಲಿ ಕೇವಲ ಸಂಜ್ಞೆಗಳಿಂದಲೇ ಅಭಿನಯಿಸಬೇಕು.

ಇಷ್ಟನ್ನೂ ನಾಗಾಭರಣರು ಮುಖದಲ್ಲೇ ಅಭಿನಯಿಸುವಂತೆ ನಮಗೆ ಸೂಚನೆ ಇತ್ತರು. ಅವರು ಹೇಳಿದಂತೆಯೇ ಮಾಡಿಬಿಟ್ಟೆವು. ಶಾಟ್‌ಗಳು ಮುಗಿದವು. ದೃಶ್ಯಗಳು ಮುಗಿದವು. ಚಿತ್ರೀಕರಣವೂ ಮುಗಿಯಿತು. ತೆರೆಯ ಮೇಲೆ ಮೈಸೂರ ಮಲ್ಲಿಗೆ ಚಿತ್ರವನ್ನು ವೀಕ್ಷಿಸಿದಾಗ "ನಾನು ಹೀಗೆ ಆ್ಯಕ್ಟ್ ಮಾಡಿದ್ದೀನಾ!!" ಎಂದು ನನಗೇ ಅಚ್ಚರಿ ಉಂಟಾಯಿತು, ಮೈ ನವಿರೆದ್ದಿತು. ಏಕೆಂದರೆ, ತಾದಾತ್ಮ್ಯದಿಂದ ನಿರ್ದೇಶಕರ ಉಪದೇಶದಂತೆ ಕ್ಯಾಮೆರಾ ಮುಂದೆ ನಟಿಸಿಬಿಟ್ಟಿರುತ್ತೇವೆ. ನಮಗೆ ನಟಿಸುವಾಗ ಲಕ್ಷ್ಯವೇ ಇರುವುದಿಲ್ಲ. ಆದರೆ ಅವರ ಉಪದೇಶವನ್ನು ಮತ್ತೆ ನೆನಪಿಸಿಕೊಂಡಾಗ ನಮ್ಮಲ್ಲಿರುವ ನಟನಾ ಶಕ್ತಿಯನ್ನು ನಿರ್ದೇಶಕರು ಎಷ್ಟು ಸುಲಭವಾಗಿ ಹೊರಗೆಡವಿಬಿಡುತ್ತಾರೆ ಎನ್ನುವುದು ಅರಿವಿಗೆ ಬರುತ್ತದೆ. ಎಳೆಎಳೆಯಾಗಿ ಮನಸ್ಸಿನ ಭಿತ್ತಿಯ ಮೇಲೆ ಮೂಡಿ ಅಚ್ಚಳಿಯದೆ ಉಳಿದುಬಿಡುತ್ತದೆ. ಮುಂದೆ ಅವಕಾಶ ಸಿಕ್ಕಾಗಲೆಲ್ಲ ಹೀಗೇ ಮಾಡಬಹುದಲ್ಲ, ಎಷ್ಟು ಮಾರ್ಮಿಕವಾಗಿದೆ ಈ ತರಹದ ಸಂಜ್ಞಾಭಿನಯ ಎನಿಸುತ್ತದೆ. ಇದು ನಿಜವಾಗಿಯೂ ಒಬ್ಬ ಸೃಜನಶೀಲ ನಿರ್ದೇಶಕನ ಕಲಾಪ್ರಜ್ಞೆ ಮತ್ತು ಅಂತಃಶಕ್ತಿ. ಆ ಶಕ್ತಿಯೇ ಅವನ ಯಶಸ್ಸಿಗೆ ಕಾರಣ. ಆ ಯಶಸ್ಸಿಗೆ ಇಡೀ ತಂಡದ



ಸಹಕಾರ-ಸಹಾಯವಿರುತ್ತದೆ ನಿಜ. ನಾಗಾಭರಣರು ನಟ-ನಟಿಯರೊಡನೆ ನಟ-ನಟಿಯರೇ ಆಗಿಬಿಡುತ್ತಾರೆ. ಅವರು ತಮ್ಮ ಮನಸ್ಸಿನಲ್ಲಿ ಈ ನಟ ಅಥವಾ ನಟಿಯಿಂದ ಹೀಗೆ ಅಭಿನಯ ಮಾಡಿಸಬೇಕೆಂದುಕೊಂಡು ಸ್ವತಃ ಅಭಿನಯಿಸಿ ತೋರಿಸಿ ನಟ-ನಟಿಯರು ಅನುಕರಿಸಲು ಅನುವು ಮಾಡಿಕೊಡುತ್ತಾರೆ. ಹೀಗಾಗಿ ನಾಗಾಭರಣರು ಒಬ್ಬ ಒಳ್ಳೇ ಮೇಷ್ಟ್ರು ಕೂಡ ಎಂದು ಹೇಳಬಹುದು. ಅವರು ಟ್ರೆಡಿಷನಲ್ ಶಾಲಾ ಮೇಷ್ಟ್ರ ಥರ ಶಿಕ್ಷೆ ಕೊಟ್ಟು ಶಿಕ್ಷಣ ನೀಡುವವರಲ್ಲ. ಅವರು ಬಹಳ ಮೃದುವಾಗಿ, ಅತ್ಯಂತ ಅಕ್ಕರೆಯಿಂದ ಕಲಾವಿದರಿಗೆ ಸ್ವಲ್ಪವೂ ಬೇಸರವಾಗದಂತೆ ತಮ್ಮ ಮನಸ್ಸಿನಲ್ಲಾಗುವ ಭಾವನೆಗಳನ್ನು ಮೌಖಿಕ ಮತ್ತು ಆಂಗಿಕ ಅಭಿನಯಗಳಿಂದ ವ್ಯಕ್ತಪಡಿಸಿ ಕಲಾವಿದರು ನಿರಾಯಾಸವಾಗಿ ಅಭಿವ್ಯಕ್ತಿಸುವಂತೆ ಪ್ರೇರಿಸುತ್ತಾರೆ. ಹಿರಿನಟ ಡಾ। ರಾಜ್ ಕುಮಾರ್ ಅವರಿಂದ ಹಿಡಿದು ಚಿನ್ನಾರಿ ಮುತ್ತದ ಚಿಣ್ಣರೊಡನೆ ಬಹಳ ಸೂಕ್ಷ್ಮವಾಗಿ ಅವರವರಿಗೆ ತಕ್ಕಂತೆ ವ್ಯವಹರಿಸುವ ಕುಶಲ ಕಲೆ ಭರಣರ ಸ್ವಂತ ವ್ಯಕ್ತಿತ್ವದ ಕುರುಹು.

ಇನ್ನು ನಟ-ನಟಿಯರಿಗೆ ಮೌಖಿಕ ಅಭಿನಯವೆಷ್ಟೋ ಆಂಗಿಕ ಅಭಿನಯವೂ ಅಷ್ಟೇ ಮುಖ್ಯ. ನಾವು ಅನೇಕ ರೀತಿಯಲ್ಲಿ ನಮ್ಮ ಕೈಗಳನ್ನು, ಬೆರಳುಗಳನ್ನು ಅಭಿನಯಕ್ಕಾಗಿ ಬಳಸಿಕೊಳ್ಳುತ್ತಿರುತ್ತೇವೆ. ಆದರೆ, ಬಹಳ ಸುಲಭವಾಗಿ ಅತ್ಯಂತ ಪರಿಣಾಮಕಾರಿಯಾಗಿ ಬಳಸುವುದನ್ನು ಭರಣರಿಂದ ಕಲಿಯಬಹುದು. ಮೈಸೂರ ಮಲ್ಲಿಗೆ ಚಿತ್ರದಲ್ಲಿ ಪದ್ಮಳಿಗೆ ಮದುವೆ ಆಗುತ್ತದೆ. ಮೊದಲ ರಾತ್ರಿ ಹಾಡಿನಲ್ಲಿ ಕಳೆಯುತ್ತದೆ. ಮರುದಿನ ಬೆಳಿಗ್ಗೆ ಪದ್ಮ ಹೆಣ್ಣಿನ ಸಹಜ ನಾಚಿಕೆ ಅಭಿವ್ಯಕ್ತಿಸಬೇಕು. ನಾಚಿಕೆಯನ್ನು ಹೆಣ್ಣು ಎಷ್ಟೋ ರೀತಿಯಲ್ಲಿ ವ್ಯಕ್ತಪಡಿಸಬಹುದು. ಆದರೆ, ಭರಣರು ಕ್ಯಾಮೆರಾ ಮುಂದೆ ಪದ್ಮ ಅಭಿನಯಿಸಬೇಕಾದುದನ್ನು ಬಹಳ ಸುಲಭವಾಗಿ ಹೇಳಿಕೊಟ್ಟರು. ನಾನು ನನ್ನೆರಡೂ ಕೈಗಳನ್ನೂ ಬೊಗಸೆ ಮಾಡಿ ಮುಖಕ್ಕೂ ಕ್ಯಾಮೆರಾಕ್ಕೂ ನಡುವೆ ಹಿಡಿದು, ಒಟ್ಟಿಗಿರುವ ಬೆರಳುಗಳನ್ನು ಸ್ವಲ್ಪ ಮಾತ್ರ ಬಿಡಿಸಿ ಉಂಟಾದ ಸಂದಿನಿಂದ ಕಣ್ಣಿನ ದೃಷ್ಟಿ ಬೀರಿ ಮತ್ತೆ ಬೆರಳುಗಳನ್ನು ಒಟ್ಟಾಗಿಸಿ ಅಭಿನಯಿಸಬೇಕೆಂದು ಸೂಚನೆ ಇತ್ತರು. ಆ ಬೊಗಸೆ ಎಷ್ಟು ಹೊತ್ತು ಮುಖಕ್ಕೆ ಅಡ್ಡ ಹಿಡಿಯಬೇಕು, ಎಷ್ಟು ಹೊತ್ತಿಗೆ ಬೆರಳುಗಳನ್ನು ಬಿಡಿಸಿ ಸಂದಿನಿಂದ ದೃಷ್ಟಿ ಬೀರಬೇಕು ಮತ್ತು ಎಷ್ಟು ಹೊತ್ತು ಹಾಗೆ ದೃಷ್ಟಿ ಬೀರಿ ಎಷ್ಟು ಹೊತ್ತಿನಲ್ಲಿ ಮತ್ತೆ ಬೆರಳುಗಳನ್ನು ಒಟ್ಟಾಗಿಸಬೇಕು ಎಂಬುದನ್ನು ಚಿಟಿಕೆ ಹೊಡೆದು, ನನ್ನ ಮುಂಗೈ ಮೇಲೆ ಟ್ಯಾಪ್ ಮಾಡಿ ನಿರ್ದೇಶಿಸುತ್ತಿದ್ದರು. ಈ ಕ್ಷಣಕ್ಷಣದ ಅನುಭವ ನನ್ನಲ್ಲಿ ಸದಾ ಈ ಕ್ಷಣದಲ್ಲೇ ನಡೆಯುತ್ತಿದೆಯೋ ಅನ್ನುವಷ್ಟು ನಿಖರವಾಗಿ ಮೂಡಿಬಿಟ್ಟಿದೆ. ನಾಗಾಭರಣರ ಈ ರೀತಿಯ ಉತ್ತಮ ಮಟ್ಟದ ನಿರ್ದೇಶನ ನನಗೆ ನಿಜಕ್ಕೂ ಒಂದು ವಿಶಿಷ್ಟ ಅನುಭವ ನೀಡಿತು ಮತ್ತು ನನ್ನ ಮುಂದಿನ ಅಭಿನಯಗಳಲ್ಲಿ ತನ್ನ ಛಾಪನ್ನು ಉಳಿಸಿಕೊಂಡೇ ಹೋಯಿತು.

ನಾನು ಬೇರೆ ಬೇರೆ ನಿರ್ದೇಶಕರ ಇಪ್ಪತ್ತಕ್ಕೂ ಹೆಚ್ಚು ಸಿನಿಮಾದಲ್ಲಿ ನಟಿಸಿ ಪಂಚಮವೇದ ಆಗಷ್ಟೆ ಮುಗಿಸಿದ್ದೆ. ನಟನೆ ಎಂದರೇನು ಎನ್ನುವ ಪ್ರಜ್ಞೆ ನಿಧಾನವಾಗಿ ನನ್ನೊಳಗೆ ಮೈದಾಳುತ್ತಿತ್ತು. ನನಗೆ ನಾಗಾಭರಣರಿಂದ ಮೈಸೂರ ಮಲ್ಲಿಗೆಯಲ್ಲಿ ಅಭಿನಯಿಸಲು ಕರೆ ಬಂದಿತ್ತು. ನಾಡಿನ ಹೆಸರಾಂತ ಹಿರಿಯ ಕವಿ ಕೆಎಸ್‌ನ ಅವರ ಉನ್ನತ ಕವಿತಾ ಕೃತಿಗಳಿಂದಲೇ ಉತ್ತಮ ಸ್ಕ್ರಿಪ್ಟ್

ರಚಿಸಿ ಜನಮನದಲ್ಲಿ ಶಾಶ್ವತವಾಗಿ ನಿಲ್ಲುವ ನಿಖರವಾದ ಚಿತ್ರಕಥೆ ಮತ್ತು ಸಂಭಾಷಣೆ ತಯಾರಿಸಿ ಅದನ್ನು ನನಗೆ ವಿವರಿಸಿ, ಅಭಿನಯಸಾಂದ್ರವಾದ ಪದ್ಮಳ ಪಾತ್ರಕ್ಕೆ ಸಮಾನವಾದ ಅನುಭವವೇ ಇಲ್ಲದ ನನ್ನನ್ನು ನಾಗಾಭರಣರು ಆಯ್ದುಕೊಂಡದ್ದು ನನಗೆ ವೈಯಕ್ತಿಕವಾಗಿ ಅವರು ನೀಡಿದ ಉತ್ತಮ ಅವಕಾಶ. ಅವರು ಹೇಳಿಕೊಟ್ಟದ್ದನ್ನು ಭಾಗಶಃ ಅಭಿನಯಿಸಿ ಪ್ರಶಸ್ತಿ, ಪುರಸ್ಕಾರ ದೊರಕಿದ ನಂತರ ಈಗ ನನಗೆ ಅವರು ಹೇಳಿಕೊಟ್ಟಷ್ಟೂ ಅಭಿನಯಿಸಿದರೆ ಇನ್ನೂ ಹೆಚ್ಚಿನ ಮಟ್ಟದ ಅಭಿನಯ ನೀಡಬಹುದೆಂದು ಅನಿಸುತ್ತದೆ. ಮೈಸೂರ ಮಲ್ಲಿಗೆಯ ಪದ್ಮಳ ಪಾತ್ರ ನೂರಕ್ಕೊಂದು. ಅಂತಹ ಪಾತ್ರವನ್ನು ನಿರ್ವಹಿಸುವುದು ಒಂದು ಅಭಿನಯ ಎನ್ನುವುದಕ್ಕಿಂತಲೂ ಒಂದು ಅನುಭವ ಎಂದು ಹೇಳಬಯಸುತ್ತೇನೆ. ಕಲಿಕೆಗೆ ಕೊನೆ ಇಲ್ಲ. ನಾವು ಪ್ರತಿಕ್ಷಣವೂ ಕಲಿಯುತ್ತಿರುತ್ತೇವೆ.

ನಾಗಾಭರಣ ಅವರು ಕೆಲಸದಲ್ಲಿ ಬಹಳ ಅಚ್ಚುಕಟ್ಟು ಮತ್ತು ಕಟ್ಟುನಿಟ್ಟು. ಅವರು ಮೈಸೂರ ಮಲ್ಲಿಗೆ ಚಿತ್ರೀಕರಣದ ಪ್ರತೀ ಹಂತವನ್ನೂ ಅತ್ಯಂತ ಜಾಗರೂಕತೆಯಿಂದ ಯೋಜಿಸಿ, ತುಂಬಾ ನಿಖರವಾಗಿ ರೂಪಿಸಿ, ಚಾಚೂ ತಪ್ಪದೆ ಅದರಂತೆಯೇ ಚಿತ್ರೀಕರಿಸಿದ ರೀತಿಗೆ ಚಿತ್ರದ ಯಶಸ್ಸೇ ಸಾಕ್ಷಿಯಾಗಿದೆ.

ನಾನು ಚಿನ್ನಾರಿ ಮುತ್ತದಲ್ಲಿ ಒಂದು ಹಾಡಿನಲ್ಲಿ ನಟಿಸಿರುತ್ತೇನೆ. ಅಲ್ಲಿ ಒಂದು ಚಿಕ್ಕ ಪಾತ್ರ ನನ್ನ ಪಾಲಿಗಿತ್ತು. ಮೈಸೂರ ಮಲ್ಲಿಗೆಯಲ್ಲಿ ನಾನು ನಟಿಸಿರುವುದು ನೆನಪಾದ ಪ್ರತೀ ಕ್ಷಣದಲ್ಲೂ ಮನಸ್ಸಿನಾಳದಲ್ಲಿ ಒಂದು ಉತ್ತಮ ಆಲೋಚನೆಯೇ ಮೂಡುತ್ತದೆ. ಆ ಆಲೋಚನೆ ಸದಾ ರಿಂಗಣಿಸುತ್ತಲೇ ಇರುತ್ತದೆ. ನಾನು ಅನೇಕ ತಮಿಳು, ತೆಲುಗು ಚಿತ್ರಗಳಲ್ಲಿ ನಟಿಸಿರುತ್ತೇನೆ. ಆದರೆ ಭರಣರಂತಹ ನಿರ್ದೇಶನದಲ್ಲಿ ಅಭಿನಯಿಸುವ ಅವಕಾಶ ನನಗೆ ಮತ್ತೆ ಮತ್ತೆ ದೊರೆಯುತ್ತಿರಬೇಕೆಂದು ನನ್ನ ಆಸೆ.

❑ ❖ ❑ ❖ ❑



# ನಾವು ಒಂದೇ ದೋಣಿಯ ಪಯಣಿಗರು

ಶಿವರಾಜ್‌ಕುಮಾರ್

ಮೊದಲಿಗೆ ನಾಗಾಭರಣ ಅವರಿಗೆ ಶುಭಾಷಯಗಳು, ಅಭಿನಂದನೆಗಳು. 1996 ಒಂದು ದಿನ ನಾಗಾಭರಣ ಅವರು ನಮ್ಮ ಮನೆಗೆ ಬರುತ್ತಿರುವುದಾಗಿ ಫೋನ್ ಮಾಡಿದರು. ಅವರ ಚಿತ್ರಗಳನ್ನು ನೋಡಿದ್ದೆ, ಅವರ ಬಗ್ಗೆ ಕೇಳಿದ್ದೆ. ಅವರನ್ನು ನೇರವಾಗಿ ಭೇಟಿಯಾಗಿರಲಿಲ್ಲ. ಅಪ್ಪಾಜಿ, ವರದಪ್ಪಾಜಿ ಇಬ್ಬರೂ ಪನ್ನಾಲಾಲ್ ಪಟೇಲರ ಕಾದಂಬರಿ "ಜನುಮದ ಜೋಡಿ" ಕಥೆ ತುಂಬಾ ಚೆನ್ನಾಗಿದೆ. ಒಳ್ಳೆಯ ಸಿನಿಮಾ ಆಗುತ್ತದೆ, ಕಥೆಯನ್ನು ನಿರ್ದೇಶಕರ ಬಾಯಲ್ಲೇ ಕೇಳು ಎಂದು ಮೊದಲೇ ಹೇಳಿದ್ದರು. ಫೋನ್ ಮಾಡಿ ಸುಮಾರು ಒಂದು ಗಂಟೆಯಾಗಿರಬಹುದು, ಭರಣರು ಬಂದರು. ಅವರನ್ನು ನೋಡುತ್ತಿದ್ದಂತೆಯೇ ಬಹಳ ವರ್ಷಗಳಿಂದ ಪರಿಚಿತರೆಂಬಂತೆ ಅನಿಸಿಬಿಟ್ಟಿತು, ಕಥೆಯನ್ನು ಬಹಳ ಪೊಯೆಟಿಕ್ ಆಗಿ ನೆರೇಟ್ ಮಾಡಿದರು. ತುಂಬಾ ಹಿಡಿಸಿಬಿಟ್ಟಿತು. ಬೇಗ ಶುರು ಮಾಡೋಣ ಎಂದೆ.

ಸಾಂಗ್ ರೆಕಾರ್ಡಿಂಗ್ ಟೈಂನಲ್ಲಿ ಮಣಿಮಣಿ ಹಾಡನ್ನು ನಾನೇ ಹಾಡಬೇಕೆಂದು ಭರಣ ಒತ್ತಾಯಮಾಡಿ ಹಾಡಿಸಿದರು. ಹಾಡು ಎಲ್ಲರಿಗೂ ಮೆಚ್ಚುಗೆಯಾಯ್ತು, ಚಿತ್ರೀಕರಣಕ್ಕೂ ಮೊದಲೆ ಇಡೀ ಚಿತ್ರದ ಸ್ಕ್ರಿಪ್ಟ್ ನನ್ನ ಕೈಗೆ ಬಂತು. ನನಗೆ ಚಿತ್ರದ ಸ್ಕ್ರಿಪ್ಟ್ ಕೊಟ್ಟ ಮೊದಲ ನಿರ್ದೇಶಕರೇ ನಾಗಾಭರಣ. ಕಥೆ-ಚಿತ್ರಕಥೆಯ ವಿಷಯದಲ್ಲಿ ಭರಣ is Great. ಸ್ಕ್ರಿಪ್ಟ್ ಇದ್ದುದರಿಂದ ನಾನು ಇಲ್ಲದಿರುವ ದೃಶ್ಯಗಳಲ್ಲಿ ಏನೇನು ಆಗುತ್ತಿದೆ ಎನ್ನುವುದು ಗೊತ್ತಾಗುತ್ತಿತ್ತು. ಆದ್ದರಿಂದ ಇಡೀ ಚಿತ್ರದಲ್ಲಿ ನನ್ನನ್ನು ನಾನು ತೊಡಗಿಸಿಕೊಳ್ಳಲು ಸಾಧ್ಯವಾಯ್ತು. ಮಣಿಮಣಿ ಹಾಡನ್ನು ಪ್ರತಿದಿನ ಸಂಜೆಯ ವೇಳೆ ಒಂದೊಂದು ಗಂಟೆ ಚಿತ್ರೀಕರಿಸೋಣ ಎನಿಸಿತು. ಅದನ್ನು ನಿರ್ದೇಶಕರಿಗೆ ಹೇಳಿದೆ. ಹಾಗೇ ಮಾಡಿದರು. ಆ ಒಂದು ಹಾಡನ್ನು ಸುಮಾರು ಹದಿನೈದು ದಿನ ಚಿತ್ರಿಸಿದೆವು. ಆ ಸನ್ನಿವೇಶಕ್ಕೆ ಸರಿಯಾಗಿ ಹೊಂದಿಕೆಯಾಯ್ತು. ಜನ ಮೆಚ್ಚಿದರು.

ಭರಣರ ಒಂದು ಒಳ್ಳೆಯ ಗುಣ ಎಂದರೆ ಅವರಿಗೆ ನಾನು ಹೇಳಿದ್ದೇ ಆಗಬೇಕೆಂಬ ಹ್ಯಾಂಗೋವರ್ ಇಲ್ಲ. ಅವರು ಯಾವತ್ತೂ ನನ್ನದು ಎಂದು ಮಾತನಾಡುವುದಿಲ್ಲ. ನಮ್ಮದು ಎಂಬ ಪದವನ್ನು ಬಳಸುತ್ತಾರೆ. ಅವರ ಚಿತ್ರಗಳಲ್ಲಿ ಟೀಂ ವರ್ಕ್ ಎದ್ದು ಕಾಣುವ ಅಂಶ. ಆ ಟೀಂ ವರ್ಕ್‌ನಿಂದಲೇ ಆ ಚಿತ್ರ ಆ ಮಟ್ಟದ ಯಶಸ್ಸು ಕಂಡಿತು. ನಾವೂ ಅಷ್ಟೇ, ಶೂಟಿಂಗ್ ಮಾಡಿದ ಐವತ್ತು ಅರವತ್ತು ದಿನಗಳು, ಎಲ್ಲರೂ ಒಂದೇ ಹೋಟೆಲ್‌ನಲ್ಲಿ ಇದ್ದೆವು. ಪ್ರತಿದಿನ ಹಬ್ಬದ ಸಡಗರದಂತೆ ಸಂಭ್ರಮವಿರುತ್ತಿತ್ತು.

ದೆಹಲಿಯ ಚಿತ್ರೋತ್ಸವದಲ್ಲಿ 'ಕ್ಯಾರೆಕ್ಟರ್' ಎನ್ನುವ (ಇಟಾಲಿಯನ್ ಇರಬೇಕು) ಚಿತ್ರ ನೋಡಿದೆವು. ಅದರಲ್ಲಿಯ ಒಂದು ಪಾತ್ರ ಇಬ್ಬರಿಗೂ ಇಷ್ಟವಾಯ್ತು. ಅದರ ಪ್ರೇರಣೆಯಿಂದ ಹುಟ್ಟಿದ್ದೇ "ಜನುಮದಾತ" ಚಿತ್ರ.

"ಚಿಗುರಿದ ಕನಸು" it is my dream project. ಇದು ಬರಿ ಒಂದು ಸಿನಿಮಾ ಅಲ್ಲ. ಇದೊಂದು ಪಯಣ, ಕಾಶಿಯಿಂದ ಬಂಗಾಡಿಗೆ ತನ್ನ ಮೂಲವನ್ನು ಹುಡುಕಿಕೊಂಡು ಬರುವ ಆ ಶಂಕರನ ಪಾತ್ರ ನನ್ನ ವೃತ್ತಿ ಬದುಕಿನಲ್ಲೇ ಒಂದು ಒಳ್ಳೆಯ ಪಾತ್ರ. ಈ ಚಿತ್ರ ಮಾಡುವಾಗಲೂ ಅಷ್ಟೆ ನಾನೊಂದು ಹಾಡನ್ನು ಕೋರಿಯೋಗ್ರಾಫ್ ಮಾಡುತ್ತೇನೆ ಎಂದು ನಾನೆ ಆಸೆಪಟ್ಟು ಭರಣರನ್ನು ಕೇಳಿಕೊಂಡೆ, ಬಹಳ ಸಂತೋಷದಿಂದ ಒಪ್ಪಿಕೊಂಡರು. ಅವರು ರೀ-ರೆಕಾರ್ಡಿಂಗ್‌ನಲ್ಲಿದ್ದರು. ನಾನು ಹಾಡು ಮುಗಿಸಿಕೊಂಡು ಬಂದೆ, ನಾನು ಮಾಡಿದ ಚಿತ್ರಿಕೆಗಳನ್ನು ನೋಡಿ ನಾನಂದುಕೊಂಡಂತೆಯೇ ಇದೆ ಎಂದು ಖುಷಿಯಾದರು. ಇದು ನನಗೂ ಒಂದು ಅನುಭವ. ಈ ಚಿತ್ರ ಅಷ್ಟಾಗಿ ಜನರನ್ನು ಮುಟ್ಟಲಿಲ್ಲ. ಕಾರಣ ನಮಗಾರಿಗೂ ತಿಳಿಯುತ್ತಿಲ್ಲ. ಆದರೂ "ಚಿಗುರಿದ ಕನಸು" ನನಗೂ ನಮ್ಮ ಮನೆಯವರಿಗೂ ತುಂಬಾ ಖುಷಿ ಕೊಟ್ಟ ಚಿತ್ರ.

ಭರಣ ಅವರಿಂದ ನಾನು ಒಬ್ಬ ನಟನಾಗಿ, ಒಬ್ಬ ವ್ಯಕ್ತಿಯಾಗಿ ಬಹಳ ಕಲಿತಿದ್ದೇನೆ. ಅವರೊಡನೆ ಕೆಲಸ ಮಾಡುವುದು ಹೆಮ್ಮೆಯ ವಿಷಯ. ಅವರ ನನ್ನ ಪಯಣ 96 ರಿಂದ 2004 ರವರೆಗೆ ಸಾಗಿದೆ. ಇದು ಇಲ್ಲಿಗೆ ನಿಲ್ಲುವುದಿಲ್ಲ. ಈ ಪಯಣ ಮುಂದುವರೆಯುತ್ತದೆ. ಅಭಿನಂದನೆಗಳು ಭರಣ ಸಾರ್.

❑ ❖ ❑ ❖ ❑



# ಭರಣರ ಮೆಗಾ ಧಾರವಾಹಿ: ಪ್ರಯೋಗಶೀಲತೆಯ ವಿಭಿನ್ನ ಮಾದರಿ

ತುರುವೇಕೆರೆ ಪ್ರಸಾದ್

ಟಿ.ವಿ. ಧಾರವಾಹಿಗಳು ಮನರಂಜನೆಯ ಪ್ರಮುಖ ಆಕರ್ಷಣೆಗಳೆನಿಸಿ ವರ್ಷಗಳೇ ಸಂದಿವೆ. ಅದರಲ್ಲೂ ಹಲವು ವಾಹಿನಿಗಳಲ್ಲಿ ಪ್ರಸಾರವಾಗುವ ಮೆಗಾ ಧಾರವಾಹಿಗಳು ಸಮಗ್ರ ಕುಟುಂಬದ ಸಂಚಲನದ ಕೇಂದ್ರಬಿಂದುಗಳಾಗಿವೆ. ಒಂದು ಕಾಲಕ್ಕೆ ಚಲನಚಿತ್ರಗಳಿಂದ ತುಂಬಿ ತುಳುಕುತ್ತಿದ್ದ ಟಿ.ವಿ. ಚಾನಲ್‌ಗಳಿಗೆ ಈಗ ಮೆಗಾ ಧಾರವಾಹಿಗಳಿಗೆ ಸಮಯ ಹೊಂದಿಸಲೇ ಸಾಧ್ಯವಾಗುತ್ತಿಲ್ಲ. ಇಂತಹ ಅಸಂಖ್ಯ ಧಾರವಾಹಿಗಳ ನಡುವೆ ಅಲ್ಲೊಂದು ಇಲ್ಲೊಂದು ಧಾರವಾಹಿಗಳು ಪ್ರೇಕ್ಷಕರ ನೆನಪಿನಲ್ಲಿ ಉಳಿಯಬಹುದೇನೋ? ಹಾಗೆ ಮೆಲುಕು ಹಾಕಬಹುದಾದ ಧಾರವಾಹಿಗಳಲ್ಲಿ ನಾಗಾಭರಣರ ಧಾರವಾಹಿಗಳು ಅಗ್ರಪಂಕ್ತಿಯಲ್ಲಿ ನಿಲ್ಲುತ್ತವೆ ಎಂದರೆ ಅತಿಶಯೋಕ್ತಿಯಲ್ಲ.

ಎಲ್ಲಾ ಧಾರವಾಹಿಗಳೂ ಒಂದು ಕೌಟುಂಬಿಕ ಕಥೆ ಅಥವಾ ಒಂದು ವರ್ಗದ ಸಮಸ್ಯೆಗಳ ಸುತ್ತ ಗಿರಿಕಿ ಹೊಡೆಯುತ್ತಿರುವಾಗ ಒಂದು ಇಡೀ ಹಳ್ಳಿಯ ಜೀವನದ ಸಮಗ್ರ ಚಿತ್ರಣ ಹೊತ್ತು ತಂದ ಧಾರವಾಹಿ 'ಸಂಕ್ರಾಂತಿ'. ಅದರಲ್ಲಿ ಹಳ್ಳಿಯ ಸೊಗಡಿತ್ತು. ಮುಗ್ಧತೆಯಿತ್ತು. ಸಂತೋಷ, ಲವಲವಿಕೆ, ಅಸೂಯೆ, ಒಳಜಗಳ ಎಲ್ಲಾ ಇತ್ತು. ಮೆಲ್ಲಗೆ ಬೀಸಿದ ಆಧುನಿಕತೆಯ ಗಾಳಿ ಹೇಗೆ ಇಡೀ ಹಳ್ಳಿಯ ಚಿತ್ರಣವನ್ನೇ ಬದಲಾಯಿಸಿತು ಎಂಬುದು ಧಾರವಾಹಿಯ ಮುಖ್ಯ ವಸ್ತು. ಹಳ್ಳಿಯ ಹಿರಿಯ ಮತ್ತು ಕಿರಿಯ ತಲೆಮಾರುಗಳು ಬದಲಾವಣೆಯನ್ನು ಸ್ವೀಕರಿಸುವ ರೀತಿ, ಮೌಲ್ಯಗಳ ಸಂಘರ್ಷ-ಸಂಬಂಧಗಳ ಸಿಕ್ಕು ನಿಧಾನವಾಗಿ ಅನಾವರಣಗೊಳ್ಳುತ್ತಾ ಹೋಗಿ ಕೊನೆಗೆ ಎಲ್ಲವೂ ಇಲ್ಲಿಗೇ ಮುಗಿಯುವುದಿಲ್ಲ ಎನ್ನುವಲ್ಲಿಗೆ 'ಸಂಕ್ರಾಂತಿ' ಮುಗಿಯುತ್ತದೆ. ಹೊಸ ನೀರು ಬಂದಾಗ ಹಳೇ ನೀರು ಕೊಚ್ಚಿ ಹೋಗುವುದು ಸಹಜ. ಆದರೆ ಹೊಸ ನೀರಿನಲ್ಲೂ ಹಸಿರು ಚಿಗುರಬಹುದು ಎನ್ನುವಂತೆ ಮೊಮ್ಮಗ ತಾತನ ಆದರ್ಶಗಳನ್ನು ಬೆಂಬಲಿಸುವುದರೊಂದಿಗೆ ಧಾರವಾಹಿ ಮಂಗಳಕರ ಅಂತ್ಯ ಕಾಣುತ್ತದೆ. ಇಷ್ಟೂ ಅಗಾಧ ಸಂಖ್ಯೆಯ ಸಂಬಂಧಗಳ ವಿವಿಧ ಮುಖಗಳನ್ನು 600ಕ್ಕೂ ಹೆಚ್ಚು ಕಲಾವಿದರ ಮೂಲಕ ದೃಶ್ಯ ಮಾಧ್ಯಮದಲ್ಲಿ ಕಟ್ಟಿಕೊಟ್ಟಿರುವುದು ನಾಗಾಭರಣರ ಸಾಮರ್ಥ್ಯಕ್ಕೆ ಹಿಡಿದ ಕೈಗನ್ನಡಿ. ಈ ಧಾರವಾಹಿಯ ಮತ್ತೊಂದು ಗಮನಾರ್ಹ ಅಂಶವೆಂದರೆ ಇಡೀ ಕಥೆ ಆರಂಭದಿಂದ ಕೊನೆಯತನಕ ಎಲ್ಲೂ ಗೋಜಲಾಗದೇ ಹಳಿ ತಪ್ಪದೆ ಸುಲಲಿತವಾಗಿ ಹರಿದು ಬಂದದ್ದು. ಮಧ್ಯಾಹ್ನದ ವೇಳೆಯಲ್ಲಿ ಪ್ರಸಾರವಾಗಿಯೂ ಅದು ಗಳಿಸಿದ ಅಪಾರ ಜನಪ್ರಿಯತೆಯೇ ಅದರ ಯಶಸ್ಸಿಗೆ ಸಾಕ್ಷಿ.

ಭರಣರ ಮತ್ತೊಂದು ಯಶಸ್ವೀ ಧಾರವಾಹಿ 'ಗೆಳತಿ'. ನಾಲ್ವರು ಗೆಳತಿಯರ ಸ್ನೇಹ, ಸಂಘರ್ಷದ ಒಂದು ಚಿತ್ರಣ ಇದರಲ್ಲಿತ್ತು. ಮಾಮೂಲಿ ಕೌಟುಂಬಿಕ ಹಿನ್ನೆಲೆಯಿಂದ ಹೊರತಾದ ಈ ಧಾರವಾಹಿಯಲ್ಲಿ ಮಹಿಳೆಯರ ಸ್ವಾವಲಂಬನೆ, ಆತ್ಮವಿಶ್ವಾಸ, ದೃಢಸಂಕಲ್ಪಗಳಿಗೆ ಒತ್ತು ಕೊಡಲಾಗಿತ್ತು. ಮಹಿಳೆಯರ ವಿವೇಚನಾ ಶಕ್ತಿ, ಆಡಳಿತಾತ್ಮಕ ಪ್ರಬುದ್ಧತೆ, ಕಾರ್ಪೋರೇಟ್ ಇನ್‌ವಾಲ್ವ್‌ಮೆಂಟ್, ಜೊತೆಗೆ ಅವರ ರಾಜಕೀಯ ಇಚ್ಛಾಶಕ್ತಿಯ ಕುರಿತಾದ ಮುಕ್ತ ಚಿಂತನೆಗಳು ಧಾರವಾಹಿಯ ಅಂತಃಸತ್ವಗಳಾಗಿದ್ದವು. ವ್ಯವಸ್ಥೆ, ಶೋಷಣೆಯ ವಿರುದ್ಧ ಸಿಡಿದೇಳುವ, ಕ್ರಾಂತಿಕಾರಿಕ ಬದಲಾವಣೆ ಬಯಸುವ, ಯಾರನ್ನೂ ಅವಲಂಬಿಸದೇ ಸ್ವತಂತ್ರಳಾಗಿ ಬದುಕುವ, ಅಂತಹ ಬದುಕಿಗಾಗಿ ಹಂಬಲಿಸುವ ದನಿಗೆ ಧಾರವಾಹಿ ಪುಷ್ಟಿ ನೀಡಿತ್ತು. ಸ್ತ್ರೀ ಶೋಷಣೆಯ ಒಂದು ಭಾವನಾತ್ಮಕ ಪರಿಧಿಯಲ್ಲೇ ಹೆಣ್ಣನ್ನು ಬಿಂಬಿಸುತ್ತಿದ್ದ ಧಾರವಾಹಿಗಳ ಮಧ್ಯೆ 'ಗೆಳತಿ' ಸ್ತ್ರೀ ಸ್ವಾತಂತ್ರ್ಯ ಮತ್ತು ಸಮಾನತೆಗೊಂದು ವಿಶೇಷ ವ್ಯಾಖ್ಯೆ ನೀಡಿತ್ತು. ಅದಕ್ಕಿಂತ ಮಿಗಿಲಾಗಿ ಹೆಣ್ಣಿನ ಶೋಷಣೆಯ ವಿರುದ್ಧದ ಧ್ವನಿ ಅನುಕಂಪಕ್ಕಷ್ಟೇ ಸೀಮಿತವಾಗಿರುವಾಗ ಅದು ಸ್ಫೋಟಗೊಳ್ಳುವ ಪರಿಯನ್ನು 'ಗೆಳತಿ' ಪ್ರತಿನಿಧಿಸಿದ್ದು ಧಾರವಾಹಿಯ ಮಹತ್ವವೂ ಹೌದು.

ಸ್ತ್ರೀ ಸಂವೇದಿ ಸಮಸ್ಯೆಗಳ ಜೊತೆಗೆ ವ್ಯವಸ್ಥೆ, ಸಂಪ್ರದಾಯಗಳ ಕಟ್ಟುಪಾಡುಗಳನ್ನು, ಕಂದಾಚಾರಗಳನ್ನು ಕಿತ್ತೊಗೆಯುವ ಮತ್ತೊಂದು ಪ್ರಯತ್ನವಾಗಿ ಹೊರಬಂದದ್ದೇ ಭರಣರ 'ಜೀವನ್ಮುಖಿ' ಧಾರವಾಹಿ. ನಿರಂಜನರ 'ಬನಶಂಕರಿ' ಕಾದಂಬರಿಯನ್ನಾಧರಿಸಿದ ಈ ಧಾರವಾಹಿಯಲ್ಲಿ ಕಂದಾಚಾರದ ಹೆಸರಿನಲ್ಲಿ ಬಲಿಪಶುವಾಗುವ ವಿಧವೆ ಹೆಣ್ಣು ಮಗಳೊಬ್ಬಳ ಯಾತನಾಮಯ ಬದುಕಿನ ಚಿತ್ರಣವಿದೆ. ಸಂಪ್ರದಾಯ, ರೀತಿ-ರಿವಾಜುಗಳ ಚೌಕಟ್ಟಿನಾಚೆ ಹೊರಬರಲಾಗದ ಎಷ್ಟೋ ಮುಗ್ಧ ಹೆಣ್ಣು ಮಕ್ಕಳ ತೊಳಲಾಟವಿದೆ. ಅಂತಹ ಚಿತ್ರಗಳು ಸರ್ವೇ ಸಾಮಾನ್ಯ. ನಮ್ಮ ನಡುವಿನ ಬದುಕನ್ನು ಈ ಅನುಕಂಪದ ಹಂತಕ್ಕಷ್ಟೇ ನೋಡುವಲ್ಲಿ ಸಮುದಾಯದ ಔದಾರ್ಯತೆ ಮುಗಿದು ಹೋಗುತ್ತದೆ. ಆದರೆ ನಿರಂಜನರ ವೈಚಾರಿಕತೆ, ವಿಚಾರವಂತಿಕೆ ಭರಣರ ನಿರ್ದೇಶನದ ಮೂಸೆಯಲ್ಲಿ ಮಹಿಳಾ ಸ್ವಾತಂತ್ರ್ಯದ ಹೊಸ ಹೊಳಹುಗಳಾಗಿ ಅನಾವರಣಗೊಂಡಿರುವುದು ನಿಜಕ್ಕೂ ಸಾರ್ಥಕವೆನಿಸುವಂತಹುದು. ಜೀವನೋತ್ಸಾಹ ಕಳೆದುಕೊಳ್ಳದ ಹೆಣ್ಣು ಮಗಳೊಬ್ಬಳು ಅರ್ಥಹೀನ ಸಂಪ್ರದಾಯವನ್ನು ದಾಟಿ ಬಂದು ಸಾಮಾಜಿಕ ಸಂಘರ್ಷಗಳಿಗೆ ಸವಾಲಾಗಿ ನಿಂತು ತನ್ನದೇ ಆದ ಬದುಕನ್ನು ರೂಢಿಸಿಕೊಳ್ಳುವ ಪರಿ 'ಜೀವನ್ಮುಖಿ'ಯಲ್ಲಿ ಸಮರ್ಥವಾಗಿ ಚಿತ್ರಣಗೊಂಡಿದೆ. ವಿಧವಾ ವಿವಾಹಕ್ಕೆ ಬರೀ ಮಾತಿನ ಬೆಂಬಲ ನೀಡುವ ಬದಲು ಶಾಸ್ತ್ರದ ನೆಲೆಗಟ್ಟಿನಲ್ಲಿ ಅಂತಹ ವಿವಾಹಗಳು ಸಿಂಧು ಎನಿಸುತ್ತವೆ ಎಂಬ ಅರ್ಥಪೂರ್ಣ ಸಂದೇಶವನ್ನು 'ಜೀವನ್ಮುಖಿ' ಮೂಲಕ ನೀಡಿದ ಭರಣರ ಪ್ರಯತ್ನ ನಿಜಕ್ಕೂ ಪ್ರಶಂಸನೀಯ.

'ದೂರ ತೀರ ಯಾನ' ಮೂವರು ಸೋದರಿಯರ ನಡುವೆ ಹೆಣೆದ ಕಥೆ. ಅಮೆರಿಕನ್ ಸಂಸ್ಕೃತಿ, ಆಕರ್ಷಣೆ, ಅದನ್ನು ಅನುಕರಿಸಲು ಹೋಗುವ ಹುಂಬತನ ಇವುಗಳ ಮಧ್ಯೆ ಅನ್ಯಾಯಕ್ಕೊಳಗಾದ ಹೆಣ್ಣು ಮಗಳೊಬ್ಬಳು ಸ್ವಾಭಿಮಾನ, ಧೀಮಂತಿಕೆಯಿಂದ ಬದುಕು



ಕಟ್ಟಿಕೊಳ್ಳುವ ರೀತಿ ಎಚ್ಚರದ ಪ್ರಜ್ಞೆಯನ್ನು ಜಾಗೃತಗೊಳಿಸುವಂತಿದೆ. ಅದೇ ರೀತಿ ಸಂಸಾರದ ಒಳಗಿನ ಹಾಗೂ ಹೊರಗಿನ ಎರಡು ಪ್ರತ್ಯೇಕ ಮುಖಗಳಾಗಿ ಪ್ರತಿನಿಧಿಸಲ್ಪಡುವ ಎರಡು ಹೆಣ್ಣು ಮಕ್ಕಳ ದ್ವಂದ್ವ ಮನಸ್ಸಿನ ಸೂಕ್ಷ್ಮ ಚಿತ್ರಣ ಇದರಲ್ಲಿದೆ. ಈ ಧಾರವಾಹಿಯಲ್ಲೂ ಭರಣರು ಹೆಣ್ಣು ಮಕ್ಕಳ ಸಮಸ್ಯೆಯ ಮತ್ತೊಂದು ಎಳೆಯನ್ನು ಗುಪ್ತಗಾಮಿನಿಯನ್ನಾಗಿ ಹರಿಸಿರುವುದು ಒಂದು ಉತ್ತಮ ಪ್ರಯತ್ನ.

ಧಾರವಾಹಿಗಳ ಮೂಲ ಉದ್ದೇಶ ಮನರಂಜನೆಯೇ ಆದರೂ ಭರಣರು ತಮ್ಮ ಮೆಗಾ ಧಾರವಾಹಿಗಳ ಮೂಲಕ ಸಮಾಜಕ್ಕೆ ಸಂದೇಶವೊಂದನ್ನು ನೀಡುವ ನಿರಂತರ ಪ್ರಯತ್ನ ಮಾಡುವುದು ಸ್ಪಷ್ಟವಾಗುತ್ತದೆ. ಈ ಕಾರಣಕ್ಕಾಗಿಯೇ ಬಹುಶಃ ಅವರು ಮಾಮೂಲಿ ಸೂತ್ರಗಳನ್ನು ಬಿಟ್ಟು ಭಿನ್ನ ಮಾದರಿಯ ಕಥಾ ಹಂದರವನ್ನು ಆಯ್ಕೆ ಮಾಡುತ್ತಾರೆ. ಈ ಭಿನ್ನ ಮಾದರಿ ಪ್ರತಿಸಾರಿಯೂ ಒಂದೊಂದು ಪ್ರಯೋಗಕ್ಕೆ ಪ್ರೇರಣೆಯಾಗುತ್ತದೆ. ಭರಣರ ಈ ನಿರಂತರ ಪ್ರಯೋಗಶೀಲತೆಯೇ ಅವರಿಗೆ ಹೊಸದನ್ನು ಸೃಷ್ಟಿಸಲು ಸಾಧ್ಯವಾಗುತ್ತಿರುವುದು. ಇದು ಭರಣರ ಸೃಜನಶೀಲತೆಯ ಸಂಕೇತವೂ ಹೌದು. ರಂಗಭೂಮಿಯ ನಿಕಟ ನಂಟುಳ್ಳ ಭರಣರು ಪ್ರತಿಮೆ, ಸಂಕೇತಗಳನ್ನು ಧಾರವಾಹಿಗಳಲ್ಲಿ ಬಳಸುವುದು ಧಾರವಾಹಿಗಳ ನೇಟಿವಿಟಿ ಹೆಚ್ಚಿಸಲು ಸಹಕಾರಿಯಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಧಾರವಾಹಿ ಎಲ್ಲ ಸ್ತರದ ಜನರಿಗೆ ಎಂಬ ವಿವೇಚನೆ, ಜಾಗೃತ ಪ್ರಜ್ಞೆ ಭರಣರಿಗಿದೆ. ಅದಕ್ಕಾಗಿಯೇ ಅವರು ಲೇಖಕರ ತಂಡವನ್ನೇ ಕಟ್ಟುತ್ತಾರೆ. ವಿಚಾರ-ವಿಮರ್ಶೆಗಳ ಮಂಥನಕ್ಕೆ ವೇದಿಕೆ ಸಜ್ಜುಗೊಳಿಸುತ್ತಾರೆ. 'ಗೆಳತಿ' ಧಾರವಾಹಿಯ ಕಥೆಯ ಚರ್ಚೆಯ ವೇಳೆ ಭರಣರು ಹೇಳಿದ್ದ ಮಾತೊಂದು ನೆನಪಿಗೆ ಬರುತ್ತದೆ. "ಸ್ತ್ರೀ ಸಂವೇದನೆಗಳ ಬಗ್ಗೆ ಒಬ್ಬಳು ಸಾಮಾನ್ಯ ಮಹಿಳೆ ಯೋಚಿಸುವಷ್ಟು ಸಹಜವಾಗಿ ನಾವು ಯೋಚಿಸಲು ಸಾಧ್ಯವಿಲ್ಲ. ಅದು ಅನುಭವಜನ್ಯವಾದುದು, ನಮಗೆ ನಿಲುಕಲಾರದ್ದು". ಇಂತಹ ವಾಸ್ತವ ಸಂಗತಿಗಳೊಂದಿಗೆ ಧಾರವಾಹಿ ನಿರ್ಮಾಣ ಮತ್ತು ನಿರ್ದೇಶನದಲ್ಲಿ ಅವರು ಬದ್ಧತೆ ತೋರಿ ಯಾವುದೇ ಹಂತದಲ್ಲಿ ರಾಜಿ ಮಾಡಿಕೊಳ್ಳದಿರುವುದೇ ಅವರ ಯಶಸ್ಸಿಗೆ ಸಾಕ್ಷಿ. ಹಾಗಾಗಿ ಅವರ ಧಾರವಾಹಿಗಳಲ್ಲಿ ಸಂಬಂಧಗಳು ಹಾಗೂ ಪಾತ್ರಗಳು ವಿಕೃತಗೊಳ್ಳುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಭರಣರ ಧಾರವಾಹಿಗಳಿಗೆ ವಿಶಿಷ್ಟ ಸ್ಥಾನವಿದೆ.

50ರ ಸಂಭ್ರಮದಲ್ಲಿ ಭರಣರು ಮತ್ತೊಂದು ಮಹಾನ್ ಧಾರವಾಹಿ 'ಮಹಾಮಾಯಿ'ಯನ್ನು ಕಡೆದು ನಿಲ್ಲಿಸುವ ಪ್ರಯತ್ನದಲ್ಲಿದ್ದಾರೆ. ಅವರ ಎಲ್ಲಾ ಪ್ರಯತ್ನಗಳು ಫಲಕಾರಿಯಾಗಲಿ. ಚಿತ್ರರಂಗ, ಟಿ.ವಿ. ಮಾಧ್ಯಮ ಹಾಗೂ ರಂಗಭೂಮಿ ಇಂತಹ ಮೇರು ನಿರ್ದೇಶಕರಿಂದ ಮತ್ತೂ ಸತ್ವಪೂರ್ಣವೆನಿಸಲಿ ಎಂದು ಹಾರೈಸುತ್ತೇನೆ.

# ಭರಣ

ಮುರಳೀಧರ ಖಜಾನೆ

ಸುಮಾರು ಇಪ್ಪತ್ನಾಲ್ಕು ವರ್ಷಗಳ ಹಿಂದಿನ ಸಂಗತಿ. ಅದು 1980ರ ಬೆಂಗಳೂರಿನ ಅಂತರ್ರಾಷ್ಟ್ರೀಯ ಚಲನ ಚಿತ್ರೋತ್ಸವದ ಸಂದರ್ಭ. ದಟ್ಟವಾದ ತಲೆಗೂದಲು, ಕೆನ್ನೆದುಂಬಿದ ಗಡ್ಡ, ತೀಕ್ಷ್ಣ ಕಣ್ಣುಗಳ ಯುವಕನೊಬ್ಬ ಕಲಾತ್ಮಕ ಚಿತ್ರವಲಯದಲ್ಲಿ ಸಾಕಷ್ಟು ಕುತೂಹಲವನ್ನು ಹುಟ್ಟಿಸಿದ್ದ. ಅವನ ನಿರ್ದೇಶನದ ಮೊದಲ ಚಿತ್ರ ಚರ್ಚೆಗೆ ಸಾಕಷ್ಟು ಗ್ರಾಸವನ್ನೂ ಒದಗಿಸಿತ್ತು. ಆ ಚಿತ್ರ ಕಲಾತ್ಮಕ ಚಿತ್ರವಲಯದಲ್ಲಿ ನಿರೀಕ್ಷೆ ಹುಟ್ಟಿಸಲು ಕಾರಣ ಆತ ಕಾರಂತ, ಕಾರ್ನಾಡರ ಗರಡಿಯಲ್ಲಿ ಪಳಗಿದ್ದು.

ಚಿತ್ರ ಪ್ರದರ್ಶನಗೊಂಡಾಗ ಅದಕ್ಕೆ ನಿರೀಕ್ಷೆಗಿಂತ ಹೆಚ್ಚಿನ ಮೆಚ್ಚಿಗೆ ದೊರೆಯಿತು. ತನ್ನ ಚಿತ್ರದಲ್ಲಿ ಆತ ನಂಬಿಕೆಗಳೇ ಪ್ರಧಾನವಾದ ತುಮಕೂರಿನ ಹಳ್ಳಿಯೊಂದರಲ್ಲಿ ಇಂದಿಗೂ ಜೀವಂತವಾಗಿರುವ ಆಚರಣೆಯೊಂದರ ಸಾಮಾಜಿಕ ಬಿಕ್ಕಟ್ಟನ್ನು ಕಲಾತ್ಮಕವಾಗಿ, ಆದರೆ ವಾಸ್ತವಕ್ಕೆ ಹತ್ತಿರವಾಗಿ ಕಥಿಸಿದ್ದ.

ಚಿತ್ರೋತ್ಸವದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತ ಚಿತ್ರ ನಿರ್ದೇಶಿಸಲು ತನಗಿರುವ ತಕ್ಷಣದ ಜರೂರತ್ತು ತನ್ನ ಒತ್ತಡಗಳ ಬಗ್ಗೆ ಹೇಳಿದಾಗ ಕಂಡದ್ದು ಅಪ್ಪಟ ಪ್ರಾಮಾಣಿಕತೆ.

ಅಂದಿನ ಆ ಯುವಕನ ಪ್ರಾಮಾಣಿಕತೆ ಹಾಗೂ ಬದ್ಧತೆ ಇಪ್ಪತ್ನಾಲ್ಕು ವರ್ಷಗಳ ನಂತರವೂ ಬದಲಾಗಿಲ್ಲ. ಆದರೆ ನಂಬಿಕೆಗಳಲ್ಲಿ ಸಾಕಷ್ಟು ಪರಿವರ್ತನೆ ಆಗಿದೆ. ಜೊತೆಯಲ್ಲಿ ವಾಣಿಜ್ಯ ಉದ್ದೇಶವೇ ಪ್ರಮುಖವಾಗಿರುವ ಚಿತ್ರರಂಗ. ವಾಸ್ತವದ ಅರಿವ ಮೂಡಿಸಿದೆ. ಎಲ್ಲರಂತಿದ್ದೂ, ಎಲ್ಲರಂತಾಗದ ಜಾಣತನ ಕಲಿಸಿದೆ. ತಾನೂ ಉಳಿದು ತನ್ನ ನಂಬಿಕೆಯನ್ನು ಉಳಿಸಿಕೊಳ್ಳುವ ಕಲೆಯನ್ನು ಕರಗತ ಮಾಡಿಸಿದೆ.

ಅಂದಿನ ಆ ಯುವಕ ಭರಣ, ನಾಗಾಭರಣ.

ಚರ್ಚೆಗೆ ಗ್ರಾಸವಾಗಿ, ಕನ್ನಡ ಕಲಾತ್ಮಕ ಚಿತ್ರಗಳ ಇತಿಹಾಸಕ್ಕೆ ಹೊಸ ಅಧ್ಯಾಯವಾಗಿ ಸೇರ್ಪಡೆಯಾದ ಚಿತ್ರ 'ಗ್ರಹಣ'.

* * * *

ಭರಣರ ಬಗ್ಗೆ ಬರೆಯಲು ಕುಳಿತರೆ ನುಗ್ಗಿ ಬರುವ ನೆನಪುಗಳನ್ನು ಹಿಡಿದಿಟ್ಟು ದಾಖಲಿಸುವುದು ತುಸು ಕಷ್ಟದ ಕೆಲಸ. ಏಕೆಂದರೆ ಪ್ರತಿ ಚಿತ್ರ ಮಾಡುವಾಗ ಮಾಡಿದ ನಂತರ ವಿಮರ್ಶೆ ಬರೆದಾಗ ಮಾಡಿದ ಚರ್ಚೆ, ಆಡಿದ ಜಗಳ ಲೆಕ್ಕವಿಲ್ಲದಷ್ಟು.



ಫೋನ್ ಮಾಡಿದರೆ 'ಏನ್ ಗುರುವೇ?' ಎಂದು ತಮ್ಮದೇ ಶೈಲಿಯಲ್ಲಿ ಮಾತಿಗೆ ಆಹ್ವಾನಿಸುವ ಭರಣರ ಜೊತೆ ಸಾಹಿತ್ಯ, ರಂಗಭೂಮಿ, ಚಿತ್ರರಂಗ, ಕಿರುತೆರೆಗೆ ಸಂಬಂಧಿಸಿದ ಯಾವುದೇ ಚರ್ಚೆಯಲ್ಲಿ ಕಾವೇರಿದ ಮಾತುಕತೆಯ ನಂತರವೂ ಅವರದು let us agree to disagree ಎಂಬ ಪಟ್ಟು. ಬಹುಶಃ ಅವರ ಈ ನಿಲುವೇ ಅವರನ್ನು ಕನ್ನಡ ಚಿತ್ರರಂಗದಲ್ಲಿ ನೆರೆಯೂರುವಂತೆ ಮಾಡಿದೆ ಎಂದರೆ ತಪ್ಪಾಗಲಾರದು.

ಎಂಥದ್ದೇ ಅವಕಾಶವನ್ನು ತಮ್ಮ ಅಗತ್ಯ, ಅನುಕೂಲತೆ, ನಿಲುವಿಗೆ ಬಾಗಿಸಿಕೊಂಡು ಅದರಲ್ಲಿ ಹೊಸತೇನನ್ನೋ ಹುಡುಕುವ, ಅಥವಾ ಹುಡುಕಿದ್ದೇನೆಂದು ಭ್ರಮಿಸಿ ಸೆಣಸಾಡುವ; ಆಕಸ್ಮಿಕವಾಗಿ 'ಸೋತರೂ' ತಮ್ಮ ಗ್ರಹಿಕೆಯಲ್ಲೆಲ್ಲೋ ತಪ್ಪಾಗಿದೆ ಎಂದು ಭಾವಿಸುವ ಭರಣ ಸದಾ ಜೀವನ್ಮುಖಿ.

* * * *

ಭರಣ ನಿರ್ದೇಶಿಸಿದ ಚಿತ್ರಗಳ ಬಗ್ಗೆ ಯೋಚಿಸುವಾಗ ಅವರ ಒಟ್ಟಾರೆ ಕ್ರಿಯಾಶೀಲತೆಯನ್ನು ಒಂದು ಚೌಕಟ್ಟಿಗೆ ಒಳಪಡಿಸಿ ನೋಡುವುದು ಕಷ್ಟದ ಕೆಲಸ. ಹಾಗಾಗಿ ಒಬ್ಬ ಕ್ರಿಯಾಶೀಲ ನಿರ್ದೇಶಕನಾಗಿ ಭರಣರ ಬದ್ಧತೆ ಅವರೊಳಗಿನ ದ್ವಂದ್ವ ಅವರ 'ಸಮಯೋಚಿತ' ನಿಲುವುಗಳನ್ನು ನೋಡುವುದು ಮಾತ್ರ ಸಾಧ್ಯ.

ವೃತ್ತಿ ಬದುಕಿನ ಆರಂಭದಲ್ಲಿಯೇ ಬಹುಶಃ ಭರಣರಿಗೆ ಚಿತ್ರರಂಗದ 'ಸ್ಥಾಪಿತ ಹಿತಾಸಕ್ತಿಗಳ' ಕಾವು ತಟ್ಟಿರಲು ಸಾಕು. 1977-78ರಲ್ಲಿ ಭರಣ 'ಯಲ್ಲವ್ವನ ಗುಡ್ಡದಲ್ಲಿ' ಎಂಬ ಚಿತ್ರದ ಚಿತ್ರಕಥೆಯನ್ನು ಸಿದ್ಧಪಡಿಸಿದ್ದರು. ಆದರೆ ಮೂರು ವರ್ಷಗಳ ಕಾಲ ಈ ವಸ್ತುವನ್ನು ಚಿತ್ರ ಮಾಡಲು ಯಾರೂ ಮುಂದೆ ಬರಲಿಲ್ಲ. 1980ರ ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವದ ಸಂದರ್ಭದಲ್ಲಿ ಭರಣ; ಈ ಚಿತ್ರಕ್ಕಾಗಿ ತಾವು ರಾಷ್ಟ್ರೀಯ ಚಲನಚಿತ್ರ ಅಭಿವೃದ್ಧಿ ನಿಗಮ (NFDC) ನೆರವು ಕೋರಿದ್ದಾಗಿ ಹೇಳಿದ್ದರು. ಆದರೆ ನಿಗಮದಿಂದ ಭರಣರಿಗೆ ಉತ್ತೇಜಕ ಪ್ರತಿಕ್ರಿಯೆಯೇನೂ ಬಂದಂತೆ ಕಾಣುವುದಿಲ್ಲ.

ಈ ಕುರಿತು ಒಮ್ಮೆ ಮಾತನಾಡುವಾಗ ಭರಣ 'ನಮ್ಮಂಥ ಕೆಲವು ಕಲಾತ್ಮಕ ಚಿತ್ರಗಳ ನಿರ್ದೇಶಕರು; ಪ್ರೇಕ್ಷಕರು ಹಾಗೂ ನಿರ್ಮಾಪಕರ ಮಧ್ಯೆ ಸಿಕ್ಕಿಹಾಕಿಕೊಂಮಡಿದ್ದೇವೆ. ಹಾಗಾಗಿ ಕಲಾತ್ಮಕ ಹಾಗೂ ಕಮರ್ಷಿಯಲ್ ನಡುವಿನ ಹದದ ಚಿತ್ರಮಾಡುವ ಅಗತ್ಯವಿದೆ' ಎಂದಿದ್ದರು. ಇದೇ ಅವರ ಮುಂದಿನ ಗುರಿಯೂ ಆದದ್ದು.

ಹಾಗಾಗಿ ಈ ಕಾವಿನಿಂದ ಹೊರಬಂದ 'ಮೊಟ್ಟೆ'ಗಳು ಅವರ ಸಮಯೋಚಿತ ನಿಲುವುಗಳಿಗೆ ಪೂರಕವಾಗಿಯೇ ಇದ್ದಿದ್ದರಲ್ಲಿ ಆಶ್ಚರ್ಯವಿಲ್ಲ.

* * * *

ಬೆಂಗಳೂರು ಚಲನಚಿತ್ರೋತ್ಸವದ ಎರಡು ವರ್ಷಗಳ ನಂತರ ಭರಣ 'ಆಗ ನಾನು idealist, ಇಂದು realist' ಎಂದಿದ್ದು ನೆನಪಿನಿಂದ ಮಾಸಿಲ್ಲ. ಅದಕ್ಕೆ ಕಾರಣವೂ ಇದೆ. 'ಗ್ರಹಣ'ದ ಬಿಡುಗಡೆಯ ಸಂದರ್ಭದಲ್ಲಿ ಎದುರಾದ ಬಿಕ್ಕಟ್ಟು ಅವರಿಗೆ ವಾಸ್ತವದ ಪಾಠ

ಕಲಿಸಿತ್ತು. ಚಿತ್ರದ ನಿರ್ಮಾಪಕ ಕೊಡಳ್ಳಿ ಶಿವರಾಮ್ ಆಡಿದ ಮಾತುಗಳು ಅವರನ್ನು ಘಾಸಿಗೊಳಿಸಿತ್ತು. ಜೊತೆಗೆ ಚಿತ್ರ ಬಿಡುಗಡೆಗಾಗಿ ಅನುಭವಿಸಿದ ಸಂಕಷ್ಟಗಳು ಅವರನ್ನು 'ನಿಜ'ದೊಂದಿಗೆ ಮುಖಾಮುಖಿಯಾಗುವಂತೆ ಮಾಡಿತ್ತು.

ಬಹುಶಃ ಇವೆಲ್ಲವೂ ಭರಣರಿಗೆ ಕಲಾತ್ಮಕ ಅಂಶಗಳಿಗೆ ತಿಲಾಂಜಲಿ ನೀಡದೆ ವಾಣಿಜ್ಯ ಉದ್ದೇಶವನ್ನು ತಿರಸ್ಕರಿಸದೆ ಚಿತ್ರ ಮಾಡುವ ಪಾಠ ಕಲಿಸಿರಬೇಕು. ಇದರ ಪರಿಣಾಮವೇ ಅವರ 'ಸೇತು' ಚಿತ್ರದ (Bridge firlm) ಕಲ್ಪನೆ. ಪರಿಣಾಮ 'ಬಂಗಾರದ ಜಿಂಕೆ'. ಕಲಾತ್ಮಕ ಚಿತ್ರಗಳ ಪ್ರತಿಪಾದಕರನ್ನು ಒಂದು ರೀತಿ ಶಾಕ್ ಮಾಡಿದ ಚಿತ್ರ ಅದು. ಆದರೆ ಅವರ ಮಟ್ಟಿಗೆ ಅದು ಕಲಾತ್ಮಕ ಚಿತ್ರವೇ.

ಈ ಬಗ್ಗೆ ಒಮ್ಮೆ ಮಾತನಾಡುವಾಗ ಭರಣ ನಿರ್ಲಿಪ್ತರಾಗಿ 'ನಾನು ಬದಲಾದ ನನ್ನ ಪಾತ್ರವನ್ನು ಒಪ್ಪಿಕೊಂಡಿದ್ದೆ. ಕಲಾತ್ಮಕ ಚಿತ್ರಗಳ ನಿರ್ದೇಶಕರು ಕಮರ್ಷಿಯಲ್ ಆಗಿ ಯಶಸ್ವಿಯಾಗುವ ಚಿತ್ರಗಳನ್ನು ಮಾಡಲಾರರೆಂಬ ಭಾವನೆ ದಟ್ಟವಾಗಿದ್ದ ಕಾಲ ಅದು. ಈ ಭಾವನೆಯನ್ನು ಸುಳ್ಳಾಗಿಸುವ ಪ್ರಯತ್ನವನ್ನು 'ಬಂಗಾರದ ಜಿಂಕೆ' ಚಿತ್ರಗಳಲ್ಲಿ ಹಾಡಿನ ಅಗತ್ಯವನ್ನು ನನಗೆ ಮನವರಿಕೆ ಮಾಡಿಕೊಟ್ಟಿತ್ತು. ಜೊತೆಯಲ್ಲಿ one can't have art for art sake ಎಂಬುದನ್ನೂ ಕೂಡ...' ಎಂದು ಹೇಳಿ ನಕ್ಕದ್ದು ಈಗ ನೆನಪಾಗುತ್ತಿದೆ.

ಹಾಗೆಂದು ಇದನ್ನು ಭರಣರಿಗೆ ಕಲಾತ್ಮಕ ಚಿತ್ರಗಳ ಬಗ್ಗೆ ಆದ 'ಭ್ರಮನಿರಸನ' ಎಂದು ಭಾವಿಸುವಂತಿಲ್ಲ. ಏಕೆಂದರೆ ಮುಂದೆ ಕೂಡ ಭರಣ ಇಂಥ ರಿಸ್ಕ್ ತೆಗೆದುಕೊಂಡ ನಿದರ್ಶನ ನಮ್ಮ ಮುಂದಿದೆ. 'ನಾಗಮಂಡಲ', 'ವಿಮೋಚನೆ', 'ನೀಲಾ', ಹಾಗೂ 'ಸಿಂಗಾರೆವ್ವ...' ಚಿತ್ರಗಳನ್ನು ನೋಡಿದಾಗ ಭರಣ; 'ಆಸ್ಫೋಟ', 'ಮೈಸೂರು ಮಲ್ಲಿಗೆ', 'ಚಿನ್ನಾರಿ ಮುತ್ತ'ದ ಯಶಸ್ಸಿನ ನಂತರ ಹಳೆಯ ಹುಣ್ಣನ್ನು ಮತ್ತೆ ಕೆದಕುವ ಯತ್ನ ಮಾಡಿದರೇ ಎಂದೆನ್ನಿಸಿತ್ತು. ಏಕೆಂದರೆ 'ನಾಗಮಂಡಲ', 'ವಿಮೋಚನೆ', 'ನೀಲಾ' ಹಾಗೂ 'ಸಿಂಗಾರೆವ್ವ' ಚಿತ್ರಗಳಲ್ಲಿ ಹೊಸತನ್ನ ಹೇಳಲು ಮಾಡಿದ ಪ್ರಯತ್ನ ಸಫಲವಾಗಲಿಲ್ಲ. ನಿರೀಕ್ಷಿಸಿದಂತೆ ಪ್ರೇಕ್ಷಕರು ಚಿತ್ರಮಂದಿರದತ್ತ ಬರಲಿಲ್ಲ.

'ಆಸ್ಫೋಟ', 'ಮೈಸೂರು ಮಲ್ಲಿಗೆ' ಹಾಗೂ 'ಚಿನ್ನಾರಿ ಮುತ್ತ' ವಿಮರ್ಶಕರ ಮೆಚ್ಚಿಗೆ ಗಳಿಸಿ ('ಮೈಸೂರು ಮಲ್ಲಿಗೆ'ಯನ್ನು ಆಂಗ್ಲ ಪತ್ರಿಕೆಯೊಂದು 'Epic' ಎಂದು ಶ್ಲಾಘಿಸಿದ್ದು ನೆನಪಾಗುತ್ತಿದೆ) ರಾಷ್ಟ್ರಪ್ರಶಸ್ತಿ ಕೂಡ ಪಡೆದುಕೊಂಡವು. ಆದರೆ 'ನಾಗಮಂಡಲ', 'ನೀಲಾ', ಹಾಗೂ 'ವಿಮೋಚನೆ' ಚಿತ್ರಗಳಿಗೆ ಪ್ರೇಕ್ಷಕರಿಂದ ಹಾಗೂ ವಿಮರ್ಶಕರಿಂದ ನಿರೀಕ್ಷಿಸಿದ ಪ್ರತಿಕ್ರಿಯೆ ಬರಲಿಲ್ಲ ಎನ್ನುವ ನೋವು ಭರಣರಿಗೆ ಇದ್ದರೂ 'ಸಿಂಗಾರೆವ್ವ'ಗೆ ಸಿಕ್ಕಿದ ಪುರಸ್ಕಾರ ಅವರಿಗೆ ತುಸು ಸಮಾಧಾನ ತಂದುಕೊಟ್ಟಿದೆ ಎನ್ನುವುದು ಮಾತ್ರ ನಿಜ.

ಅದೇ ಕಡೆ ನೋಯುವ ಹಲ್ಲಿಗೆ ನಾಲಿಗೆ ಮತ್ತೆ ಮತ್ತೆ ಹೊರಳುವಂತೆ ಭರಣ 'ಸಿಂಗಾರೆವ್ವ' ನಿರ್ದೇಶಿಸಿದರು. ಪ್ರೇಕ್ಷಕರು ಮಾತ್ರ 'ಇಂಥ' ಚಿತ್ರಗಳಿಗೆ ನೀಡುವ ಪ್ರತಿಕ್ರಿಯೆಯನ್ನು 'ಸಿಂಗಾರೆವ್ವ'ಗೂ ನೀಡಿದರು. ಆದರೆ ಚಿತ್ರಕ್ಕೆ ರಾಷ್ಟ್ರೀಯ ಪುರಸ್ಕಾರ ದಕ್ಕಿದ್ದೇ ಅಲ್ಲದೆ, ಕಾರ್ಲೋವಿ, ಬರ್ಲಿನ್, ಢಾಕಾ ಚಿತ್ರೋತ್ಸವಗಳಲ್ಲಿಯೂ ಪ್ರದರ್ಶನ ಕಂಡಿತು.



ನಂತರದ ಶಿವರಾಮ ಕಾರಂತರ ಕಾದಂಬರಿಯನ್ನು ಆಧರಿಸಿದ, ಶಿವರಾಜ್‌ಕುಮಾರ್ ನಾಯಕರಾಗಿ ಅಭಿನಯಿಸಿದ 'ಚಿಗುರಿದ ಕನಸು' ಚಿತ್ರ ಯಶಸ್ಸು ಸಾಧಿಸದಿರುವುದನ್ನು ಕಂಡಾಗ ಒಂದು ಪ್ರಶ್ನೆಯಂತೂ ನನ್ನಂಥವರನ್ನು ಕಾಡುತ್ತಿದೆ. ಭರಣರೊಳಗೆ ಇನ್ನೂ ಒಂದು ರೀತಿಯ ಗೊಂದಲವಿದೆಯೇ? 'ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ' ಎಂಬ ತಾಕಲಾಟವಿದೆಯೇ? ಇಡಬಹುದು ಇದು ಎಲ್ಲ ಕ್ರಿಯಾಶೀಲ ಮನಸ್ಸುಗಳ ಸ್ಥಿತಿ.

* * * *

ಭರಣ ನಿರ್ದೇಶಿಸಿರು ಚಿತ್ರಗಳಲ್ಲಿ (ನನ್ನ ಲೆಕ್ಕದಲ್ಲಿ) 'ಗ್ರಹಣ' ಹಾಗೂ 'ಅನ್ವೇಷಣೆ'ಯನ್ನು ಪಕ್ಕಾ ಕಲಾತ್ಮಕ ಚಿತ್ರಗಳ ಗುಂಪಿಗೆ ಸೇರಿಸಬಹುದು. 'ಬಂಗಾರದ ಜಿಂಕೆ', 'ಬ್ಯಾಂಕರ್ ಮಾರ್ಗಯ್ಯ', 'ಸಂತ ಶಿಶುನಾಳ ಷರೀಫ', 'ಮೈಸೂರು ಮಲ್ಲಿಗೆ', 'ಚಿನ್ನಾರಿ ಮುತ್ತ', 'ವಿಮೋಚನೆ', 'ನಾಗಮಂಡಲ', 'ಸಿಂಗಾರೆವ್ವ', 'ನೀಲಾ', 'ಜನುಮದ ಜೋಡಿ', ಚಿತ್ರಗಳನ್ನು ಕಲಾತ್ಮಕ ಮತ್ತು ಕಮರ್ಷಿಯಲ್ ಹದದ ಸೇತು ಚಿತ್ರಗಳ ಗುಂಪಿಗೆ ಸೇರಿಸಬಹುದು. 'ಪ್ರಾಯ ಪ್ರಾಯ ಪ್ರಾಯ', 'ಪ್ರೇಮಯುದ್ಧ', 'ಒಂಟಿಧ್ವನಿ', 'ಮಕ್ಕಳಿರಲವ್ವ ಮನೆತುಂಬಾ', 'ಆಹುತಿ', 'ನೆನಪಿನ ದೋಣಿ', 'ಸೇಡಿನ ಸಂಚು', 'ಆಸ್ಫೋಟ', 'ಸಾಗರದೀಪ', 'ಸುರಸುಂದರಾಂಗ', 'ಪ್ರೇಮಾಗ್ನಿ', 'ಆಕಸ್ಮಿಕ', 'ಜನುಮದಾತ', 'ಚಿಗುರಿದ ಕನಸು' ಚಿತ್ರಘಲನ್ನು ಅಪ್ಪಟವಲ್ಲದಿದ್ದರೂ, ಕಮರ್ಷಿಯಲ್ ಸಾಲಿಗೆ ಹಾಗೂ 'ಚಿನ್ನಾರಿಮುತ್ತ', 'ನಾವಿದ್ದೇವೆ ಎಚ್ಚರಿಕೆ' ಹಾಗೂ 'ಸ್ಟೋನ್ ಬಾಯ್' (ಹಿಂದಿ) ಚಿತ್ರಗಳನ್ನು ಮಕ್ಕಳ ಚಿತ್ರಗಳ ಸಾಲಿಗೆ ಸೇರಿಸಬಹುದು.

'ನೇತ್ರಪಲ್ಲವಿ' ಭರಣರ ಬಿಡುಗಡೆಯಾಗದ ಚಿತ್ರವಾದರೆ, ರೀಮೇಕ್‌ನ್ನು ಕಟುವಾಗಿ ವಿರೋಧಿಸುವ ಭರಣ ನಿರ್ದೇಶಿಸಿದ ಏಕೈಕ ರೀಮೇಕ್ ಚಿತ್ರ 'ರಾವಣರಾಜ್ಯ' (ಅಂಕುಶ್). ಇದನ್ನು ಒಂದು ಆಮಿಷಕ್ಕಾಗಿ ಮಾಡಿದ್ದಾಗಿ ಭರಣ ಪ್ರಾಮಾಣಿಕವಾಗಿಯೇ ಒಪ್ಪಿಕೊಳ್ಳುತ್ತಾರೆ.

ಭರಣರ ವೃತ್ತಿ ಜೀವನದ ಮಹತ್ವದ ಮೈಲಿಗಲ್ಲಾಗಬಹುದಾಗಿದ್ದ ವ್ಯಾಸರಾಯ ಬಲ್ಲಾಳರ ಕಾದಂಬರಿ ಆಧಾರಿತ 'ಹೆಜ್ಜೆ' ತನ್ನ ಹೆಜ್ಜೆ ಮೂಡಿಸದೇ ಹೋದದ್ದೂ ವಿಷಾದದ ಸಂಗತಿ.

* * * *

ಒಟ್ಟಾರೆಯಾಗಿ ಭರಣರ ಎಲ್ಲ ಚಿತ್ರಗಳನ್ನು ಗಮನಿಸಿದಾಗ ಅವರು ಕನ್ನಡ ಸಾಹಿತ್ಯದ ಪ್ರಮುಖ ಕೃತಿಗಳನ್ನು ಸೆಲ್ಯುಲಾಯಿಡ್ ಮಾಧ್ಯಮಕ್ಕೆ ಅಳವಡಿಸಲು ಮಾಡಿದ ಪ್ರಯತ್ನ ಸ್ಪಷ್ಟವಾಗಿ ಕಾಣುತ್ತದೆ. ಪರಿಣಾಮ ಏನೇ ಇದ್ದರೂ, ಭರಣರಂತೆ ಸಾಹಿತ್ಯ ಕೃತಿಗಳನ್ನು ಬೆನ್ನುಹತ್ತಿದವರು ಚಿತ್ರರಂಗದಲ್ಲಿ ತೀರಾ ಅಪರೂಪ.

ಭರಣ ಮೆಚ್ಚಿಗೆಯಾಗುವುದು ಒಂದು ಕಾರಣಕ್ಕೆ. ಉಳಿದ ನಿರ್ದೇಶಕರು ರೀಮೇಕ್‌ಗಳಿಗೆ ಮೊರೆ ಹೋಗಿ ಕನ್ನಡದಲ್ಲಿ ಪ್ರತಿಭೆಗೆ ಕೊರತೆ ಇದೆ ಎಂಬುದನ್ನು ಋಜುವಾತುಪಡಿಸುತ್ತಿರಬೇಕಾದರೆ, ಭರಣ ರೊಚ್ಚಿ ಹಿಡಿದು ಸಾಧಿಸುವ ಮಗುವಿನಂತೆ ಕನ್ನಡ, ಕನ್ನಡತನದ ವಸ್ತುಗಳ ಬೆನ್ನು ಹತ್ತಿ, ಹೋಗುತ್ತಿರುವ ಕಾರಣಕ್ಕೆ, ರೀಮೇಕ್ ಮಾಡುವುದಿಲ್ಲವೆಂದು ಹೇಳಲು, ಮೂರ್‍ನಾಲ್ಕು ಚಿತ್ರಗಳ ಕಥೆ, ದೃಶ್ಯಗಳನ್ನು ಸೇರಿಸಿ ಭಟ್ಟಿ

ಇಳಿಸುತ್ತಿರುವ ಇಂದಿನ ಸಂದರ್ಭದಲ್ಲಿ ಭರಣ ಬಂಡೆಗಲ್ಲಿನಂತೆ ನಿಂತಿದ್ದಾರೆ. ಈ ಕಾರಣಕ್ಕೆ ಭರಣ ಇಷ್ಟವಾಗುತ್ತಾರೆ.

ಮರೆಯುವ ಮುನ್ನ :

ಭರಣ ಉತ್ತಮ ನಟ ಕೂಡ. ರಂಗಭೂಮಿಯ ಈ ಕೂಸಿನ ಅಭಿನಯ ಸಾಮರ್ಥ್ಯವನ್ನು ಕಾರ್ನಾಡರ 'ಒಂದಾನೊಂದು ಕಾಲದಲ್ಲಿ', ಅಯ್ಯರ್‌ರ 'ಶಂಕರಾಚಾರ್ಯ' ಅವರದೇ ನಿರ್ದೇಶನದ 'ವಿಮೋಚನೆ'ಯಲ್ಲಿ ಕಾಣಬಹುದು. ಆದರೆ, ಭಯಾನಕ ಆಕ್ಸಿಡೆಂಟ್‌ವೊಂದರ ಸಾಕ್ಷಿಯಾಗಿ 'ಆ್ಯಕ್ಸಿಡೆಂಟ್' ಚಿತ್ರದುದ್ದಕ್ಕೂ ಬರುವ ಭರಣರ ಅಭಿನಯ ಮರೆಯಲು ಸಾಧ್ಯವಿಲ್ಲದಂಥದ್ದು.

ಕನ್ನಡ ಚಿತ್ರರಂಗಕ್ಕೊಂದು ಆಭರಣದಂತಿರುವ ಭರಣರಿಗೆ ಈಗ 50ರ ಹರೆಯ.

ಕನ್ನಡ ಚಿತ್ರರಂಗ ಭರಣರಿಂದ ಮತ್ತಷ್ಟು ಹೊಸ ಪ್ರಯೋಗಗಳನ್ನು ನಿರೀಕ್ಷಿಸುತ್ತಿದೆ. ಹಾಗಾಗಿ ಅವರಿಗೆ 'ಶತಮಾನಂ ಭವತಿ ...' ಎಂಬ ಹಾರೈಕೆ.

❑ ❖ ❑ ❖ ❑



# ಗುರುವಂದನೆ ನಿಮಗಭಿನಂದನೆ

ಪ್ರಕಾಶ್‌ರಾಜ್ ಮೇಹು

ಕನ್ನಡ ಸಾರಸ್ವತ ಲೋಕಕ್ಕೆ 2004 ಮಹತ್ತರ ವರ್ಷ. ನಾಡಿನ ರಸಋಷಿ, ರಾಷ್ಟ್ರಕವಿ ಕುವೆಂಪು ಅವರ ಶತಮಾನೋತ್ಸವವನ್ನು ಆಚರಿಸುತ್ತಿದ್ದೇವೆ. ವರನಟ ಡಾ॥ ರಾಜ್‌ಕುಮಾರ್ ಅವರಿಗೆ 75 ತುಂಬುತ್ತಿದೆ. 50 ವರ್ಷಗಳ ಕಾಲ ಸತತವಾಗಿ ಏಕಮೇವಾದ್ವಿತೀಯ ನಾಯಕರಾಗಿ ಮೆರೆದ ಕೀರ್ತಿ ಇಡೀ ಜಗತ್ತಿನ ಚಿತ್ರರಂಗದಲ್ಲೇ ರಾಜ್‌ಕುಮಾರ್ ಅವರಿಗೆ ಮಾತ್ರ ಸಲ್ಲುತ್ತದೆ. ಈ ಸಂತಸದ ಜೊತೆಜೊತೆಯಲ್ಲೇ ನನ್ನ ಗುರುಗಳು, ಭಾರತೀಯ ಚಿತ್ರರಂಗದ ಪ್ರತಿಭಾವಂತ ನಿರ್ದೇಶಕರೂ ಆದ ಶ್ರೀ ಟಿ.ಎಸ್. ನಾಗಾಭರಣ ಅವರಿಗೆ 50 ವಸಂತಗಳ ಸಂಭ್ರಮ. ಎಲ್ಲಾ ಮಹನೀಯರುಗಳಿಗೂ ನನ್ನ ವಂದನೆ ಅಭಿನಂದನೆ.

ಮೈಸೂರಿನಲ್ಲಿ ನಾನಿನ್ನು ಹೈಸ್ಕೂಲ್ ಓದುತ್ತಿದ್ದೆ. ಆಗ ಬಂಗಾರದ ಜಿಂಕೆ, ಪ್ರಾಯ ಪ್ರಾಯ ಪ್ರಾಯ, ಆಹುತಿ, ಒಂಟಿ ಧ್ವನಿ, ಪ್ರೇಮ ಯುದ್ಧ ಮುಂತಾದ ಚಿತ್ರಗಳನ್ನು ನೋಡಿದೆನಾದರೂ ನನಗಾಗ ಅವು ವಿಷ್ಣುವರ್ಧನ್, ಅಂಬರೀಷ್, ಪ್ರಭಾಕರ್ ಚಿತ್ರಗಳು ಮಾತ್ರವೇ ಆಗಿದ್ದವು. ದಿನಕಳೆದಂತೆ ನನ್ನ ರಂಗಭೂಮಿಯ ಒಡನಾಟ ಪ್ರಾರಂಭವಾದ ಮೇಲೆ ದಸರಾ ಚಿತ್ರೋತ್ಸವದ ಚಿತ್ರಗಳನ್ನು ನೋಡತೊಡಗಿದೆ. ಹೊಸ ಸಂವೇದನೆಗಳಿಗೆ ನನ್ನನ್ನು ನಾನು ಬಲವಂತವಾಗಿ ಒಗ್ಗಿಸಿಕೊಳ್ಳಲು ಯತ್ನಿಸುತ್ತಿದ್ದ ಆ ದಿನಗಳಲ್ಲಿ ನಾನು ನೋಡಿದ ಸೋ ಕಾಲ್ಡ್ ಕಲಾತ್ಮಕ ಚಿತ್ರಗಳು ಮಹಾನ್ ಬೋರ್ ಹೊಡೆಸಿದ್ದವು. ಅದೇ ವೇಳೆಯಲ್ಲೇ ನಾನು "ಅನ್ವೇಷಣೆ" ಸಿನಿಮಾ ನೋಡಿದ್ದು. ಸಿನಿಮಾ ನೋಡಿ ಹೊರಬಂದ ನಾನು ಮತ್ತೆ ವಾಲ್‌ಪೋಸ್ಟರ್ ಬಳಿ ಓಡಿಹೋಗಿ ಕುತೂಹಲದಿಂದ ನೋಡಿದ ಹೆಸರೇ ಟಿ.ಎಸ್. ನಾಗಾಭರಣ! ಅದಾದ ಮೇಲೆ ಭರಣರ ಎಲ್ಲಾ ಚಿತ್ರಗಳನ್ನು ನೋಡಿದ್ದೇನೆ. ಮೈಸೂರ ಮಲ್ಲಿಗೆ, ಚಿನ್ನಾರಿ ಮುತ್ತ, ಆಸ್ಫೋಟ, ಶರೀಫ, ಆಕಸ್ಮಿಕ ಇತ್ಯಾದಿ.

ನಾನು ಕನ್ನಡ ಎಂ.ಎ. ಮಾಡಿಕೊಂಡು, ನೀನಾಸಂನಲ್ಲಿ ನಾಟಕ ಡಿಪ್ಲೊಮಾ ಮುಗಿಸಿ, ಸಿನಿಮಾ ನಿರ್ದೇಶಕನಾಗಬೇಕೆಂದು ಬೆಂಗಳೂರಿಗೆ ಬಂದು ಯಾರ ಯಾರ ಮೂಲಕವೋ ಕೆಲವು ನಿರ್ದೇಶಕರನ್ನು ಭೇಟಿಯಾಗಿ ನನ್ನ ಬಯೋಡೇಟಾವನ್ನು ಪರಿಸಿದೆನಾದರೂ ಯಾರೂ ನನಗೆ ಸಹಾಯಕ ನಿರ್ದೇಶಕನ ಕೆಲಸ ಕೊಡಲಿಲ್ಲ. ಅದರಲ್ಲಿ ಕೆಲವರು ಬಹಳ ಆತ್ಮೀಯವಾಗಿ ಮೈದಡವಿ ಮಾತನಾಡಿಸಿದರು! ಆದರೆ ಆ ನಂತರ ತಿಳಿಯಿತು. ಅವರು ನನ್ನ ಬೆನ್ನಿನ ಮೇಲೆ ಇರಬೇಕಾಗಿದ್ದ ಆ ಜನಿವಾರವೆಂಬ ದಾರಕ್ಕಾಗಿ ಹುಡುಕಾಡಿದ್ದರೂ ಎಂದು.

ನನ್ನ ಹಿನ್ನೆಲೆಗೆ ಈ ಚಿತ್ರರಂಗದಲ್ಲಿ ಏನೂ ಮಹತ್ವವಿಲ್ಲ ಎನಿಸಿತು, ಬೇಸರವಾಗಿತ್ತು, ಖಿನ್ನನಾಗಿದ್ದೆ. ಸೌಮ್ಯ ಹೇಳಿದಳು "ಭರಣರನ್ನು ಒಂದ್ಸಾರಿ ಮೀಟ್ ಮಾಡು" ಅಂತ. ಕೆ.ಆರ್.

ರೋಡಿನಲ್ಲಿದ್ದ ಪ್ರೈಂ ಇಮೇಜಸ್ ಎಡಿಟಿಂಗ್ ರೂಂನಲ್ಲಿ ಯಾವುದೋ ಡಾಕ್ಯುಮೆಂಟರಿಯ ಎಡಿಟಿಂಗ್ ಮಾಡುತ್ತಿದ್ದರು. ನನ್ನ ನಮಸ್ಕಾರಕ್ಕೆ ರಿವಾಲ್ವಿಂಗ್ ಚೇರ್‌ನಲ್ಲಿ ನನ್ನತ್ತ ತಿರುಗಿದ ಭರಣರು ನಗುಮುಖದಿಂದ "ಇಷ್ಟ್ ವರ್ಷ ಎಲ್ಲಿ ಹೊರ್ಟೋಗಿದ್ದಿರ್ರಿ" ಎಂದು ಬಹಳ ಪರಿಚಿತರಂತೆ ಮಾತನಾಡಿಸಿದರು. ನನಗೆ ಒಮ್ಮೆಲೆ ಎರಡೆರಡು ಆಶ್ಚರ್ಯ! ಇವರು ನನ್ನನ್ನು ಬೇರೆ ಯಾರೋ ಅವರಿಗೆ ಗೊತ್ತಿದ್ದವರೆಂದು ತಿಳಿದುಕೊಂಡಿದ್ದಾರೆ ಎನ್ನುವುದು ಒಂದು (ಆ ನಂತರ ತಿಳಿಯಿತು ಅವರು ಎಲ್ಲರನ್ನು ಮಾತನಾಡಿಸುವುದೇ ಹಾಗೆ ಎಂದು) ಇನ್ನೊಂದು ನಾನು ಅವರಿಗೆ ಕನಿಷ್ಠ ಅರವತ್ತು ವರ್ಷವಾದರೂ ತುಂಬಿರಬಹುದೆಂದು ಅವರ ಶಿಶುನಾಳ ಷರೀಫ ಚಿತ್ರ ನೋಡಿದಾಗ ಅಂದುಕೊಂಡಿದ್ದೆ... ಈ ವಯಸ್ಸಿಗೇ ಆ ಚಿತ್ರ ಮಾಡಿದ್ದಾರ ಎನ್ನುವ ಅಚ್ಚರಿ! ರಂಗಭೂಮಿ ನೀನಾಸಂ ಎನ್ನುವ ಸರ್ಟಿಫಿಕೇಟ್ ಒಂದೇ ಅವರ "ನಾವಿದ್ದೀವಿ ಎಚ್ಚರಿಕೆ" ಚಿತ್ರಕ್ಕೆ ಸಹಾಯಕ ನಿರ್ದೇಶಕನಾಗಿ ಆಯ್ಕೆ ಮಾಡಿತ್ತು. ಅದಾದ ಮೇಲೆ ಗೀತ ಮಾಧುರಿ, ಮುಸ್ಸಂಜೆ, ಧಾರವಾಹಿಗಳು, ಹಲವಾರು ಡಾಕ್ಯುಮೆಂಟರಿಗಳು, ಜನುಮದ ಜೋಡಿ, ನಾಗಮಂಡಲ ಚಿತ್ರಗಳಿಗೆ ಸಹ ನಿರ್ದೇಶಕನಾಗಿ ಅವರೊಡನೆ ಕೆಲಸ ಮಾಡುವ ಅದೃಷ್ಟ ನನ್ನದಾಯಿತು. ಭರಣರ ಜೊತೆ ಕೆಲಸ ಮಾಡುವುದೇ ಒಂದು ಅನುಭವ. ಅವರು ಚಿತ್ರದ ಒಳಗೆ ಕೆಲಸ ಮಾಡುವಷ್ಟೇ ಅಚ್ಚುಕಟ್ಟಾಗಿ ಚಿತ್ರದ ಹೊರಗೂ ತೊಡಗಿಸಿಕೊಳ್ಳುತ್ತಾರೆ. ಎಲ್ಲೂ ಸಂಯಮ ಕಳೆದುಕೊಳ್ಳದೆ ಬಹಳ ಕೂಲಾಗಿ ಕೆಲಸ ಮಾಡುವುದರಿಂದಲೇ ಇಡೀ ವಾತಾವರಣ ಹರ್ಷದಾಯಕವಾಗಿರುತ್ತದೆ. ಇಡೀ ತಂಡ ಒಂದು ಕುಟುಂಬದಂತೆ ಭಾಸವಾಗುತ್ತದೆ. ಭರಣರಲ್ಲಿ ಮುಖ್ಯವಾದ ಮತ್ತು ನನಗೆ ಬಹಳ ಇಷ್ಟವಾದ ಗುಣ ಎಂದರೆ ನಂಬಿಕೆ, ಅವರು ಯಾರನ್ನೂ ಅನುಮಾನದಿಂದ ನೋಡುವುದಿಲ್ಲ. "ನೀವು ಇದು ಮಾಡಿ, ನೀವು ಅದು ಮಾಡಿ" ಎಂದು ಧೈರ್ಯವಾಗಿ ಬಹಳ ಮಹತ್ತರವಾದ ಜವಾಬ್ದಾರಿಗಳನ್ನು ವಹಿಸಿಕೊಟ್ಟುಬಿಡುತ್ತಾರೆ. ವಿಶೇಷವೆಂದರೆ ಎಲ್ಲವೂ ಚೆನ್ನಾಗಿಯೇ ಆಗಿಬಿಡುತ್ತವೆ. ನಾನಿಲ್ಲಿ ಗುರುತಿಸಿದ್ದು ಅವರ ಜಡ್ಜ್‌ಮೆಂಟ್ ಎಷ್ಟು ನಿಖರವಾಗಿರುತ್ತದೆ ಎಂಬುದನ್ನು. ಮುಂದೆ ಗುರಿ ಇರಬೇಕು ಹಿಂದೆ ಭರಣರಂತಹ ಗುರು ಇರಬೇಕು. ಅಂತಹ ಗುರು ಸಿಕ್ಕಿದ್ದು ನನ್ನ ಪುಣ್ಯ.

ನನಗೆ ಮಾಡಲು ಸಾಧ್ಯವೇ ಎಂದು ನನಗೇ ಗೊತ್ತಿಲ್ಲದ ಕೆಲಸಗಳನ್ನು ಅವರು ಮಾಡಿಸಿ ನನ್ನಲ್ಲಿ ಆತ್ಮವಿಶ್ವಾಸ ಹೆಚ್ಚಿಸಿರುವುದಕ್ಕೆ ಒಂದು ಚಿಕ್ಕ ಉದಾಹರಣೆ ಎಂದರೆ, "ಜನುಮದ ಜೋಡಿ" ಚಿತ್ರಕ್ಕೆ ನನ್ನಿಂದ ಒಂದಷ್ಟು ಸಂಭಾಷಣೆ ಬರೆಸಿದ್ದು, ಕಾರಣಾಂತರಗಳಿಂದ ಕೊನೆಯ ಘಳಿಗೆಯಲ್ಲಿ ಒಂದಷ್ಟು ದೃಶ್ಯಗಳನ್ನು ರೀರೈಟ್ ಮಾಡಬೇಕಾಗಿತ್ತು. "ಕರಡೀಪುರ" ಚಿತ್ರದ ಚಿತ್ರೀಕರಣದಲ್ಲಿ ತೊಡಗಿಕೊಂಡಿದ್ದ ಬರಗೂರರಿಗೆ ಸಮಯವಿರಲಿಲ್ಲ ಆಗ "ನೀವೇ ಬರೆಯಿರಿ" ಎಂದುಬಿಟ್ಟರು ಭರಣ. ಭಯದಲ್ಲೇ ಬರೆದು ಭರಣರಿಗೆ ಮತ್ತು ವರದಣ್ಣ ಅವರಿಗೆ ತೋರಿಸಿದಾಗ ಇಬ್ಬರೂ ಖುಷಿಯಿಂದ ಬೆನ್ನು ತಟ್ಟಿದರು. ಅಂದೇ ನನ್ನೊಳಗೊಬ್ಬ ಬರಹಗಾರ ಹುಟ್ಟಿಕೊಂಡಿದ್ದ. ಅದೇ ವಿಶ್ವಾಸದಲ್ಲಿಯೇ "ತಿಮ್ಮಜ್ಜಿಯ ಮ್ಯಾಗ್ಲುಂಡಿ" ಕಾದಂಬರಿ ಬರೆದೆ. ಅದಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ, ಸಾಹಿತ್ಯ ಪರಿಷತ್ ಪ್ರಶಸ್ತಿಗಳು ಲಭಿಸಿದವು. ಅದಕ್ಕೂ ಪರೋಕ್ಷವಾಗಿ ಭರಣರೇ ಕಾರಣ ಎಂದು ಹೇಳಿಕೊಳ್ಳಲು ನನಗೆ ಸಂತೋಷವಾಗುತ್ತದೆ. ನನ್ನಂತೆಯೇ ನೂರಾರು ಯುವಕರಿಗೆ ಭರಣ ದಾರಿದೀಪವಾಗಿದ್ದಾರೆ. ಅವರಿಗೆ ಈಗ



50.ಶತಮಾನೋತ್ಸವವನ್ನೂ ಹೀಗೆಯೇ ಸಂಭ್ರಮದಿಂದ ಆಚರಿಸುವಂತಾಗಲಿ, ಇನ್ನೂ ಹಲವಾರು ಒಳ್ಳೆಯ ಚಿತ್ರಗಳು ಅವರಿಂದ ಮೂಡಿ ಬರಲಿ, ಈ ಮಹಾಗುರುವಿನ ಆಶ್ರಯದಲ್ಲಿ ಇನ್ನೂ ನೂರಾರು ಶಿಷ್ಯರು ಉದಯಿಸಿ ಕನ್ನಡ ಸಾರಸ್ವತ ಲೋಕವನ್ನು ಇನ್ನೂ ಶ್ರೀಮಂತಗೊಳಿಸಲಿ ಎಂದು ಆಶಿಸುತ್ತ ಮತ್ತೊಮ್ಮೆ ವಂದಿಸುತ್ತೇನೆ.

❑ ❖ ❑ ❖ ❑

# ನಂ ಡೈರೆಕ್ಟ್ರು

ಎಂ.ಕೆ.ಮಠ. ಉಪ್ಪಿನಂಗಡಿ

ನನ್ನ ಗುರುಗಳಿಗೆ 50 ತುಂಬಿತೆ? ನಂಬಕ್ಕಾಗ್ತಿಲ್ಲ. ವರುಷಗಳ ಹಿಂದೆ ಕರಾವಳಿಯ ಸೆರಗಿನಿಂದ ಬೆಂದಕಾಳೂರಿಗೆ ಕಾಲಿಟ್ಟ ಪ್ರಥಮ ದಿನ ನನ್ನ ಕಣ್ಣಿಗೆ ಹೇಗೆ ಕಂಡಿದ್ದರೋ ಈಗಲೂ ತನ್ನ ದೇಹಾಕಾರದಲ್ಲಿ ಕಿಂಚಿತ್ತೂ ಬದಲಾವಣೆಗಳಿಲ್ಲದೆ ಹಾಗೇ ಇದ್ದಾರೆ.... ಮುಂದಿನ ವರ್ಷಗಳಲ್ಲಿ ಕೂಡ ಹಾಗೆಯೇ ಇರುತ್ತಾರೆ.

ವರ್ಷಗಳ ಹಿಂದಿನ ಮಾತು.... ಕಾಸರಗೋಡಿನ ನನ್ನ ರಂಗಭೂಮಿ ಗುರುಗಳಾದ 'ಚಿನ್ನಾ' ರವರ ಗರಡಿಯಲ್ಲಿ ಪಳಗುತ್ತಿದ್ದಾಗ ಅವರ 'ಲಾರಿ ನಾಟಕ' ಎಂಬ ಕಲ್ಪನೆಯ 'ನಾಯಿಬಾಲ' ನಾಟಕದಲ್ಲಿ ಅಭಿನಯಿಸುತ್ತಿದ್ದ ಸಂದರ್ಭ.... ಉಪ್ಪಿನಂಗಡಿಯ ನನ್ನನ್ನು ತನ್ನ ಬಳಿಗೆ ಸೆಳೆದುಕೊಂಡು ತನ್ನ ಒಡಹುಟ್ಟಿದವನಂತೆ ಬೆಳೆಸಿದ "ಚಿನ್ನಾ"ರವರು ನಾಗಾಭರಣರವರಿಗೆ ಪರಿಚಯಿಸದೇ ಇದ್ದಿದ್ದರೆ ನಾನಿಂದು ನನ್ನೂರಿನ ಪರಿಸರದ ಪುಟ್ಟ ಭೂಗತ ಲೋಕದ ಮರಿ ದೊರೆಯಾಗುತ್ತಿದ್ದೇನೊ? ಆ ವಿಷಯ ಹಾಗಿರಲಿ....

ಅಂದು 'ಲಾರಿನಾಟಕ'ದ 75ನೇ ಪ್ರದರ್ಶನ - ಮೈಸೂರು ಅರಮನೆಯ ಮುಂಭಾಗದಲ್ಲಿ ನಾಗಾಭರಣ ಮುಖ್ಯ ಅತಿಥಿ. ನಾಗಾಭರಣ ನಮ್ಮನಾಟಕಕ್ಕೆ ಮುಖ್ಯ ಅತಿಥಿಯಾಗಿ ಬರುತ್ತಿದ್ದಾರೆ ಅನ್ನೋದೆ ನಮ್ಮ ತಂಡದಲ್ಲಿ ಎಲ್ಲರಿಗೂ ವಿಚಿತ್ರ ಪುಳಕ ಉಂಟುಮಾಡಿತ್ತು. ಚಿತ್ರರಂಗದ ಸಂಪರ್ಕ, ಕನಸುಗಳಿಲ್ಲದ ನನ್ನಲ್ಲಿ ಒಬ್ಬ ಸಿನಿಮಾ ನಿರ್ದೇಶಕನಿಗೆ ಇಷ್ಟೊಂದು ಪ್ರಾಮುಖ್ಯತೆ ಯಾಕೆಂಬ ಕೌತುಕವುಂಟಾಗಿತ್ತು. ಪ್ರದರ್ಶನ ಮುಗಿದು ಬಟ್ಟೆ ಬದಲಾಯಿಸುತ್ತಿದ್ದಾಗ ಗೆಳೆಯ ಕೈ ಹಿಡಿದು ಎಳೆತಂದು ನಾಗಾಭರಣರ ಮುಂದೆ ನಿಲ್ಲಿಸಿ "ಸಾರ್ 'ಚೂರಿ ಚಿಕ್ಕಣ್ಣ' ಪಾತ್ರ ಮಾಡಿದವ ಇವನೆ" ಎಂದಿದ್ದ. ಯಾಕೋ ಆಯಾಚಿತವಾಗಿ ಅವರ ಪಾದಕ್ಕೆರಗಿದ್ದೆ. ಎತ್ತಿ ಹಿಡಿದ ನಾಗಾಭರಣರವರು "ಚೆನ್ನಾಗಿ ಮಾಡ್ತಿದೀರ, ಮುಂದುವರೆಸಿ. ನಿಮಗೆ ಒಳ್ಳೇ ಭವಿಷ್ಯ ಇದೆ" ಅಂದಿದ್ರು. ಅಚಾನಕ್ಕಾಗಿ ಕಾಲಿಗೆ ಎರಗಿದ ಮುಲಾಜಿಗೆ ಹೇಳಿದ ಮಾತಿರಬಹುದೆಂದು ನಕ್ಕಿದ್ದೆ. ಆದ್ರೆ ಅವರು ಹೇಳಿದ ಮಾತಿನಂತೆ ಅವರೇ ನನ್ನನ್ನು ಈ ಮಟ್ಟಕ್ಕೆ ಬೆಳೆಸಿಯಾರೆಂದು ಕನಸಲ್ಲೂ ಭಾವಿಸಿರಲಿಲ್ಲ.

ಅಂದಿನದನ್ನು ಅಂದಿಗೇ ಮರೆತಿದ್ದೆ. ಆದರೆ ನಾಗಾಭರಣರವರು ನನ್ನನ್ನು ಮರೆತಿರಲಿಲ್ಲ. 'ಜನುಮದಾತ' ಚಿತ್ರೀಕರಣಕ್ಕೆ ಉಡುಪಿಗೆ ಬಂದಿದ್ದ ಭರಣರವರು ನನ್ನನ್ನು ಕರೆದು ಪುಟ್ಟ ಪಾತ್ರಕೊಟ್ಟಾಗ ನನಗೆ ಸ್ವರ್ಗಕ್ಕೆ ಮೂರೇ ಗೇಣು. ಚಿತ್ರೀಕರಣಕ್ಕೆ ಬಳಸುವ ಬೆಳಕಿನ ದೀಪಗಳ ಶೈಲಿಯಲ್ಲೇ ಮಿಂಚಿ ಮರೆಯಾಗುವ ಪುಟ್ಟ ಪಾತ್ರವಾದರೂ ಅದು ನನ್ನ ಮತ್ತು ನಾಗಾಭರಣರವರ ಸಂಬಂಧ ಬೆಳೆಯಲು ಮೂಲ ಕಾರಣವಾಯ್ತು. ಅವರು ಚಿತ್ರೀಕರಣ



ಮುಗಿಸಿ ಬೆಂಗಳೂರಿಗೆ, ನಾನು ಹೊಟ್ಟೆಪಾಡಿಗಾಗಿ ಕಾಸರಗೋಡಿಗೆ. ಮುಂದೊಂದು ದಿನ 'ಓ ನನ್ನ ಬೆಳಕೆ' ಧಾರಾವಾಹಿ ಚಿತ್ರೀಕರಣಕ್ಕಾಗಿ ಕುಂದಾಪುರದ ಹಟ್ಟಿಯಂಗಡಿಯಲ್ಲಿ ಬೀಡು ಬಿಟ್ಟಿದ್ದ ನಾಗಾಭರಣರಿಂದ ಕರೆಬಂದಾಗ ಧಾವಿಸಿ ಪಾತ್ರ ನಿರ್ವಹಿಸಿ ಬಂದಿದ್ದೆ. ಅವರೊಂದಿಗೆ, ಅವರ ತಂಡದೊಂದಿಗೆ ಕಳೆದ ದಿನಗಳಿಂದಾಗಿ ಸಿನಿಮಾ ಎಂಬ ಮಾಯಾಂಗನೆ ದೂರ ನಿಂತು ನೋಡುವ ಎಲ್ಲರಲ್ಲೂ ಹುಟ್ಟಿಸುವ ವ್ಯಾಮೋಹವನ್ನೇ ನನ್ನಲ್ಲೂ ಹುಟ್ಟಿಸಿತ್ತು. ಕಾಸರಗೋಡಿನಲ್ಲಿ ಪುಟ್ಟದಾಗಿದ್ದ ನನ್ನ ಕೊಠಡಿಯ ನಾಲ್ಕು ಗೋಡೆಗಳೂ ಸಿನಿಮಾ ಸ್ಕ್ರೀನಿನಂತೆ ಕಂಡು ಹಿಂಸಿಸುತ್ತಿತ್ತು. ನನ್ನೊಳಗಿನ ತುಡಿತದ ಮೇಲ್ಪದರವನ್ನು ಮಾತ್ರ ಬಿಚ್ಚಿಟ್ಟು ನಾಗಾಭರಣರಿಗೆ ಪತ್ರ ಬರೆದಿದ್ದೆ. ನಾನ್ಯಾರೋ ಅವರ್ಯಾರೊ..... ಆದರೆ ಪತ್ರ ಬರೆದ ಕೆಲವು ದಿನಗಳಲ್ಲೇ ಅವರಿಂದ ಕರೆ! ಬೆಂಗಳೂರಿಗೆ ಬಂದು ಅವರ ತಂಡ ಸೇರಲು ದಿನಾಂಕ ನಿಶ್ಚಯ.... ವಾಹ್.... ಇದೆಲ್ಲ ಎಷ್ಟು ಬೇಗ ನಡೆದಿತ್ತೆಂದರೆ ಧಾರಾವಾಹಿಯ ದೃಶ್ಯದ ಚಿತ್ರೀಕರಣದಂತೆ.

ಬೆಂಗಳೂರಿಗೆ ಕಾಲಿಟ್ಟ ಮುಂಜಾವು ನನ್ನಲ್ಲಿದ್ದುದು ಒಂದು ಹಿಡಿ ಆತ್ಮವಿಶ್ವಾಸ, ಒಂದು ಬೊಗಸೆ ಧೈರ್ಯ, ದಿಗಂತದ ಗುರಿ ಮಾತ್ರ. ಆದ್ರೆ ಆ ಗುರಿಗೆ ನಿಶ್ಚಿತ ವೇಗ ಇರಲಿಲ್ಲ.

ಕಿರುತೆರೆ ಮಾಧ್ಯಮದಲ್ಲಿ ಚರಿತ್ರೆ ನಿರ್ಮಿಸಿದ 'ಸಂಕ್ರಾಂತಿ' ಧಾರಾವಾಹಿಯ ಪ್ರಾರಂಭದ ದಿನಗಳವು. ನಾನು ಆ ತಂಡಕ್ಕೆ ಬಂದುದು 'ಕ್ಲಾಪ್ ಬಾಯ್' ಆಗಿ. ಕ್ಲಾಪ್ ಅಂದರೇನೆಂದೇ ಗೊತ್ತಿಲ್ಲದ ನನಗೆ ಕ್ಲಾಪ್ ಹಿಡಿಯಲು ಹೇಳಿಕೊಡುವುದಕ್ಕೆ ಬೇಕಾದಷ್ಟು ಜನರಿದ್ದರು. ಮುಂದಿನ ಹೆಜ್ಜೆಯ ಗಂಭೀರತೆಯ ಆಳವನ್ನು ತಿಳಿಸಲು ಯಾರೂ ಇರಲಿಲ್ಲ. ಏನೋ ಹುಚ್ಚುಗಾರಿಕೆಯಲ್ಲಿ ಬಂದಾಗಿತ್ತು. ನನ್ನ ನಿಯತ್ತು ನನ್ನನ್ನು ಕಾಪಾಡ್ಬೇಕಿತ್ತು.

ತಿಕ್ಕಲು, ಮುಂಗೋಪ ಸ್ವಪ್ರತಿಷ್ಠೆ, ಆತ್ಮರತಿ, ಹಪಾಹಪಿತನದ ಆಗರವಾಗಿದ್ದ ನನ್ನೊಳಗಿನ ಒಂದೊಂದೇ ಮಹಲುಗಳು ನಾಗಾಭರಣರವರ ಒಡನಾಟದಲ್ಲಿ ಕುಸಿಯುತ್ತಾ ಬಂದು ನಾನೊಬ್ಬ ಪರಿಪೂರ್ಣ ವ್ಯಕ್ತಿಯಾಗುವ ಹಾದಿಯಲ್ಲಿ ಹೆಜ್ಜೆ ಇಡತೊಡಗಿದ್ದೆ. ಆ ಹೆಜ್ಜೆಯ ಪ್ರತಿಯೊಂದು ಜೀಕುವಿಕೆಯ ಶಬ್ದಗಳು ನಾಗಾಭರಣರವರಿಗೆ ಕೇಳಿಸುವಂತಿತ್ತು - ಕೇಳಿಸುವಂಥ ವ್ಯವಸ್ಥೆ ಅವರೇ ಮಾಡಿಕೊಂಡಿದ್ರು. ಯಾಕೇಂದ್ರೆ ನನ್ನನ್ನು ಪರಿಪೂರ್ಣ ವ್ಯಕ್ತಿಯಾಗಿಸುವ ನಿರ್ಧಾರಕ್ಕೆ ಅವರು ಬಂದಾಗಿತ್ತು. ಒಂದು ತಿಂಗಳ ಪರೀಕ್ಷೆಗಾಗಿ ನನ್ನನ್ನು ಕರೆ ತಂದಿದ್ದ ಭರಣರವರು ಇಷ್ಟು ದಿನಗಳಾದ್ರೂ "ನಿನ್ನ ಸೇವೆ ಸಾಕು" ಎಂದು ಹೇಳಿಲ್ಲ, ನಾನಾಗಿ ನಾನೇ ಅವರಲ್ಲಿ "ನಾನು ಹೋಗುತ್ತೇನೆ" ಎಂದು ಹೇಳುವ ಪ್ರಸಂಗ ನಿರ್ಮಾಣವಾಗಲಿಲ್ಲ. ಒಂದೊಂದೇ ಜವಾಬ್ದಾರಿಗಳನ್ನು ನನ್ನ ಪೂರ್ವಾಶ್ರಮದ ಒರಟುತನದಿಂದಲೇ ನಿಭಾಯಿಸುತ್ತಾ ಬಂದರೂ ನಾಗಾಭರಣರು ಅದನ್ನು ಮುಗುಳ್ನಗೆಯೊಂದಿಗೇ ಸ್ವೀಕರಿಸುತ್ತಾ ಬರುತ್ತಿದ್ದರು. ತಪ್ಪಿದಾಗ ತಿದ್ದುವ ರೀತಿ ನನ್ನೊಳಗಿನ ಒರಟು ಕಲ್ಲನ್ನು ಕಲಾವಿದನೊಬ್ಬ ತನ್ನ ಸುತ್ತಿಗೆ, ಚಾಣದಿಂದ ಕೆತ್ತಿ ಶಿಲ್ಪವಾಗಿಸುವಂತಿರುತ್ತಿತ್ತು. ಮಾತೆತ್ತಿದರೆ ಮಚ್ಚು, ಸೈಕಲ್ ಚೈನ್..... ಎಂದೆಲ್ಲ ಮಾತಾಡುತ್ತಿದ್ದ ನನ್ನೊಳಗೆ ನಾಗಾಭರಣ ವಿಚಿತ್ರ ಭಾವನೆಗಳ ತರಂಗಗಳನ್ನೆಬ್ಬಿಸಿದ್ದರು. ಅವರ ಪ್ರೀತಿಯೆಂಬ ಮಹಾ ಕಲ್ಲನ್ನು ಎಡವಿದ್ದೆ ಮತ್ತು ಆ ಎಡವಿಕೆಯಿಂದಲೇ ನಾನಿಲ್ಲಿ ಉಳಿದಿದ್ದೆ.

ಎಂಥಾ ವಿಷಮ, ಸಂದಿಗ್ಧ ಪರಿಸ್ಥಿತಿಯಲ್ಲೂ "ಏನ್ ನಡೀತಿದೇರಿ ನಿಮ್ ದೇಶದಲ್ಲಿ" ಎಂದು ಕೇಳುತ್ತಾ ಮಾತಾಡುತ್ತಿದ್ದ ರೀತಿ, ತನಗಿಂತ ಕಿರಿಯ ವಯಸಿನವರಾದರೂ ಬಹು ವಚನದಿಂದಲೇ ಕರೆದು ಮಾತಾಡಿಸುತ್ತಿದ್ದ ಶೈಲಿ, ತನ್ನೊಳಗಿನ ನೋವುಗಳು ಇತರರಿಗೆ ಗೊತ್ತಾಗದಂತೆ ವ್ಯವಹರಿಸುತ್ತಾ ತನ್ನ ನೋವಿಗೆ ಸಾಂತ್ವನ ಪಡೆದುಕೊಳ್ಳುವ ರೀತಿ ನನ್ನನ್ನು ಅಪಾರವಾಗಿ ಅವರತ್ತ ಆಕರ್ಷಿಸಿತ್ತು.

ಎಂದೋ ನಾನು ಕೇಳಬೇಕೆಂದು, ಕಾಣಬೇಕೆಂದು ಬಯಸುತ್ತಿದ್ದ ಮಾತುಗಳು, ವರ್ತನೆಗಳು ನಾಗಾಭರಣರವರಲ್ಲಿ ಕಾಣೋದಿಕ್ಕೆ ಪ್ರಾರಂಭಿಸಿದ ಮೇಲಂತೂ ನನ್ನೊಳಗಿನ ಒರಟುತನಕ್ಕೆ ತಿಲಾಂಜಲಿಯಿತ್ತು ನಯ ವಿನಯಗಳನ್ನು ಕಷ್ಟ ಪಟ್ಟು ರೂಢಿಸಿಕೊಳ್ಳಲು ಪ್ರಯತ್ನಿಸಿದ್ದೆ. ಅವರನ್ನು ಅರ್ಥಮಾಡಿಕೊಳ್ಳುತ್ತಾ ಹೋದಂತೆಲ್ಲ ನನಗವರು ತೆರೆದಿಟ್ಟ ಪುಸ್ತಕದಂತೆ ಕಂಡರಾದರೂ ಇನ್ನೂ ಆಳಕ್ಕಿಳಿದಂತೆಲ್ಲಾ ನಿಗೂಢವಾಗುತ್ತಾ ಹೋಗತೊಡಗಿದರು. ನನ್ನ ಒರಟು ಮಾತು, ಒರಟು ಬರಹ, ಒರಟು ವರ್ತನೆಗಳೆಲ್ಲ ಅವರಿಗೆ ಹಲವು ಬಾರಿ ಮುಜುಗರ ಉಂಟುಮಾಡಿರಬಹುದಾದರೂ ಎಂದೂ ನನ್ನಲ್ಲಿ 'ನಿನ್ನ ಒರಟುತನದಿಂದ ನನಗೆ ಮುಜುಗರವಾಗುತ್ತಿದೆ' ಎಂಬುದನ್ನು ನೇರವಾಗಿ ತಿಳಿಸಿದ್ದಿಲ್ಲ - ಹಾಗಂತ ನನಗದನ್ನು ಬೇರೆ ರೀತಿಯಲ್ಲಿ ತಿಳಿಯುವಂತೆ ಮಾಡಿಲ್ಲವೆಂದಲ್ಲ.... ಏನೇನೂ ಸಂಬಂಧವಿಲ್ಲದ, ಸಂಪರ್ಕವಿಲ್ಲದ ನನ್ನಲ್ಲಿರಬಹುದಾದ, ನನ್ನರಿವಿಗೆ ಬರದೇ ಇದ್ದ ಪ್ರತಿಭೆಯನ್ನು ಬಳಸಿಕೊಳ್ಳಲು ಹಠತೊಟ್ಟವರಂತೆ ಈ ನಾಲ್ಕು ವರ್ಷ ನನ್ನನ್ನು ಸಹಿಸಿಕೊಂಡಿದ್ದೇ ನನಗೆ ಆಶ್ಚರ್ಯವಾಗುತ್ತಿದೆ.

ನಾನಿಲ್ಲಿಗೆ ಬಂದ ಇಷ್ಟು ವರ್ಷಗಳಲ್ಲಿ ನಾಗಾಭರಣರವರಲ್ಲಿ ಕೆಲಸ ಕೇಳಿಬಂದು ಕೇವಲ ಕೆಲವು ದಿನ ಕೆಲಸ ಮಾಡಿದವರು ತುಂಬಾ ಜನ. ಬರುವಾಗ ಅವರನ್ನು ಇಂದ್ರ, ಚಂದ್ರ, ಅದ್ಭುತ ಎಂದೆಲ್ಲ ಹೊಗಳಿದವರು ತೆರಳುವಾಗ 'ತಿಕ್ಕಲು ಮನುಷ್ಯ' ನೆಂದು ತೆಗಳಿ ಹೋದವರಿದ್ದಾರೆ.... ಇದಕ್ಕೆ ಕಾರಣ ಕೆಲಸ ಕೇಳಿ ಬಂದವರಲ್ಲಿದ್ದ ದಿಢೀರ್ ಕಲಿಯುವಿಕೆಯ ಭ್ರಮೆ, ದಿಢೀರ್ ಹಣಗಳಿಸುವ ಆಶೆ ಮತ್ತು ದಿಢೀರ್ ಹೆಸರು ಗಳಿಸುವ ಅಭಿಲಾಶೆ ಮಾತ್ರ. ನಾಗಾಭರಣರವರನ್ನು ಅರ್ಥಮಾಡಿಕೊಳ್ಳುವುದು ತುಂಬಾ ಕಷ್ಟ. ಒಮ್ಮೆ ಅರ್ಥ ಮಾಡ್ಕೊಂಡು ಅವರ ಯೋಚನಾ ತರಂಗಗಳಿಗೆ ನಮ್ಮನ್ನು ನಾವು ಹೊಂದಿಸಿಕೊಂಡರೆ ಅವರಿಂದ ಕಲಿಯುವುದು ಬ್ರಹ್ಮಾಂಡದಷ್ಟಿರುತ್ತೆ.

ನಾಗಾಭರಣ ಸುಮ್ ಸುಮ್ನೆ ರೇಗೋದಿಲ್ಲ, ಸುಮ್ ಸುಮ್ನೆ ನಗೋದಿಲ್ಲ, ಸುಮ್ ಸುಮ್ನೆ ಪ್ರೀತ್ಸೋದಿಲ್ಲ, ಸುಮ್ ಸುಮ್ನೆ ಹೊಗಳೋದಿಲ್ಲ..... ಹಾಗೆಯೇ ಸುಮ್ ಸುಮ್ನೆ ಇವುಗಳ ವಿರುದ್ಧ ಕ್ರಿಯೆಗಳನ್ನೂ ಮಾಡೋದಿಲ್ಲ. ತನಗೆ ತೋಚಿದ್ದನ್ನು, ತನಗೆ ಸರಿಕಂಡದ್ದನ್ನು, ತನಗೆ ಇಷ್ಟವಾದದ್ದನ್ನು, ತನಗೆ ಪ್ರಿಯವೆನಿಸಿದ್ದನ್ನು ಮಾಡುತ್ತಾ ಬಂದಿದ್ದಾರೆ - ಹಾಗಾಗಿ ಇಂದಿಗೂ ನಾಗಾಭರಣ ನಾಗಾಭರಣರಾಗಿಯೇ ಉಳಿದಿದ್ದಾರೆ. ಇಲ್ಲಿ 'ನಾಗಾಭರಣ' 'ನಾಗಾಭರಣ' ಎಂಬ ಹೆಸರನ್ನು ಒತ್ತಿ ಒತ್ತಿ ಯಾಕೆ ಹೇಳುತ್ತಿದ್ದೇನೆಂದರೆ ಅವರು ತಮ್ಮ ಖ್ಯಾತಿಯನ್ನು ಇನ್ನೊಬ್ಬರ ಹಂಗಿಲ್ಲದೇ ತಾವಾಗಿಯೇ ಬೆಳೆಸಿಕೊಂಡವರು ಮತ್ತು ತನ್ನೊಂದಿಗೆ ಜೊತೆ ಜೊತೆಯಾಗಿ ಬೆಳೆಯುವವರಿಗೆ ಅದೇ ರೀತಿಯ ಭಾವನೆಯನ್ನು ಕಲಿಸಿದವರು.....



ಇಲ್ಲಿ ಭರಣರ ಬೆಳವಣಿಗೆಗೆ ಹೆಗಲುಕೊಟ್ಟು ನಿಂತ ಇನ್ನೊಂದು ಜೀವವಿದೆ.... ಭರಣರ ಏಳಿಗೆಯಲ್ಲಿ, ಪ್ರಗತಿಯಲ್ಲಿ, ಪ್ರಶಸ್ತಿಯಲ್ಲಿ, ಪ್ರಖರತೆಯಲ್ಲಿ, ಪ್ರಬುದ್ಧತೆಯಲ್ಲಿ ನೆರಳಾಗಿ ತನ್ನನ್ನು ತಾನು ತೊಡಗಿಸಿಕೊಂಡು ಕಳೆದ 25 ವರ್ಷಗಳಿಂದ ಭರಣರ ಇಷ್ಟರವರೆಗಿನ ಖ್ಯಾತಿ ಜ್ಯೋತಿಯ ತೈಲ ಮತ್ತು ಬತ್ತಿಯೇ ಆ ಜೀವ. ಆ ಜೀವವೇ ನಾಗಿಣಿಭರಣ. ಆ ಕೃತಿಗೆ ತಕ್ಕ ವಿಶಾಲ ಮನಸ್ಸು. ತನ್ನ ಸಂಸ್ಥೆಯಲ್ಲಿ ಕೆಲಸಮಾಡುವ ವ್ಯಕ್ತಿಗಳೆಡೆಗಿನ ಮಾತೃಪ್ರೇಮ ಈ 'ಅಮ್ಮ'ನಿಂದ ಕಲಿಯಬೇಕು. ಭರಣರ ಏಳಿಗೆಯಲ್ಲಿ ಈ 'ಅಮ್ಮ'ನ ಪಾತ್ರ ಅಪಾರ.

ಭರಣ ಯಾವತ್ತೂ ಹಣಕ್ಕಾಗಿ, ಹೆಸರಿಗಾಗಿ, ಪ್ರಶಸ್ತಿಗಾಗಿ ಆಶೆಪಟ್ಟವರಲ್ಲ. ಹಾಗೇ ತನಗೆ ಸಿಗದುದಕ್ಕಾಗಿ ದುಃಖಿಸಿದವರೂ ಅಲ್ಲ. ತನ್ನೊಂದಿಗಿರುವವರು ಮಾಡಿದ ಕೆಲಸಕ್ಕೆ ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದಾರೆಯೇ ಹೊರತು ಯಾವತ್ತೂ ಕೀಳಾಗಿ ಕಂಡವರಲ್ಲ. ಅವರಲ್ಲಿರುವ ಸ್ಥಿತಪ್ರಜ್ಞತೆ, ಪ್ರಪಂಚ ಮುಳುಗಿಹೋಗುವಂಥ ಪರಿಸ್ಥಿತಿಯಲ್ಲೂ ಅವರಲ್ಲಿರುವ ಹಸನ್ಮುಖತೆ ಇಂದಿಗೂ ಅವರನ್ನು ಅವರಾಗಿಯೇ ಉಳಿಸಿದೆಯೆಂದರೆ ತಪ್ಪಲ್ಲ. ಭರಣರವರಿಂದ ನಾನು ಕಲಿತದ್ದು ಕಲಿಯಬೇಕಾದುದು ಬಹಳಷ್ಟಿದೆ. ಅವರ ಬದುಕಿನ ಮಹಾಕಾವ್ಯದಿಂದ ನಾನು ಹೆಕ್ಕಿಕೊಂಡಿರುವುದು ಅಲ್ಲೊಂದೆರಡು ಪದ, ಇಲ್ಲೊಂದೆರಡು ಅಕ್ಷರ, ಮತ್ತೆಲ್ಲೋ ಒಂದಷ್ಟು ಅರೆಬರೆ ವಾಕ್ಯಗಳು. ಆ ಮಹಾಕಾವ್ಯವನ್ನು ಸಂಪೂರ್ಣವಾಗಿ ಅರಗಿಸಿಕೊಳ್ಳುವತ್ತ ಹೆಜ್ಜೆಯಿಟ್ಟಿದ್ದೇನೆ. ಅರಗಿಸಿಕೊಳ್ಳುತ್ತೇನೆಂಬ ಭರವಸೆ ನನಗಿದೆ. ಯಾಕಂದ್ರೆ ನಂ ಡೈರೆಕ್ಟ್ರು ಏನನ್ನೂ ತಿಳಿಸದೆ ಎಲ್ಲವನ್ನೂ ಹೇಳಿಕೊಡುವ ಹೆಡ್ ಮೇಷ್ಟ್ರು.

❑ ❖ ❑ ❖ ❑

# ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ

## "ಚಿತ್ರ ನಿರ್ದೇಶಕ ನಡೆವ ಹಾದಿ ಯೋಧ ನಡೆವ ಹಾದಿಯೂ ಹೌದು"

(ಆದಿಕವಿ ಪಂಪನ ಕ್ಷಮೆಯಾಚಿಸುತ್ತ)

ಕೆ. ಜಗದೀಶ್ ರೆಡ್ಡಿ

ಮಾನವೀಯ ಸಂಬಂಧಗಳಲ್ಲಿ ಮುಖ್ಯವಾಗಿ ಬೇಕಿರುವುದು ಬೆಳವಣಿಗೆ ಮತ್ತು ಬದಲಾವಣೆ. ಬದಲಾವಣೆಯೆಂದರೆ ನಮ್ಮನ್ನೇ ನಮ್ಮ ತತ್ವಗಳತ್ತ ವಶೀಕರಿಸಿಕೊಳ್ಳುವುದು. ಏಕೆಂದರೆ ನಾವು ಯಾವಾಗಲೂ ಜಗತ್ತು ಸೃಷ್ಟಿಸಿಬಿಟ್ಟ ಆದರ್ಶ, ನಂಬಿಕೆ, ಅನುಸರಣೆಯನ್ನು ಒಪ್ಪಿಕೊಂಡು ಮೆರವಣಿಗೆ ಹೊರಟಿರುತ್ತೇವೆ. ವ್ಯಕ್ತಿತ್ವ ಹುಟ್ಟುವುದು, ಬಹುತೇಕ ಅಹಂಭಾವದಿಂದಾದರೆ, ಅಮಾಯಕತೆ ಹುಟ್ಟುವುದು ಶಿಶು ಸಹಜ ಸ್ವಭಾವದಿಂದ. ವ್ಯಕ್ತಿ ಅಹಂಭಾವದಿಂದ ಬೆಳೆಯತೊಡಗಿದರೆ, ನಿಧಾನಕ್ಕೆ ಭಾರವಾಗುತ್ತ ಹೋಗುತ್ತಾನೆ. ಜ್ಞಾನ ಪರಿಚಯ ನಿಧನಿಧಾನಕ್ಕೆ ಆತನನ್ನು ಚಡಪಡಿಸುವಂತೆ ಮಾಡುತ್ತದೆ. ಆದರೆ ಮುಗ್ಧತೆಯಿಂದ ಆವಿರ್ಭವಿಸಿದವ ಲಘುವಾಗುತ್ತ ಹೋಗುತ್ತ ಚಿಕ್ಕ ಸಂತೋಷ, ಚಿಕ್ಕ ನೆಮ್ಮದಿ ಸಂಬಂಧಗಳಿಂದ ನಿರಾಳತೆ ರೂಢಿಸಿಕೊಳ್ಳುತ್ತ ಹಗುರಾಗುತ್ತಾನೆ.

ಬೆಳೆದ ಹಾದಿಯ ಈ ಸೂಕ್ಷ್ಮ ಸಂಘರ್ಷದಲ್ಲಿ, ಅಹಮಿಕೆರಹಿತ ವ್ಯಕ್ತಿತ್ವ, ಸರಳತೆ ತುಂಬಿದ ವಿನಯ, ಸದಾ ಹೊಸದರ ಹುಡುಕಾಟ ಆಯ್ದುಕೊಂಡು ಭರಣರು ಈ ಎತ್ತರಕ್ಕೆ ಬೆಳೆದದ್ದಿರಬಹುದು. ಇಲ್ಲದಿರೆ ಎಲ್ಲಿಯ ಇಷ್ಟು ಪ್ರಶಸ್ತಿ? ಎಲ್ಲಿಯ ಈ ಜನಪ್ರಿಯತೆ?

ವಿಜ್ಞಾನ ಪದವಿ ಮುಗಿಸಿ, "ನೀನಾಸಂ"ನ ಫಿಲ್ಮ್ ಅಪ್ರಿಸಿಯೇಶನ್ ಕೋರ್ಸ್ ಸೇರಿಕೊಂಡು ದಟ್ಟ ಸಾಂಸ್ಕೃತಿಕ ಚಟುವಟಿಕೆಗಳ ಧಾರವಾಡದ ರಂಗಭೂಮಿ, ಸಾಹಿತ್ಯ, ಸಂಘಟನೆ ಮನೋಹರ ಗ್ರಂಥಮಾಲೆ, ವಿದ್ಯಾವರ್ಧಕ ಸಂಘ ಇತ್ಯಾದಿ ಯಾವ ಇಸಂಗಳಿಗೂ ಕಟ್ಟುಬೀಳದೆ ಹರಿದಾಡುತ್ತ, ಸಿಕ್ಕಷ್ಟು ಗ್ರಹಿಸುತ್ತ, ಅಸಲಿಗೆ ಒಂದು ವ್ಯಕ್ತಿತ್ವ ರೂಪುಗೊಳ್ಳುತ್ತಿದೆಯಾ ಎಂದು ಸ್ಪಷ್ಟವಿರದ ಹೊತ್ತಲ್ಲದ ಹೊತ್ತದು. ಆಗ ಬಂತು ನೋಡಿ ಭರಣ ಎಂಬ ಜಂಬೂ ಸವಾರಿ. ಸುಮಾರು 1994-95, ನಾಗಾಭರಣರು ಕನ್ನಡದ ಪ್ರಸಿದ್ಧ ಕವಿಗಳ ಅರವತ್ತು ಕವಿತೆಗಳನ್ನು "ಗೀತಮಾಧುರಿ" ಹೆಸರಿನಡಿ ದೂರದರ್ಶನಕ್ಕೆ ಯೋಜನೆ ರೂಪಿಸಿ, ಆಯಾ ಭಾಗದ ಕವಿಗಳ ಹಾಡುಗಳನ್ನು ಅಲ್ಲಲ್ಲಿಯೇ ಚಿತ್ರಿಸಲೆಂದು ಧಾರವಾಡಕ್ಕೆ ಬಂದಿದ್ದರು.

ಸ್ಥಳೀಯ ಸಹಕಾರ ನೀಡುವ ಅವಕಾಶ. ಅಲ್ಲಿಯ ಕಲಾವಿದರನ್ನೇ ಕಲೆಹಾಕಿ ಅನಾಮತ್ತು ಹತ್ತು ಹಾಡುಗಳ ಚಿತ್ರೀಕರಣಕ್ಕೆ ಅನುವು ಮಾಡಿಕೊಟ್ಟು ಭೇಷ್ ಎನಿಸಿಕೊಂಡದ್ದು ನಿಚ್ಚಳ ನೆನಪು. ಮರೆಯದ ಅನುಭವ. ಬೇಂದ್ರ ರಚಿತ ಹಾಡೊಂದರಲ್ಲಿ ನಟಿಸಲು ಭರಣರು ಅವಕಾಶ ನೀಡಿದ್ದು ಬೋನಸ್ ಖುಷಿ. ಶೂಟಿಂಗ್ ಮುಗಿಯಿತು. ಭರಣರು ಬೆಂಗಳೂರಿನತ್ತ,



ನಾನು ಶೂಟಿಂಗ್‌ನ ನೆನಪು ಹೊತ್ತು ನನ್ನ ಮನೆಯತ್ತ. ಮುಂದೆ ಆರೇಳು ತಿಂಗಳ ನಂತರ ಭರಣರ ಪ್ರತಿಷ್ಠಿತ ಶ್ರುತಾಲಯದಿಂದ ಕರೆ. ಕಾರ್ನಾಡರ ನಾಗಮಂಡಲವನ್ನು ಸಿನಿಮಾ ಮಾಡಲು ಯೋಜನೆ ರೂಪಿಸಿದ್ದರು ಭರಣ. ಅವರೊಂದಿಗೆ ನಾನಿರಬೇಕೆಂದು ಬಯಸಿದ್ದರು. ಮನಸು ಬರಲಿರುವ ಕ್ರಿಯಾಶೀಲ ದಿನಗಳಿಗಾಗಿ ಕಾತುರದಿಂದ ಕಾಯತೊಡಗಿತು. ಬಾಗಲಕೋಟೆಯಿಂದ ಸುಮಾರು ನಲವತ್ತು ಕಿಲೋಮೀಟರ್ ದೂರದ, ಆಲಮಟ್ಟಿ ಅಗೆಕಟ್ಟೆಯ ಕಾರಣದಿಂದ ಮುಳುಗಡೆಯಾಗಲಿರುವ ಹಳ್ಳಿಯೊಂದರ ವಾಡೆಮನೆ ಹುಡುಕಿ, ಅಲ್ಲಿಗೆ ಕರೆದೊಯ್ದೆವು ನಾನು ಮತ್ತು ಹಿತೈಷಿ ಮಾಗಿ ನಟರಾಜ್. ನೀರು ನಿಂತು, ದಾರಿ ಅಲ್ಲ, ಜನರೂ ಇಲ್ಲದ ಸ್ಮಶಾನ ಸದೃಶ್ಯ ಊರು. ನಟ್ಟ ನಡುವೆ ದೇಸಗತಿಯ ಎಕರೆ ವಿಸ್ತಾರದ ವಾಡೆ ಮನೆ. ಇದ್ದ ರಸ್ತೆ ಮೂರು ತಿಂಗಳು ನೀರಿನಲ್ಲಿ ಮುಚ್ಚಿ ಕೊಚ್ಚಿಹೋಗಿದೆ. ಬಹು ಪ್ರಯಾಸದ ಹಾದಿ ಸವೆಸಿ ಗುರಿ ತಲುಪಿದಾಗ ಸಿಕ್ಕಿದ್ದು, ನೀವು ನಾಗಮಂಡಲದಲ್ಲಿ ನೋಡಿದ ಅದ್ಭುತ ಮನೆ. ಸರಿ ಅಲ್ಲಿಯೇ ಚಿತ್ರಿಸುವುದೆಂದು ಭರಣರ ನಿರ್ಧಾರ. ರಸ್ತೆಯಾಗಬೇಕು. ಸ್ಥಳೀಯರ ಸಹಕಾರದಿಂದ ಸುಮಾರು ಆರು ಕಿಲೋಮೀಟರ್ ರಸ್ತೆ ನಿರ್ಮಾಣ. ಮುಂದಿನದು ಇತಿಹಾಸ.

ಹೀಗೆ ಆರಂಭವಾದ ನನ್ನ ಮತ್ತು ಭರಣರ ಒಡನಾಟ, (ಒಡನಾಟವೇನು ಬಂತು, ಮನೆಯ ಸದಸ್ಯನೊಬ್ಬನಾಗಿ ಅವರ ಮನೆಯಲ್ಲೇ ಇದ್ದೆ) ಬಾಂಧವ್ಯ ಮುಂದಿನ ಅವರ ಚಿತ್ರಗಳಲ್ಲಿ, ಧಾರಾವಾಹಿಗಳಲ್ಲಿ, ಸಾಕ್ಷ್ಯ ಚಿತ್ರಗಳಲ್ಲಿ, ಜಾಹೀರಾತು ಚಿತ್ರಗಳಲ್ಲಿ ಅಖಂಡ ಆರುವರ್ಷಗಳ ಕಾಲ ಮುಂದುವರೆದಿದ್ದರೆ, ಅದಕ್ಕೆ ಕಾರಣ ಪ್ರಾಯಶಃ ಯಶಸ್ಸಿನ ಬಾಗಿಲು ತಟ್ಟಲು ಯತ್ನಿಸುತ್ತಿದ್ದ ನನ್ನ ಅಮಾಯಕ ಮನಸ್ಸು. ಯಶಸ್ವಿಯೊಬ್ಬನ ಹೆಜ್ಜೆ ಸಾಗಿದ ಹಾದಿಯಲ್ಲಿ ಸಾಗುತ್ತ, ಆತನ ಪ್ರತಿಹೆಜ್ಜೆ, ಪ್ರತಿ ಉಸಿರು, ಪ್ರತಿನೋಟ, ಪ್ರತಿಮಾತುಗಳನ್ನು ಅತ್ಯಂತ ಸಮೀಪದಿಂದ, ಸೂಕ್ಷ್ಮವಾಗಿ ಗಮನಿಸುತ್ತಿದ್ದುದೇ ಆಗಿದೆ. ಆಗು ಮಾಡುತ್ತಾರೆ ಭರಣ. ನಮಗೂ ಆಸಕ್ತಿ ಬೇಕಷ್ಟೆ.

ನಾಗಾಭರಣರು ಕೈಗೆತ್ತಿಕೊಳ್ಳುತ್ತಿದ್ದ ಯೋಜನೆಗಳು, ವಾತಾವರಣ ನಿರ್ಮಾಣ, ವಿಷಯಾಸಕ್ತಿಯಿಂದ ತೊಡಗಿಕೊಳ್ಳುವ ಪರಿ ಅನನ್ಯ.

ಏಕಕಾಲದಲ್ಲಿ ಹಲವು ಯೋಜನೆಗಳನ್ನು ಅವರು ಹೆಗಲೇರಿಸಿಕೊಂಡು ಗೆಲುವು ಕಾಣುವ ಸಾಹಸ, ನಿಜಕ್ಕೂ ಏಣಿಯ ಕೊನೆಯ ಮೆಟ್ಟಿಲಿನಲ್ಲಿ ನಿಲ್ಲಬಯಸುವ ಪ್ರತಿಯೊಬ್ಬನೂ ಗಮನಿಸಬೇಕಾದ್ದೇ. ಬಹುಶಃ ಅದು ಪ್ರತಿ ಯಶಸ್ವಿ ಪುರುಷನ ಧಮನಿಗಳಲ್ಲೇ ಇರುತ್ತದೇನೋ.

ಅಪಾರ ಸಹನೆ ಭರಣರ ಶ್ರೇಷ್ಠ ಗುಣ. ಅಬ್ಬಾ! ಬರೆದರೆ ಅದೇ ಪುಟವಾದೀತು. ಉತ್ಪ್ರೇಕ್ಷೆಯಲ್ಲ, ಅದನ್ನು ಅನುಭವಿಸಿಯೇ ಅರಿಯಬೇಕು. ಆ ಕುರಿತು ಅರಿತ ಹೆಮ್ಮೆ ನನಗಿದೆ.

ಬೇಸಿಕಲಿ ಭರಣರು ಒಬ್ಬ ಅಂತರ್ಮುಖಿ. ಯಶಸ್ಸಿನತ್ತಲೇ ಗಮನವಿಟ್ಟು ಸದಾ ಕಾರ್ಯಶೀಲನಾದ ವ್ಯಕ್ತಿ ನಿರಂತರವಾಗಿ ಭಾವನೆಗಳಿಗೆ ಪಕ್ಕಾಗದೆ ಮುಂದುವರೆಯಬೇಕು ಎನ್ನುವ ತತ್ವದಲ್ಲಿ ಭರಣರಿಗೆ ಅತೀವ ವಿಶ್ವಾಸ. ಹಾಗಾಗಿ ನಾಗಾಭರಣರ ಅಂತರಂಗವೆಲ್ಲೂ ಬಿಚ್ಚಿಕೊಳ್ಳುವುದೇ ಇಲ್ಲ. ನಾವೇ ಡಿಸೆಕ್ಟ್ ಮಾಡಿ ನೋಡಬೇಕು. ನನ್ನಂಥ ಭಾವುಕ ಮನಸ್ಸಿನ

ಹುಡುಗರಿಗೆ ಇದು ಬಲು ಕಷ್ಟದ ಕೆಲಸವೇ ಆಗಿತ್ತು. ಆದರೆ ನಂತರ ಸಿಕ್ಕುವ ಆಳದ ಅಂತರಂಗ ಅಂತರ್‌ಜಲದಷ್ಟೇ ಪ್ರಾಂಜಲ. ಅದೇ ಒಂದು ರಂಗಸ್ಥಳ.

ಒಂದು ಗಿಡದ ಹೂವುಗಳು, ಮತ್ತೊಂದು ಗಿಡದ ಎಲೆಗಳು, ಮಗದೊಂದು ಗಿಡದ ರೆಂಬೆಗಳು ಇವನ್ನೆಲ್ಲ ಸರಿಯಾದ ಹದದಲ್ಲಿ ಬೆರೆಸಿ, ಒಂದು ಮೋಹಕ ಗುಚ್ಛವನ್ನು ಸಿದ್ಧಪಡಿಸುವ ಕಲೆ ಭರಣರಿಗೆ ಸಿದ್ಧಿಸಿದ ಹಾಗೆ ಮತ್ತೊಬ್ಬರಿಗೆ ಸಿದ್ಧಿಸಿಲ್ಲ. ಆ ಸೃಷ್ಟಿಕ್ರಿಯೆಯಲ್ಲಿ ಯಾರ್‍ಯಾರ ಪ್ರತಿಭೆಯನ್ನು ಎಲ್ಲೆಲ್ಲಿ ಎಷ್ಟು ಬಳಸಬೇಕು, ಅದು ಹೆಚ್ಚಾದರೆ ಅಥವಾ ಕಡಿಮೆಯಾದರೆ ಕಲಾಕೃತಿಯ ಹದ ಎಲ್ಲಿ ಕೆಡುತ್ತದೆನ್ನುವ ಅರಿವು ಅವರಲ್ಲಿ ಸದಾ ಜಾಗೃತವಾಗಿರುತ್ತದೆ. ಹಾಗಾಗಿ ನಾಗಾಭರಣರೆಂದೂ ತಮ್ಮ ಕೆಲಸದಲ್ಲಿ ವೈಯಕ್ತಿಕ ಸಂಬಂಧಗಳನ್ನು ತರುವುದಿಲ್ಲ. ಯಾರೊಂದಿಗೂ ತೀರಾ ಭಾವನಾತ್ಮಕವಾಗಿ ಬೆರೆಯದೆಯೂ - ಬೆರೆತಂತೆ ಕಾಣುವ, ಅದು ತನ್ನ ಕೆಲಸದ ಮಧ್ಯದಲ್ಲಿ ಅಡ್ಡಿಯಾಗುತ್ತಿದೆ ಅಂತಾದಾಗ, ಒರಟಾಗದೇ ನಿರ್ದಾಕ್ಷಿಣ್ಯರಾಗಿಬಿಡುವ ಅನುಪಮ ಸಿದ್ಧಿ ನಾಗಾಭರಣರಿಗಿದೆ. ಇಂಥದ್ದಕ್ಕೆಲ್ಲಾ ಬೇಕಾದ ಗಟ್ಟಿಮನಸ್ಥಿತಿಯೊಂದನ್ನು ಪಡೆದ ಭರಣರು ಕನ್ನಡ ಚಿತ್ರರಂಗ ಕಂಡ ಅಪರೂಪದ ನಿರ್ದೇಶಕರು.

ಹೀಗೆ ಅವರು "ಬೆನಕ" ನಾಟಕ ತಂಡ ಕಟ್ಟಿದರು. "ಶ್ರುತಾಲಯ" ಹುಟ್ಟಿಸಿದರು. ಸಿನಿಮಾ, ಧಾರಾವಾಹಿ, ಸಾಕ್ಷ್ಯ ಚಿತ್ರಗಳು, ಜಾಹಿರಾತು ಚಿತ್ರಗಳು ಹೀಗೆ "ಆಡು ಮುಟ್ಟದ ಸೊಪ್ಪಿಲ್ಲ ಭರಣ ಮುಟ್ಟದ ವಿಭಾಗವಿಲ್ಲ" ಎನ್ನುವಂತೆ ನಿರ್ವಹಿಸಿದವರು. ಇವೆಲ್ಲವೂ ಗುಂಪು ಚಟುವಟಿಕೆಯೇ ಆದರೂ ಆ ಗುಂಪುಗಳಲ್ಲಿ ಎಲ್ಲೂ ತಾನು ಕಳೆದುಹೋಗದ ಎಚ್ಚರವನ್ನೂ ಉಳಿಸಿಕೊಂಡವರು. ಗುಂಪಿನಲ್ಲಿದ್ದೂ ಏಕಾಂಗಿಯಾಗಿರುವ, ಏಕಾಂಗಿಯಾಗಿದ್ದೂ ಗುಂಪಿನೊಳಗಿರುವ ಮಾನಸಿಕ ಸಮತೆಯನ್ನು ಸಾಧಿಸಿದವರು ಭರಣ.

ಒಂದೊಮ್ಮೆ ಏಕಕಾಲದಲ್ಲೇ ಎರಡು ಚಿತ್ರಗಳ ಹಾಡಿನ ಧ್ವನಿಮುದ್ರಣವನ್ನು ಪ್ರತ್ಯೇಕ ಸ್ಟುಡಿಯೋಗಳಲ್ಲಿ ನಡೆಸಬೇಕಾಗಿ ಬಂತು. ಒಂದು ಕಡೆ "ವಿಮೋಚನೆ"ಗೆ ಎಲ್.ವೈದ್ಯನಾಥ್ ರಾಗ ಸಂಯೋಜಿಸುತ್ತಿದ್ದರು. ಮತ್ತೊಂದೆಡೆ ಅಯಾ ಚಿತ್ರಗಳ ಕಥಾಚರ್ಚೆ ನಡೆಸುವುದು ಗೊತ್ತಾಗಿತ್ತು. ಜೊತೆಗೊಂದು ಮೆಗಾ ಧಾರಾವಾಹಿ ಚಿತ್ರೀಕರಣ ನಡೆಯುತ್ತಲೇ ಇತ್ತು. ಈ ಎಲ್ಲ ಕಡೆ ನಿಂತು ಕೆಲಸ ಮಾಡುವುದನ್ನು ಇಬ್ಬರೂ ರಾತ್ರಿಯೇ ಮಾತಾಡಿಕೊಳ್ಳುತ್ತಿದ್ದೆವು. ಹನ್ನೊಂದಾದರೂ ಸರಿ, ಇನ್ನೊಂದಾದರೂ ಸರಿ ಮಾಡಬೇಕಾದುದನ್ನು ನೋಟ್ಸ್ ಮಾಡಿಸುತ್ತಿದ್ದರು. ತಾವು ಅಟೆಂಡ್ ಮಾಡುವುದನ್ನು ಮಗುವಿನಂತೆ ನಮಗೂ ಹೇಳುತ್ತಿದ್ದರು. ನನಗೆ ದಿಕ್ಕೇ ತೋಚದಂತಾಗಿರುತ್ತಿತ್ತು. ಜೊತೆಗೆ ಭರಣರಿದ್ದಾರಲ್ಲ ಎನ್ನುವುದಷ್ಟೇ ಬಲ. ಆದರೆ ಭರಣರಿಗೆ ಯಾರ ಬಲ? ಇಂತಹ ಸಮಯದಲ್ಲೆಲ್ಲಾ ಅಕ್ಷರಶಃ ನಾಲ್ಕೈದು ತಾಸು ಮಲಗುತ್ತಿದ್ದರು. ಒಂದು ಯೋಜನೆಯಲ್ಲಿ ಏನೋ ಯಡವಟ್ಟಾದರೂ ಅದರ ಪರಿಣಾಮ ಉಳಿದ ಯೋಜನೆಗಳ ಮೇಲೆ ಆಗದಂತೆ ಮಾನಸಿಕ, ಬೌದ್ಧಿಕ ಸ್ಥಿರತೆ ಕಾಪಾಡಿಕೊಂಡು ಅವರು ಹೆಣಗುತ್ತಿದ್ದುದು ನಿಜಕ್ಕೂ ಅಚ್ಚರಿ ಹುಟ್ಟಿಸುತ್ತಿತ್ತು. ತನಗೆ ಬೇಕಾದ್ದನ್ನು ಆಲಿಸುತ್ತ, ಬೇಡವಾದದ್ದನ್ನು ಯಾರಿಗೂ ಬೇಸರವಾಗದ ರೀತಿಯಲ್ಲಿ ಹೇಳಬಲ್ಲ ನವಿರು ರೂಢಿಸಿಕೊಂಡವರು. ಎಂದೂ ಅಸಹನೆಯಿಂದ ಕೆರಳಿದ್ದನ್ನು ನಾನು ಕಾಣಲೇ ಇಲ್ಲ.



"ನಾಗಮಂಡಲ", "ವಿಮೋಚನೆ", "ನೀಲಾ", "ಜನುಮದಾತ", "ಶುಭಕಾಲ ಬರುತೈತೆ" (ಸಿನಿಮಾಗಳು), "ಮುಸ್ಸಂಜೆ", "ಕಣ್ಣುಗಳು", "ಜೋಕು ಜೋಕೆ", "ಓ ನನ್ನ ಬೆಳಕೆ", "ಸಂಕ್ರಾಂತಿ" (ಧಾರಾವಾಹಿಗಳು) ಎಂಟು ಸಾಕ್ಷ್ಯ ಚಿತ್ರಗಳು, ಟೆಲಿಫಿಲ್ಮ್‌ಗಳು ಜಾಹೀರಾತುಗಳು ಇತ್ಯಾದಿ ನಾನು ಅವರೊಡನೆ ಸಹಪಯಣಿಗನಾಗಿ ಕೆಲಸಮಾಡಿ ಕಂಡ ಮೈಲುಗಲ್ಲುಗಳು.

"ಸಂಕ್ರಾಂತಿ" ಮೆಗಾ ಧಾರಾವಾಹಿ ಟೆಲಿವಿಷನ್ ಧಾರಾವಾಹಿಗಳ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಡಿಡಬೇಕಾದ ಮಹಾನ್ ಪ್ರಯತ್ನ. ಅದರ ಸಿದ್ಧತೆ, ಚರ್ಚೆ, ಲೊಕೇಶನ್‌ಗಳು, ನಾನೂರಕ್ಕೂ ಹೆಚ್ಚು ಕಲಾವಿದರ ಸಂಗಮ, ನಿರಂತರ ಒಂದೂವರೆ ವರ್ಷಗಳ ಚಿತ್ರೀಕರಣ, ಅದು ಕಂಡ ಜನಪ್ರಿಯತೆ, ಪ್ರತಿ ಕಂತಿನೊಂದಿಗೆ ದಕ್ಕುತ್ತ ಹೋದ ಅನುಭವ. ಬದುಕಿನುದ್ದಕ್ಕೂ ಬತ್ತದ ನೆನಪುಗಳವು. "ಮತ್ತೆ ಅಂಥಹದ್ದನ್ನು ನಾನು ಪಡೆಯಲಾರೆನೇನೋ" - ಎಂದು ಸ್ವತಃ ಭರಣರೇ ಹೇಳಿದ್ದಿದೆ. ಅಲ್ಲಿನ ಪ್ರತಿದಿನವೂ ಸಂಕ್ರಾಂತಿ, ಬಳಸಿದ ಪದಪದವೂ ವಸಂತಗೀತೆ. ಅದೊಂದು ಅಮೃತಘಳಿಗೆ.

ಈಗ, ಭರಣರಿಗೆ 50 ಎಂದರೆ, ಅವರ ಚಿತ್ರರಂಗದ ಮಾತ್ರೆಯ 25 ವರ್ಷಗಳೆಂದರೆ, ಅದು ಕನ್ನಡ ಚಿತ್ರರಂಗದ ಚರಿತ್ರೆಯೂ ಹೌದು.

ಸಾರ್ಥಕ ಗುರು, ಶಿಷ್ಯನಿಗೆ ಸ್ಲೇಟು ಹಿಡಿದು, ಬಳಪದಿಂದ ಬರೆಸಿ ಕಲಿಸುವುದಕ್ಕಿಂತ, ತನ್ನ ಮಾತು-ಕೃತಿಗಳ ಮೂಲಕವೇ ಕಲಿಸುತ್ತಿರುತ್ತಾನೆ. ಅದರ ಫಲವನ್ನು ಚಾಣಾಕ್ಷ ಶಿಷ್ಯ ಗ್ರಹಿಸುತ್ತಾನೆ. ಗ್ರಹಿಸಿದ್ದನ್ನು ರೂಢಿಸಿಕೊಳ್ಳುತ್ತಾನೆ. ಆ ಮೂಲಕ ಸಾರ್ಥಕ್ಯ ಪಡೆಯುತ್ತಾನೆ. ಗುರುವಿಗೂ ಸಾರ್ಥಕ ಭಾವ ತಂದುಕೊಡುತ್ತಾನೆ. ಗುರು ಭರಣರಿಗೆ ನೂರಾರು ನಮನಗಳು.

❑ ❖ ❑ ❖ ❑

# ಗುರು ವಂದನೆ

ಶಿವಾನಂದ್

ಬಳ್ಳಾರಿ ಜಿಲ್ಲೆ ಹೊಸಪೇಟೆಯ ಗುಡ್ಡಗಾಡು ಗಣಿ ಪ್ರದೇಶದಿಂದ ಬಂದ ನಾನು ಚಲನಚಿತ್ರ ನಿರ್ದೇಶಕನಾಗುವ ಬಯಕೆ ಹೊತ್ತು ಬೆಂಗಳೂರಿನಲ್ಲಿ ನೆಲೆಸಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಟಕ ವಿಭಾಗದಲ್ಲಿ ಸಿಕ್ಕ ಕೆಲಸವನ್ನು ಬಿಟ್ಟು ನಿರ್ದೇಶಕ ನಾಗಾಭರಣರ ಬಳಿ ಸಹಾಯಕ ನಿರ್ದೇಶಕನಾಗಿ ಸೇರಿದೆ.

ನಾಗಾಭರಣ ಬರೀ ವ್ಯಕ್ತಿಯಲ್ಲ. ಒಂದು ಸಂಸ್ಥೆ. ಅವರ ಹತ್ರ ಸಹಾಯಕ ನಿರ್ದೇಶಕನಾಗಿ ಕೆಲ್ಸ ಮಾಡೋದು ಅಂದ್ರೆ ಚಲನಚಿತ್ರ ಶಾಲೆಯಲ್ಲಿ ಶಾಸ್ತ್ರೀಯವಾಗಿ ಕಲಿತಂತೆ.

ಭರಣ ಅವರದ್ದು ಭಿನ್ನವಾದ ವ್ಯಕ್ತಿತ್ವ. ಇವರ ಬಳಿ ಯಾರು ಬೇಕಾದರೂ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಬಹುದು ಅನ್ನೋ ಹಾಗಿಲ್ಲ. ಇವರು ಆಯ್ಕೆ ಮಾಡಿಕೊಳ್ಳುವ ರೀತಿ ಕೂಡ ವಿಶಿಷ್ಟವಾದದ್ದು. ಇವರ ಬಳಿ ಬರುವವರು ವಿದ್ಯಾವಂತರಾಗಿರಬೇಕು. ಸಾಹಿತ್ಯ-ಸಂಸ್ಕೃತಿ ಬಗ್ಗೆ ತಿಳುವಳಿಕೆಯುಳ್ಳವರಾಗಿರಬೇಕು. ರಂಗಭೂಮಿ ಹಿನ್ನಲೆ ಇರಬೇಕು. ನೀನಾಸಂ, ರಂಗಾಯಣ, ಎನ್‌ಎಸ್‌ಡಿ ವಿದ್ಯಾರ್ಥಿಯಾಗಿದ್ದರೆ ಅಂಥವರಿಗೆ ಮುಕ್ತವಾದ ಅವಕಾಶ. ಭರಣ ಅವರು ಪ್ರತಿಭೆಯನ್ನು ಪ್ರೋತ್ಸಾಹಿಸುತ್ತಾರೆ. ಮತ್ತು ಗೌರವಿಸುತ್ತಾರೆ.

ಇಂಥ ಸೃಜನಶೀಲ ನಿರ್ದೇಶಕರಾದ ನಾಗಾಭರಣ ಅವರ ಬಳಿ ಸಹಾಯಕ ನಿರ್ದೇಶಕನಾಗಿ ಅವಕಾಶ ಸಿಕ್ಕಿದ್ದು ನನ್ನ ಅದೃಷ್ಟ. ನನಗೆ ಕಲ್ಚರಲ್ ಹಿನ್ನಲೇನು ಇಲ್ಲ. ಅಗ್ರಿಕಲ್ಚರಲ್ ಹಿನ್ನಲೇನೂ ಇಲ್ಲ. ನಾನು ಗಣಿ ಕಾರ್ಮಿಕರ ಮಗ. ನನ್ನ ತಾಯಿ ಅನಕ್ಷರಸ್ಥೆ. ತಂದೆಗೆ ಸ್ವಲ್ಪ ಓದು ಬರಹ ಗೊತ್ತಿತ್ತು. ಅವರು ಗಣಿ ಕಾರ್ಮಿಕರಾಗಿ, ಮೇಸ್ತ್ರಿಯಾಗಿ, ಲೇಬರ್ ಕಂಟ್ರಾಕ್ಟರ್ ಆಗಿ ಬೆಟ್ಟ ಗುಡ್ಡಗಳಲ್ಲಿದ್ದವರು. ಇಂಥ ಪರಿಸರದಿಂದ ಬಂದ ನಾನು ಬೆಳ್ಳಿ ತೆರೆಯ ವಿಸ್ಮಯಗಳನ್ನು ಬೆರಗುಗಣ್ಣಿನಿಂದ ನೋಡಿ, ನಿರ್ದೇಶಕನಾಗುವ ಕನಸು ಕಂಡವನು. ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ಸ್ಕೂಲ್ ಡೇಗೆ ನಾಟಕ ನಿರ್ದೇಶನ ಮಾಡಿದೆ. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಓದುವಾಗ ಸಮುದಾಯದ ನಾಟಕಗಳಲ್ಲಿ ಅಭಿನಯಿಸಿದೆ.

ಕರ್ನಾಟಕ ನಾಟಕ ಅಕಾಡೆಮಿ ಮತ್ತು ಧಾರವಾಡದ ಕಲೋದ್ಧಾರಕ ಸಂಘದ ಸಂಯುಕ್ತ ಆಶ್ರಯದಲ್ಲಿ ದಿ. ಜಯತೀರ್ಥ ಜೋಶಿ ಅವರ ನಿರ್ದೇಶನದಲ್ಲಿ ನಡೆದ ರಂಗ ತರಬೇತಿ ಶಿಬಿರದಲ್ಲಿ ರಂಗಭೂಮಿಯ ಸಮಗ್ರ ಪರಿಚಯ ಹಾಗೂ ಸಮಯ ಪಾಲನೆ ಪಾಠ ಕಲಿತೆ.

ನಂತರ ಬೆಂಗಳೂರಿಗೆ ಬಂದು ಕಪ್ಪಣ್ಣ ಅವರ ಜೊತೆ ನಟರಂಗ ಮತ್ತು ನಾಟ್ಯ ಸಂಘ ತಂಡದಲ್ಲಿ ರಂಗಕರ್ಮಿಯಾದೆ. ಪತ್ರಿಕೆಗಳಿಗೆ ನಾಟಕಗಳ ವಿಮರ್ಶೆ ಬರೆದೆ. ರವೀಂದ್ರ ಕಲಾಕ್ಷೇತ್ರದಲ್ಲಿ ಭರಣ ಅವರು ಸಿಕ್ಕಾಗ "ಅವಕಾಶ ಕೊಡಿ ಸಾರ್" ಎಂದು ಕೇಳಿಕೊಳ್ಳುತ್ತಿದ್ದೆ.



ಇವೆಲ್ಲಾ ನಾನು ಭರಣ ಅವರ ಬಳಿ ಸಹಾಯಕ ನಿರ್ದೇಶಕನಾಗಿ ಸೇರೋದಕ್ಕೆ ಪೂರಕವಾದ ಅಂಶಗಳು.

ಭರಣ ಅವರು ಜಾತಿ ಧರ್ಮ ಭಾಷೆ ನೋಡದೆ, ಕರ್ನಾಟಕದ ಮೂಲೆ ಮೂಲೆಗಳಿಂದ ಬಂದಂತಹ ಪ್ರತಿಭೆಗಳನ್ನು ಗುರುತಿಸಿ ವಿಶಾಲ ಮನೋಭಾವದಿಂದ ಅವಕಾಶ ನೀಡಿದ್ದಾರೆ. ಪ್ರೀತಿಯಿಂದ ನೋಡಿಕೊಂಡಿದ್ದಾರೆ. ಅವರಲ್ಲಿರುವ ಶಿಸ್ತು ಮತ್ತು ಶ್ರದ್ಧೆ ನನ್ನ ಮೇಲೆ ತುಂಬಾ ಪ್ರಭಾವ ಬೀರಿದೆ. ಅವರ ಕರ್ತವ್ಯ ಪ್ರಜ್ಞೆ ಮೆಚ್ಚತಕ್ಕದ್ದು.

ಪುಟ್ಟಣ್ಣ ಕಣಗಾಲ್ ಅವರ ನಂತರ ಅತಿ ಹೆಚ್ಚು ಸಾಹಿತ್ಯ ಕೃತಿಗಳನ್ನು ಆಧರಿಸಿ ಚಿತ್ರಗಳನ್ನು ನಿರ್ದೇಶನ ಮಾಡಿದ ಕೀರ್ತಿ ಭರಣ ಅವರಿಗೆ ಸಲ್ಲುತ್ತದೆ.

ಭರಣ ಅವರಲ್ಲಿ ನಾನು ಕಂಡ ವಿಶೇಷವಾದ ಗುಣ. ಅವರು ಮಿತಭಾಷಿ. ಅನಗತ್ಯವಾಗಿ ಮಾತಾಡುವವರಲ್ಲ. ಆಫೀಸ್‌ನಲ್ಲೂ ಅಷ್ಟೆ. ಸೆಟ್‌ನಲ್ಲೂ ಅಷ್ಟೆ. ಮಾತು ಕಡಿಮೆ ಕೆಲಸ ಜಾಸ್ತಿ. ಹಗಲು ರಾತ್ರಿ ಎನ್ನದೆ ನಿರಂತರವಾಗಿ ಶೂಟಿಂಗ್ ಮಾಡ್ತಾನೆ ಇರ್ತಾರೆ. ಭಯಂಕರವಾದ ತಾಳ್ಮೆ ಇದೆ. ಸುಮ್‌ಸುಮ್ನೆ ಕೋಪಿಸಿಕೊಂಡು ರೇಗುವುದಿಲ್ಲ.

ಶೂಟಿಂಗ್ ಇಲ್ಲದೆ ಇರುವಾಗ, ಆಫೀಸ್‌ನಲ್ಲಿದ್ದಾಗ ನನಗೆ ಕಥೆ ಕಾದಂಬರಿ ಓದಲು ಹೇಳುತ್ತಿದ್ದರು. ಒಂದು ದಿನ 400-500 ಪುಟಗಳ ಬೃಹತ್ ಕಾದಂಬರಿಯೊಂದನ್ನು ಕೊಟ್ಟು "ಇದನ್ನ ಓದಿ ಎರಡು ದಿನದೊಳಗೆ ಇದರಲ್ಲಿ ಬರುವ ಪಾತ್ರಗಳು, ವಯಸ್ಸು, ಆ ಪಾತ್ರಕ್ಕೆ ಹೊಂದುವ ಕಲಾವಿದರ ಪಟ್ಟಿಯನ್ನು ತಯಾರಿಸು" ಎಂದರು. ನಾನು ಎರಡು ದಿನ ಹಗಲು ರಾತ್ರಿ ಕಾದಂಬರಿನ ಓದಿ ಪಾತ್ರಗಳು ಅವುಗಳಿಗೆ ಸೂಕ್ತವಾದ ಕಲಾವಿದರ ಹೆಸರುಗಳನ್ನು ಸೂಚಿಸಿ ಪಟ್ಟಿ ತಯಾರಿಸಿಕೊಟ್ಟೆ. ಇದರಿಂದ ನಿರ್ದೇಶಕನಾಗ ಬಯಸುವವನಿಗೆ ಇರಬೇಕಾದ ಸಾಮಾನ್ಯ ಜ್ಞಾನದ ಅರಿವು ನನಗೆ ಅರ್ಥ ಆಯಿತು.

ಸಾಹಿತ್ಯ ಕೃತೀನ ದೃಶ್ಯ ಮಾಧ್ಯಮಕ್ಕೆ ಅಳವಡಿಸುವ ವಿಧಾನ. ಭರಣ ಅವರ ಜೊತೆ ಚಿತ್ರ ಕಥೆ ಚರ್ಚೆಗಳಲ್ಲಿ ಭಾಗವಹಿಸುವುದರ ಮುಖಾಂತರ ಮತ್ತು ಓದುವುದರಿಂದ ನನಗೆ ತಿಳೀತಾ ಇತ್ತು.

ಭರಣ ಅವರು ಯಾವತ್ತೂ ಬಿಡುವಾಗಿ ಖಾಲಿ ಕುಳಿತವರಲ್ಲ. ಒಂದಲ್ಲ ಒಂದು ಕೆಲ್ಸದಲ್ಲಿ ಕ್ರಿಯಾಶೀಲರಾಗಿರುತ್ತಿದ್ದರು. ಚಲನಚಿತ್ರ ಇಲ್ಲದಿದ್ದರೆ ಟಿವಿ ಸೀರಿಯಲ್ ಅಥವಾ ಸಾಕ್ಷ್ಯಚಿತ್ರ. ಅದೂ ಇಲ್ಲದಿದ್ದರೆ ನಾಟಕ. ಚರ್ಚೆ ಹೀಗೆ ನಿರಂತರವಾಗಿ ತಮ್ಮನ್ನು ಸಾಂಸ್ಕೃತಿಕ ಬದುಕಿಗೆ ತೊಡಗಿಸಿಕೊಂಡಿದ್ದಾರೆ. ರಂಗಭೂಮಿ, ಕಿರುತೆರೆ, ಚಲನಚಿತ್ರ ಮೂರು ಕ್ಷೇತ್ರದಲ್ಲಿ ಮಿಂಚಿ ತಾರೆಯಾಗಿದ್ದಾರೆ.


ಭರಣ ಅವರ ಯಶಸ್ಸಿನ ಹಿಂದೆ ಅವರ ಧರ್ಮಪತ್ನಿ ಶ್ರೀಮತಿ ರಾಣಿ ಅವರು 'ಗಾಡ್ ಮದರ್' ಥರ ಜೊತೆಗಿದ್ದು, ನಾಟಕ, ಸಿನಿಮಾ, ಟಿವಿ ಯಾವುದೇ ಆದ್ರೂ ಕಲಾವಿದೆಯಾಗಿ, ವಸ್ತ್ರವಿನ್ಯಾಸಕಿಯಾಗಿ ಚಿತ್ರೀಕರಣ, ಸಂಕಲನ ಎಲ್ಲಾ ಹಂತಗಳಲ್ಲೂ ಭಾಗಿಯಾಗಿ ಯಶಸ್ಸಿಗೆ ಕಾರಣರಾಗಿದ್ದಾರೆ.

ಮನೆ ಮಹಡಿಯ ಮೇಲೆ ಆಫೀಸ್ ಇರುವುದರಿಂದ ಶ್ರೀಮತಿ ರಾಣಿ ಅವರು ನಮ್ಮನ್ನೆಲ್ಲ ಒಂದೇ ಕುಟುಂಬದವರಂತೆ ಕಂಡು ಊಟ ಕೊಟ್ಟು ಉಪಚರಿಸಿದ್ದಾರೆ. ಮಕ್ಕಳಂತೆ ನೋಡಿಕೊಂಡಿದ್ದಾರೆ.

ಭರಣ ಅವರ ಜೊತೆ ನಾನು ಸುಮಾರು ಎರಡು ವರ್ಷಗಳ ಕಾಲ ನಿರಂತರವಾಗಿ ಕೆಲ್ಸ ಮಾಡಿದ್ದೇನೆ. ನಾಗಮಂಡಲ, ವಿಮೋಚನೆ, ಶುಭಕಾಲ ಬರುತ್ತೈತೆ - ಮೂರು ಚಲನ ಚಿತ್ರಗಳು. ಗಾನಯೋಗಿ, ಆರಾಧನ - ಎರಡು ಹಿಂದಿ ಧಾರಾವಾಹಿಗಳು. ಒಂದು ಮಕ್ಕಳ ಕಿರುಚಿತ್ರ ಹಾಗೂ 4-5 ಚಲನಚಿತ್ರಗಳ ಚರ್ಚೆಯಲ್ಲಿ ಭಾಗವಹಿಸಿದ್ದೇನೆ. ಇವೆಲ್ಲವು ನನಗೆ ಅತ್ಯಂತ ಖುಷಿ ಕೊಟ್ಟಿವೆ. ಭರಣ ಅವರ ಸಾಮಿಪ್ಯ, ಒಡನಾಟ ಎಲ್ಲವೂ ಚಂದ. ನಾನು ಎಂದೆಂದಿಗೂ ಅವರೊಂದಿಗೆ ಇದ್ದೇನೆ.

❑ ❖ ❑ ❖ ❑






ಡಾ|| ರಾಜ್‌ರವರಿಂದ ಹೂ ಹಾರ



ಜನುಮದ ಜೋಡಿ ಸಾಂಗ್ ರಿಕಾರ್ಡಿಂಗ್ ಸಂದರ್ಭದಲ್ಲಿ ಪಾರ್ವತಮ್ಮ ರಾಜ್‌ಕುಮಾರ್ ಅವರೊಂದಿಗೆ



ರಜನೀಕಾಂತ ಜೊತೆ ನಾಗಾಭರಣ




ಕಣ್ಣುಗಳು ಚಿತ್ರೀಕರಣದ ಸಂದರ್ಭದಲ್ಲಿ







ಚಿನ್ನಾರಿಮುತ್ತದ ಪ್ರಥಮ ಪ್ರದರ್ಶನದ ಸಂಗ್ರಹಿಸಿದ ಹಣ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಅರ್ಪಿಸಿದ ಸಂದರ್ಭ



ಒಕ್ಕಲಿಗರ ಸಮಾವೇಶ ಕ್ಯಾಲಿಫೋರ್ನಿಯಾ, ಮಾಜಿ ಪ್ರಧಾನಿ ಶ್ರೀ ಹೆಚ್.ಡಿ. ದೇವೇಗೌಡ, ನಾಗಿಣಿಭರಣರೊಂದಿಗೆ




ಆಕಸ್ಮಿಕ ಚಿತ್ರದಲ್ಲಿ ನಾಗಾಭರಣ




ಸಂತ ಚಿತ್ರೀಕರಣ ಸಂದರ್ಭದಲ್ಲಿ ಏಕನಾದದೊಂದಿಗೆ





ವಿಮೋಚನೆ ಚಿತ್ರದಲ್ಲಿ ಭರಣ



ವಿಮೋಚನೆ ಚಿತ್ರದಲ್ಲಿ ಶ್ರೀರಂಗ, ನಾಗಾಭರಣ




ಚಿನ್ನಾರಿಮುತ್ತ ಚಿತ್ರ



ಸಂತ ಶಿಶುನಾಳ ಷರೀಫ ಚಿತ್ರದಲ್ಲಿ ಶ್ರೀಧರ್, ಡಾ|| ಗಿರೀಶ್ ಕಾರ್ನಾಡ್






ಮೈಸೂರು ಮಲ್ಲಿಗೆ ಚಿತ್ರದ ದೃಶ್ಯ



ಜನುಮದ ಜೋಡಿ ಚಿತ್ರದ ಒಂದು ದೃಶ್ಯ



ನೀಲಾ ಚಿತ್ರದಲ್ಲಿ ಅನಂತನಾಗ್, ಗಾಯತ್ರಿ ಜಯರಾಂ



ಸಿಂಗಾರೆವ್ವ ಚಿತ್ರದಲ್ಲಿ ಪ್ರೇಮ, ಅಖಿಲಾ






ಚಿಗುರಿದ ಕನಸು ಚಿತ್ರೀಕರಣದ ಸಂದರ್ಭ



ಆಸ್ಫೋಟ ವರ್ಕಿಂಗ್ ಸ್ಟಿಲ್



ಅಮೇರಿಕಾದಲ್ಲಿ ಗೊರೂರು ಚಿತ್ರೀಕರಣದ ಸಂದರ್ಭ



ಮಾರಿಷಸ್ - ಸ್ಟೋನ್‌ಬಾಯ್ ಮಕ್ಕಳೊಂದಿಗೆ



# ಸದಭಿರುಚಿಯ ಕಲಾವಾರಿಧಿ : ಶ್ರೀ ನಾಗಾಭರಣ

ಡಿ. ಭರತ್

ಕನ್ನಡ ಚಲನಚಿತ್ರ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪಿನಿಂದ ಶೈಲಿ, ಹೊಸ ರೀತಿಯ ದೃಷ್ಟಿಕೋನದಿಂಲೇ ವಿಭಿನ್ನ ಅತ್ಯುತ್ತಮ ಕಲಾಕೃತಿಗಳನ್ನು ಪ್ರೇಕ್ಷಕರಿಗೆ ನಿರಂತರವಾಗಿ, ಹೆಸರಾಂತ ನಿರ್ದೇಶಕ ಟಿ.ಎಸ್. ನಾಗಾಭರಣ ನೀಡಿದ್ದಾರೆ.

ಸಾಧ್ಯವಾದಷ್ಟೂ ಸಾಹಿತ್ಯಜಗತ್ತಿನಿಂದಲೇ ಉತ್ತಮ ಕತೆಗಳನ್ನು ಆಯ್ದು ಚಿತ್ರ ಜಗತ್ತಿಗೆ ಚಿತ್ರವಾಗಿ ನಿರ್ದೇಶಿಸಿ ನಿರ್ಮಿಸಿ ಜನರಿಗೆ, ಚಿತ್ರ ರಸಿಕರಿಗೆ ಮರೆಯಲಾಗದ ನೆನಪಿಡುವ ಸಿನಿಮಾಗಳನ್ನು ಸಮರ್ಪಿಸಿದ್ದಾರೆ. 'ಬಂಗಾರದ ಜಿಂಕೆ', 'ಗ್ರಹಣ', 'ಜನುಮದ ಜೋಡಿ', 'ಅನ್ವೇಷಣೆ', 'ಆಕಸ್ಮಿಕ', 'ನಾಗಮಂಡಲ', 'ಮೈಸೂರು ಮಲ್ಲಿಗೆ', 'ಸಂತಶಿಶುನಾಳ ಶರೀಫ', 'ಚಿಗುರಿದ ಕನಸು' ಪ್ರಮುಖವಾಗಿ ನನಗೆ ಮೆಚ್ಚುಗೆಯಾಗಿವೆ.

ಸದಭಿರುಚಿಯಿರುವ ಸಾಹಿತ್ಯಾಸಕ್ತರಾದ ನಾಗಭರಣ ಅವರು ನಾನು ಮೆಚ್ಚುವ ನಿರ್ದೇಶಕರಲ್ಲಿ ಒಬ್ಬರು ಪುಟ್ಟಣ್ಣ ಕಣಗಾಲ್, ಗಿರೀಶ್ ಕಾಸರವಳ್ಳಿ ನಂತರ ನಾನು ಕಂಡ ಪ್ರತಿಭಾವಂತ ನಿರ್ದೇಶಕ ಶ್ರೀ ನಾಗಾಭರಣರವರು ಯಾವುದೇ ಅತ್ಯುತ್ತಮ ಸಾಹಿತ್ಯ ಕೃತಿಯನ್ನಾದರೂ ತಮ್ಮ ಸೂಕ್ಷ್ಮದೃಷ್ಟಿ, ನಿರ್ದೇಶನದ ನೈಪುಣ್ಯದಿಂದ ಸೊಗಸಾದ ಕಲಾಕೃತಿಯನ್ನಾಗಿಸುವ ಕಲೆ ನಾಗಾಭರಣರಿಗೆ ಕರಗತವಾಗಿದೆ. ಸಿದ್ಧಿಯಾಗಿದೆ.

ಇವರ ನಿರ್ದೇಶನದ ಚಿತ್ರಗಳಲ್ಲಿ ಗ್ರಾಮೀಣ ಸೊಗಡಿನ ಜಾನಪದ ಸಂಸತಿಯ ವೈಭವವಿದೆ 'ಜನುಮದ ಜೋಟಿ' 'ಚಿಗುರಿದ ಕನಸು' 'ನಾಗಮಂಡಲ' ಗಳಲ್ಲಿ ಸ್ಪಷ್ಟವಾಗಿ ಇದನ್ನು ಗುರುತಿಸಬಹುದಾಗಿದೆ. 'ಸಂತ ಶಿಶುನಾಳ ಶರೀಫ'ದಲ್ಲಿ 'ಮೈಸೂರು ಮಲ್ಲಿಗೆ' ಯಲ್ಲಿ ಶ್ರೀಮಂತ ಸಾಹಿತ್ಯದ ಸೊಬಗಿದೆ; ತಾತ್ವಿಕ ಚಿಂತನೆಯ ಖಣಜವಿದೆ. ನಿಷ್ಕಲ್ಮಶ ಪ್ರೇಮಮಯ ಸಂಗತಿಯಿದೆ. ಹಾಗೆಯೇ ಸಮನ್ವಯತೆ ಸೌಹಾರ್ದಗಳ ಅರಿವಿದೆ.

ಇತ್ತೀಚಿಗೆ ಎಲ್ಲೆಡೆಯ ಹೆಚ್ಚಾಗಿ ಕಂಡು ಬರುತ್ತಿರುವ ರೀಮೇಕ್ ಚಿತ್ರಗಳ ಹಾವಳಿಗಳ ನಡುವೆಯೇ ಕಮರ್ಷಿಯಲ್ ಸೂತ್ರಕ್ಕೆ ಕಟಿಬದ್ಧವಾಗಿ ಅಭಿರುಚಿಗಳ ಕಡೆಗೆ ಕಣ್ಣೆತ್ತಿಯೂ ನೋಡದ ಸಿನಿಮಾಗಳ ಮಧ್ಯೆ ಶ್ರೀ ನಾಗಾಭರಣರ ಚಿತ್ರಗಳು ನಮಗೆ ನಿಜವಾಗಿಯೂ ಸದಭಿರುಚಿಯ ಕಲಾವಾರಿಧಿಯಾಗಿ ವಿಶಾಲವಾಗಿ ಎದ್ದು ಕಾಣುತ್ತವೆ. ಮನರಂಜಿಸುತ್ತವೆ. ಇವರು ತಮ್ಮ ಚಿತ್ರಗಳಲ್ಲಿ ಅಳವಡಿಸಿಕೊಂಡ ಗೀತೆಗಳಿಂದ, ಸಂಗೀತದಿಂದ, ಬರೆಸುವ ಸಂಭಾಷಣೆಯಿಂದ, ಕತೆ-ಚಿತ್ರಕತೆಯಿಂದ, ಉತ್ತಮ ನಟರಿಂದ ತೆಗೆಯುವ ಅಭಿನಯದಿಂದ, ಛಾಯಾಗ್ರಹಣದಿಂದ, ತಮ್ಮದೇ ನಿರ್ದೇಶನದಿಂದ ಹೀಗೆ ಹಲವಾರು ಆಯಾಮಗಳಿಂದ ಒಂದಲ್ಲ ಒಂದು ರೀತಿಯಲ್ಲಿ ಪ್ರೇಕ್ಷಕನ ಮನಸೆಳೆದು ಬೆಂಬಿಡಿದ ಗುಂಗಿನಲ್ಲಿರುವಂತೆ ಮಾಡಿದ್ದಾರೆ.

# ಒಂದು ವೃತ್ತಾಂತ

ಒಂದು ಸಲ ನಾಗಾಭರಣ ಝೆಕೋಸ್ಲೊವಾಕಿಯಾಗೆ ಪಯಣಿಸುತ್ತಿದ್ದ ವಿಮಾನದಲ್ಲಿ ಓದಲು ಸಿಕ್ಕ ಒಂದೇ ಒಂದು ಇಂಗ್ಲಿಷ್ ಪತ್ರಿಕೆ 'ವಾಲ್ ಸ್ಟ್ರೀಟ್ ಜರ್ನಲ್'. ಉಳಿದವು 'ಜೆಕ್' ಪತ್ರಿಕೆಗಳು. ಪಕ್ಕದಲ್ಲಿದ್ದ ವಿದೇಶೀ ಸಹ ಪ್ರಯಾಣಿಕ ಮಾತಿಗಿಳಿದು ನೀವು 'ಹಿಂದೂನಾ' ಅಥವಾ 'ಮುಸ್ಲಿಮ್ಮೋ' ಅಂತ ಕೇಳಿದ. 'ನಾನೊಬ್ಬ ಭಾರತೀಯ' ಅಂದರು. 'ನಂಗೊತ್ತು, ಆದ್ರೆ ನೀವು 'ಹಿಂದೂನಾ' 'ಮುಸ್ಲಿಮ್ಮೋ" ಪುನಃ ಕೇಳಿದ. ಆತ ಹಾಗೆ ಕೇಳಿದ ಹಿನ್ನೆಲೆಯಲ್ಲಿ ಅಂದಿನ ಪತ್ರಿಕೆಯಲ್ಲಿ ಬಂದಿದ್ದ 'ಬೆಸ್ಟ್ ಬೇಕರಿ' ಹತ್ಯಾಕಾಂಡದ ಸುದ್ದಿಯ ಹಿನ್ನೆಲೆಯಿತ್ತು.

ವಿದೇಶಿಯರ ದೃಷ್ಟಿಯಲ್ಲಿ ಇಂದು ಭಾರತವೆಂದರೆ 'ಹಿಂದೂ' 'ಮುಸ್ಲಿಮ್' ಜನಾಂಗದ ನಡುವಿನ ಘರ್ಷಣೆ ಎನ್ನುವ ಪ್ರತಿಬಿಂಬವಿದೆ. ಉದಾಹರಣೆಗೆ ಭಾರತವೆಂದರೆ ಅವರಿಗೆ ತತ್‌ಕ್ಷಣ ನೆನಪಿಗೆ ಬರೋದು ಭಾರತ-ಪಾಕ್ ಸಮಸ್ಯೆ, 'ಗೋಧ್ರಾ ಹತ್ಯಾಕಾಂಡ' 'ಕ್ರೈಸ್ತ ಮಿಷನರಿ'ಗಳ ಮೇಲೆ ಹಲ್ಲೆ ಇತ್ಯಾದಿ ಸುದ್ದಿಗಳು ಮಾತ್ರ.

ಇಂತಹ ವಿಚಾರಧಾರೆಯುಳ್ಳ ಸಹಪ್ರಯಾಣಿಕನಿಗೆ ಭರಣ ತಿಳಿ ಹೇಳಿದರು. 'ದೇಶದಲ್ಲಿ ಸಣ್ಣಪುಟ್ಟ ಸಮಸ್ಯೆಗಳಿರಬಹುದಾದರೂ, ಈ ದೇಶ ನಿಜವಾದ ಅರ್ಥದಲ್ಲಿ 'ಸೆಕ್ಯುಲರಿಸಂ'ನ್ನು ಮೈಗೂಡಿಸಿಕೊಂಡು ಬಂದಿದೆ. ಶತ-ಶತಮಾನಗಳಿಂದ ಹಿಂದೂ-ಮುಸ್ಲಿಂ-ಕ್ರೈಸ್ತ ಜನಾಂಗ ಸೇರಿದಂತೆ ನೂರೆಂಟು ಜನಾಂಗ ಈ ದೇಶದಲ್ಲಿ ಸಹಬಾಳ್ವೆ ನಡೆಸಿಕೊಂಡು ಬಂದಿದೆ. ಚರಿತ್ರೆಯಲ್ಲಿ ಪರಕೀಯರ, ಪರಧರ್ಮೀಯರ ಆಕ್ರಮಣ ನಡೆದ ಸಹಸ್ರಾರು ಘಟನೆಗಳಿದ್ದರೂ ನಮ್ಮ ಸಹಬಾಳ್ವೆಗೆ ಲೋಪ ಬಂದಿಲ್ಲ. ಜಾತಿ, ಭಾಷೆ ಬೇರೆಯಾದರೂ ದೇಶ ಒಂದೇ ಎನ್ನುವ ಭಾವವಿದೆ. ಇದೇ ಬದುಕು ಒಂದೇ ಜನಾಂಗವಿರುವ ಇರಾಕ್, ಪಾಕಿಸ್ತಾನ, ಪ್ಯಾಲೆಸ್ತೀನಿಯರಲ್ಲಿ ಯಾಕೆ ಸಾಧ್ಯವಾಗಿಲ್ಲ.

ನಾವಿಂದು ಷರೀಫಜ್ಜನ ಕುರಿತು ಸಿನೆಮಾ ಕೂಡಾ ಮಾಡ್ತೇವೆ, ಬಿಸ್ಮಿಲ್ಲಾ ಖಾನರ ಶಹನಾಯ್ ವಾದನಕ್ಕೆ ಪ್ರೀತಿಯಿಂದ ತಲೆದೂಗುತ್ತೇವೆ. ದೂರದ ಲಾಹೋರ್‌ನಿಂದ ಶಸ್ತ್ರಚಿಕಿತ್ಸೆಗೊಂಡು ಬೆಂಗಳೂರಿಗೆ ಬಂದ ಪುಟಾಣಿ ಕಂದಮ್ಮನ ಆರೋಗ್ಯಕ್ಕಾಗಿ ಹಾರೈಸಿದ ಸಹಸ್ರ ಹೃದಯಗಳಿವೆ. ಇಂತಹ 'ಡೆಮೋಕ್ರಾಟಿಕ್' ದೊಡ್ಡಣ್ಣನ ದೇಶದಲ್ಲಿ ನಾವಿದ್ದೇವೆ. ಅಗಾಧ ಜ್ಞಾನಸಂಪತ್ತಿನ ದೇಶದಲ್ಲಿ ಆ ಜ್ಞಾನದ ಒಂದು ಭಾಗವಾಗಿ ನಾವಿದ್ದೇವೆ ಅನ್ನೋದೇ ಹೆಮ್ಮೆಯ ಸಂಗತಿ. ಕಷ್ಟ, ತಾಪತ್ರಯವಿದ್ದಾಗ್ಯೂ ಸಂತಸದಿಂದಲೇ ಬದುಕುತ್ತಿದ್ದೇವಲ್ಲಾ... ಅದಕ್ಕಿಂತ ಸಂತಸ ಬೇರಾವುದಿದೆ?'

ಇದಿಷ್ಟನ್ನು ಜತೆಯಲ್ಲಿದ್ದ ಪ್ರಯಾಣಿಕನಿಗೆ ವಿವರಿಸಿ ಹೇಳಿದ ಮೇಲೆ ಆತ 'ಭಾರತ'ದ ಕುರಿತು ತುಂಬಿಕೊಂಡಿದ್ದ ಚಿತ್ರಣಕ್ಕೆ ಕ್ಷಮೆ ಯಾಚಿಸಿದ.

(ಕೃಪೆ : ರೂಪತಾರಾ, ಆಗಸ್ಟ್ 2003)



# His is a three-dimensional approach

**Indushree**

ART MUST not be egoistic. It must be simple like a child. Everybody should like it and feel like touching it," these are the words of Mr. T.S.Nagabharana, which sum up his approach to his work.

A name to reckon with in Kannada film industry, in a career spanning three decades, he has to is credit several successful theatre productions, award winning films and films that were successful at the box office.

True to Lao Tse's saying that a journey of one thousand miles begins with a single step, Mr. Nagabharana's saga began with a step that was least expected to lead him to films.

Born in Talakadu, Mr. Nagabharana came to Bangalore to complete his graduation and fulfil his father's dreams. While he was in PUC, Adya Rangacharya, a theatre personality, was scheduled to conduct a three-month course in dramatics. Neither this nor the chance to learn from big names in theatre such as B.V.Karanth and Sai Paranjape lured Mr. Nagabharana to enroll himself. What attracted him to the course was the allowance of Rs. 1.50 a day that was paid to students who joined the course.

This playful attitude did not last long. Soon, Mr. Nagabharana realised that theatre required a serious professional approach. It was then that he had his first brush with the medium. But this did not prevent him from completing his B.Sc., degree course followed by a law degree.

At first, Mr. Nagabharana was a backstage worker, before he discovered the actor and the director in him. So far, he has acted in and directed 13 plays. Sangya Balya, Sattavara Neralu and Jokumaraswamy completed 100 shows, and the first two remain his favourite plays. Mr. Nagabharana describes theatre as the "basic foundation for visual medium." He came under the influence of two great stalwarts of Kannada literature and art — Mr. B.V.Karanth and Mr. Girish Karnad. It was under their tutelage that Mr. Nagabharana entered the world of cinema.

For five years, he worked as an associate editor under them for films such as Kadu, Tabbali Neenade Magane and so on.

In 1975, Mr. Nagabharana donned the mantle of a director with the film, Grahana, which tackled caste system. Although it took two years to complete the film, it fetched him two national awards (for the best film on national integration and for the best script). It also won him awards in Germany and China. Buoyed by this success, he made Anveshane in 1982. It was the only Kannada film to feature the legendary actress Smita Patil. But Mr. Nagabharana was labelled as a maker of art films. To shed this image, he came up with Bangarada Jinke, which was a commercial success. The suave film- maker terms his work as "bridge cinema" where the expression of artistic media converges with economic terms. What sets his directoral ventures apart is the unique combination of a serious story-teller's approach with ingredients that appeal to the common man.

His next venture was Banker Margayya, based on the novel, The Financial Expert, by R.K. Narayan. The author, who was not happy with the films based on his earlier works, was impressed with Mr. Nagabharana's work.

If a film-maker's worth is measured by the number of awards he or she has won, Mr. Nagabharana certainly has an impressive record. Of the 26 films that he has made, 11 have fetched him national and State awards and some of them have been screened at international film festivals. His award-winning ventures include Asphota which dealt with politics and Santha Sishunala Shariefa that was based on the life and work of the sufi saint. Making characters out of the poems of K.S. Narasimhaswamy and with the freedom struggle as a backdrop, Mr. Nagabharana came up with Mysore Mallige and followed it up with Chinnari Mutha, his first children's film. He also directed Akasmika starring Rajkumar and Janumada Jodi which dealt with caste system and did well at the box office.

Nagamandala based on Girish Karnad's play, is his most recent work.

Mr. Nagabharana is clear about what he wants — be it on stage or for the big screen. He views cinema as not just a means of entertainment but as a medium through which he can communicate with his audience.



"Art is an expression, and the expression must deliberately communicate," he says. According to him, the innocence of a child, the experience of an adult and the wisdom of an aged man should converge into art.

Mr. Nagabharana does not go after big names in the industry and does not chum out "hits". He has been able to produce successful films with new faces. He attributes this to his giving commercial cinema an artistic approach. Instead of succumbing to hero-oriented films, he explores the subject to get the right character.

His future projects include one on cancer and the social stigma attached to it, and the other based on Dr. Shivaram Karanth's novel, Chigurida Kanasu.

Mr. Nagabharana, who is convinced that television is a stronger and more powerful visual medium than cinema, has been able to carve out a niche for himself by making serials such as Sankranthi, a daily soap. He has been passionately shooting for the serial, camping at about 20 km away from the City for over a year. Shot in a rural backdrop, he says values portrayed in his serial are contemporary.

He intends to make another serial culminating in three novels from three regions of Kamataka which will act as representative of three cultures.

His work calls for spending time away from his family and Mr. Nagabharana says his favourite pastime is to be with his family.

His wife, Ms. Nagini, a Kuchipidi dancer, designs costumes for his projects. While his daughter, Shrutha, is in college, his son, Pannaga, is a high school student. Pannaga has launched a website, shrutalaya.com, that gives a brief insight into his father's works and invites fresh talent to join him.

As Mr. Nagabharana himself admits, he is yet to find an all-time successful director or producer. Like any other film-maker, he too has tasted failure. But from a story-teller who has strong conviction, one can expect nothing short of quality cinema.

*Courtesy :* Indushree, Oct. 30, 2000.

❑ ❖ ❑ ❖ ❑

# Looking BACK, looking ahead

**Jyothi Raghuram**

For a well-known professional in the arts, 50 is an age to look back on his oeuvre and mull over it. But at this age, filmmaker T.S, Nagabharana is as animated about the arts as he perhaps was three decades ago, raring to make films whose depth, variety, and reach will far supersede the ones he has made so far. As a director whose every venture, be it TV serials or films, is proudly steeped in the ethos of this region, his presence in the Kannada film industry and on television has been that of a colossus zealously guarding the culture and tradition of a people. The onslaught of remake films and mindless serials are alien to our culture has not deterred this director from continuing to make his ventures either culture-centric or value-based.

Currently a retrospective of his films is being held at the Puttanna theatre, as a build-up to his 50th birthday bash at the Ravindra Kalakshetra on January 23. One has known and interacted with Nagabharana since his days as a backstage artiste back in the early '70s, and it is a matter of pride to the art scene of Karnataka that he remains as committed to his ideals as he was then, albeit tempered with a sense of introspection.

This is echoed in his observation, in the course of an interview to *The Hindu* that people are watching serials and films alien to our culture at all. While entertainment and projecting ideals should be the objective of a film, glorifying sex and violence will erode the value system of a society. Self-policing is imperative when you are trying to communicate to a mass audience. It is the joint responsibility of those within the industry and the audience to make and encourage quality films.

These are not empty words. Nagabharana has lived up to his beliefs and ideals, as testified by his films. From *Grahana* in 1978-79, which powerfully portrayed the barbaric practices of the caste system, to his latest *Chigurida Kanasu* (2003), which looked at the inevitable search for one's roots as the years go on, each one of his films have had a stimulating — and often disturbing — content, whose matrix has been



the ethos, culture and customs of a people even as they have a universal appeal.

*Anveshane*, dealing with unemployment amongst the middle class, *Santa Shishunala Sharifa*, with its secular message of universal brotherhood, *Mysore Mallige*, with its lyricism and music, *Chinnari Mutha*, an endearing and educative children's film, *Janumada Jodi*, on young love that transcends caste barriers, *Nagamandala*, a folklore-based film that looks into love and fidelity in marriage, and *Neela*, with its tribal girl who fights feudal tyranny for the sake of her village — Nagabharana's films are arresting for their impact, melody tunes, and, above all, for offering an end product that can be viewed by the entire family.

Of the 28 films he has made so far, 14 have received prestigious awards at the State and national level. Six have been selected for the Indian Panorama. He has bagged the Best Regional Director Award at the national level seven times, and a like number of times at the State level. The Karnataka Nataka Academy and Puttanna Kanagal awards, the Berkeley award and numerous other private recognitions from well-known organisations, including those abroad, have been his.

His TV serials such as *Sankranthi*, *Jeevan Mukhi*, *Mussanje*, *Gelati* and *Namma Nammalli*, to name just a few, are noteworthy for their thought-provoking portrayal of reality, subtle message, and their quintessentially regional presentation. *Maha Maayi*, his mega serial for Udaya TV which will be telecast from January 12, promises to be as substantive. The serial looks into the beliefs and superstitions of people, prompting viewers to think whether such beliefs or otherwise stem from their own personal needs and experiences, "without, however, taking a stance". A children's film and a historical on Kumara Rama, are two projects that animate him right now.

Looking back on his decades of experience and work on stage, cinema, and TV, Nagabharana says: "The disappointment that some of my ventures have not done well is temporary. I sometimes reflect on my works and wonder what was lacking. But it is as much the responsibility of the public to elevate the quality of films by being more discerning. How it is going to be for Kannada films in future years is something I am unable to guage. Filmmaking techniques and concepts have changed.

But the bottom line should always be taste and quality, which sense of accountability should come from within."

If cinema has brought him fame, it is theatre which gave him the base for it, and which remains his passion. Nagabharana has been a weighty presence in some of the best theatre troupes. He is the founder president of Benaka Children's Theatre centre.

With a degree in science and law, English and Kannada literature have not only been a favourite pastime, but are reflected in the subjects, strong scripts and language of his films. His village background has ensured that his works are steeped in a rich heritage and folklore, with great emphasis on music. His close interaction with theatre and literary stalwarts such as B.V. Karanth, Chandrashekhar Kambar, Girish Karnad, and Adya Rangacharya has helped hone his creativity.

Shruthalaya his brainchild, "is a rendezvous for theatre and film learning and research".

He hopes to continue his journey. As he puts it: "My works are just a small contribution towards bringing in a cultural revolution. Much needs to be done. At 50, I am as much introspecting on my works as I am animated about new ventures."

*Courtesy :* The Hindu, Jan. 12, 2004.

❑ ❖ ❑ ❖ ❑



# 'I needed another take off'

– S. Nanda Kumar

TS Nagabharana looked a happy man. As Deccan Herald caught up with him at a sound recording studio in Kumara Park, Nagabharana, punctual, waded through the host of technicians and other people who inhabit the Kannada film world, graciously accepting their congratulations and shaking hands all around. Nagabharana had just arrived on the train from Dharwad, where he had gone to perform in a play the previous day.

After nimbly finishing an interview with a Cable TV network, he settled himself in for the interview, whilst a plate of *mosaranna* (curd rice) was placed before him. As he urged me to start the interview, the incongruity of it all struck me. A theatre-person, sitting in a commercial film recording studio, eating his late lunch, talking about a National Award. His film *Singaravva* had bagged the award — and I couldn't help thinking, after a long time.

Did he also feel that? "In the last seven years, I was keen on reaching this bridge cinema. Because that has been my motto, where I must reach my people, at the same time, I must reach the national and international level. That was happening right from the film *Aasphota*, followed by *Mysooru Mallige, Chinnari Muththa* and others. Which ran very well and got the national awards and all that. But when I did *Nagamandala*, *Vimochane* and *Neela*, I didn't get it. I didn't reach that point. So I was trying to analyse, and find out what was happening. Was my approach to film-making wrong, or are the people not taking to cultural-based subjects? Or may be because of the onslaught of television during that time, because in the last ten years a lot of channels have come in. I was trying to analyse all this. *Singaravva* is again my kind of film, I expected it to run very well as well as get national and international recognition. Unfortunately it was not received very well by the public. But the fortunate thing was it was selected for the Karlovy Vary festival, the Berlin Forum, Dhaka festival ... and I got the national award. So it means, I still have some fire in me! I am very happy about

it, because I needed another take-off from *Singaravva* and I think I have got it."

So, how did he deal with this period of self-doubt? "This is always there for a creative person. Always. I always doubt myself and ask myself whether I can do it. Because I am from theatre. Before I enter the stage, I always ask myself, 'can I justify this role today?' Before I enter this question always arises. But once I enter, I say to myself, 'yes. I can justify my role today' Same thing with these films. I confidently did these films. Even today, anybody can see these films and say it was good. *Vimochane* when it was released, ran for only four or five weeks, but when it was shown on television, everybody rang me and said it was such a good film, why didn't it run well. I told them that was because they didn't see it in the theatres."

These films that had not made it to the national awards had obviously dwelt on Nagabharana's mind for quite some time. He added, with a smile, "In a way I am very happy that these films didn't make it. It kept me fighting and trying, again and again, let me work it out. It is this kind of a workaholic attitude and confidence was what got me to *Singaravva.*"

Nagabharana takes great pains to explain his pet theme of 'bridge cinema. "Tomorrow I am working on *Chigaridha Kanasu* which has powerful commercial hero, Shivarajkumar. The blending has to be done by someone. Otherwise these films will never communicate, will not reach. I am not doing something dirty or below the belt to achieve this. I am trying to entertain them, and at the same time, give the film some purpose. You can see from my filmography that this is what I have always done."

So, now that he had got it, did it really matter so much for a film maker like Nagabharana after all these years and all those achievements? He laughs out loud at my question. "It is what I call a *maanadhanda.* A measure. There are two ways of measuring the success of films. One is a commercial success. The other is critical applause, such as the National Award. This measure we have reached. It also gives an additional responsibility to the film maker. He feels more responsible for what he does later. At the same time, his ego gets a boost. So he can do a really good job the next time!"



Turning away from the rosy picture of successful award-winning films, I turned Nagabharana towards the present scenario in Kannada films. Wasn't the situation a bit grim? Optimism still ran high in his veins. "These kind of fluctuations keep happening. This visual medium has the potential to attract new adventurers, new abilities. That is what is keeping it going continuously. Compared to other industries, where the loss is 70 to 80 per cent, it should have closed down long back. It has not closed. This kind of cycle goes on repeating. Two years ago, there was a lull in production. This year it is very heavy."

And what about quality? "According to me, things are not so bad. In fact in the last ten years, the technical quality and the quality of performances have improved a lot. What exactly is going wrong is that people who are less-trained are getting into it. I always demand this of my friends and others who wish to get in, get trained, get prepared to enter cinema. It is a must. Like any other job, it requires training, professionalism. Once that happens, it will automatically improve the quality."

People kept popping in and out of the room we were meeting in, as Shivarajkumar was expected anytime for a song recording. Nagabharana was determined to complete the interview. So, I continued, an eye on the studio clock, has the Kannada film industry got out of the rut of making remakes? "Not completely out, no, I wouldn't say that, but there is a check - because of the television. Because if you switch on the Tamil TV channel, we see the original film. And if the public sees that and compares it to the Kannada film released here, the comparison is immediate, and the audience showing lip in the theatre is lost."

While on the subject of television, Nagabharana quietly points out that almost 50 per cent of the ticket-paying audience has been lost out to television. So what does he expect from the State Government to check this alarming trend, and bring back audiences to what was once Bangalore's famed cinema halls on Kempe Gowda Road? The film-maker shakes his head, and says that the state Government would have to change the exhibiting system. But we cannot deny the fact that 50 per cent of the audience, especially women and the middle class, have been lost to TV. But I feel that people will have to come out of their houses to meet others. And cinema halls are meeting places. They cannot

keep sitting in front of their TV sets forever. They will have to find a way out. The next generation will come out to the cinema halls, I have always believed that." Whether it was the optimism generated by the award, or wishful thinking, I had to be content with that reply.

But he comes back to the subject of what else the state government could do for the film industry. "There is a lot of confusion in the subsidies that the state government is giving. There should be a uniform policy, and to do that, they will have to have a film policy And a Film Academy to work out the details. Something that will deal with things other than business. If you think that cinema is a language for communication like Konkani and Tulu and Kannada, and if you can give those languages academy status, the Government has to do the same for the Film industry.

"And especially on children's films, they will have to induce people to get into the children's film movement in a much bigger way Like Andhra is doing in such a big way. Actually Karnataka used to be in the forefront before, now they (Andhra Pradesh) are it."

Is there a resurgence of Kannada films that are based on novels and plays? "I would not call it a resurgence. It is just that there is a sort of check on remakes, thanks to TV. So, it is more like traffic users behaving themselves and following rules because there is a policeman watching! If there is nobody watching, he will not follow rules and ride or drive wherever he wants! Similarly when the film makers are not able to do remakes because of the audience, he naturally goes and looks for stories right here in Kannada literature, which is always there and has always been there. If he can spend Rs.10 lakhs on the rights to a remake, he can easily spend Rs. five lakhs for a good writer and the best story right here - so that way it has started working!"

It is ironic that the TV audience that has shifted from cinema is also catered to by film makers like Nagabharana and some others. Nagabharana smiles wryly when I point this out. "When I take up a film, I don't do any television. For example, I am now only working on *Chigaridha Kanasu.*"

There is no time to take him up on the subject, as the clock has run its course, and the people popping in and out seem to have reached a frantic pitch. "Small budget films are needed and it will work out in the present scenario," he says, as he gathers himself up and leaves for



his recording. He was obviously in a wonderfully loquacious mood, but it will have to be for another day, another award, I think to myself, as I let myself out into the real world with its rush and traffic, and no, they weren't following the rules like Nagabharana wished - there were no policemen on this road!

*Courtesy :* Deccan Herald, Aug, 3, 2003

❑ ❖ ❑ ❖ ❑

# ಮೈಲಿಗಲ್ಲುಗಳು

## ನಾಗಾಭರಣ ನಿರ್ದೇಶಿಸಿದ ಚಲನಚಿತ್ರಗಳು

1. "ಗ್ರಹಣ" (1978)
2. "ಬಂಗಾರದ ಜಿಂಕೆ" (1980)
3. "ಅನ್ವೇಷಣೆ" (1982)
4. "ಪ್ರಾಯ ಪ್ರಾಯ ಪ್ರಾಯ" (1982)
5. "ಬ್ಯಾಂಕರ್ ಮಾರ್ಗಯ್ಯ" (1983)
6. "ಪ್ರೇಮ ಯುದ್ಧ" (1983)
7. "ಒಂಟಿ ಧ್ವನಿ" (1984)
8. "ಮಕ್ಕಳಿರಲವ್ವ ಮನೆ ತುಂಬ" (1984)
9. "ಆಹುತಿ" (1985)
10. "ನೇತ್ರ ಪಲ್ಲವಿ" (1985)
11. "ನೆನಪಿನ ದೋಣಿ" (1986)
12. "ರಾವಣ ರಾಜ್ಯ" (1987)
13. "ಸೇಡಿನ ಸಂಚು" (1987)
14. "ಆಸ್ಫೋಟ" (1987)
15. "ಸಂತ ಶಿಶುನಾಳ ಶರೀಫ" (1989)
16. "ಸುರ ಸುಂದರಾಂಗ" (1989)
17. "ಪ್ರೇಮಾಗ್ನಿ" (1989)
18. "ಮೈಸೂರ ಮಲ್ಲಿಗೆ" (1991)
19. "ಚಿನ್ನಾರಿ ಮುತ್ತಾ" (1993)
20. "ಆಕಸ್ಮಿಕ" (1993)
21. "ಸಾಗರ ದೀಪ" (1994)



22. "ನಾವಿದ್ದೇವೆ ಎಚ್ಚರಿಕೆ" (1995)
23. "ಜನುಮದ ಜೋಡಿ" (1996)
24. "ನಾಗಮಂಡಲ" (1996)
25. "ವಿಮೋಚನೆ" (1997)
26. "ಜನುಮದಾತ" (1999)
27. "ನೀಲಾ" (2001)
28. "ಸಿಂಗಾರವ್ವ" (2002)
29. "ಚಿಗುರಿದ ಕನಸು" (2003)
30. "ಸ್ಟೋನ್ ಬಾಯ್" (ಹಿಂದಿ) (1991)

## ನಾಗಾಭರಣ ನಟಿಸಿದ/ನಿರ್ದೇಶಿಸಿದ ನಾಟಕಗಳು

1. ಕುಂಟ ಕುಂಟ ಕುರುವತ್ತಿ
2. ಕುಣಿಯೋ ಕತ್ತೆ
3. ಹೆಡ್ಡ ರಾಮ
4. ಶೋಕಚಕ್ರ
5. ಏವಂ ಇಂದ್ರಜಿತ್
6. ಟಿಂಗರ ಬುಡ್ಡಣ್ಣ
7. ಚಂದ್ರಹಾಸ
8. ಜಸ್ಮ ಓಡೆನ್
9. ಬುರ್ಜ್ವ ಜಂಟಲ್‌ಮನ್
10. ಬಿರುದೆಂತೆಂಬರ ಗಂಡ
11. ಹರಿಜನ್ವರ
12. ಶ್ರೀರಂಗರ ಏಕಾಂಕಗಳು
13. ಸಂಧ್ಯಾಕಾಲ
14. ಶಾಕುಂತಲ (ಸಂಸ್ಕೃತ)
15. ಕೃಷ್ಣ ಪಾರಿಜಾತ

16. ಜೋಕುಮಾರಸ್ವಾಮಿ
17. ಶಕಾರನ ಸಾರೋಟು
18. ಸಂಕ್ರಾಂತಿ
19. ಸಂಗ್ಯಾ ಬಾಳ್ಯ
20. ಕತ್ತಲೆ ಬೆಳಕು
21. ಈಡಿಪಸ್
22. ರಸಗಂಧರ್ವ
23. ಇಸ್ಪೀಟ್ ರಾಜ
24 ಮುಂದೆನ ಸಖೀ ಮುಂದೆನ
25. ಬಕ
26. ನೀಗಿಕೊಂಡ ಸಂಸ
27. ತಬರನ ಕಥೆ
28. ಹಯವದನ
29. ಸತ್ತವರ ನೆರಳು
30. ಬ್ಲಡ್ ವೆಡ್ಡಿಂಗ್

## ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಪನೋರಮಾಗೆ ಆಯ್ಕೆಯಾದ ನಾಗಾಭರಣರ ಚಿತ್ರಗಳು

"ಗ್ರಹಣ" (1980)
"ಬ್ಯಾಂಕರ್ ಮಾರ್ಗಯ್ಯ" (1984)
"ಮೈಸೂರ ಮಲ್ಲಿಗೆ" (1992)
"ಚಿನ್ನಾರಿ ಮುತ್ತಾ" (1994)
"ನಾವಿದ್ದೇವೆ ಎಚ್ಚರಿಕೆ" (1996)
"ನೀಲಾ" (2001)
"ಸಿಂಗಾರವ್ವ" (2003)



## ನಾಗಾಭರಣರಿಗೆ ಸಂದ ರಾಷ್ಟ್ರೀಯ ಪ್ರಶಸ್ತಿಗಳು

"ಗ್ರಹಣ" (1978)
"ಬ್ಯಾಂಕರ್ ಮಾರ್ಗಯ್ಯ" (1983)
"ಮೈಸೂರ ಮಲ್ಲಿಗೆ" (1991)
"ಚಿನ್ನಾರಿ ಮುತ್ತಾ" (1993)
"ನಾವಿದ್ದೇವೆ ಎಚ್ಚರಿಕೆ" (1995)
"ಸಿಂಗಾರವ್ವ" (2001)

## ನಾಗಾಭರಣರಿಗೆ ಸಂದ ರಾಜ್ಯ ಪ್ರಶಸ್ತಿಗಳು

"ಗ್ರಹಣ" (1978)
"ಅನ್ವೇಷಣೆ" (1982)
"ಆಸ್ಫೋಟ" (1987)
"ಸಂತ ಶಿಶುನಾಳ ಶರೀಫ" (1989)
"ಮೈಸೂರ ಮಲ್ಲಿಗೆ" (1991)
"ಚಿನ್ನಾರಿ ಮುತ್ತಾ" (1993)
"ಆಕಸ್ಮಿಕ" (1993)
"ನಾವಿದ್ದೇವೆ ಎಚ್ಚರಿಕೆ" (1995)
"ಜನುಮದ ಜೋಡಿ" (1996)
"ನಾಗಮಂಡಲ" (1996)
"ನೀಲಾ" (2001)
"ಸಿಂಗಾರವ್ವ" (2001)

## ನಾಗಾಭರಣರಿಗೆ ರಾಜ್ಯ ಸರ್ಕಾರ ನೀಡಿದ ಪ್ರಮುಖ ಪ್ರಶಸ್ತಿಗಳು

ನಾಟಕ ಅಕಾಡಮಿ ಪ್ರಶಸ್ತಿ - 1993

ಪುಟ್ಟಣ್ಣ ಕಣಗಾಲ್ ಪ್ರಶಸ್ತಿ - 2000

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ - 2003

## ನಾಗಾಭರಣರಿಗೆ ನೀಡಲಾದ ಇತರ ಪ್ರಮುಖ ಪ್ರಶಸ್ತಿಗಳು

ಸಂದೇಶ್ ಪ್ರಶಸ್ತಿ - ಕ್ಯಾತೋಲಿಕ್ ಪ್ರಶಸ್ತಿ, ಮಂಗಳೂರು - 1991

ಇಂಡಿಯನ್ ಎಕ್ಸ್‌ಪ್ರೆಸ್ ಪ್ರಶಸ್ತಿ - 1996

ಮದ್ರಾಸ್ ಫಿಲ್ಮ್ ಫ್ಯಾನ್ಸ್ ಪ್ರಶಸ್ತಿ - 1988

ಮದ್ರಾಸ್ ಫಿಲ್ಮ್ ಫ್ಯಾನ್ಸ್ ಪ್ರಶಸ್ತಿ - 2002

ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ

ತರಂಗಿಣಿ ಬರ್ಕ್ಲಿ ಪ್ರಶಸ್ತಿ

ಕರ್ನಾಟಕ ನಿರ್ದೇಶಕರ ಸಂಘದ ಪ್ರಶಸ್ತಿ

ಅಭಿಪ್ರಾಯ, ಮುಂಬೈ ಪ್ರಶಸ್ತಿ - 1997

ಉಜಲಾ ಸಿನಿ ಎಕ್ಸ್‌ಪ್ರೆಸ್ ಪ್ರಶಸ್ತಿ, ಮದ್ರಾಸ್ - 1997

ಫಿಲ್ಮ್‌ಫೇರ್ ಪ್ರಶಸ್ತಿ - 1988

ಫಿಲ್ಮ್‌ಫೇರ್ ಪ್ರಶಸ್ತಿ - 1992

ಫಿಲ್ಮ್‌ಫೇರ್ ಪ್ರಶಸ್ತಿ - 1994

ಫಿಲ್ಮ್‌ಫೇರ್ ಪ್ರಶಸ್ತಿ - 1997

ಯುಗಶ್ರೀ ಪ್ರಶಸ್ತಿ, ಮುಂಬೈ (ಕಿರುತೆರೆ)



## ನಾಗಾಭರಣರಿಂದ ನಿರ್ದೇಶಿತ ಧಾರಾವಾಹಿಗಳು

### ಅಂತರ‍್ರಾಷ್ಟ್ರೀಯ ನಿರ್ಮಾಣ

ದಿ ಸ್ಟೋನ್ ಬಾಯ್ (ಹಿಂದಿ) - ಯುಗಶ್ರೀ ಪ್ರಶಸ್ತಿ ಪುರಸ್ಕೃತ

### ದೂರದರ್ಶನ - ರಾಷ್ಟ್ರೀಯ ಪ್ರಸಾರಣ

ತೆನಾಲಿ ರಾಮ (ಹಿಂದಿ) - ಯುಗಶ್ರೀ ಪ್ರಶಸ್ತಿ ಪುರಸ್ಕೃತ

ಸಂಸ್ಮರಣ - ಪ್ರವಾಸ ಕಥನ, ಸ್ಪೇಟ್‌ನಲ್ಲಿ ಚಿತ್ರೀಕರಿಸಲ್ಪಟ್ಟಿದೆ

ಸಹಸ್ರಪಣ್ (ಭಾವಿ ಪ್ರಧಾನಿಯವರ ಕಾರ್ಯಾನುವಾದ)

ಆರಾಧನ

ಗಾನಯೋಗಿ ಪಂಚಾಕ್ಷರಿ

### ಸನ್ ಟಿ.ವಿ.

ಜನ್ನಲ್ (ಕಿಟಕಿ) ತಮಿಳು ಧಾರಾವಾಹಿ, ನಿರ್ಮಾತ ಶ್ರೀ ಕೆ. ಬಾಲಚಂದರ್

### ಉದಯ ಟಿ.ವಿ.

ಮುಸ್ಸಂಜೆ

ಕಣ್ಣುಗಳು

ಜೋಕು ಜೋಕೆ

ಓ ನನ್ನ ಬೆಳಕೆ

### ಮೆಗಾ ಧಾರಾವಾಹಿಗಳು

ಸಂಕ್ರಾಂತಿ

520 ಕಂತುಗಳ ಕನ್ನಡದ ಒಂದೇ ಮೆಗಾ ಧಾರಾವಾಹಿ
ವಾರದ ಎಲ್ಲಾ ದಿನಗಳಲ್ಲಿ ಪ್ರಸಾರಗೊಂಡ ಒಂದೇ ಮೆಗಾ ಧಾರಾವಾಹಿ
475 ತಾರಾಗಣ ಒಳಗೊಂಡ ಒಂದೇ ಮೆಗಾ ಧಾರಾವಾಹಿ
ಮೊದಲ ಗ್ರಾಮೀಣ ವಿಷಯ ಹೊತ್ತ, ಯಶಸ್ವಿ ಮೆಗಾ ಧಾರಾವಾಹಿ

ಗೆಳತಿ

ಜೀವನ್ಮುಖಿ

ದೂರ ತೀರ ಯಾನ

ಮಹಾಮಾಯೆ

## ದೂರದರ್ಶನ

ಶ್ರೀಮಾನ್ ಶ್ರೀಸಾಮಾನ್ಯ

ನಮ್ಮ ನಮ್ಮಲ್ಲಿ

ಆಫೀಸಾಯಣ

ತಿರುಗುಬಾಣ

ಗೀತ ಮಾಧುರಿ (12 ಕವಿಗಳ, 60 ಕವಿತೆಗಳ ಸಂಗೀತ ದೃಶ್ಯಾವಳಿ)

ಹೃದಯ ಹಿಡಿ ಹೃದಯ